ನವಭಾರತ

ಸೋಮವಾರ
ಜನವರಿ
24-1-55

ವರ್ಷ 18
ಸಂಚಿಕೆ 23

ಬಳ್ಳಾರಿ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್

ಬಳ್ಳಾರಿ ಪ್ರಭಾತ್ ಟಾಕೀಸ್‌ನಲ್ಲಿ

೨೫ನೇ ವಾರ

ವಿಜಯರವರ

—; ಮಿಸ್ಸಮ್ಮ ;—

ತೆಲುಗು ಚಿತ್ರ

.... ಕಥಾಸಂಗ್ರಹ ....

ಅಪ್ಪಾಪುರ • ಜಮೀಂದಾರನು 16 ವರ್ಷಗಳ ಕೆಳಗೆ ತಪ್ಪಿಸಿಕೊಂಡು ಹೋದ ತನ್ನ ಹಿರಿಯಮಗಳು ಲಕ್ಷ್ಮಿಯ ಹೆಸರಲ್ಲಿ ಒಂದು ಪ್ರಾಥಮಿಕ ಪಾಠಶಾಲೆಯನ್ನು ಸ್ಥಾಪಿಸಿದನು. ಅದನ್ನು ನಿರ್ವಹಿಸುತ್ತಿದ್ದ ಜಮೀಂದಾರನ ಸೋದರಳಿಯ ಮತ್ತೊಬ್ಬ ಮುದುಕ ಬೇರೆ ಕೆಲಸದಲ್ಲಿ ತೊಡಗಿ ಸ್ಕೂಲು ಮುಚ್ಚುವ ಪ್ರಸಂಗ ಬಂದಿತಾದ್ದರಿಂದ ೨. ಎ. ಓದಿದ ಗಂಡ ಹೆಂಡರಿಬ್ಬರು ಬೇಕೆಂದು ಜಮೀಂದಾರನು ಪ್ರಕಟಿಸಿದನು.

ಪಟ್ಟಣದಲ್ಲಿ ರಾವು ಮತ್ತು ಮೇರಿ ಎಂಬಿಬ್ಬರು ಒಂದುಮನೆಯಲ್ಲಿ ಪಾಠ ಹೇಳುತ್ತಿದ್ದರು. ಅವರಿಗೆ ವರ್ಗವಾದ ಕಾರಣ ಇವರಿಬ್ಬರಿಗೂ ನಿರುದ್ಯೋಗವಿತ್ತು. ಪತ್ರಿಕಾ ಪ್ರಕಟಣೆ ನೋಡಿ ರಾವು, ಮೇರಿಯನ್ನು ಪತ್ನಿಯಂತೆ ನಟಿಸಲು ಕೇಳಿದನು. ಮೇರಿಯು ದೇವಿಡ್‌ನಿಗೆ ಸಾಲ ಕೊಡಬೇಕಿದ್ದು, ಸಾಲಕೊಡದಿದ್ದರೆ ತನ್ನನ್ನು ಮದುವೆ ಮಾಡಿಕೊಳ್ಳಲು ಒತ್ತಾಯ ಪಡಿಸುತ್ತಿದ್ದುದರಿಂದ ಮೇರಿಯ ಪತ್ನಿಯಂತೆ ನಟಿಸಲೊಪ್ಪಿ ರಾವು ಮೇರಿಗಳಿಬ್ಬರೂ ಅಪ್ಪಾಪುರದ ಜಮೀಂದಾರನ ಶಾಲೆಯಲ್ಲಿ ಅಧ್ಯಾಪಕರಾದರು.

ಜಮೀಂದಾರು ಮತ್ತು ಅತನ ಪತ್ನಿ ಸುಶೀಲಾ ಹಿಂದೂಸಾಂಪ್ರದಾಯದಂತೆ ಮೇರಿಯನ್ನು ತಮ್ಮ ಮಗಳಂತೆ ನೋಡುತ್ತ ಕುಂಕುಮ ಗಂಧಲೇಪಿಸುತ್ತ ಪ್ರೇಮಿಸುತ್ತಿದ್ದರು ಇದೆಲ್ಲ ವೈರಿಗೆ ಸಂಬೇಳುತ್ತಿರಲಿಲ್ಲ. ಒಂದು ದಿನ ಊಟಕ್ಕೆಕರೆ ಬಂದಾಗ ಹೋಗಲಿಲ್ಲ. ಕಾಯಲೆಯಿರಬೇಕೆಂದು ಡಾಕ್ಟರನನ್ನು ಕರಕೊಂಡು ಹೋದರೆ ಅತನ ಚಿಕಿತ್ಸೆ ನಿರಾಕರಿಸಿದಳು. ದೆವ್ವ ಹಿಡಿದಿದೆಯೆಂದೂ, ಕ್ರಿಸ್ತಾನಿ ದೆವ್ವ ಹಿಡಿದಿದೆಯೆಂದೂ ಹೇಳಲಾಯಿತು. ತಾನು ಕ್ರಿಸ್ತಳೆಂದು ಹೇಳಿದರೂ ಈಗ ಜಮೀಂದಾರನಿಗೆ ನಂಬಿಕೆಯಾಗಲಿಲ್ಲ.

ಒಂದು ತಿಂಗಳು ಕಳೆಯಿತು. ಮೇರಿಯು ತನ್ನ ಮತ್ತು ರಾವ್‌ನ ಸಂಬಳ ಕಳುಹಿಸಿ ದೇವಿಡ್ ಸಾಲ ತೀರಿಸಿದಳು. ಆದರೆ ರಾವು ಮತ್ತು ಮೇರಿಯಲ್ಲಿ ಸಖ್ಯವಾಗಲಿಲ್ಲ. ತನ್ನನ್ನು ಹಿಂದುವಾಗಿ ಮಾಡಲು ಪ್ರಯತ್ನ ನಡೆಯುತ್ತಿದೆಯೆಂದೂ, ರಾವು ಜಮೀಂದಾರನ ಮಗಳಾದ ಸೀತೆಯನ್ನು ಪ್ರಣಯವಾಡಲು ಯತ್ನಿಸುವನೆಂದೂ ಸಂಶಯವು ಬಾಧಿಸಹತ್ತಿತು. ಎರಡು ತಿಂಗಳು ಪೂರ್ತಿಯಾಗುವ ಮುಂಚೆ, ಮೇರಿ, ರಾವು ಇವರ ಕಲಹ ನೋಡಿ, ಮೇರಿಯು ಗರ್ಭವತಿ ಇರಬೇಕೆಂದು ಜಮೀಂದಾರನು ಆಲೋಚಿಸಿದನು. ಸುಶೀಲೆಯು ಸೀಮಂತಕ್ಕೇರ್ಪಾಡು ಮಾಡಿದಳು ಜಮೀಂದಾರನ ಮನೆಯಲ್ಲಿ ಅತಿಥ್ಯ ಪಾಗಿ ಆ ದಿನ ರಾತ್ರೆ ಅಲ್ಲಿಯೇ ತಂಗಲು ಹೇಳಿದರು. ಕೊಕಡಿಯಲ್ಲಿ 'ರಾವು' ಇರುವುದು ನೋಡಿ, ಮೇರಿಗೆ ಬೆಂಕಿಯಿಟ್ಟಂತಾಯಿತು. ಆತನು ಅಲ್ಲಿಂದ ಹೊರದೂಡಲ್ಪಟ್ಟು ಬಂಗಲೆಗೆ ಹೋಗಬೇಕಾಯಿತು. ಕಾಲು ಮುರಿದೆಯೆಂದ ನಟಿಸಿದು ಕಾರಣ. ಮೇರಿಯು ತನ್ನ ಪ್ರಯಾಣ ಮುಂದಕ್ಕೆ ಹಾಕಿದಳು.

ಇತ್ತ ದೇವಿಡ್‌ನು, ತನ್ನ ಕೈ ಬಿಟ್ಟು ಮೇರಿಯು ಹೋಗುವಳಲ್ಲಾ ಎಂದು ಮೇರಿಯ ಅಡ್ರಸ್ ತಿಳಿಯದೆ, ಆಕೆಯ ತಂದೆ ತಾಯ್ಗಳ ಮನೆಯಿಂದ ವಾಪ್ತಿ ನಮಿವಿರುವ ಹೆಟ್ಟಿಗೆ ಅಡ್ರೆಸು ಕದ್ದು, ಅಸ್ಸಾವು ರಕ್ಕೆ ತೆರಳಿದನು ಮೇರಿಯ ತಾಯಿ ತಂದೆಯೂ ಹೋದರು- ದೇವಿಡ್‌ನ ಆಟಸಾಗಲಿಲ್ಲ ಜಮೀಂದಾರನ ಬಳಿಗೆ ಹೋಗಿ ಆಕೆಯು ರಾವ್‌ನ ಪತ್ನಿಯಲ್ಲ. ಕ್ರೈಸ್ತವಯವತಿಯೆಂದು ಹೇಳಿದನು.

ಕಳೆದ ಹೋದ ಮಹಾ ಲಕ್ಷ್ಮಿಯೇ, ಮೇರಿಯೆಂಬುದು ಜಮೀಂದಾರ ಪತ್ನಿಯರಿಗೆ ಗೊತ್ತಾಯಿತು. ಮೇರಿಯನ್ನು ಬೆಳೆಸಿದ ತಾಯಿ ತಂದೆಯರೂ ಇದನ್ನು ಧೃಡಪಡಿಸಿದರು. ಮೇರಿಯು ನಿಜವಾಗಿಯೂ ರಾವ್‌ನ ಹೆಂಡತಿಯಾಗಲೊಪ್ಪಿದಳು.

ನವಭಾರತಕ್ಕೆ
ಚಂದದಾರರಾಗಿರಿ.

೬೦ ನೇ ಕಾಂಗ್ರೆಸ್ ಅಧಿವೇಶನ.

ಆವಡಿಯಲ್ಲಿ ಪ್ರಾರಂಭವಾದ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಅರವತ್ತನೇ ಅಧಿವೇಶನದಲ್ಲಿ ಕಾಂಗ್ರೆಸ್ ಅಧ್ಯಕ್ಷತೆಯನ್ನು ಸೌಶಾಪ್ಪದ ಮೂಜ ಮುಖ್ಯ ಮಂತ್ರಿ ಶ್ರೀ ಯು. ಎನ್. ಧೇಬರ್‌ರವರು ಪಂಡಿತ ನೆಹರೂರಿಂದ ವಹಿಸಿಕೊಂಡರು.

" ಪಕ್ಷದ ಈ ಅಧಿವೇಶನವು ಐತಿಹಾಸಿಕವಾದುದು. ಏತಕ್ಕೆಂದರೆ ರಾಷ್ಟ್ರದಲ್ಲಿ ನೂತನ ಸಾಮಾಜಿಕ ಆರ್ಥಿಕ ವ್ಯವಸ್ಥೆಯನ್ನು ನಿರ್ಮಾಣ ಮಾಡುವ ಕಾರ್ಯವನ್ನು ಈ ಅಧಿವೇಶನ ಪ್ರಾರಂಭಿಸಬೇಕಾಗಿದೆ" ಎಂಬುದಾಗಿ ನೂತನ ಅಧ್ಯಕ್ಷರು ಘೋಷಿಸಿದರು. ಆದ್ದರಿಂದಲೇ ಪಕ್ಷದ ಮುಂದಿರುವ ಕೆಲಸ ಹಿಂದೆಂದೂ ಇದ್ದುದಕ್ಕಿಂತಲೂ ಬಹಳ ಕಷ್ಟದ್ದಾಗಿದೆಯೆಂದೂ ಶ್ರೀ ಧೇಬರ್ ಸ್ಪಷ್ಟಪಡಿಸಿದರು.

ನೂತನ ಚುನಾಯಿತ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ (ಎ. ಐ. ಸಿ. ಸಿ.) ಈ ಅಧಿವೇಶನದೊಂದಿಗೆ ಈ ಸಮ್ಮೇಳನ 19ನೇ ತಾ. 9-15ಕ್ಕೆ ಸತ್ಯನೂರ್ತಿ ನಗರದ ವಿಶಾಲ ಭವ್ಯ ಚಪ್ಪರದಲ್ಲಿ ಆರಂಭವಾಯಿತು.

ವೇದಿಕೆಯ ಮೇಲೆ ಶ್ರೀ ಧೇಬರ್‌ರವರೂ, ನಿವೃತ್ತರಾಗಲಿದ್ದ ಅಧ್ಯಕ್ಷ ಪಂಡಿತ ನೆಹರೂರವರೂ, ಹಳೆಯ ವರ್ಕಿಂಗ್ ಕಮಿಟಿಯ ಸದಸ್ಯರುಗಳೂ, ಶ್ರೀಗಳಾದ ಸಿ. ರಾಜಗೋಪಾಲಾಚಾರಿ, ಸಿ. ಡಿ. ದೇಶಮುಖ್, ಟಿ. ಟಿ. ಕೃಷ್ಣಮಾಚಾರಿ ಮತ್ತು ವಿ. ಕೆ. ಕೃಷ್ಣಮೆನನ್‌ರೂ ಮಂಡಿಸಿದ್ದರು.

ವೇದಿಕೆಯ ಮೇಲೆ ಮಹಾತ್ಮಾಗಾಂಧಿಯವರ ಪೂರ್ಣಾಕಾರದ ಭಾವಚಿತ್ರವೂ ಎಡಬಲದಲ್ಲಿ ಒಂದೊಂದು ವರ್ಣಚಿತ್ರವೂ ಅಲಂಕರಿಸುತ್ತಿದ್ದವು.

ಪಂಡಿತ ನೆಹ್ರೂರಿಂದ ವರದಿ.

ಎ. ಐ. ಸಿ. ಸಿ ಪ್ರಾರಂಭವಾದಾಗ 420 ಸದಸ್ಯರಲ್ಲಿ 230 ಮಂದಿ ಹಾಜರಿದ್ದರು. ಮೊಟ್ಟ ಮೊದಲು ನೆಹ್ರೂರವರು ಕಳೆದ ಎ. ಐ. ಸಿ. ಸಿ. ಯ ವರದಿಯನ್ನು ಅನುಮೋದನೆಗಾಗಿ ಮಂಡಿಸಿದರು.

ಅನಂತರ ಪ್ರಧಾನ ಕಾರ್ಯದರ್ಶಿಗಳ ವರದಿಯನ್ನೂ, ಆಡಿಟ್ ಲದ ಲೆಕ್ಕ ಪತ್ರಗಳನ್ನೂ ಸಭೆಯ ಮುಂದೆ ಮಂಡಿಸಲಾಯಿತು. ಇದಾದನಂತರ ನೆಹ್ರೂರವರು ಕಾಂಗ್ರೆಸ್ ಪಕ್ಷದ ಕಾರ್ಯ ಚಟುವಟಿಕೆ ಬಗ್ಗೆ ತಮ್ಮ ವರದಿ ಒಪ್ಪಿಸಿದರು.

ತಾವೀಗ ಅಧ್ಯಕ್ಷತೆಯಿಂದ ವಿರಮಿಸಲು ಸಂತೋಷಿಸುವುದಾಗಿ ಹೇಳಿ ನೆಹ್ರೂರವರು ಶ್ರೀ ಧೇಬರ್‌ರ ಗುಣ ಪ್ರಶಂಸೆ ಮಾಡಿದರು. ಅನಂತರ ಎ. ಐ. ಸಿ. ಸಿ. ಯು ವಿಷಯ ನಿಯಾಮಕ ಸಮಿತಿಯಾಗಿ ಪರಿವರ್ತನೆಗೊಂಡಿತು.

"ರಾಷ್ಟ್ರವು ಸ್ವಾತಂತ್ರ್ಯ ಸಾಧಿಸುವವರೆಗೆ ಸ್ವರಾಜ್ಯಂಪೋ ಕಾಂಗ್ರೆಸಿನ ಏಕೈಕ ಮಂತ್ರವಾಗಿತ್ತು. ಆದರೆ ಸ್ವಾತಂತ್ರ್ಯಾನಂತರ ರಾಷ್ಟ್ರವು, ಕನಸು ಮನಸ್ಸಿನಲ್ಲೂ ಯೋಚಿಸದಿದ್ದಂತಹ ಭಾರಿ ಸಮಸ್ಯೆಗಳನ್ನು ಎದುರಿಸ ಬೇಕಾಯಿತು" ಎಂದು ಶ್ರೀ ಧೇಬರ್ ತಮ್ಮ ಭಾಷಣದಲ್ಲಿ ಹೇಳಿದರು.

ಕಾಂಗ್ರೆಸಿನ ಇಂದಿನ ಜವಾಬ್ದಾರಿ ಬಹಳ ಮಹತ್ತರವಾದುದೆಂದೂ ಇಂತಹ ಸಂಧಿಗ್ಧ ಸಂದರ್ಭದಲ್ಲಿ ಅಧ್ಯಕ್ಷಗಿರಿಯ ಈ ಹೊಣೆ ತಮಗೆ ಬಂದಿದೆ ಎಂದೂ, ಅದರೂ ಶ್ರೀ ನೆಹ್ರೂರಂತಹ ಮುಂದಾಳುಗಳ ಸಲಹೆ ಸಹಕಾರಗಳಿಂದ ತಾವು ಈ ಕಾರ್ಯ ಜವಾಬ್ದಾರಿ ನಿರ್ವಹಿಸುವ ಭರವಸೆ ಹೊಂದಿರುವುದಾಗಿಯೂ ಶ್ರೀ ಧೇಬರ್ ಹೇಳಿದರು.

ರಶಿಯಾದ ದೀರ್ಘ ಜೀವಿಗಳು.

ರಶಿಯಾದಲ್ಲಿಯ ಖಾರಕಾನದಲ್ಲಿಯ ಕಾರ್ಕಿ ವಿಶ್ವವಿದ್ಯಾಲಯದ ಜೀವಶಾಸ್ತ್ರ ವಿಭಾಗವು, ಆ ದೇಶದಲ್ಲಿಯ ದೀರ್ಘ ಜೀವಿಗಳ ಒಂದು ಪಟ್ಟಿಯನ್ನು ಸಿದ್ಧಪಡಿಸಿದೆ

ಆ ದೇಶದಲ್ಲಿ ಈಗ 40 ಸಾವಿರದಕ್ಕಿಂತ ಹೆಚ್ಚು ಜನರು 90 ವರ್ಷ ಮೀಕ್ಕಿದವರಿದ್ದಾರೆ. ಅವರಲ್ಲಿ 100 ವರ್ಷ ಮೀರಿದವರು 4425, 110 ವರ್ಷ ಮೀಕ್ಕಿದವರು 717 ಇದ್ದಾರೆ. ಅವರಲ್ಲಿ ನೂರಕ್ಕೆ 75 ರಷ್ಟು ಸ್ತ್ರೀಯರಿದ್ದಾರೆ.

ಅಜರಬೈಜಾನದ ಜೇರಾಸಾರಾ ಎಂಬ ಹಳ್ಳಿಯಲ್ಲಿರುವ ಮಹಮ್ಮದ ಖಯಿವಾರೋಬ್ ಎಂಬವನು 1810 ನೇ ಇಸ್ವಿಯಲ್ಲಿ ಹುಟ್ಟಿದವನಾಗಿದ್ದಾನೆ. ಅವನಿಗೆ ಈಗ 145 ವರ್ಷ ವಯಸ್ಸಾಗಿದ್ದು ಅವನ ಹೆಂಡತಿಯ ವಯಸ್ಸು 120 ಇದೆ. ಅವನ ಮಗಳು 100 ವರ್ಷದಕ್ಕಿಂತಲೂ ಹೆಚ್ಚಿನ ವಯಸ್ಸಿನವಳಾಗಿದ್ದಾಳೆ.

ಜಾರ್ಜಿಯಾದ ಓರ್ಪೇವಿ ಎಂಬ ಹಳ್ಳಿಯಲ್ಲಿರುವ ಸೋಫ್ರೇಮ ಗಾಬಿರಿಯಾಶಿವಲಿ ಎಂಬವನ ವಯಸ್ಸು 135 ವರ್ಷದ್ದಿದೆ. ಅವನಿಗೆ 14 ಮಕ್ಕಳು, 25 ಮೊಮಕ್ಕಳು, ಅನೇಕ ಮರಿಮಕ್ಕಳು ಗಿರಿಮಕ್ಕಳು ಇದ್ದಾರೆ.

ಆ ದೇಶದ ಇತರ ಭಾಗಗಳಲ್ಲಿ ಕೂಡ 100 ವರ್ಷ ಮೀಕ್ಕಿದ ಅನೇಕ ಜನರಿದ್ದಾರೆ. ಯುಕ್ರೇನದಲ್ಲಿ ಈ ವಯಸ್ಸಿನ ಜನರ ಸಂಖ್ಯೆಯು 2700 ಕ್ಕಿಂತ ಹೆಚ್ಚಾಗಿದೆ.

ಈ ಪರಿಚಯದಿಂದ ಆ ಜೀವ ಶಾಸ್ತ್ರ ಸಂಶೋಧಕ ವಿಭಾಗಕ್ಕೆ ಬಹಳ ಲಾಭವಾಗಿದೆಯೆಂದು ಹೇಳಲಾಗಿದೆ. ಏಕೆಂದರೆ ಈ ವಿಷಯದಲ್ಲಿಯ ಕಾರಣಗಳನ್ನು ಅವರು ಹುಡುಕಿ ತೆಗೆಯಲು ಮತ್ತು ಆ ಉಪಾಯಗಳಿಂದ ಮನುಷ್ಯನ ಜೀವನವು ಬೆಳೆಸಲ್ಪಡಬಹುದು ಎಂಬ ಬಗ್ಗೆ ಸಾಧನೆಗೆ ಅನುಕೂಲವಾಗುವುದಿದೆ.

ಜೀವನಗೀತೆ.

ತಿಬೇಟ ಜನರ ಶ್ರೇಷ್ಠಗುರು ಫದಂಪಾ ಇವರು, ದಕ್ಷಿಣ ತಿಬೇಟದಲ್ಲಿಯಃ ಟಂಗ್ರಿ ಎಂಬ ಊರಿನ ಜನರಿಗೆ ಉಪದೇಶ ರೂಪವಾಗಿ "ಜೀವನಗೀತೆ"ಯನ್ನು ರಚಿಸಿದರು. ಆ ಪದ್ಯದ ಅರ್ಥವು ಈ ರೀತಿಯಾಗಿದೆ.

ಟಂಗ್ರಿ ಜನರೇ, ಪವಿತ್ರವಾದ ಸತ್ಯದ ಸಲುವಾಗಿ ಶರೀರ, ಮಾತು, ಹೃದಯ ಮತ್ತು ಆತ್ಮವನ್ನು ಅರ್ಪಿಸುವುದು ಶ್ರೇಷ್ಠ ಮತ್ತು ಸ ಪೂ ರ್ ತ್ತ ಮ ವ್ಯವಸಾಯವಾಗಿದೆ.

ದುಡ್ಡು ಮತ್ತು ಶ್ರೀ ಮಂ ತಿಕೆಗಳು ಭ್ರಮೆಗಳಾಗಿವೆ, ಕ್ಷಣಿಕ ಉಪ್ಯೋಗಕ್ಕಾಗಿ ಅವು ದೊರೆತಿರುತ್ತವೆ. ಅವುಗಳ ಬಗ್ಗೆ ಆಸ್ಥೆ ಪಡಬೇಡಿರಿ ಮತ್ತು ಅವುಗಳನ್ನು ಸಂಗ್ರಹಿಸಬೇಡಿರಿ.

ನಿಮ್ಮ ಸಂಬಂಧಿಕರು ನಿಮಗೆ ಅನೇಕ ಅಮಿಷಗಳನ್ನು ತೋರಿಸುವರು, ಆಕರ್ಷಕ ಮೃಗಜಲಗಳನ್ನು ಎದುರಿಗೆ ಒಡ್ಡುವರು ಆ ಬಂಧನಕ್ಕೊಳಗಾಗಬೇಡಿರಿ. ಮತ್ತು ಭಾವನೆಗಳ ಜಾಲವನ್ನು ಹೇಮೀಗೆಯಿರಿ.

ದೇಶ ಮತ್ತು ಮನೆಗಳು, ನಿತ್ಯಸಂಚಾರಿಯ ವಸತಿಯಂತೆ ಕ್ಷಣಿಕವಾಗಿರುವವು. ಅವುಗಳ ಬಗ್ಗೆ ಮಮತೆಯನ್ನು ಬಿಡಿಯಬೇಡಿರಿ, ಎಲ್ಲ ವಿಷಯಗಳನ್ನು ತ್ಯಾಗ ಮಾಡಿರಿ.

ಪ್ರತಿಯೊಬ್ಬನ ಹುಟ್ಟುದಿನವ ಪ್ರಾರಂಭದಲ್ಲಿ ಅವನ ಮೃತ್ಯುವಿನ ಚಿಹ್ನಗಳು ಗೋಚರವಾಗುವವು. ಆ ಬಗ್ಗೆ ಎಚ್ಚರ ಮತ್ತು ಜಾಗ್ರತೆಗಳನ್ನು ವಹಿಸಿರಿ, ಬೇಳೆಗಳೆಯಬೇಡಿರಿ.

ಜನನ, ಅಸ್ವಸ್ಥತೆ, ವಯಸ್ಸು, ಮರಣ ಈ ಸಾಗರದ ಮೇಲೆ ತೇಲುವೆ ಇಲ್ಲ. ಆ ಸಾಗರವನ್ನು ದಾಟಬಲ್ಲ ನಾವನ್ನು ಈಗಲೇ ಕಟ್ಟಿಕೊಳ್ಳಿರಿ.

ಯೋಗ್ಯಗುರು ಕಂಡನಂತರ ಅವನು ಮರೆಯಾಗುವುದಿಲ್ಲ. ಅವನನ್ನು ಕಾಣಿರಿ ಮತ್ತು ಪೂಜಿಸಿರಿ.

ಗುರುವು ಇಚ್ಛಿಸಿದರೆ ಅವನ ಭಿಟ್ಟಿಯು ನಿಮಗೆ ಆಗಿಯೇ ಆಗುವುದು. ಅದ್ದರಿಂದ ಅವನಲ್ಲಿ ವಿಶ್ವಾಸ ಮತ್ತು ಪೂಜ್ಯಭಾವನೆಗಳನ್ನು ಇಡಿರಿ.

ಎಲುವು ಮತ್ತು ಮಾಂಸವು ಕೂಡಿಯೇ ಹುಟ್ಟಿದ್ದರೂ ಅವು ಒಂದು ದಿವಸ ಬೇರೆ ಯಾಗಲೇ ಬೇಕು. ನಿಮ್ಮ ಜೀವಿತವು ಶಾಶ್ವತವೆಂದು ತಿಳಿಯಬೇಡಿರಿ, ಅದು ಬೇಗನೆ ಮುಗಿಯುವುದು.

ಶುದ್ಧ ಮನಸ್ಸಿನ ನಿಜ ಸ್ವರೂಪ, ಶಾಶ್ವತತ್ವ, ಕರ್ತೃತ್ವಶಕ್ತಿಗಳಿಗಾಗಿ ಶೋಧ ಮಾಡಿರಿ. ಅದಕ್ಕೆ ಗಟ್ಟಿಯಾಗಿ ಅಂಟಿಕೊಳ್ಳಿರಿ. ಆದ್ದು ನಿರ್ವಿಕಾರವಾದದ್ದು ಮತ್ತು ಕೊನೆಯವರೆಗೆ ಉಳಿಯತಕ್ಕದ್ದು.

ಮನುಷ್ಯನ ಜೀವನದ ಅತಿ ಶ್ರೇಷ್ಠ ಸಂಪತ್ತಾದ ಮತ್ತು ಪವಿತ್ರ ನಿಧಿಯಾದ ಮನಸ್ಸನ್ನು ಹಿಡಿದುಕೊಳ್ಳಿರಿ. ಅದು ಶಾಶ್ವತವಾಗಿ ಉಳಿಯುವ ನಿಧಿಯೆಂದರೆ ಅದೇ ಮಾತ್ರ ಆಗಿದೆ.

ಪವಿತ್ರ ಸಂಜೀವಿನಿಯಂತಿರುವ ಧ್ಯಾನ ಸಾಧನೆಗಾಗಿ ಹುಡಿಕಿರಿ ಮತ್ತು ಅದರ ಸವಿಯನ್ನು ಸವಿಯಿರಿ. ಒಂದು ಸಲ ಸಮಾಧಿಯ ರುಚಿಯು ತಿಳಿಯಿತೆಂದರೆ, ಆ ಮೇಲೆ ಹಸಿವೆಯು ಬಾಧಿಸಲಾರದು.

ಬೇಕು, ಬೇಡಗಳು ತಮ್ಮ ಹಿಂದೆ ಗುರುತುಗಳನ್ನು ಬಿಟ್ಟು ಹೋಗುವುದಿಲ್ಲ. ಹವೆಯಲ್ಲಿ ಹಾರಾಡುವ ಪಕ್ಷಿಗಳು ಕೂಡ ತಮ್ಮ ಹಾರಾಟದ ಚಿಹ್ನಗಳನ್ನು ಆಕಾಶದಲ್ಲಿ ಮೂಡಿಸದಂತೆಯೇ ಈ ಘಟನೆಗಳೂ ನಡೆಯುತ್ತವೆ. ಅನುಭವಗಳಮೇಲೆ ಅವಲಂಬಿಸುವುದೂ ಯೋಗ್ಯವಲ್ಲ. ಏಕೆಂದರೆ ಅವು ವ್ಯತ್ಯಾಸಗೊಳ್ಳುತ್ತವೆ.

ಮೂಕನು ತನಗೆ ಕಂಡ ಕನಸನ್ನು ಇತರರಿಗೆ ವಿವರಿಸಲು ಅಸಮರ್ಥನಿರುವಂತೆ ಸೈಜವನ್ನು ಕಂಡವನು ಅದನ್ನು ಜೀರೆಯವರಿಗೆ ಭಾಷೆಯ ಸಹಾಯದಿಂದ ಹೇಳಲಾರನು.

ವಿವಿಧ ನಾಮರೂಪಗಳು ಮತ್ತು ಆಕಾರವು ಮೂಲ ಸ್ವರೂಪದಲ್ಲಿ ಒಂದೇ ಆಗಿವೆ. ಅವುಗಳಿಗೆ ಸೀಮೆಯಿಲ್ಲ ಮತ್ತು ಮಧ್ಯ ಬಂಧುವಿಲ್ಲ.

ಸ್ವತಂತ್ರ ಮತ್ತು ಕರ್ತೃತ್ವಶಾಲಿಯಾದ ಈ ಮಾನವೀ ಜೀವನವು ದೊಡ್ಡ ಭಾಗ್ಯವಾಗಿದೆ. ಅದನ್ನು ವ್ಯರ್ಥಗೊಳಿಸುವವರು ದುರ್ದೈವಿಗಳಾಗಿದ್ದಾರೆ.

ಸಂತೋಷವನ್ನು ಕಂಡರೆ, ಅದು ವಿರುದ್ಧವಾಗಿ ದುಃಖವು ಬಂದು ನಿಲ್ಲುತ್ತದೆ. ಇವುಗಳು ಮತ್ತು ಇವುಗಳ ಕಾರಣಗಳು ನಿಮ್ಮಲ್ಲಿಯೇ ಇವೆ.

ಅಜ್ಞಾನದಿಂದ ಅನುಸರಿಸಲ್ಪಡುವ ತಪ್ಪು ದಾರಿಯೇ ಎಲ್ಲ ದುಃಖಗಳ ಮೂಲವಾಗಿದೆ. ಆದ್ದರಿಂದ ಜ್ಞಾನಸಾಧನೆಯನ್ನು ಯಾವಾಗಲೂ ಜಾಗ್ರತವಾಡಿರಿ ಮತ್ತು ಅಂಕೆತಪ್ಪಿಡಿರಿ

ಯಾವುದಾದರೊಂದರ ಅರ್ಥವು ನಿನಗೆ ತಿಳಿಯದಿದ್ದರೆ, ಅದನ್ನು ತಿಳಿಸಲು ಗುರುವಿಗೆ ಪ್ರಾರ್ಥಿಸು. ಇಲ್ಲವಾದಲ್ಲಿ ನಿಃಸಂಶಯವಾಗಿ ನಿನ್ನ ಸಮಸ್ಯೆಯು ಜಿಡುವುದು. (ಜಯ ಹಿಂದ)

ಚೀಣಾ ಸಂಸ್ಕೃತಿ ನಿಯೋಗ ಬರ್ಮಾಕ್ಕೆ ಹೊರಟಿತು.

ಚೀಣಾದ ಸಾಂಸ್ಕೃತಿಕ ನಿಯೋಗದವರು ಭಾರತದಲ್ಲಿ ತಮ್ಮ ಎರಡು ತಿಂಗಳುಗಳ ಕಾಲದ ಪ್ರವಾಸವನ್ನು ಮುಕ್ತಾಯಗೊಳಿಸಿ ಜನವರಿ 20ನೇ ತಾ. ಇಂಡಿಯನ್ ಏರ್ ಲೈನ್ಸಿನ ಎಂಡು ಸ್ಕೈ ಮಾಸ್ಟರ್ ವಿಮಾನಗಳಲ್ಲಿ ಕಲ್ಕತ್ತಾದಿಂದ ಬರ್ಮಾಕ್ಕೆ ಪ್ರಯಾಣ ಬೆಳಸಿದರು.

ಅರವತ್ತೇಳು ಮಂದಿ ಇದ್ದ ನಿಯೋಗದಲ್ಲಿ ಉಪನಾಯಕರೂ ಸೇರಿ ಐದು ಮಂದಿ ಭಾರತದ ರಿಪಬ್ಲಿಕ್ ದಿನೋತ್ಸವವನ್ನು ನೋಡಲು ಇಲ್ಲೇ ಉಳಿದುಕೊಂಡಿದ್ದಾರೆ.

ವಿಮಾನ ನಿಲ್ದಾಣದಲ್ಲಿ ಚೀಣಾ ನಿಯೋಗದ ಮುಖಂಡರಾದ ಮಿ॥ ಹೆಂಗ್ ಚೆ-ಟೋ ಮಾತನಾಡಿ, ಈ ಪ್ರವಾಸವ ನೆನಪು ಎಂದೆಂದಿಗೂ ತಮ್ಮ ಮನಸ್ಸಿನಲ್ಲಿ ಉಳಿಯುವುದೆಂದರು. ವಿಮಾನ ಹೊಗುತ್ತ ಅಲ್ಲಿದ್ದ ಪ್ರತಿಯೊಬ್ಬರನ್ನೂ ಅವರು ಆಲಂಗಿಸಿ, ಅನಂತರ ವಿಮಾನವನ್ನು ಹತ್ತಿದರು.

ಬಳ್ಳಾರಿ ಪ್ರಭಾತ್ ಟಾಕೀಸ್‌ನಲ್ಲಿ

ಪ್ರತಿದಿನ 2 ಆಟಗಳು, 6-15 ಮತ್ತು 9-15.

2 ನೇ ವಾರ

ವಿಜಯ.ರವರ **ಮಿಸ್ಸಮ್ಮ** [ತೆಲುಗು ಚಿತ್ರ]

ಪಾತ್ರರು:—N. T. ರಾಮಾರಾವ್, A. ನಾಗೇಶ್ವರರಾವ್, ರೇಲಂಗಿ, ರಮಣಾರೆಡ್ಡಿ, ಸಾವಿತ್ರಿ, ಜಮುನ ನಟಿಸಿರುವರು.

ಡೈರೆಕ್ಟರ್:— ಪ್ರ ಸಾ ದ್,

ನಿರ್ಮಾಪಕರು .... ನಾಗಿರೆಡ್ಡಿ, ಚಕ್ರಪಾಣಿ.

Matinee at 'PRABHAT' 3 days 4 Shows.

Friday .... 28th @ 3—30 P.M. Sunday 30th @ 9—30 A.M.

Saturday 29th @ 3—30 P.M. —do— @ 3-30 P.M.

METRO-GOLDWYN PPESENTS.

"DEVIL MAKES THREE"

GENE KELLY, PIER ANGELI, RICHARD ROBER.

Crime, passion and gold smuggling in modern Germany. An adventurous American and an irresistible girl of the underworld set out together to probe a deadly secret guarded by cunning terrorists. Rates as usual for matinees.

Our next matinee: WARNERS "A BOY FROM OKHLOMA"

ಎಲ್ಲವನ್ನೂ ಶುದ್ಧ ಪಡಿಸಲು ಉತ್ತಮವಾದುದು

ಮೈಸೂರು ಸೋಪ್

ತಯಾರಿಸುವವರು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

"ಮೆಂಬರ್, ಐ.ಎಸ್.ಟಿ.ಎಂ.ಎ"

ಸತ್ಯಮೂರ್ತಿಯವರ ಪ್ರತಿಮೆಯ ಅನಾವರಣೆ

"ಶ್ರೀ ಸತ್ಯಮೂರ್ತಿಯವರು ಮಹಾ ದೇಶಭಕ್ತರು, ಮಹಾ ಪಾರ್ಲಿಮೆಂಟರಿಯನರು ಮತ್ತು ಸ್ವಾತಂತ್ರ್ಯ ಹೋರಾಟದ ಮಹಾ ಯೋಧರು ಸ್ವಾತಂತ್ರ್ಯಕ್ಕಾಗಿ ಮಡಿದ ಹುತಾತ್ಮರು" ಎಂಬುದಾಗಿ ಪ್ರಧಾನ ಮಂತ್ರಿ ಪಂ|| ನೆಹ್ರೂರವರು ಅವರಿಯ ಕಾಂಗ್ರೆಸ್ ಅಧಿವೇಶನದ ಸ್ಥಳವಾದ "ಸತ್ಯಮೂರ್ತಿ ನಗರದಲ್ಲಿ" ಚಿಟ್ಟರದ ಮುಂದೆ ಸತ್ಯಮೂರ್ತಿಯವರ ಪ್ರತಿಮೆಯನ್ನು ಜನವರಿ 20ನೇ ತಾ. ಸಂಜೆ ಅನಾವರಣಗೊಳಿಸುತ್ತಾ ಹೇಳಿದರು. ದಿವಂಗತ ಸತ್ಯಮೂರ್ತಿಯವರ ಪತ್ನಿಯೂ, ಪುತ್ರಿಯೂ ಸಮಾರಂಭದಲ್ಲಿ ಹಾಜರಿದ್ದರು.

ನವಭಾರತ ಬಳ್ಳಾರಿ

(NATIONALIST WEEKLY)

ಚಂದಾದರರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಒರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

NAVA BHARAT, BELLARY.

(Regd.M.No. 4746)

To 24-1-55

Sri._____

Edited Printed & Published by T. B. Keshava Rao, at Nava Bharat Printing Press, Bellary

ನವಚೈತನ್ಯ

ಸೋಮವಾರ
ಜನವರಿ
31-1-55

ವರ್ಷ 18
ಸಂಚಿಕೆ 24

ಬಳ್ಳಾರಿ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ! ಜಾಗೃತ!! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್



ಕಾಂಗ್ರೆಸ್ ಯಾವಮೋ[illegible]ಂಗಡದ ಸೊತ್ತಲ್ಲ, ಅದು ಎಲ್ಲರದು. ಆದರೆ ಜನತೆಯ [illegible]ಹು ದೊಡ್ಡ ಭಾಗವಾಗಿರುವ ಬಡ ಒಕ್ಕಲಿಗರ ಹಿತ-ಸಂಬಂಧಗಳನ್ನು ಅದು ಕಾಪಾಡಲೇ ಬೇಕು. ಆದಕಾರಣ ಕಾಂಗ್ರೆಸ್ಸು ಬಡವರ ಪ್ರತಿನಿಧಿಯಾಗಿರಬೇಕು. ಉಳಿದೆಲ್ಲ ವರ್ಗಗಳು, ಮಧ್ಯಮ, ಬಂಡವಾಳದಾರ ಹಾಗು ಜಮೀನ್ದಾರ ವರ್ಗಗಳು ರಸಾತಳಕ್ಕೆಳಿಯಬೇಕೆಂದು ಇದರ ಅರ್ಥವಲ್ಲ. ಇತರ ಎಲ್ಲ ವರ್ಗಗಳು ಬಡವರ ಹಿತಸಂಬಂಧಗಳನ್ನು ಕಾಪಾಡಲು ನೆರವಾಗಲೆಂಬುವೇ ಇದರ ಉದ್ದೇಶ.

ಎಲ್ಲ ಜನರು ನಡೆಸುವ ಅಳ್ವಿಕೆ, ಸ್ಯಾಯದ ಅಳ್ವಿಕೆಯೆಂದರೇ ಸ್ವರಾಜ್ಯವೆಂದು ನನ್ನ ಮತ.

ಹೀಗಿದ್ದು ಕಾಂಗ್ರೆಸ್ ಯಾವುದನ್ನು ಪೂರ್ಣ ಸ್ವರಾಜ್ಯವೆಂದು ಬಗೆದಿದೆಯೆಂಬ ಬಗ್ಗೆ ತಪ್ಪು ಕಲ್ಪನೆ ಇರಕೂಡದು. ಕೋಟ್ಯವಧಿ ಶ್ರಮಜೀವಿಗಳಿಗೆ [illegible]ಇದು ಆರ್ಥಿಕ ಸ್ವಾತಂತ್ರ್ಯ. ಅವರನ್ನು ಸುಲಿಯಲು ಯಾವುದೇ ಹಿತ ಸಂಬಂಧೆಯೊಡನೆ ಮಾಡಿಕೊಂಡ ಅಪವಿತ್ರ ಒಪ್ಪಂದವು ಅದಲ್ಲ. —ಮಹಾತ್ಮಾ ಗಾಂಧಿ

ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದ್

" ನಾವು 26—1—55 ರ ದಿನ ಆಚರಿಸಿದ "ಭಾರತ ರಿಪಬ್ಲಿಕ್"ನ ಐದನೆಯ ವಾರ್ಷಿಕೋತ್ಸವದ ಸಂಬಂಧದಲ್ಲಿ ನಾನು ನನ್ನ ಶುಭಾಶಯಗಳನ್ನು ಭಾರತದ ಪ್ರತಿಯೊಬ್ಬ ಪ್ರಜೆಗೂ ತಿಳಿಸಬಯಸುತ್ತೇನೆ. ಆ ಪವಿತ್ರ ದಿನದಂದು, ನಾವು ಸಾಧಿಸಿರುವುದನ್ನು ಅಭಿಮಾನದಿಂದ ನೋಡುವಾಗ ಹಿಂದೆ ಆದದ್ದನ್ನು ಅಭಿನಂದನೆಯ ದೃಷ್ಟಿಯಿಂದ ನೋಡಬೇಕು ಮತ್ತು ಮಾಡಲಾಗದ್ದನ್ನು ಇನ್ನು ಮುಂದಾದರು ಮಾಡಿ ಮುಗಿಸುವ ಪಣ ತೊಡಬೇಕು"

ಆಂಧ್ರದ ಚುನಾವಣೆಗಳಲ್ಲಿ ಕಾಂಗ್ರೆಸ್ ಉಮೇದುವಾರರಿಗೇ ನಿಮ್ಮ ವೋಟು ಕೊಡಿರಿ.

ಸೂತ್ರಾಂಜಲಿಯಲ್ಲಿ ವಿಶ್ವರೂಪ ದರ್ಶನ.

(ಸಂತ ವಿನೋಬಾಜಿ)

[ಪ್ರತಿ ವರ್ಷವೂ ಮಹಾತ್ಮಾ ಗಾಂಧೀಜಿಯವರ ನಿರ್ವಾಣ ದಿನ, ತಾ. 30ನೇ ಜನವರಿಯಿಂದ ಅವರ ಶ್ರಾದ್ಧ ದಿನ ತಾ. 12ನೇ ಫಿಬ್ರವರಿವರೆಗಿನ ಸರ್ವೋದಯ ಪಕ್ಷದಲ್ಲಿ ಸರ್ವೋದಯ ಸಮಾಜ ಪ್ರತಿಯೊಬ್ಬ ಸೇವಕನೂ ಮಹಾತ್ಮಾ ಗಾಂಧೀಜಿಯವರ ಮಾರ್ಗದರ್ಶನ ಮಾಡಿದ ಅಹಿಂಸಾತ್ಮಕ ರಚನೆಯಲ್ಲಿ ಶ್ರದ್ಧೆಯಿರುವ ಪ್ರತಿಯೊಬ್ಬರೂ ತಮ್ಮ ಪ್ರಂತ ನೂತ ಒಂದೊಂದು ಲಡ್ಡಿಯಾ ಗುಂಡಿ, (4 ಫೀಟಿನೆ 640 ಸುತ್ತು) ಕೈನೂಲನ್ನು ಯಜ್ಞರೂಪವಾಗಿ ಸಮರ್ಪಿಸಲಿಕ್ಕಿದೆ. ಆ ದ ಮಹತ್ವವನ್ನು ಪೂಜ್ಯ ವಿನೋಬಾಜಿಯವರು ವಿವರಿಸುತ್ತಾರೆ.]

ಸೂತ್ರಾಂಜಲಿಯ ಕಲ್ಪನೆಯನ್ನು ಕುರಿತು ನಾನು ಎಷ್ಟೆಷ್ಟು ಆಲೋಚಿಸುತ್ತೇನೋ ಅಷ್ಟಷ್ಟು ಅದರ ಮಹತ್ವವು ಪ್ರಕಟವಾಗುತ್ತದೆ. ಅದನ್ನು ವ್ಯಾಪಕಗೊಳಿಸಲು ಮಾಡಬೇಕಾದ ಪರಾಕ್ರಮವೂ ತಿಳಿದು ಬರುತ್ತದೆ.

ಪ್ರತಿ ವರ್ಷ ಒಂದೇ ಗುಂಡಿ ಸ್ವಂತ ಕೈ ನೂಲನ್ನು ದೇಶಕ್ಕಾಗಿ ಸಮರ್ಪಿಸುವುದೆಂಬ ವಿಷಯವು ಚಿಕ್ಕದಾಗಿ ಕಾಣಬಹುದು. ಆದರೆ ಆ ಗುಂಡಿಯು ತನ್ನ ಕೈಯಿಂದಲೇ ನೂತ ಉತ್ತಮ ನೂಲಿನ ಗುಂಡಿಯಾಗಿರಬೇಕು. ಅದು ಪ್ರತಿಯೊಬ್ಬನಿಂದಲೂ ಪ್ರತಿ ವರ್ಷವೂ ಸಿಗಬೇಕು ಎಂಬುದನ್ನು ನಾವು ಜೆನ್ನಾಗಿ ತಿಳಿದರೆ ಆದರ ವಿಶ್ವರೂಪ ದರ್ಶನವು ನಮಗೆ ನಿಶ್ಚಯವಾಗಿಯೂ ಆಗುವುದು.

ನಮ್ಮ ದೇಶದ ನೂರು ನೂರು ಜನರ ಒಂದು ಸಮೂಹದಿಂದ ಸರಾಸರಿ ಕನಿಷ್ಠ ಪಕ್ಷಕ್ಕೆ ಒಂದು ಗುಂಡಿಯು ಪ್ರಾಪ್ತವಾಗಬಹುದೆಂದು ಅಂದಾಜು ಹಾಕಿದ್ದೇನು. ಹಾಗಾದರೆ ಇಡೀ ದೇಶದಲ್ಲಿ 36 ಲಕ್ಷ ಗುಂಡಿಗಳು ಜೊರೆಯಬೇಕು.

'ದೇಶದಲ್ಲಿ ನೂಲುವವರು ಅಷ್ಟೊಂದು ಮಂದಿ ಇರುವರೊ ಇಲ್ಲವೊ, ಎಂಬುದೇ ಶಂಕಾಸ್ಪದವು' ಎಂದು ಒಬ್ಬ ಮಿತ್ರರು ಹೇಳಿದರು. "ನಿಶ್ಚಯವಾಗಿರುವದು"ಎಂದು ಇನ್ನೊಬ್ಬರು ಉತ್ತರ ಕೊಟ್ಟರು. "ಏಕೆಂದರೆ ಸನ್ 1930 ಚಳವಳಿದ ಕಾಲದಲ್ಲಿ ದೇಶದಲ್ಲಿ ಹಳ್ಳಿ ಹಳ್ಳಿಗಳಲ್ಲೂ ತಕಲಿಗಳು ಚಲಿಸಲ್ಪಟ್ಟಿದ್ದವು" "ಸರಿ, ಆದರೆ ಒಂದು ಯುಗವೇ ದಾಟಿತಲ್ಲ!" ಎಂದು ಮೊದಲಿನವರು ಪ್ರತ್ಯುತ್ತರ ಕೊಟ್ಟರೆ, "ಆದರ ಕಾರಣ ನೂಲಿನ ಗುಂಡಿಗಳನ್ನು ಪಡೆಯುವುದಕ್ಕಾಗಿ ನೂಲುವುದನ್ನು ಜನರಿಗೆ ಕಲಿಸಿಕೊಡಬೇಕು" ಎಂದರು.

ನೂಲುವುದನ್ನು ಪ್ರತಿ ಸಮುದಾಯವೂ ಕಲಿಸಬೇಕು ಅದಿಲ್ಲದೆ ಹಿಂದೂಸ್ತಾನದ ರೈತನು ಉಳಿಯಲಿಕ್ಕಿಲ್ಲ ನೆರಿ ಪೀಡಿತ ಪ್ರದೇಶಗಳಲ್ಲಿ ನಾನು ಇತ್ತೀಚೆಗೆ ಯಾತ್ರೆಯನ್ನು ಮುಗಿಸಿರುವೆನು. ಜನರಿಗೆ ಈಗ ಯಾವ ಉದ್ಯೋಗವನ್ನು ಕೊಡುವುದು ಎಂಬ ದೊಡ್ಡ ಪ್ರಶ್ನೆಯು ಉಂಟಾಗಿದೆ. ಆದನ್ನು ಪರಿಹರಿಸುವಾಗ, ಬೇಡವೆಂತ ನಾವು ತಪ್ಪಿಸಿದರೆ ಕೂಡ ಚರಖಾನನ್ನು ತಪ್ಪಿಸಿಕೊಳ್ಳಲಾಗುವುದಿಲ್ಲ. ಒಂದು ವೇಳೆ ಇದೊಂದು ಆಕಸ್ಮಿಕ ಆಪತ್ತು ಎನ್ನಬಹುದು. ಆದರೂ ರೈತನಿಗೆ ವರ್ಷದಲ್ಲಿ ಹನ್ನೆರಡು ತಿಂಗಳೂ ಪೂರ್ಣ ಕೆಲಸವಿಲ್ಲವೆಂಬುದು ಮಾತ್ರ ಸದಾಶಾಲವು ಇರುವ ಆಪತ್ತು. ಆದುದರಿಂದಲೇ, ಸುರಕ್ಷಣೆಯ ಒಂದು ಉಪಾಯವೆಂಬಂತೆ, ಪ್ರತಿಯೊಬ್ಬ ಹಳ್ಳಿಯವನೂ ನಗರವಾಸಿಯೂ ನೂಲುವುದನ್ನು ಕಲಿತುಕೊಳ್ಳುವಂತೆ ಏರ್ಪಡಿಸಬೇಕೆಂದು ನಾನು ಸರಕಾರವನ್ನು ಕೇಳಿಕೊಂಡೆನು. ಸರಕಾರದವರಿಂದ ಏನನ್ನೂ ಕೇಳುವ ಪದ್ಧತಿಯನ್ನು ನಾನು ಇಟ್ಟುಕೊಂಡಿಲ್ಲ ನಾನು ನನ್ನ ಅಪೇಕ್ಷೆಯನ್ನು ಜನತಾ ಸಮಾಜದ ಮುಂದಿಡುತ್ತೇನೆ. ಅದರಲ್ಲಿ ಸರಕಾರವೂ ಸೇರಿರುತ್ತದೆ.

ನೂಲುವುದನ್ನು ಕಲಿಸುವುದು ಸೂತ್ರವಲ್ಲದೆ ಪ್ರತಿಯೊಬ್ಬರ ಬಳಿಗೂ ಹೋಗುವ ಯೋಜನೆಯಾಗಬೇಕು. ನಮ್ಮ ಇದೊಂದು ಸಮಸ್ಯೆಯೇ ಭೂದಾನ ಕಾರ್ಯಕ್ಕೂ ಅನ್ವಯಿಸುತ್ತಿದೆ. ಈ ಕಾರ್ಯವು ಯಾವುದೊಂದೇ ಸಂಸ್ಥೆಯಿಂದ ಸಾಧ್ಯವಾಗಲಾರದು. ಅದಕ್ಕಾಗಿ ನಿಷ್ಠೆಯಿರಬೇಕು. ಅದಕ್ಕೊಸ್ಕರವಲ್ಲದೆ ಸಹಯೋಗವನ್ನು ಪಡೆಯಬೇಕು ಅದನ್ನು ಕೂಡ ಭೂದಾನ ಯಜ್ಞದ ಕಾರ್ಯದೊಡನೆ ಸೇರಿಸಬೇಕು. ರಚನಾತ್ಮಕ ಕಾರ್ಯಗಳನ್ನು ಸಾಧಿಸುವ ಬೇರೆ ಬೇರೆ ಸಂಸ್ಥೆಗಳಿವೆ. ವಿದ್ಯಾಲಯಗಳ ಶಿಕ್ಷಕರೂ ಗ್ರಾಮ ಪಂಚಾಯತಗಳ ಕಾರ್ಯಕರ್ತರೂ ಆ ಸಂಸ್ಥೆಗಳಲ್ಲಿ ಸಮಾವೇಶವನ್ನು ಪಡೆಯುತ್ತಾರೆ. ಅಂಥ ಎಲ್ಲ ಸಂಸ್ಥೆಗಳಲ್ಲಿ ನೂಲುವ ಪ್ರಯೋಗವಾಗಬೇಕು. ನಿತ್ಯವೂ ನೂಲುವ ಪದ್ಧತಿಯೇ ಇರಬೇಕು. ಅವೆಲ್ಲವುಗಳಿಂದ ಸೂತ್ರಾಂಜಲಿ ಪ್ರಚಾರವು ಆಗಬೇಕು.

ಸೂತ್ರಾಂಜಲಿ ಸಮರ್ಪಣೆಯು ಸರ್ವೋದಯದ ಪ್ರಾರಂಭಿಕ ದೀಕ್ಷೆಯಾಗಿರುತ್ತದೆ.

S. U. ರಾಮಚಂದ್ರ ರಾವ್, M.A.
ಅ. ಭಾ. ಸರ್ವ ಸೇವಾ ಸಂಘ,
ಮಂಗಳೂರು ವಿಭಾಗ.

ನಿಮಗೆ ಗೊತ್ತೆ ?

1) ರಾಷ್ಟ್ರೀಯ ಯೋಜನಾ ಸಾಲದಿಂದ ಸಂಗ್ರಹವಾದ ಒಟ್ಟು ಹಣ, 157 ಕೋಟಿ ರೂಪಾಯಿಗಳು.

2) 40 ಕೋಟಿ ರೂಪಾಯಿಗಳ ವೆಚ್ಚದ ಕೋಸಿ ಯೋಜನೆಯಿಂದ ಹತ್ತೊಟ್ಟಿಗೆ ತರಲಾಗಿರುವ, ಬಿಹಾರಿನ 'ದುಃಖ ನದಿ' ಪ್ರತಿ ವರ್ಷವೂ ಹಾಳುಮಾಡುತ್ತಿದ್ದ ಜಮೀನಿನ ವಿಸ್ತೀರ್ಣ, 20,000 ಚದುರ ಮೈಲಿಗಳು.

3) ಪಂಚವಾರ್ಷಿಕ ಯೋಜನೆಯ ಮೊದಲನೆಯ ಮೂರು ವರ್ಷಗಳಲ್ಲಿ ಸಾಗುವಳಿಗೆ ತರಲಾದ ಜಮೀನಿನ ಒಟ್ಟು ವಿಸ್ತೀರ್ಣ, 12 ಲಕ್ಷ ಎಕರೆಗಳು.

4) ಭೂ ಸುಧಾರಣಾ ಯೋಜನೆಗಳ ಸಂಬಂಧದಲ್ಲಿ ರಾಜ್ಯ ಸರ್ಕಾರಗಳ ಮಧ್ಯಸ್ಥಿಕದಾರರಿಗೆ ಕೊಟ್ಟ ಪರಿಹಾರ ಧನ (ಪುನರ್ ವ್ಯವಸ್ಥೆ ಸಹಾಯ ಧನವೂ ಸೇರಿ) 450 ಕೋಟಿ ರೂಪಾಯಿಗಳು.

5) 15 ದಶ ಲಕ್ಷ ರೂ.ಗಳ ವೆಚ್ಚದ ಎನಃಶ್ರ ಹೈಡ್ರೊ ಎಲೆಕ್ಟ್ರಿಕ್ ಯೋಜನೆಯಲ್ಲಿ ಭಾರತಕ್ಕೆ ಕೆನಡಾವು ಸಹಾಯ ನೀಡಿದೆ. ಈ ಯೋಜನಾ ಕಾರ್ಯ ನಡೆದಿರುವ ಸ್ಥಳ ಆಸ್ಸಾಂ.

ನವಭಾರತಕ್ಕೆ ಚಂದದಾರರಾಗಿರಿ

Bellary District Board Notification.

ಬಳ್ಳಾರಿ ಡಿಸ್ಟ್ರಿಕ್ಟ್ ಬೋರ್ಡಿಗೆ ಒಳಪಟ್ಟಿರುವ ಹರಗೋಲು, ಮಾರ್ಕೆಟ್ಟು ಮತ್ತು ದಶಬಂಧಂ ಇನಾಮು ಭೂಮಿಗಳ ಯಾಲಂ.

Sri K. SESHAGIRI RAO, I.A.S. Special Officer Dt. Board, Bellary.

ತಾಲೂಕು ತಹಶೀಲುದಾರರಿಂದ ಯಾಲಂ ಮಾಡುವವರು ತಮ್ಮ ಬೆರ ಆಸ್ತಿಯ ಬಗ್ಗೆ ಸಾಲ್ವೆನ್ಸಿ ಸರ್ಟಿಫಿಕೇಟು ಪಡೆದು ಯಾಲಂ ಮಾಡುವ ಮುಂಚೆ ಯಾಲಂ ಮಾಡುವ ಆಫೀಸರರಿಗೆ ಹಾಜರು ಮಾಡತಕ್ಕದ್ದು. ಪ್ರತಿ ಸವಾಲುದಾರರು ಯಾಲಂ ಮಾಡಲು ರೂ. 50/- ಐವತ್ತು ರೂಪಾಯಿಗಳನ್ನು ಡಿಪಾಜಿಟ್ ಮಾಡತಕ್ಕದ್ದು. ಯಾಲಂ ಮುಗಿದೊಡನೆಯೇ ಕಡೆಯ ಸವಾಲುದಾರನ ವಿನಹ ಮಿಗಿಲಾದ ಸವಾಲುದಾರರ ಡಿಪಾಜಿಟ್ ಮೊತ್ತ ರೂ. 50/- ತಕ್ಷಣ ವಾಪಸು ಮಾಡಲಾಗುವುದು. ಕಡೆಯ ಸವಾಲುದಾರನು ಯಾಲ ಖುನ ಪೂರಾ ಹಣವನ್ನು ಕಟ್ಟಿ ಲೈಸನ್ಸು ಪಡೆಯತಕ್ಕದ್ದು. ಹಿಗೆ ಮಾಡದಿದ್ದಲ್ಲಿ ಡಿಪಾಜಿಟ್ ಕಟ್ಟಿದ ರೂ. 50/- ಸರಕಾರಕ್ಕೆ ಸೇರಿಸಿ ಕೊಳ್ಳಲಾಗುವುದು ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಸ್ಪೆಷಲ್ ಆಫೀಸರರು ಯಾಲಂನ್ನು ರದ್ದುಮಾಡಿ ಪುನಃ ಯಾಲಂಮಾಡಿ ಕಮ್ಮಿಯಾಗ ಬಹುದಾದ ಹಣವನ್ನು ಮುಂಚಿನ ಕೊನೆಯ ಸವಾಲುದಾರನಿಂದ ಬರಮಾಡಿಕೊಳ್ಳಲಾಗುವುದು. ಕೊನೆಯ ಸವಾಲುದಾರನು ಯಾಲಂ ಮಂಜೂರಾದೊಡನೆ ಅಗ್ರಿಮೆಂಟನ್ನು ತನ್ನ ಖರ್ಚಿನಿಂದ ರಿಜಿಸ್ಟರು ಮಾಡಿಸಿಕೊಡತಕ್ಕದ್ದು.

ಲೈಸನ್ಸನ್ನು ರಶೀದಿ ಪುಸ್ತಕಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಿಂದ ಪಡೆಯತಕ್ಕದ್ದು.

ಹರಿಗೋಲಿನ ಹೆಸರು	ಮಾರ್ಕೆಟ್ ಹೆಸರು	ಯಾಲಂ ಜರುಗುವ ಸ್ಥಳ	ಯಾಲಂ ಹಾಕುವ ತೇದಿ ಮತ್ತು ವೇಳೆ
ಶಿರುಗುಪ್ಪ ತಾ॥		ಶಿರುಗುಪ್ಪ	3-2-55
ಹಚ್ಚೊಳ್ಳಿ		ಬೋರ್ಡ್	ಮಧ್ಯಾಹ್ನ
ಹೆರ್ಕಲ್		ಹೈಸ್ಕೂಲು	1 ಘಂಟೆಗೆ
ನಿಟ್ಟೂರು			
ಉಜೇಗೋಳ			
ಬೊಗ್ಗೂರು			
ಮಣಾರು			
ಕಾರಿಗೆನೂರು			
ಬಾಗವಾಡಿ ನಂ1,2			
ಉತ್ತನೂರು.			
ಪಲ್ಲಕುಡಲೂರು			
ಕಂಚಗಾರ ಬೆಳಗಲ್ಲು			
ಹೊನ್ನನಹಳ್ಳಿ			
ತಾಳೂರು			
ದೇಶನೂರು ನಂ. 1			
ಕಾರ್ಜಿಗನೂರು			
ಕೆಸರಕೊನಿ			
ಇಬ್ರಾಹಿಂಪುರ.			
ಬಲಕುಂದಿ.			
ಹಳೆಕೋಟೆ.			
ಮೋಟೆ ನೂಗೂರು			
ಹೊಸಪೇಟೆ ತಾ॥	ಗಾದಿಗನೂರು	ಕಂಪ್ಲಿ	5-2-55
ಹೊಸೂರು.		ಬೋರ್ಡು	ಮಧ್ಯಾಹ್ನ
ಶಳವಾರಳ್ಳಿ		ಹೈಸ್ಕೂಲು	1 ಘಂಟೆಗೆ
ಹಂಪಿ.			
ಕಾಳಳ್ಳಿ			
ಬೆಳಗೋಹಾಳು			
ಸಾಣಾಪುರ			
ಅರಳಹಳ್ಳಿ.			
ವಲ್ಲಭಾಪುರ			

ದಶಬಂಧಂ ಭೂಮಿಗಳು

	ಭೂಮಿ ಸ.ನಂ.	ಭೂಮಿ ವಿಸ್ತೀರ್ಣ	ಯಾಲಂ ಸ್ಥಳ	ಯಾಲಂ ತೇದಿ, ವೇಳೆ.
ಹಡಗಲಿ ತಾ.				
ಹಂಪಸಾಗರ	52	23-98	ಹಡಗಲಿಬೋರ್ಡ್	7-2-55
	118 A	0-83	ಹೈಸ್ಕೂಲು	ಮಧ್ಯಾಹ್ನ
ಉತ್ತಂಗಿ		45-40		1 ಘಂಟೆಗೆ
ಬನ್ನಿಕಲ್ಲು		6-60		
ಏಣಿಗಿ		41-77		
ಬಳ್ಳಾರಿ ತಾ.				
ಹಿರೇಹಡಗಲಿ	326	17-06		
ಗುರುನಾಯ್ಕನಳ್ಳಿ	24	23-72	ಡಿಸ್ಟ್ರಿಕ್ಟ್ ಬೋರ್ಡು	
ಚಲ್ಲಗುರ್ಕಿ	163	43-80	ಆಫೀಸು, ಬಳ್ಳಾರಿ.	
ಜಾಲಿಹಾಳ್	88	29-84		
ದಮ್ಮೂರುಕಗ್ಗಲ್ಲು	284	39-05		
ಲೈಲೂರು	403	20-99		
ಚಾಪಸಹಾಳು	209	7-56		
	73	8-63		
	208	14-67		
ಬೊಮ್ಮನಹಾಳು	76	31-90		
	26	27-66		
ಚಾಗನೂರು	109	19-29		
ಮಂಗೋಸಹಾಳು	572	48-70		
ಕೋಳೂರು	667			
ಜೋಳದರಾಶಿ	308			
ಜಾಲಿಬೆಂಚಿ	134			
ಹರಪನಹಳ್ಳಿ ತಾ.			ತಾಲೂಕು ಕಚೇರಿ	9-2-55 ಮ
ಕಂಟಿಕೇರಿ		10-33	ಹರಪನಹಳ್ಳಿ	1 ಘಂಟೆಗೆ
ಶಿರುಗುಪ್ಪ ತಾ.			ಶಿರುಗುಪ್ಪ ಬೋರ್ಡು	3-2-55
ಚಿನ್ನ ಬಳ್ಳಾರಿ	66A	23-25	ಹೈಸ್ಕೂಲು	ಮಧ್ಯಾಹ್ನ
ಹೊನ್ನಾನಹಳ್ಳಿ	5	9-53		1 ಘಂಟೆಗೆ
ಬೂದಿಗುಪ್ಪ 1,2	96	43-61		
ವೆಂಕಟಾಪುರ	85	12-63		
ಸಿರಿಗೇರಿ	333	14-52		
	335	9-94		

P. T. O.

ಹಿಂದಿನ ಪುಟದಿಂದ

ಹರಿಗೋಲು—ಯಾಲಂ ವಿವರ

ಹಡಗಲಿ ತಾ.	ಹಗರಿ ಬೊ	ಹಡಗಲಿ	7-2-55
ಬನ್ನಿಗೋಳ	ಮ್ಮನಹಳ್ಳಿ	ಬೋರ್ಡು	ಮಧ್ಯಾಹ್ನ
ಹೊಳಲು	ನಂ.1 ಮತ್ತು	ಹೈಸ್ಕೂಲು	1 ಘಂಟೆಗೆ
ಅಂಕ್ಲಿ	2, ತಂಬ್ರಹಳ್ಳಿ		
ಬನ್ನಿಮಟ್ಟಿ	ಹಂಪಾಪಟ್ಟಣ		
ಮುತ್ತಕೂರು			
ಬ್ಯಾಲಹುಣಿಸಿ			
ರಾಮೇಶ್ವರಬಂಡಿ			
ಏಣಿಗಿ			
ಮಾಗಳ			
ಹಂಪಸಾಗರ			
ಹಂದಿಗನೂರು			
ತಂಬ್ರಹಳ್ಳಿ			
ನವಲಿ			
ಮೊದಲಗಟ್ಟಿ			
ಕೋಟೇಕಲ್ಲು			
ಹರಪನಹಳ್ಳಿ ತಾ.		ಹರಪನಹಳ್ಳಿ	9-2-55
ಮಟ್ಟಲಹಳ್ಳಿ		ತಾಲೂಕು	ಮಧ್ಯಾಹ್ನ
ತಾವರಗುಂದಿ		ಕಛೇರಿ	1 ಘಂಟೆಗೆ
ನಿಟ್ಟೂರು ಬಸಾಪುರ			
ಹರವಿ			
ಕುರುವತ್ತಿ			
	ಕೂಡ್ಲಿಗಿ ತಾ.	ಕೂಡ್ಲಿಗಿ	11-2-55
	ಮಾಲ್ಕಿ, ಬಣ್ಣಿಕ	ಬೊ.ರ್ಡು	ಮಧ್ಯಾಹ್ನ
	ಲ್ಲು, ಹುರುಳಿ	ಹೈಸ್ಕೂಲು.	1 ಘಂಟೆಗೆ
	ಹಾಳು		

ದಶಬಂಧಂ ಭೂಮಿಗಳು

ಮುತ್ತೂರು	13	21-74			
ಸಾನವಾಸಪುರ	14A	5-95			
	15B	3-81			
ವಕ್ಕಮುರವಣಿ	12	35-90			
ಹಡ್ಡೊಳ್ಳಿ	261	29-43			
ಅಕ್ಕಶಂಗೀರಹಾಳು	16	4-38			
	50	13-98			
ಕೋಟಿಹಾಳು ಸೂಗೂ					
ರು ನಂ. 1. 2	385B	43-82			
ಹಾಗಲೂರು					
ಹೊಸಹಳ್ಳಿ	228	67-57			
ಕೆ. ಬೆಳಗಲ್ಲು	155	23-45			
ಕೂಡ್ಲಿಗಿ ತಾ.					
ಹಿರೇ ಹೆಗ್ಗಡಹಾಳು	30	11-58	ಕೂಡ್ಲಿಗಿ		11-2-55
	297	6-45	ಬೋರ್ಡ್	ಮಧ್ಯಾಹ್ನ	
	316	4-80	ಹೈಸ್ಕೂಲು	1 ಘಂಟೆಗೆ	
	317	5-36			
	318	4-86			
	319	6-78			

(ಸಹಿ) ಕೆ. ಶೇಷಗಿರಿರಾವ್
ಡೆಪ್ಯೂಟಿ ಕಮೀಷನರ್ ಮತ್ತು ಸ್ಪೆಷಲ್ ಆಫೀಸರು,
ಡಿಸ್ಟ್ರಿಕ್ಟ್ ಬೋರ್ಡು, ಬಳ್ಳಾರಿ.

ಆಂಧ್ರದಲ್ಲಿ ಉತ್ಸಾಹ

ಕಾಂಗ್ರೆಸ್ ಅಧ್ಯಕ್ಷ ಧೇಬರ್ ಹೇಳಿಕೆ

ಆಂಧ್ರದಲ್ಲೀಗ ಇರುವ ಚುನಾವಣಾ ಉತ್ಸಾಹವು ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಕಂಡ ಉತ್ಸಾಹದಷ್ಟೇ ಅಪರಿಮಿತವಾಗಿದೆಯೆಂದೂ, ಜನತೆಯಲ್ಲಿನ ಇಂತಹ ಉತ್ಸಾಹ ಪ್ರಜಾ ಪ್ರಭುತ್ವಕ್ಕೆ ಸ್ಫೋತ್ಸಾಹಕರವೆಂದೂ, ಆಂಧ್ರದಲ್ಲಿ ಐದು ದಿನಗಳ ಚುನಾವಣಾ ಪ್ರಚಾರ ಪ್ರವಾಸ ನಡೆಸಿದ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಎನ್. ಧೇಬರ್‌ರವರು ಹೇಳಿದ್ದಾರೆ.

ಆಂಧ್ರದ ಐದು ಜಿಲ್ಲೆಗಳಲ್ಲಿ ಏಳತ್ತಕ್ಕೂ ಹೆಚ್ಚು ಚುನಾವಣಾ ಸಭೆಗಳನ್ನು ಉದ್ದೇಶಿಸಿ, ಭಾಷಣ ಮಾಡಿ ಕಾಂಗ್ರೆಸ್ ಪ್ರಚಾರವನ್ನು ನಡೆಸಿದ ಶ್ರೀ ಧೇಬರ್‌ರವರು ಜನವರಿ 29ನೇ ತಾ. ರಾತ್ರಿ ಕರ್ನೂಲಿನಿಂದ ಹೈದರಾಬಾದಿಗೆ ತೆರಳಿದರು. ಅಲ್ಲಿಂದ ಜನವರಿ 29ನೇ ತಾ. ದಹಲಿಗೆ ವಿಮಾನದಲ್ಲಿ ಹೋಗುವರು.

ಕಮ್ಯೂನಿಸ್ಟರ ಗೆಂಡುಮೆಟ್ಟಿನ ಜಿಲ್ಲೆಗಳಾದ ಕೃಷ್ಣಾ ಮತ್ತು ಗುಂಟೂರುಗಳಲ್ಲಿ ಕಾಂಗ್ರೆಸ್ ಅಧ್ಯಕ್ಷರು ವಿಶೇಷ ಪ್ರಚಾರ ನಡೆಸಿದರು. ಜನರಲ್ಲಿನ ಉತ್ಸಾಹ ನೋಡಿದರೆ ಮಹಾತ್ಯಾಗ ಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯ ಹಥದಿಂದ ಸರಿಯಬಾರದೆಂಬ ಆಂಧ್ರದ ಬಯಕೆ ಹುಸ್ತು ಉತ್ಕಟೇಚ್ಛೆ ಪ್ರಬಲವಾಗಿ ಕಾಣುವುದೆಂದೂ ಶ್ರೀ ಧೇಬರ್ ಹೇಳಿದ್ದಾರೆ.

"ಈ ಉತ್ಸಾಹವನ್ನು ರಾಷ್ಟ್ರದ ಎಲ್ಲರೂ ನೋಡಬೇಕು ಕಳೆದ ಏಳು ವರ್ಷಗಳಿಂದ ಮುಂದೆ ಹರಿಯದೆ ಕೊಳಚೆ ಆಗುತ್ತಿದ್ದ ಆಂಧ್ರ ಪ್ರಾಂತ, ಈಗ ಸ್ಫೂರ್ತಿಯಿಂದ ಮೇಲೇಳುತ್ತಿರುವುದನ್ನು ನೋಡುವುದೇ ಆನಂದ" ಎಂದೂ ಅವರು ನುಡಿದಿದ್ದಾರೆ.

ಆಂಧ್ರದಲ್ಲಿ ಕೈಮಗ್ಗದ ಕೈಗಾರಿಕೆ

ಆಂಧ್ರದ ಕೈಮಗ್ಗದ ಕೈಗಾರಿಕೆಗೆ ಬಳಸಲ್ಪಡುತ್ತಿರುವ ನೂಲಿನ ಪ್ರಮಾಣ ಹೆಚ್ಚೇ ಮಟ್ಟದಲ್ಲಿದೆ. ಕಳೆದ ಡಿಸೆಂಬರ್‌ನಲ್ಲಿ ನೂಲಿನ ಅಭಾವವೇನೂ ಕಂಡು ಬರಲಿಲ್ಲ ಎಂಬುದಾಗಿ ಸರ್ಕಾರದ ಪರಿಶೀಲನಾ ವರದಿಯೊಂದು ತಿಳಿಸುತ್ತದೆ.

ಅಭಿವೃದ್ಧಿ ಕಾರ್ಯಗಳಲ್ಲಿ ಜನತೆಯ ಪಾತ್ರ.

ಗ್ರಾಮಗಳಲ್ಲಿ ಅಥವಾ ಊರುಗಳಲ್ಲಿ ಬಳಕೆಯಾಗಿರುವ ನಗರಾಯ ಶಬ್ದವು ಸಂತೋಷ ಸಮಾರಂಭ, ಉತ್ಸವಗಳ ಕಡೆಗಿಂತ ಹೆಚ್ಚಿನದನ್ನು ವ್ಯಕ್ತಪಡಿಸುತ್ತದೆ. ಈ ಕಡೆಯ, ಜನತೆಯ ರಕ್ಷಣೆ ನಿರ್ಮಾಣ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಆಹ್ವಾನದ ಕರೆಯಾಗಿದೆ. ಈ ರೀತಿ ಹೊಸ ರಸ್ತೆಗಳು, ಹೊಸ ಶಾಲೆಗಳು ಮತ್ತು ಹೊಸ ಪಂಚಾಯತಿ ಭವನಗಳು ಕಟ್ಟಲ್ಪಟ್ಟು ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುತ್ತಿವೆ.

ಇವು ಜನತೆಗೆ ಇನ್ನೂ ಹೆಚ್ಚಿನ ಅರ್ಥವನ್ನು ಕೊಡುತ್ತವೆ. ಇಂದು, ಅಂತಹ ಸ್ವಯಂ ಸಹಾಯ ಯೋಜನೆಗಳು ಗ್ರಾಮಾಂತರ ಭಾರತದ ಮುಖವನ್ನೆ ಬದಲಾಯಿಸುತ್ತಿವೆ ಜನರು ತಾವಾಗಿಯೇ, ಯಾವ ಆಡಂಬರವೂ ಇಲ್ಲದೆ, ನಗದು ಹಣವಿಲ್ಲದಿದ್ದರೆ ಅಥವಾ ಸಾಮಗ್ರಿಗಳ ಮುಖಾಂತರ ತಮ್ಮ ಸಾಧನ ಸಂಪತ್ತನ್ನು ಶ್ರಮವಿಸಿ ಸ್ಥಳೀಯ ಕೆಲಸಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವರು. ಈ ಕ್ರಮದಲ್ಲಿ ಅವರು ರಾಷ್ಟ್ರದ ಅಭಿವೃದ್ಧಿಯಲ್ಲಿ ತಮ್ಮ ಪಾಲನ್ನು ಕಾಣಿಕೆಯಾಗಿ ಒಪ್ಪಿಸುತ್ತಿರುವರು.

ಶ್ರಮದಾನ

ಸಹಸ್ರಾರು ಸ್ಥಳಗಳಲ್ಲಿ ಸ್ವಂತ ಇಚ್ಛೆಯ ಮೇಲೆ ಶ್ರಮದಾನ ಮಾಡುವುದು ಒಂದು ಪ್ರತಿನಿತ್ಯದ ಲಕ್ಷಣವಾಗಿದೆ. ಜನರು ಒಂದು ವಾರದಲ್ಲಿ ಅಥವಾ ಎರಡು ವಾರಗಳಲ್ಲಿ ಒಂದು ದಿನವನ್ನು ಶ್ರಮದಾನಕ್ಕಾಗಿ ಮೀಸಲಾಗಿಟ್ಟಿರುವರು.

ಸಾಮೂಹಿಕ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಜನತೆಯು ತಮ್ಮ ಸಾಧನ ಸಾಮಾಗ್ರಿಗಳನ್ನು ಸಂಗ್ರಹಿಸಲು ಅನುಕೂಲವಾಗುವಂತೆ ಆಗಿಂದಾಗ್ಗೆ ರಾಜ್ಯಗಳು ಚಳುವಳಿಗಳನ್ನು ಏರ್ಪಡಿಸುತ್ತಿವೆ ದೃಷ್ಟಾಂತವಾಗಿ, ಮದ್ರಾಸ್ ರಾಜ್ಯದಲ್ಲಿ ಮಣಿಮುತ್ತಾರ್ ಯೋಜನೆಯ ಅಸಲು ಖರ್ಚಿನ ಬಗ್ಗೆ ಸಾಲಗಳನ್ನು ಪಡೆಯುವುದರ ಮೂಲಕ ಜನತೆಯ ಸಹಕಾರವನ್ನು ಗಳಿಸಲಾಯಿತು. ಇದೇ ರೀತಿಯಲ್ಲಿ ಬೇಹಾರಿನಲ್ಲಿ ಕೋಸಿ ಯೋಜನೆಯನ್ನು ಪೂರೈಸುವುದನ್ನು ತ್ವರಿತಗೊಳಿಸುವುದಕ್ಕಾಗಿ ಸಹಸ್ರಾರು ಮಂದಿ ಸ್ವಯಂ ಸೇವಕರು ಮುಂದೆ ಬರುತ್ತಿದ್ದಾರೆ.

ಜನತೆಯ ಸಹಕಾರವನ್ನು ಗಳಿಸುವುದಕ್ಕಾಗಿ ಮಾರ್ಗಗಳನ್ನು ಹುಡುಕಲು ಕೆಲವು ಸ್ಥಳಗಳಲ್ಲಿ ಪಾಯಂ ಅವ ಸಂಸ್ಥೆಗಳಿವೆ. ಇಂತಹ ಸಂಸ್ಥೆಗಳು ವಿವಿಧ ರಾಜ್ಯಗಳಲ್ಲಿ ವಿವಿಧ ಹೆಸರುಗಳಲ್ಲಿ ಕೆಲಸ ಮಾಡುತ್ತಿವೆ. ಅಂತಹವುಗಳಲ್ಲಿ, ಉತ್ತರ ಪ್ರದೇಶದಲ್ಲಿ ಪ್ರಾಂತೀಯ ರಕ್ಷಾ ದಳಗಳು, ಮಧ್ಯ ಪ್ರದೇಶದಲ್ಲಿ ವಿಕಾಸ ಮಂಡಳಿಗಳು ಮತ್ತು ಒರಿಸ್ಸಾದಲ್ಲಿ ಅಂಚಾಲ್ ಸಮಿತಿಗಳು ಮತ್ತು ಮದ್ರಾಸಿನಲ್ಲಿ ಗ್ರಾಮ ಸೇವಾ ಸಂಘಗಳು ಮುಖ್ಯವಾದವು.

ಇವುಗಳ ಜೊತೆಯಲ್ಲಿ ಸಹಸ್ರಾರು ಸಮಾಜ ಕಲ್ಯಾಣ ಸಂಸ್ಥೆಗಳು, ಪಂಚವಾರ್ಷಿಕ ಯೋಜನೆಯಲ್ಲಿ ಸೂಚಿಸಿರುವ ಹಂದಿಗಳಲ್ಲಿ ಹೊಸ ಕಾರ್ಯಕ್ರಮಗಳನ್ನು ರಚಿಸುತ್ತಿವೆ ಇವುಗಳಿಗೆ ಸಹಾಯ ಮಾಡಲು, ಸರ್ಕಾರವು 4 ಕೋಟಿ ರೂಪಾಯಿಗಳನ್ನು ನಿಯತ ಮಾಡಿದುದಲ್ಲದೆ ರಾಜ್ಯ ಸಲಹಾ ಬೋರ್ಡ್‌ಗಳ ಸಹಾಯದೊಂದಿಗೆ ಕೇಂದ್ರ ಸಮಾಜ ಕಲ್ಯಾಣ ಬೋರ್ಡ್ ಒಂದನ್ನು ಸ್ಥಾಪಿಸಿದೆ.

ಭಾರತ ಸೇವಕ ಸಮಾಜ

ಭಾರತ ಸೇವಕ ಸಮಾಜವೆಂಬ ಅಖಿಲ ಭಾರತ ಪ್ರಾಸಂಗಿ ಸಂಸ್ಥೆಯೊಂದು, ಪ್ರದೇಶ ಮತ್ತು ಜಿಲ್ಲಾ ಸಮಿತಿಗಳ ಮೂಲಕ ಜನತೆಯ ಉಪಯೋಗಿಸದಿರುವ ಕಾಲ, ಶಕ್ತಿ ಮತ್ತಿತರ ಸಾಧನ ಸಂಪತ್ತನ್ನು ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಉಪಯೋಗಿಸಲು ಕೆಲಸಮಾಡುತ್ತಿದೆ.

ರಾಷ್ಟ್ರೀಯ ಕೆಡೆಟ್ ಕೋರ್ ಮತ್ತು ಅಸ್ಸಾಯಿಲರಿ ಕೆಡೆಟ್ ಕೋರ್‌ಗಳ ವಿದ್ಯಾರ್ಥಿಗಳೂ ಕೂಡ ರಸ್ತೆಗಳ ನಿರ್ಮಾಣ, ಕಾಲುವೆಗಳನ್ನು ಮತ್ತು ಭಾವಿಗಳನ್ನು ತೋಡಿಸುವುದು ಮುಂತಾದ ಜನತೆಯ ಕಾರ್ಯಕ್ರಮಗಳನ್ನು ಸಹಕಾರವನ್ನು ನೀಡಲು ಇತರರೊಂದಿಗೆ ಸ್ಪರ್ಧಿಸುತ್ತಿದ್ದಾರೆ.

ಸರ್ಕಾರದ ನೆರವು

ಸ್ಫೂರ್ತಿಯ ಪ್ರಯತ್ನಗಳನ್ನು ಉತ್ತೇಜಿಸುವುದಕ್ಕಾಗಿ, ಯೋಜನೆಗೆ ತಗಲುವ ವೆಚ್ಚದಲ್ಲಿ ಅರ್ಧದಷ್ಟು ಮೊಬಲಗನ್ನು ಜನರೇ ಕೊಡುವ ನಿಬಂಧನೆಯ ಮೇಲೆ ಸರ್ಕಾರದ ನೆರವು ದೊರೆಯುವುದು. ಪಂಚವಾರ್ಷಿಕ ಯೋಜನೆಯಲ್ಲಿ, 1½ ಕೋಟಿ ರೂ. ಗಳನ್ನು ಒದಗಿಸಲಾಗಿದೆ ಈಗಾಗಲೇ ಅರ್ಧದಷ್ಟನ್ನು ಹಂಚಲಾಗಿದೆ.

ಸಾಮುದಾಯಿಕ ಯೋಜನೆಗಳ ಬಗೆಯ 1952 ರ ಅಕ್ಟೋಬರ್‌ನಲ್ಲಿ ಪ್ರಾರಂಭವಾದ ಕಾರ್ಯಗಳ ಇತ್ತೀಚಿನ ಪ್ರಗತಿಯ ವರದಿಯು, ಜನತೆಯು ನಗದು, ದುಡಿಮೆ ಮತ್ತು ವಸ್ತುಗಳ ಮೂಲಕ 2-63 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂದೂ ಈ ಮೊಬಲಗು ಸರ್ಕಾರವು ಪೂರೈಸಿರುವ ಹಣ ಅರ್ಧಕ್ಕೆಂತ ಕೊಂಚ ಕಡಿಮೆಯೆಂದೂ ತಿಳಿಸುತ್ತದೆ.

ಆಹಾರ ರಂಗದಲ್ಲಿ ಸಹಾಯ

ಜನತೆಯ ಅಮೂಲ್ಯವಾದ ಕಾಣಿಕೆಯು ಆಹಾರದ ಉತ್ಪಾದನೆಯನ್ನು ಹೆಚ್ಚಿಸುವ ಬಗೆ ಅವರ ಪ್ರಯತ್ನದಲ್ಲಿದೆ. ಉತ್ತಮ ಬೀಜಗಳು, ರಾಸಾಯನಿಕ ಕೃಷಿಕ ಗೊಬ್ಬರಗಳು, ಮತ್ತು ಸುಧಾರಿಸಿದ ರೀತಿಯ ಸಾಗುವಳಿಯ ಮೂಲಕ ಅವರು ಭಾರತದ ಒಟ್ಟು ಆಹಾರ ಧಾನ್ಯದ ಉತ್ಪಾದನೆಯನ್ನು 654 ಲಕ್ಷ ಟನ್‌ಗಳಿಗೆ ಏರಿಸಿದ್ದಾರೆ. ಈ ಪ್ರಮಾಣವು ಯೋಜನೆಯ ಗುರಿಗಿಂತ 40 ಲಕ್ಷ ಟನ್‌ಗಳಷ್ಟು ಹೆಚ್ಚಿದಂತಾಯಿತು.

ಆಹಾರ ಉತ್ಪಾದನೆಯನ್ನು ಇನ್ನೂ ಹೆಚ್ಚಿಸಲು ಜನತೆಯು ಸರ್ಕಾರದೊಡನೆ ಸಹಕರಿಸಿ ಚದುರಿ ಹೋಗಿರುವ ಭೂಮಿ ಭೂಮಿಯ ತುಂಡುಗಳನ್ನು ದೊಡ್ಡ ಗಾತ್ರದ ಜಮೀನುಗಳನ್ನಾಗಿ ಮಾಡಲು ಯತ್ನಿಸುತ್ತಿದೆ. 1954 ರ ಜೂಲೈ ವರೆಗಿನ ಸಮಾಚಾರದಂತೆ, ಭೂ ಸಂಘಟನಾ ಕಾರ್ಯವು 100 ಲಕ್ಷ ಎಕರೆಗಳವರೆವಿಗೂ ಆವರಿಸಿತ್ತು.

ಭೂಮಿಯಿಲ್ಲದವರಿಗೆ ಸಹಾಯವನ್ನು ನೀಡುವುದಕ್ಕಾಗಿ ಕೆಲವು ಸ್ಥಳಗಳಲ್ಲಿ ಜನರು ತಮ್ಮ ಭೂಮಿಯಲ್ಲಿ ಒಂದು ಭಾಗವನ್ನು ದಾನಾರ್ಥವಾಗಿ ಕೊಡುತ್ತಿದ್ದಾರೆ. ಶ್ರೀ ವಿನೋಬಾ ಭಾವೆಯವರ ಭೂದಾನ ಚಳುವಳಿಯು 40 ಲಕ್ಷ ಎಕರೆಗಳನ್ನು ಸಂಗ್ರಹಿಸಲು ಮುಖ್ಯವಾಗಿ ಕಾರಣವಾಗಿದೆ. ಭೂಮಿಯಿಲ್ಲದವರಿಗೆ ದಾನವಾಗಿ ಬಂದ ಈ ಭೂಮಿಯನ್ನು ಹಂಚಲಾಗುತ್ತಿದೆ.

ಬಳ್ಳಾರಿ ಪ್ರಭಾತ್ ಟಾಕೀಸ್‌ನಲ್ಲಿ

ಪ್ರತಿ ದಿನ 2 ಆಟಗಳು, 6-15 ಮತ್ತು 9-15.

3 ನೇ ವಾರ

ವಿಜಯಭಾರವರ **ಮಿಸ್ಸಮ್ಮ** [ತೆಲುಗು ಚಿತ್ರ]

ಪಾತ್ರರು:—N. T. ರಾಮಾರಾವ್, A. ನಾಗೇಶ್ವರರಾವ್, ರೇಲಂಗಿ, ರಮಣಾರೆಡ್ಡಿ, ಸಾವಿತ್ರಿ, ಜಮುನ ನಟಿಸಿರುವರು.

ಡೈರೆಕ್ಟರ್:— ಶ್ರೀ ಎ ಡಿ,

ನಿರ್ಮಾಪಕರು .... ನಾಗಿರೆಡ್ಡಿ, ಚಕ್ರಪಾಣಿ.

ಎಲ್ಲವನ್ನೂ ಶುದ್ಧ ಪಡಿಸಲು

ಉತ್ತಮವಾದುದು

ಮೈಸೂರು ಸೋಪ್

ತಯಾರಿಸುವವರು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

"ಮೊಬರ್, ಐ.ಎಸ್.ಟಿ.ಎಂ.ಎ"

ಅಂಕಿ ಅಂಶಗಳು

1954 ರ ಅಕ್ಟೋಬರ್ ತಿಂಗಳಿನಲ್ಲಿ ಸಿಂಧ್ರಿ ಕೃತಕ ಗೊಬ್ಬರ ಕಾರ್ಖಾನೆಯು 30,001 ಟನ್‌ಗಳಷ್ಟು ಅಮೋನಿಯಂ ಸಲ್ಫೇಟ್ ಗೊಬ್ಬರವನ್ನು ಉತ್ಪಾದಿಸಿತು. ಮೂರು ವರ್ಷಗಳ ಹಿಂದೆ ಉತ್ಪಾದನೆಗೆ ಪ್ರಾರಂಭಿಸಿದ ಕಾರ್ಖಾನೆಯಲ್ಲಿ ಯಾವ ತಿಂಗಳಿನಲ್ಲಿಯೂ ಇಷ್ಟು ಗೊಬ್ಬರವನ್ನು ಉತ್ಪಾದಿಸಿರಲಿಲ್ಲ.

1953—54 ರಲ್ಲಿ ಭಾರತವು 10,59,000 ರೂಪಾಯಿಗಳಷ್ಟು ಬೆಲೆ ಬಾಳುವ ಕ್ರೀಡಾ ಸಾಮಾಗ್ರಿಗಳನ್ನು ರಫ್ತು ಮಾಡಿತು.

ಬಳ್ಳಾರಿಯಲ್ಲಿ ಸರ್ವೋದಯ ದಿನಾಚರಣೆ

ಬಳ್ಳಾರಿ ಸಾಂಬಮೂರ್ತಿ ಮೈದಾನದಲ್ಲಿ ತಾಲೂಕು ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಪ್ರಾರ್ಥನಾ ಸಭೆಯು ವರ್ಕಟ್ಟು ಮಗರ್ಲ್ಸ್ ಹೈಸ್ಕೂಲಿನಲ್ಲಿ ಶ್ರೀ ಟಿ ಬಿ. ಕೇಶವರಾಯರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಗಾಂಧಿಯವರ ಜೀವನ, ಉಪದೇಶಗಳು ಹೇಳಲಾದವು

ನವ ಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

NAVA BHARAT, BELLARY.

(Regd.M.No. 4746)

To 31-1-55

Sri _____

Edited Printed & Published by T. B. Keshava Rao, at Nava Bharat Printing Press, Bellary

JAI HIND

ನವಭಾರತ

ಸೋಮವಾರ, ಅಗಸ್ಟ್ 13,15–8–1956 ಸ್ವಾತಂತ್ರ್ಯ ಸಂಚಿಕೆ.

ವರ್ಷ 20 | ಕನ್ನಡಿಯ ಉಜ್ವಲ ರಾಷ್ಟ್ರೀಯ ಪಾಕ್ಷಿಕ ಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ 1 | ಉತ್ತಿಷ್ಠತ! ಜಾಗ್ರತ!! ಸ್ಥಾಪ್ಯವರಾನ್ನಿಬೋಧತ !!! | ಬಿ. ಜಿ. ಕೇಶವರಾವ್





ನಮ್ಮ ಪ್ರಧಾನ ವಾರ್ತಾ ಸಂಪಾದಕರು – ನಮ್ಮ ಕಾರ್ಯಾಧ್ಯಕ್ಷರ ಮಗ ರಾಘವೇಂದ್ರ – ನಮ್ಮ ಅಧ್ಯಕ್ಷ ಬಾಬೂರಾಜೇಂದ್ರಪ್ರಸಾದ

ಕರ್ನಾಟಕ ಜನತೆಗೆ

೧೦ ನೇ ಸ್ವಾತಂತ್ರ್ಯ ದಿನೋತ್ಸವದ ಸಂತೋಷ ಸಂದರ್ಭದಲ್ಲಿ ನಮ್ಮ ಹಾರ್ದಿಕ

ಶುಭಾಶಯಗಳು!

ಸ್ವಾತಂತ್ರ್ಯದ ೯ ವರುಷಗಳ ಅವಧಿಯಲ್ಲಿ ರಾಷ್ಟ್ರವು ಪ್ರಗತಿಯನ್ನು ಪಡೆದಿದೆ. ಅಂತೆಯೇ ನಿಮ್ಮ ಬ್ಯಾಂಕು ಕೂಡ ಮೆಚ್ಚಿನ ಅಭಿವೃದ್ಧಿಯನ್ನು ಹೊಂದಿ ಮುನ್ನಡೆಯನ್ನಿಟ್ಟಿದೆ. ನಾವಿಂದು ೩೧ ವರ್ಷಗಳ ನುರಿತ ಅನುಭವವನ್ನೂ ೯೩ ಶಾಖ ಕಚೇರಿಗಳ, ಅದರಲ್ಲಿಯೂ ೧೧ ಕರ್ನಾಟಕದಲ್ಲಿಯೇ ೬೦ ಕ್ಕೂ ನಿಕ್ಕಿ ಇರುವ ಶಾಖಾ ಕಚೇರಿಗಳ ಕಾರ್ಯ-ಕ್ಷೇತ್ರಗಳಿಂದ ಸೆರವೇರುವ ಸಮರ್ಥ ಹಾಗೂ ಶೀಘ್ರ ಸಂಗ್ರಹದ ಅನುಕೂಲತೆಯನ್ನೂ ನಿಮ್ಮ ಮುಂದಿಡುತ್ತೇವೆ ಮುಂದೆಯೂ ತೃಪ್ತಿಕರವಾಗಿ ನಿಮಗೆ ಸೇವೆಯನ್ನು ಸಲ್ಲಿಸಲು ಪತಿಜ್ಞಾಬದ್ಧರಾಗಿದ್ದೇವೆ.

ಚಲಾವಣೆ ಭಂಡವಾಳ ರೂ. ೯.೫ ಕೋಟಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ: ೧೯೨೩] [ಪ್ರಧಾನ ಕಾರ್ಯಾಲಯ ಉಡುಪಿ. ದ-ಭಾರತ

The Canara Industrial & Banking Syndicate Ltd.

Telephone 132
Telegram 'Limart'

LAKSHMI IRON MART,

Registered stockists of:—**Iron & Steel.**

Licensed dealers in:—**Chamundi & Charminar Cements.**

CAR STREET, BELLARY. 2. Office—Sabhapati Well Street.

A reliable house for Cement & Iron materials. We always carry stocks of M. S. Rounds Squares, Flats & structurals of all sizes. We also stock and supply in wholesale, Tatas Agrico—products including Pick—axes, crowbars, Hammers, Mamooties, Shovels etc. Maxweld Fabrics used in R. C. works and all varieties of Expanded Metal, can be supplied from ready stocks. Prices reasonable and moderate. Your patronage solicited.

ಲಕ್ಷ್ಮಿ ಐರನ್ ಮಾರ್ಟ್,

ತೇರು ಬಜಾರು, ಬಳ್ಳಾರಿ. [ಕಾರ್ಯಾಲಯ:—ಸಭಾಪತಿ ಕಾಣಿ ಬೀದಿ]

ಕಬ್ಬಿಣ ಮತ್ತು ಉಕ್ಕಿನ ಸಕಲ ಸಾಮಗ್ರಿಗಳ ಸಂಗ್ರಹಕಾರರು. ಚಾಮುಂಡಿ ಮತ್ತು ಚಾರ್ಮಿನಾರ್ ಸಿಮೆಂಟುಗಳ ಮಾರಲು ಲೈಸನ್ಸ್ ಪಡೆದ ವ್ಯಾಪಾರಿಗಳು. ವ್ಯವಸಾಯಕ್ಕೆ ಗೃಹ ನಿರ್ಮಾಣಕ್ಕೆ ಬೇಕಾದ ಎಲ್ಲ ಕಬ್ಬಿಣ ಮತ್ತು ಉಕ್ಕಿನ ಸಾಮಾನುಗಳು, ಪಿಕಾಸಿ, ಪಲಿಕೆ ಕುಳ, ಆಳ್, ಆಚ್ಚು, ಪಲಾಕೆ, ಹಗಡು, ಜಾಲರಿ, ತೊಲೆ, ಕೊಂಪೌಂಡಿ, ಬೇಲಿಹಟ್ಟಿ ಸೈಕಲ್ ಸಮಸ್ತ ಸಾಮಾನುಗಳು ನಮ್ಮಲ್ಲಿ ಯೋಗ್ಯ ಮತ್ತು ಸರಿಯಾದ ಬೆಲೆಗೆ ದೊರೆಯುತ್ತವೆ. ಪರೀಕ್ಷಿಸಿ, ಖಾತ್ರಿ ಪಡಿಯಿರಿ

ನೆಗಡಿ, ಕೆಮ್ಮು, ಜ್ವರ, ಉಬ್ಬಸ
ಶೀತಜ್ವರ, ಮೂರೇರಿಯು ಮತ್ತು
ಎಲ್ಲ ನೋವುಗಳಿಗೆ ರಿಮ್ಯಾಮೃತ

ಕಾಶ್ಮೀರು ಅರುಕ್

ಲೇಪನಿ, ಸೇವನೆ - ಎರಡೂ ಸಾಧ್ಯ
ಎಲ್ಲ ಔಷಧಗಳಲ್ಲೂ ದೊರೆಯುತ್ತದೆ.

H. S. & Sons, Bellary. —— ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷೆ, ಪ್ರವೇಶಿಕ, ವಿಶಾರದ (ಪೂರ್ವಾರ್ಧ—ಉತ್ತರಾರ್ಧ) ಪರೀಕ್ಷೆಗಳ ಪುಸ್ತಕಗಳು ಕ್ರಯಕ್ಕೆ ದೊರೆಯುತ್ತವೆ

ಹಿಂದೀ ಪುಸ್ತಕಾಲಯ, ಬಳ್ಳಾರಿ

THE BHARAT
ನವಭಾರತ
ಸಂಪಾದಕ-ಟಿ.ಪಿ.ಕೇಶವನಾಮ್

ಸೋಮವಾರ, ಆಗಸ್ಟ್ 13, 15-8-56

ಭಾರತದ ೯ನೇ ಸ್ವಾತಂತ್ರ್ಯದಿನೋತ್ಸವ

ನಮ್ಮ ದೋಷಗಳ ವಿಮರ್ಶೆ--ನಿವಾರಣೆಯಾಗಬೇಕು,

ಭಾರತಕ್ಕೆ ಸ್ವಾತಂತ್ರ್ಯವು ಬಂದು 8 ವರ್ಷಗಳನ್ನು ತುಂಬಿ,9ನೇಯವರಲ್ಲಿ ಕಾಲಿಡುತ್ತಿದ್ದೇವೆ. ಎಷ್ಟೋ ಕಷ್ಟಪರಂಪರೆಗಳನ್ನು ಛವಿಸಿದ ನಂತರ ಭಾರತವು ಪ್ರಗತಿಗಾಮಿಯಾಗಿ ವಿಶ್ವದಲ್ಲಿ ಹೆಮ್ಮೆಯ ಸ್ಥಾನವನ್ನು ಗಳಿಸಿದೆ. ನೀರಾವರಿ ಯೋಜನೆಗಳು, ವಿದ್ಯುದುತ್ಪತ್ತಿ, ಯಂತ್ರಾಲಯಗಳ ಸ್ಥಾಪನೆ, ಆಹಾರಧಾನ್ಯಗಳ ಹೆಚ್ಚುಬೆಳೆ ಮತ್ತು ಭಾರತದ ಸಮೃದ್ಧಿಯ ಭಿನ್ನ ಭಿನ್ನಾಂಗಗಳಲ್ಲಿ ಸುಧಾರಣೆ, ನಮ್ಮ ಪ್ರಧಾನಿ ನೆಹರೂರವರ ವಿದೇಶ ನೀತಿಯಿಂದ ಭಾರತಕ್ಕೆ ಅಂತರಾಷ್ಟ್ರೀಯ ರಾಜಕೀಯದಲ್ಲಿ ದೊರೆಯುತ್ತಿರುವ ಗೌರವ ಇವುಗಳೆಲ್ಲ ಗಣ್ಯವೇ! ಭಾರತದಪ್ರಗತಿಯ ಕಾರ್ಯದಲ್ಲಿ ಒಂದಲ್ಲ ಒಂದು ವಿಧದಿಂದ ಸೇವೆಸಲ್ಲಿಸಿದ ವರಿಗೆಲ್ಲ, ಎಲ್ಲರು ಕೃತಜ್ಞತೆಯನ್ನು ಸಲ್ಲಿಸುವುದು ಪರಮ ಕರ್ತವ್ಯ.

ಆದರೆ, ನಮ್ಮ ಪ್ರಗತಿಪರ ಕಾರ್ಯಗಳನ್ನೇ ವರ್ಣಿಸುತ್ತ ಆತ್ಮಪ್ರಶಂಸೆಯನ್ನು ಮಾಡುತ್ತ ಹೋಗುವುದು ಒಳ್ಳೆಯದಲ್ಲ. ನಮ್ಮಲ್ಲಿರುವ ದೋಷಗಳನ್ನು ನಿರ್ಮೂಲ ಮಾಡಲು ಸತತ ಪ್ರಯತ್ನಶೀಲರಾಗಬೇಕು. ದೋಷಗಳನ್ನ ಬಚ್ಚಿಟ್ಟುಕೊಳ್ಳುವ ಪ್ರವೃತ್ತಿ ಹೋಗಬೇಕು. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಅಧಿಕಾರಗಳಲ್ಲಿ, ಜನತೆಯಲ್ಲಿ, ಸ್ವೇಚ್ಛಾಪ್ರವೃತ್ತಿಯುಅಮಿತವಾಗಿ ಬೆಳೆದಿದೆ. ವಿದ್ಯಾರ್ಥಿಗಳಲ್ಲಿ ಯುವಕರಲ್ಲಿ ಶಿಸ್ತು ಸಂಯಮ, ವಿದ್ಯಾಭಿಲಾಷೆಗಳ ಅಭಾವವಾಗಿ ಸ್ವತಂತ್ರಾಕಾಂಕ್ಷೆಯು ಹೆಚ್ಚಿದೆ. ಜಾತೀಯತೆ, ಪ್ರಾಂತೀಯತೆಗಳು ತಲೆಯೆತ್ತಿ ನಾಯಕರಲ್ಲಿ ಅಧಿಕಾರ ಸ್ಪರ್ಧೆಯು, ಶಾಸನಸಭ್ಯರ ಮಂತ್ರಿಗಳ ಸ್ಥಾನಗಳಿಗಾಗಿ ಒಳಸಂಚು ನಡೆದಿದೆ. ಯಾರು ಮಹಾತ್ಮಗಾಂಧಿಯ ಧುರೀಣತ್ವದಲ್ಲಿ ಉನ್ನತ ಆದರ್ಶಗಳಿಂದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಹೋರಾಡಿದರೋ ಅವರೇ ಈಗ ಸ್ವಾರ್ಥಲೋಲುಪ್ತರಾಗಿ, ಪ್ರಾದೇಶಿಕ, ವೈಯಕ್ತಿಕ ಲಾಭಗಳಿಗಾಗಿ ಸೆಕ್ರಟರಿಯೇಟ್‌ನ ಪ್ರತಿಯೊಂದು ಆಫೀಸಿನಲ್ಲಿ ಅಧಿಕಾರಿಗಳಮೇಲೆ ಅನುಚಿತ ಒತ್ತಾಯ ತರಲು ಕಾದಿರುತ್ತಾರೆ. ಖಾದಿಯ ಬಿಳಿಟೊಪ್ಪಿಗೆಯು ಮೋಸದ ಕುರುಹೆಂದು ಅನೇಕರು ಭಾವಿಸುತ್ತ ಹೋಗುವುದು—ಖಾದಿಯ ಪವಿತ್ರತೆಯು ಕಡಮೆಯಾಗುತ್ತಿರುವುದು, ಶುಭಲಕ್ಷಣವಲ್ಲ. ಬೊಂಬಾಯಿ, ಒರಿಸ್ಸಾ, ಪಂಜಾಬಿನಲ್ಲಿ ನಡೆದ ಕೆಲಘಟನೆಗಳು ನವ್ಯ ರಾಷ್ಟ್ರದ (ಅಡಿಗಲ್ಲಿಗೇ ಪೆಟ್ಟುಕೊಟ್ಟವೆ).

ಈ ಕಾರಣ ನಾವು ಅಂತರ್ಮುಖರಾಗಿ ನಮ್ಮ ದೋಷಗಳನ್ನು ವಿಮರ್ಶಿಸಿ ದೋಷದೂರರಾಗಲೆತ್ನಿಸಬೇಕು. ಅಧಿಕಾರಿಗಳು ಪ್ರಜಾಹಿತಕಾರ್ಯಗಳಲ್ಲಿ ಲವಲವಿಕೆಯನ್ನು ತೋರಿಸಿ ಸಹಾಯಕರಾಗಬೇಕು. ಬಲ್ಲಿದವ ಬಂವತ್ತನ್ನು ಉಪಚರಿಸಿ ಅವನ ತೆರಿಪನ್ನನ್ನು ಶೀಘ್ರವ ಗಿ ಮಾಡುವರೋ, ಅಶಿಷ್ಟೇತ್ಪರಿತವಾಗಿ ಬಡ ಅರ್ಜಿದಾರನು ಬಂದರೂ ಸಹಾಯ ಮಾಡಬೇಕು. ನಮ್ಮ ಶಾಸನ ಸಭ್ಯರು ದೇಶದ ಒಳಿತ್ಗಾಗಿ ತಮ್ಮ ಕ್ಷೇತ್ರದ ಹಿತವನ್ನು ಸಾಧಿಸಲು, ಜನಜನಿತ ಮತ್ತು ನ್ಯಾಯ ಮಾರ್ಗಗಳಿಂದ ಹೋರಾಡಲು ಸಿದ್ಧರಾಗಿರಬೇಕು. ಪ್ರಜೆಗಳೂ ವರ್ತಕರೂ ಯುದ್ಧಕಾಲದ ಅನುಚಿತ ಮಾರ್ಗಗಳನ್ನು ಮರೆಯಬೇಕು. ಜಾತಿ-ಜಾತಿ, ಭಿನ್ನ ಭಿನ್ನಗಳಲ್ಲಿ ಸೌಹಾರ್ದ, ಸೌಜನ್ಯಗಳು ಹುಟ್ಟುವಂತೆ ಕಾರ್ಯಕರ್ತರು ಶ್ರಮಿಸಬೇಕು. ಈ ಸಾಮಾಜಿಕ ಮತ್ತು ರಾಜಕೀಯ ಕಾರ್ಯಕರ್ತರಲ್ಲಿನ ವೈಷಮ್ಯ ಸ್ಪರ್ಧಾ ಭಾವನೆಗಳು ಮಾಯವಾಗಬೇಕಾದುದು ಇಷ್ಟವೂ, ಅಪೇಕ್ಷಿತವೂ ಆಗಿದೆ. ಸರಕಾರವು ನಮ್ಮದೆಂದು ಖಗೆದು ರಚನಾತ್ಮಕಟೀಕೆ ಮಾಡಿ ಸುಧಾರಿಸಬೇಕು.

ನಾವು ದ್ವಿತೀಯ ಪಂಚವಾರ್ಷಿಕ ಪ್ರಣಾಳಿಯನ್ನು ಯಶಶ್ವಿಯಾಗಿ ಮಾಡಬೇಕೆಂದರೆ ನಮ್ಮ ರಾಷ್ಟ್ರದ ರಾಜಕೀಯ ಮತ್ತು ಆರ್ಥಿಕ ಂಗಗಳನ್ನು ಸುಭದ್ರ ಮತ್ತು ಸುರಕ್ಷಿತವಾಗಿಡಬೇಕೆಂದರೆ ಬೇರೊಂದು ಮಾರ್ಗವೇ ಇಲ್ಲ.

ಕಂಪ್ಲಿ ಸಕ್ಕರೆ ಕಾರ್ಖಾನೆ

ಬಳ್ಳಾರಿ ಆರ್ಥಿಕಾಭಿವೃದ್ಧಿ

ಬಳ್ಳಾರಿ ಜಿಲ್ಲೆಯ ಆರ್ಥಿಕಾಭಿವೃದ್ಧಿ ಸೂಚಕವಾದ ಕಾರ್ಯಗಳು ಸಾಗಿ ಜನಜೀವನದ ಮಟ್ಟವು ಹೆಚ್ಚಿದಂತೆಲ್ಲ ಸಂತೋಷವಾಗುವುದು ಸ್ವಾಭಾವಿಕ. ಈ ಜಿಲ್ಲೆಯ ಮತ್ತೊಂದು ಸಕ್ಕರೆ ಕಾರ್ಖಾನೆಯ ಅಧಿಕಾಂಶ ಷೇರುಗಳು ಬೊರಿಬಾಯಿ ಸೇಟರ ಹೆಸರಿಲಿದ್ದು, ಅಧಿಕಾಂಶಲಾಭವು ಅವರಿಗೇ ಹೋಗುತ್ತಲಿದೆ. ಹೊರಗಿನ ಬಂಡವಲಗಾರರಿಂದ ಜಿಲ್ಲೆಯಲ್ಲಿ ಎಷ್ಟೇ ಔದ್ಯೋಗಿಕ ದಂಧೆಗಳು ಆರಂಭವಾದರೂ., ಜಿಲ್ಲೆಯ, ಆರ್ಥಿಕತೆಗೆ ಹಾಪಿಯೇಶವ್ಟುವುದು ಈ ದೃಷ್ಟಿಯಿಂದಕಂಪ್ಲಿ ಭಾಗದ ಕಬ್ಬು ಬೆಳೆಯುವ ರೈತರನೇರು ಮೊತ್ತ ಮತ್ತು ಸಹಕಾರೀ ಪದ್ಧತಿಗಳ ಮೇಲೆ ಪ್ರಾರಂಭವಾದ ಜನತೆಯ ಹಿತಪ ಶುಭಸೂಚಕವಾದ ಈ ಕಾರ್ಖಾನೆಯ ಪೋಷಕರನ್ನು ಹೃತ್ಪೂರ್ವಾಗಿ ಅಭಿನಂದಿಸುತ್ತೇವೆ.

ಬೇರೊಂದೆಡೆ ಪ್ರಕಟವಾದ ವರದಿಗಳಿಂದ ಕಂಪ್ಲಿಕಾರಖಾನೆಯ ಭಂಡವಲವು 60 ಲಕ್ಷಕ್ಕೆ ಮೀರಿದ್ದು ಇನ್ನು 7-8 ತಿಂಗಳೊಳಗಾಗಿ ಸಕ್ಕರೆಯು ಉತ್ಪನ್ನವು ಪ್ರಾರಂಭವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಕಂಪ್ಲಿಬಾಗದ ಸುಮಾರು 5-6 ಸಾವಿರ ಎಕರೆ ಕಬ್ಬುಬೆಳೆಯುವ ರೈತರ ಕೈತುಂಬ ಹಣವು ದೊರೆತು ಅವರು ಸಾಹುಕಾರರ ಆರ್ಥಿಕ ಬಂಧನದಿಂದ ಪಾರಾದಲ್ಲಿ ಕಾಂಗ್ರೆಸ್‌ನ ಸಮತಾವಾದಿ ರಾಜ್ಯಬಾರ ಸ್ಥಾಪನೆಗೆ (Socialistic Pattern Of Society) ನಮ್ಮ ಭಾಗದಲ್ಲಿ ಒಂದು ಅಡಿಗಲ್ಲನ್ನಿಟ್ಟಂತೆ ಆಗಿಯುದುವನು ಸುಖಪಡಬೇಕು. ಈಗಿನ ವ್ಯವಸ್ಥೆಯಲ್ಲಿ ದುಡಿಯದಿರುವವರು ಸುಖದಲ್ಲಿರುವರು—ಈ ಪರಿಸ್ಥಿತಿಯು ಮಾರ್ಪಾಡಾಗಬೇಕು.

ಸಂಶಯಗ್ರಸ್ತ ಮತ್ತು ನಿರೀಕ್ಷಾವಾತಾವರಣದಲ್ಲಿ ಎದಿಗುಂದದೆ ಸಕಲ ಎಡರು ತೊಡರುಗಳನ್ನು ಎದುರಿಸಿ, ಕ್ಲಿಷ್ಟಸಮಸ್ಯೆಗಳ ಪರಿಹಾರ ಮಾಡಿದ ಬಿ.ಶಿ.ಶಿ. ಸ್ಪೋರ್ಸ ಅಧ್ಯಕ್ಷ ಶ್ರೀ ಹೆಚ್. ಲಿಂಗಾರೆಡ್ಡಿ ಕಾರ್ಯದರ್ಶಿ ಶ್ರೀ ರಾಮಮೂರ್ತಿ ಮತ್ತು ಆಪರಿಗೆ ಸಹಾಯಮಾಡಿದ ಎಲ್ಲರೂ ಜಿಲ್ಲಾ ಜನತೆಯ ಕೃತಜ್ಞತೆಗೆ ಪಾತ್ರರು.

Govt Medical Aid In Bellary,

ಬಳ್ಳಾರಿಯಲ್ಲಿ ವೈದ್ಯಕೀಯ ಸಹಾಯ

ಎಲ್ಲ ಭಾಗಗಳಲ್ಲಿಯೂ ಅಭಿವೃದ್ಧಿಹೊಂದಿದೆ

ಮೈಸೂರು ಸರ್ಕಾರವು 1953 ರ ಅಕ್ಟೋಬರ್ 1 ಕ್ಕೆ ಬಳ್ಳಾರಿ ಜಿಲ್ಲೆಯ ಅಧಿಕಾರವನ್ನು ನೆಹಿಸಿದ ಮೇಲೆ— ಜಿಲ್ಲೆಯ ಮುಖ್ಯ ಪಟ್ಟಣವಾದ ಬಳ್ಳಾರಿ ನಗರದಲ್ಲಿ ಹೆಡ್‌ಕ್ವಾರ್ಟರ್ಸ್ ಆಸ್ಪತ್ರೆಯು ಎಲ್ಲ ದೃಷ್ಟಿಗಳಿಂದ ಪತನವಾಗುತ್ತಿರುವದೆಂಬ ಪಕ್ಷಪಾತದ ಪ್ರಾರಂಭ-ಆಪಾದನೆಗಳ ಸೊಲ್ಲು ಈಗ ಇಲ್ಲವೆ ಪದ್ಯದ ಮೈಸೂರು ಪ್ರಾಂತದ 10 ಜಿಲ್ಲೆಗಳಲ್ಲಿ-ಬೆಂಗಳೂರು ಮೈಸೂರುಗಳ ನಂತರ ಬಳ್ಳಾರಿಯು ಮೂರನೆಯ ಸ್ಥಾನವನ್ನು ಹೊಂದಿದೆ-ಕರ್ನಾಟಕ ರಾಜ್ಯದ ಸ್ಥಾಪನಾನಂತರ ಬಳ್ಳಾರಿಯು ಕೇಂದ್ರ ಸ್ಥಳವಾಗಿ ಎಲ್ಲ ವಿಷಯಗಳಲ್ಲೂ, ಪ್ರಾಶಸ್ತ್ಯವನ್ನು ಪಡೆಯುವುದರಲ್ಲಿ ಯಾವ ಸಂಶಯವೂ ಇಲ್ಲ.

ಆಂಧ್ರ-ಕರ್ನಾಟಕ ರಾಜಕೀಯಗಳಿಗೆ ಸೇರದೆ-ನೈದ್ಯರ ಹಂಗಿಗೆ ದೂರವಿರುವಕೆಲ ಮಾನ್ಯ ಮಹನೀಯರು ಕೌತೂಹಲತೆಯಿಂದ ನಿಜಾಂಶಗಳನ್ನರಿಯಲು ಆಸ್ಪತ್ರೆಯು ಡಾಕ್ಟರುಗಳಿಗೆ ತಿಳಿಯದಂತೆ ಒಳಪ್ರವೇಶಿಸಿ ನೋಡಿದಾಗ—ವ್ಯಕ್ತವಾದಂತಗಳನ್ನು ಪ್ರಕಟಿಸುವುದು ಔಚಿತ್ಯವೆನಿಸುವುದು. ಅವರ ಅಭಿಪ್ರಾಯಗಳು ಅಮೂಲ್ಯವೂ- ನಿಷ್ಪಾಕ್ಷಿಕವೂ ಇವೆ.

ಔಷಧಿಗಳ ಪೂರೈಕೆ, ಚಿಕಿತ್ಸಾಕ್ರಮ, ರೋಗಿಗಳಿಗೆ ಕೊಡುತ್ತಿರುವ ನಿತ್ಯಾಹಾರ, ಡಾಕ್ಟರುಗಳ ವರ್ತನೆ—ಬಡವನ—ಬಲ್ಲಿದವರಲ್ಲಿ ಸಮುತ್ಸಾಹ ಶೀಘ್ರಚಿಕಿತ್ಸೆ, ನೈರ್ಮಲ್ಯ ವಗೈರೆ ಎಲ್ಲವಿಷಯಗಳಲ್ಲಿ ಆಸ್ಪತ್ರೆಯು ಮೊದಲಿಗಿಂತ ಸುಧಾರಿಸಿದೆ—ಎಂಬುದಾಗಿ ಮಾನ್ಯರು ಅಭಿಪ್ರಾಯ ಪಟ್ಟಿರುವರು-

1953-54 ರಲ್ಲಿ ಒಂದು ವರ್ಷದ ಅವಧಿಗೆ ಅಭಿವೃದ್ಧಿಯ ಸೌಕರ್ಯಗಳು ಸಾಗಿದವು. ಡಾಕ್ಟರ್ ಗೋರೂರರವರೆ ರೂ 1954 ರ ಮೆಯ್ಯ ಭಾಗಕ್ಕೆ ಬಂದರು ಅಲ್ಲಿಂದ ನ್ಯೂನತೆಗಳ ದೋಷಗಳ ನಿವಾರಣೆಯು ಪಕ್ಕುವಾಗಿ ಸಾಗಿತು. ಮೈಸೂರು ಸರ್ಕಾರವೆಸಾಕಷ್ಟು ಬಳ್ಳಾರಿಯ ಬೇಡಿಕೆಗಳನ್ನು ಬೆಚ್ಚುವನಸ್ಸಿನಿಂದ, ಔದಾರ್ಯದಿಂದ ಪೂರೈಸುತ್ತ ಬಂದರು.

ಶುದ್ಧತೆ, ನೈರ್ಮಲ್ಯದ ಕಡೆ ಮೊದಲು ಗಮನವಿಡಲಾಯಿತು. ಆಸ್ಪತ್ರೆಯ ವಿಶಾಲ ಆವರಣದಲ್ಲಿ ಸಂಬಂಧವಿಲ್ಲದವರೂ, ಇಲ್ಲದವರೂ, ನೆರೆಸಿ-ತೊಳೆಯುವುದು ತೊಳೆಯಲು ಕಷ್ಟವಿದ್ದಿತು-ಅಡಿಗೆಯ ಹೊಗೆ ಯಾವರಿಸಿಯುತ್ತಿತ್ತು-ರೋಗಿಗಳಸಂಬಂಧಿಗಳಿಗೆಕಟ್ಟಲ್ಪಟ್ಟು ಧರ್ಮಛತ್ರದಲ್ಲಿ ಅರ್ಹರಾದವರಿಗೆಲ್ಲ ಸ್ಥಾನನೀಡಲಾಗಿ-ಭಿಕ್ಷುಕರೂ ಆಸ್ಪತ್ರೆಯಲ್ಲಿ ಕೆಲಸವಿಲ್ಲದವರೂ-ಹೊರಹೊರಟರು-ಆಸ್ಪತ್ರೆಯು ಉದ್ಯಾನವನದ ರಕ್ಷಣೆಗಾಗಿ-3000, ರೂ. ಗಳ ವೆಚ್ಚದಿಂದ- ಕಾಂಪೌಂಡು ಗೋಡೆಯು ಕಟ್ಟಲಾಯಿತು-ಒಳರೋಗಿಗಳಿಗೆ ಶುಭ್ರ ಮತ್ತು ಸ್ವಚ್ಛ ಬಟ್ಟೆಗಳು ಒದಗಿಸಲ್ಪಟ್ಟವು ತಗಡಿಗೆಗಳನಿರ್ಮೂಲನಕ್ಕಾಗಿ ಡಿ, ಡಿ, ಟಿ, ಗವಾಕ್ಷಿನಾಗಳ ಪ್ರಯೋಗವಾಯಿತು-ಎಲ್ಲ ಕಟ್ಟಡಗಳು ವೈಟ್‌ವಾಷ್ ಆಗಿ-ಸ್ವಚ್ಛವಾಗಿರಿಸಲ್ಪಟ್ಟವು

ಈ ಹಿಂದೆ ರೋಗಿಗಳ ಆಹಾರದ ಪೂರೈಕೆಯಲ್ಲಿ ದಕ್ಷತಾತಪ ಅಸಾಧನೆಹೊರಿಸಲಾಗುತ್ತಿತ್ತು. ಡಾಕ್ಟೋರೂರವರು ಬಂದ ಮೇಲೆ ಕಾಲಕ್ಕೆ ಸರಿಯಾಗಿ ರೋಗಿಗಳಿಗೆ ಶುದ್ಧ-ಸ್ವಚ್ಛ ಮತ್ತು ನಿಯಮಿತ ಮತ್ತು ನಿಗದಿಯಾದ ಆಹಾರವೂ ನೀರು ಬೆರಕೆಯಿಲ್ಲದ ಹಾಲೂ ಪೂರೈಯಲಾರಂಭವಾಯಿತು.

ಮೈಸೂರು ಮೆಡಿಕಲ್ ಸ್ಟೋರ್ಸ್ ಇವರು ಕನ್ಯಾಸಂಗ್ರಹಾಲಯದಿಂದ ಒದಗಿಸುತ್ತಿರುವ ಔಷಧ ಸಾಮಗ್ರಿಗಳಲ್ಲಿ ಬೇಕಾದುದಿಲ್ಲದಿದ್ದರೆ- ತಾವೇ ಸ್ವತಃ ಜವಾಬ್ದಾರಿಯಿಂದ ಕೊಳ್ಳಲು-ಡಿ. ಎಂ ಒಪ್ಪಿಗೆಯ ವೆಚ್ಚಕ್ಕಾಗಿ- ಸಾಕಷ್ಟು ಧನವನ್ನು ಸರ್ಕಾರದವರು ಪ್ರತಿ ವರ್ಷವೂ ಕಾದಿರಿಸುತ್ತಾರೆ ಈ ಕಾರಣ ಆಸ್ಪತ್ರೆಯು ಸಂಗ್ರಹಾಲಯದಲ್ಲಿ ಯಾವ ತ್ರೇಷ್ಠ ಔಷಧ ಮತ್ತು ಇತರ ಸಾಮಗ್ರಿಗಳಿಗೆ ಈಗ ಕೊರತೆಯೆಂಬುದೇ ಇಲ್ಲ-ಈ ಕಾರಣ ಡಾಕ್ಟರುಗಳು ಧಾರಾಳವಾಗಿ-ಬಡವರಿಗೂ ಸಹಬೆಲೆಯಿಳ್ಳ ಔಷಧ ಮತ್ತು ಚಿಕಿತ್ಸೆಯನ್ನು ಒದಗಿಸಲು ಈಗ ಸುಲಭವಾಗಿದೆ-ಮೊದಲಿಗೆ ಇಂಥ ಔಷಧಗಳನ್ನು ಬಾಜಾರದಲ್ಲಿ ಕೊಳ್ಳಬೇಕೆಂಬ ಚೀಟಿಗಳು ಬಹಳವಾಗಿ ಹೊರಬರುತ್ತಿದ್ದವು-ಈಗ ಅವ್ಯವಹಾರವಿಲ್ಲವೆಂದೆ.

ಸರ್ಕಾರದವರು ಮುಂಜೂರು ಮಾಡಿದ ಹಾಸಿಗೆಗಳ ಸಂಖ್ಯೆಯು (Bed Strength) 152-ಇದ್ದರೂ-ಒಳರೋಗಿಗಳ ಸಂಖ್ಯೆಯು ಸರಾಸರಿ 300 ಕ್ಕಿಂತಲೂ ಹೆಚ್ಚಿಗಿರುತ್ತದೆ-ಚಿಕಿತ್ಸೆಗಾಗಿ ನಿತ್ಯವೂ ಬರುತ್ತಲಿರುವ ಹೊರರೋಗಿಗಳ ಸಂಖ್ಯೆಯು ಸರಾಸರಿ 450 ಇದೆ-ಅಂಧ್ರ ಹೈದರಾಬಾದು ಮತ್ತು ಬೊಂಬಾಯಿ ಪ್ರದೇಶದ ಜಿಲ್ಲೆಗಳಿಂದ ಚಿಕಿತ್ಸೆಗಾಗಿ ಬರುತ್ತಿರುವವರಸಂಖ್ಯೆಯು ಹೆಚ್ಚುತ್ತಿದ್ದು ಡಾ. ಗೋರೂರರ ಸರ್ಜರಿ ಮತ್ತು ಚಿಕಿತ್ಸಾಕ್ರಮದ ಜನಪ್ರಿಯತೆಯನ್ನು ಸ್ಪಷ್ಟಪಡಿಸುತ್ತದೆ.

ಈ ಎರಡು ವರ್ಷಗಳೊಳಗಾಗಿ-ಎಕ್ಸರೇ ಪ್ಲಾಂಟಿಗಾಗಿ 75,000 ರೂ. ಆಸ್ಪತ್ರೆಯ ಆವರಣದಲ್ಲಿ ಟಾರ್‌ರಸ್ತೆಗಳಿಗಾಗಿ 6000, ಭಾವಿಯ ಪಂಪಿಂಗ್‌ಸೆಟ್‌ಗಾಗಿ 5,000, ಸೆಪ್ಟಿಕ್‌ಟ್ಯಾಂಕ್ಸ್ (ಪಾಯಿಖಾನೆ) ಗಳಿಗಾಗಿ 8000, ಹಾಲಿನ ಕೇಂದ್ರಕ್ಕಾಗಿ 5000—ರೂ ಮೈಸೂರು ಸರ್ಕಾರದಿಂದ ನೆಚ್ಚುವಾಗಿ ಆಸ್ಪತ್ರೆಯ ಸ್ವರೂಪವು ಸರಿವರ್ತಿತವಾಗಿ ನೂತನಸಕೆಯನ್ನು ತೊಂದಿದೆ. ಸೂಲಗಿತ್ತಿಯರ ತರಬೇತಿ ಶಿಕ್ಷಣಕ್ರಮವೂ ಸಾಗಿದೆ-ಪಂಚವರ್ಷೀಯ ಪ್ರಣಾಳಿಯಲ್ಲಿ ಕಾಂಪೌಂಡ ಸರ್ವೆಂಟ್ಸ್‌ಯನ್ನಿಂಗ್ ಏರ್ಪಡಿಸಲಾಗುವುದು

ರೋಗಿ ಮತ್ತು ರೋಗಗಳ ವೈವಿಧ್ಯತೆಯ ವೈಶಿಷ್ಟ್ಯವನ್ನು ಬಳ್ಳಾರಿಗೆ ಮೈಸೂರು ಬೆಂಗಳೂರು ಭಾಗಗಳಿಂದ ಬಂದವರು, ಔಷಧಿಗಳ ಉಪಯೋಗ ಚಿಕಿತ್ಸಾಕ್ರಮ ಮತ್ತು ಫಲಿತಾಂಶಗಳನ್ನು ಮನಸಾರ ಪ್ರಶಂಸಿಸಿದ್ದಾರೆ ಇತ್ತೀಚೆಗೆ ಆಸ್ಪತ್ರೆಯನ್ನು ಸಂದರ್ಶಿಸಿದ ಮೈಸೂರು ನೈಸರ್ಗಿಕೀಯ ಶಾಲೆಯ ಮುಖ್ಯರಾದ ಶ್ರೀ ವೆಂಕಟಸುಬ್ಬರಾಯರು ವೈದ್ಯ ಪತ್ನಿಕೋದ್ಯೋಗಿಗಳೊಡನೆಯ ತಮ್ಮ ಸಂಧಾಷಣೆಯಲ್ಲಿ ಈ ಆಸ್ಪತ್ರೆಯನ್ನು ಪ್ರಶಂಸಿಸಿರುವುದು ಗಮನಾರ್ಹವಾಗಿದೆ. ಬಳ್ಳಾರಿ ನಗರದ ಜನಸಂಖ್ಯೆಯು ಹೆಚ್ಚಧಂತೆ ಸರ್ಕಾರವಾದರೂ ಸೌಕರ್ಯಗಳನ್ನು ಹೆಚ್ಚಿಸುವುದು ಸಹಜವಾಗಿದೆ.

ಹೀಗೆ ಆಸ್ಪತ್ರೆಯನ್ನು ಕಟ್ಟಲು ಬಳ್ಳಾರಿ ಮಹನೀಯರೊಬ್ಬರು 50,000 ದಾನಕೊಡಲು ಮುಂದೆ ಬಂದಿದ್ದರು. ಸರ್ಕಾರದವರು 50 ಸಾವಿರ ಮುಂಜೂರು ಮಾಡಿ ಒಂದು ಲಕ್ಷರೂಪಾಯಿಕಟ್ಟಡವನ್ನು ದೊಡ್ಡಾಸ್ಪತ್ರೆಯ ಬಗಲಲ್ಲಿ ನಿರ್ಮಿಸಲು ಯೋಜನೆಯೊಂದೂ ಹೋಗಿದೆ. ಇದು ಎಕ್ಸರೇ ವ್ಯವಸ್ಥೆಗಾಗಿ ದ್ವಿತೀಯ ಪಂಚವರ್ಷಿಕೆ ಯೋಜನೆಯಲ್ಲಿ ಮುಂಜೂರಾಗಿದೆಯೆಂದು ಕೇಳುತ್ತೇವೆ. ಸರ್ಕಾರದವರು ಶೀಘ್ರಗೊಳಿಸಬೇಕು.

ಭತ್ತದ ವ್ಯವಸಾಯವನ್ನು ಸಫಲ ಮಾಡುವುದು ಹೇಗೆ?

ಜಪಾನಿನ ಉದಾಹರಣೆ

ಜಪಾನೀ ವಿಧಾನ ಭತ್ತದ ವ್ಯವಸಾಯವನ್ನು ಸ್ವತಃಕಲಿಯಲು ಜಪಾನನ್ನು ಸಂದರ್ಶಿಸಿದ ಇಂಡಿಯಾನ ನಿಯೋಗವು ಆ ದೇಶದಲ್ಲಿ 14 ವಾರದ ಪ್ರವಾಸವಾದ ಮೇಲೆ ಹಿಂದಿರುಗಿದೆ. ಈ ನಿಯೋಗದಲ್ಲಿ ಕಟಕ್‌ನ ಭತ್ತದ ಪರಿಶೋಧನಾಲಯದ ಡೈರೆಕ್ಟರ್ ಡಾ। ಎ ಪಾರ್ಥಸಾರಥಿ, ಮದರಾಸು ಸರ್ಕಾರದ ಭತ್ತದ ತಜ್ಞ ಡಾ। ಎಂ. ಬಿ. ವಿ. ನರಸಿಂಗರಾವ್ ಮತ್ತು ಪಾಟ್ನಾ ವಿಶ್ವವಿದ್ಯಾಲಯದ ಶ್ರೀ ಎ. ಸಿ. ಶರನ್ ಇದ್ದರು. ಅವರುಗಳು ಜಪಾನಿನ ವಿವಿಧ ಭಾಗಗಳಲ್ಲಿ ವ್ಯವಸಾಯದ ವಿಧಾನಗಳನ್ನು ಅವರೇ ನೋಡಿದರು. ದೇಶದ ವಿವಿಧ ಭಾಗಗಳಲ್ಲಿ ಪ್ರಯೋಗದ ಚಟುವಟಿಕೆಗಳನ್ನು ಪರಿಚಯ ಮಾಡಿಕೊಂಡರು ಮತ್ತು ವ್ಯವಸಾಯದ ಮುಟ್ಟುಗಳು, ಕ್ರಿಮಿನಾಶಕಗಳು ಮತ್ತು ರಾಸಾಯನಿಕ ಗೊಬ್ಬರಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಸಂದರ್ಶಿಸಿದರು. ಈ ಕೆಳಗೆ ಪ್ರವಾಸಿ ಅವರ ಅಭಿಪ್ರಾಯವನ್ನು ಸಂಕ್ಷಿಪ್ತವಾಗಿ ಕೊಟ್ಟಿದೆ.—

ಕೆಳಗೆ ಹೇಳಿದ ಮೂರು ಅಂಶಗಳು ಜಪಾನಿನಲ್ಲಿ ಭತ್ತದ ವ್ಯವಸಾಯದ ಸಫಲತೆಗೆ ಕಾರಣವಾಗಿದೆ.—

(1) ರೈತರಿಗೆ ಸಾಧ್ಯವಾದ ಎಲ್ಲ ವಿಧಗಳಲ್ಲಿಯೂ ಸಹಾಯ ಮಾಡಲು ಸಿದ್ಧವಾಗಿರುವ ಹಳ್ಳಿಯ ಸಹಕಾರ ಸಂಘಗಳ ಅನೇಕ ಮುಖದ ಚಟುವಟಿಕೆಗಳು.

(2) ಪ್ರಯೋಗ ಶಾಲೆಯಿಂದ ಭೂಮಿಗೆ ಪ್ರಯೋಗದ ಫಲಿತಾಂಶಗಳನ್ನು ತೆಗೆದುಕೊಂಡು ಹೋಗಲು ವಿಸ್ತರಣ ಕಾರ್ಯ.

(3) ಜಪಾನೀ ವೈಜ್ಞಾನಿಕರಿಂದ ಭತ್ತದ ವ್ಯವಸಾಯದ ವಿಷಯದಲ್ಲಿ ಪಡೆದ ವಿಸ್ತೀರ್ಣ ಪ್ರಯೋಗಗಳು ಮತ್ತು ಅಂತಹ ಪ್ರಯೋಗಗಳನ್ನು ಉತ್ತೇಜನ ಗೊಳಿಸಲು ವಿಶ್ವವಿದ್ಯಾಲಯಗಳು ಮಾಡಿದ ಮಹತ್ತರ ಕಾರ್ಯ.

ಹಳ್ಳಿಯ ಸಹಕಾರ ಸಂಘಗಳು

ದೇಶದ ಎಲ್ಲಾ ಭಾಗಗಳಲ್ಲಿಯೂ ಸ್ಥಾಪಿತವಾಗಿರುವ ಸಹಕಾರ ಸಂಘಗಳು ರೈತರಿಗೆ ಎಲ್ಲಾವಿಧವಾದ ಸಹಾಯಗಳನ್ನು ಒದಗಿಸುತ್ತವೆ ಮತ್ತು ಅವರಿಗೆ ಬೇಕಾಗಿರುವ ಎಲ್ಲಾ ಸಾಮಾನುಗಳು ಮತ್ತುಮರ ಮುಟ್ಟುಗಳನ್ನು ಸರಬರಾಯಿ ಮಾಡುತ್ತವೆ. ರೈತರ ಉತ್ಪನ್ನವನ್ನು ಕೊಳ್ಳುವುದು ಮತ್ತು ಕುಂಚುವುದರ ಜೊತೆಗೆ, ಈ ಸಂಘಗಳು ಹಣ್ಣುಗಳು ಮತ್ತು ತರಕಾರಿಗಳನ್ನು ಪಾಸ್ತಾನುನಾಡುವುದು ಮತ್ತು ಎಣ್ಣೆ ಬೀಜಗಳನ್ನು ಗಾಣವಾಡಿಸುವುದು ಮುಂತಾದ ಚಟುವಟಿಕೆಗಳಲ್ಲಿ ನಿರತವಾಗಿರುತ್ತವೆ ಉತ್ತಮ ಗುಣದ ಬೀಜಗಳು, ಒಳ್ಳೆಯ ಗೊಬ್ಬರಗಳು ಮತ್ತು ನವೀನ ಯಂತ್ರೋಪಕರಣಗಳ ಸರಬರಾಯಿ ಅವುಗಳ ಮುಖ್ಯ ಕೆಲಸಗಳಲ್ಲಿ ಒಂದಾಗಿದೆ. ಕಡಿಮೆ ಸರವ ಬಡ್ಡಿಯಲ್ಲಿ ರೈತರಿಗೆ ಸಾಲ ಸಿಗುವಂತೆ ಅವು ಸಹಾಯ ಮಾಡುತ್ತವೆ ಕೆಲವು ಸಂಘಗಳು ರೈತರಿಗೆ ಸಹಾಯ ಮಾಡಲು ವ್ಯವಸಾಯ ತಜ್ಞರನ್ನು ನೇಮಿಸಿವೆ. ಈರೀತಿಯಲ್ಲಿ ಸಹಕಾರ ಸಂಘಗಳು ಜಪಾನಿನ ವ್ಯವಸಾಯದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ವಿಸ್ತರಣ ಕಾರ್ಯ

ಹಳ್ಳಿಯ ಕಡೆಗಳಲ್ಲಿ ಬಹುಸಂಖ್ಯೆಯ ಕೃಷಿ ವ್ಯವಸಾಯನ ವ್ಯಾಸಶಾಲೆಗಳು ಇವೆ. ಅವು ವಿಸ್ತರಣ ಕಾರ್ಯದಲ್ಲಿ ಬಹಳವಾಗಿ ಸಹಾಯ ಮಾಡುತ್ತವೆ. ವಿದ್ಯಾರ್ಥಿಗಳ ಪ್ರಮುಖ ಸಂಖ್ಯೆಯು ರೈತರ ಮಕ್ಕಳಾದ್ದರಿಂದ ಈ ಪಾಠ ಶಾಲೆಗಳಲ್ಲಿ ವ್ಯವಸಾಯದಲ್ಲಿ ವೈಜ್ಞಾನಿಕ ಪಾಠಗಳನ್ನು ಕಲಿಸುತ್ತಾರೆ. ಅವರ ಪುನಶ್ಚೇತನಗಳಾದ ಮೇಲೆ ಹೆಚ್ಚುಮುಂದಿ ಯುವಕರು ತಮ್ಮ ತಂದೆ ತಾಯಿಗಳಿಗೆ ಸಹಾಯವಾಗಲು ಜಮೀನುಗಳಿಗೆ ಹಿಂತಿರುಗುವರು ಇವರಲ್ಲಿ ಕೆಲವರು ವ್ಯವಸಾಯದಲ್ಲಿ ಎರಡು ವರ್ಷದ ಉನ್ನತ ಶಿಕ್ಷಣಕ್ಕೆ ಹೋಗುತ್ತಾರೆ. ಇವರು ಆಮೇಲೆ ವ್ಯವಸಾಯದ ಸಲಹೆಗಾರರಾಗಿ ನೇಮಕವಾಗುತ್ತಾರೆ. ಪ್ರಯೋಗ ಶಾಲೆಯ ಪಾಠಗಳನ್ನು ಭೂಮಿಗೆ ತೆಗೆದುಕೊಂಡು ಹೋಗುವುದು. ಇವರ ಕೆಲಸವಾಗಿರುತ್ತದೆ. ಪ್ರತಿ ಹಳ್ಳಿಯಲ್ಲಿಯೂ ಒಬ್ಬ ವ್ಯವಸಾಯದ ಸಲಹೆಗಾರರು ಇದ್ದಾರೆ. ಇಂತಹ 10,000 ಸಲಹೆಗಾರರು ಇದ್ದಾರೆ.

ಪ್ರಯೋಗ

ವಿಸ್ತಾರವಾದ ಪ್ರಯೋಗಗಳಿಂದ ಮೇಲೆ ಆಯಾಯ ಪ್ರದೇಶಗಳಿಗೆ ಹೊಂದಿ ಕೊಳ್ಳುವ ಉತ್ತಮ ಬೀಜಗಳನ್ನು ಉತ್ಪನ್ನ ಮಾಡಲು ಸಾಧ್ಯವಾಗಿದೆ. ಪ್ರಾಂತೀಯ ಆಧಾರದ ಮೇಲೆ ಬೀಜಗಳು ಬೆಳೆಯುವ ಕಾಲ ಮತ್ತು ಗೊಬ್ಬರದ ಮೇಲೆ ಪ್ರಯೋಗಗಳು ಬಹಳ ಫಲದಾಯಕವಾಗಿವೆ.

ರೈತನ ಜಾಗ್ರತೆ

ಜಪಾನಿನ ಸಾಧಾರಣ ರೈತನು ವಿದ್ಯಾವಂತ ವ್ಯಕ್ತಿಯಾಗಿದ್ದಾನೆ ಮತ್ತು ವ್ಯವಸಾಯದ ವಿಷಯವಾಗಿ ವಿಶೇಷವಾದ ಜ್ಞಾನ ಭಂಡಾರವು ಅವನಿಗಿದೆ. ರೈತರು ವ್ಯವಸಾಯದ ವಿಷಯದ ಮೇಲೆ ವೃತ್ತಪತ್ರಿಕೆಗಳು ಮತ್ತು ಪ್ರಕಟಣೆಗಳನು ಓದಿ ಅರ್ಥ ಮಾಡಿಕೊಳ್ಳಲು ಉತ್ಸುಕರಾಗಿದ್ದಾರೆ ಅವರ ಸ್ವಂತ ಓದುವಿಕೆಯಿಂದ, ವ್ಯವಸಾಯದ ಇಲಾಖೆಯಿಂದ ಮತ್ತು ವ್ಯವಸಾಯದ ಸಲಹೆಗಾರರಿಂದ ಅವರಿಗೆ ಬರುವ ಸಲಹೆಗಳನ್ನು ಜಮೀನಿನಲ್ಲಿ ಪ್ರಯತ್ನಿಸಲು ಅವರು ಯಾವಾಗಲೂ ಸಿದ್ಧವಾಗಿದ್ದಾರೆ. ಹೆಚ್ಚು ಜನ ರೈತರು ರೇಡಿಯೋಗಳನ್ನು ಇಟ್ಟಿರುತ್ತಾರೆ ಮತ್ತು ಅವರು ಜಪಾನಿನ ಪ್ರಸಾರ ಕಾರ್ಯದಲ್ಲಿ ಮುಖ್ಯ ಸಂಗತಿಯಾಗಿರುವ ವ್ಯವಸಾಯದ ಕಾರ್ಯಕ್ರಮಗಳನು ಕ್ರಮವಾಗಿ ಕೇಳುತ್ತಾರೆ. ರೋಗಗಳು ಅಥವಾ ಹುಳುಗಳಿಂದ ಬೆಳೆಗಳಿಗೆ ಪೀಡನೆ ಇದೆ ಎಂದು ಕೇಳಿದ ತಕ್ಷಣವೇ, ಅವರು ಸರ್ಕಾರದವನು ಕೈಗೊಳ್ಳಲು ಕಾಯದೇ ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಒಂದು ಸ್ಥಳದಲ್ಲಿ ಬೆಳೆಯು ಒಂದು ಹುಳುವಿನಿಂದ ಪೀಡಿತವಾಗಿದ್ದರೆ ಆ ಪ್ರದೇಶದ ರೈತರು ಒಟ್ಟಾಗಿ ಸೇರಿ ಆ ಹುಳುವನ್ನು ಎದುರಿಸಲು ಒಕ್ಕೂಟದ ಕೆಲಸವನ್ನು ಕೈಗೊಳ್ಳುತ್ತಾರೆ. ಸಂಕರಿಸುವ ದಳಗಳನ್ನು ಸ್ಥಾಪಿಸಿ, ಅದರಲ್ಲಿ ಪ್ರತಿ ಸಂಸ್ಥಾನದಲ್ಲೂ ಒಬ್ಬ ಸ್ವಯಂ ಸೇವಕನನ್ನು ಕೊಡುತ್ತದೆ.

ನವಭಾರತಕ್ಕೆ

ಚಂದಾದಾರರಾಗಿರಿ

ಜಾದುವಿನಿಂದಲೇ ಜಗತ್ತು !

(ಅಥವಾ)

ಜೀವನ, ಸಾಹಿತ್ಯ ಮತ್ತು ಇಂದ್ರಜಾಲ!

(ಎಳಪಾತ್ರಾಭಿನಯದ ಭಾಣ)

ಪ್ರೊ ಬಿ. ಎಚ್. ಶ್ರೀಧರ, M. A.

ದೇವರ ಯೋಗ ಮಾಯೆಯಿಂದ ಜಗತ್ತು ನಿರ್ಮಿಸಲ್ಪಟ್ಟಿದ್ದು ನಿಜ ಎಂಬುದನ್ನು ಅನೇಕ ದಾರ್ಶನಿಕರು ಸಾರುತ್ತಾರೆ. ಬಹುಶಃ ಅದೇ ಕಾರಣದಿಂದ, ಅಂದಿನಿಂದ ಇಂದಿಗೂ ಮಂತ್ರ, ಮಾಟ, ಯಂತ್ರ, ತಂತ್ರ, ಜಾದು, ಮೋಸ, ದಗ ಮುಂತಾದ ಕಲೆಗಳು ಜನರ ಮನಸ್ಸನ್ನು ರಂಜಿಸುತ್ತಲೂ ಭಂಜಿಸುತ್ತಲೂ ಬಂದಿರ ಬೇಕೆಂದು ತೋರುತ್ತದೆ. ಮಾರ್ಜಾರ-ರಾವಣಾದಿಗಳ ಸನ್ಯಾಸ, ಬಕ ಜಪ, ಕರ ಟಿಕ-ದಮನಿಕ ತಂತ್ರ, ಘಟೋತ್ಕಚನ, ಮಾಯಾ ಬಜಾರ, ಗಬ್ಬೆಲ್ಸನ ಪ್ರಚಾರ ಮುಂತಾದವು ಪ್ರಸಿದ್ಧವಾಗಿ ನರನ ನರಿತನಕ್ಕೆ ನಿದರ್ಶನಗಳಾಗಿವೆ. ಪುಹಾಭಾರತದಲ್ಲಿ (ಅಂದೂ ಹಾಗೇ ಇಂದೂ ಹಾಗೇ ಯದುನಾಥನೇ ಜಾದುನಾಥ!

Life gives to Truth new reality and impressiveness—ಪರಸತ್ಯಕ್ಕೆ ಜೀವನವು ಹೊಸ ಸತ್ಯತೆಯನ್ನೂ, ರಮ್ಯತೆಯನ್ನೂ ಕೊಡುತ್ತದೆ, ಎಂಬ ಮಾತಾದರೂ ಮೇಲಿನ ಅಭಿಪ್ರಾಯವನ್ನು ಸಮರ್ಥಿಸುತ್ತದೆ ಪ್ರಕೃತಿಯ ನವನವೋನ್ಮೇಷಗಳಿಂದರೆ ಬದಲಾಗುತ್ತಿರುವ ಅಭಿಪ್ರಾಯಗಳು, ಭಾವನೆಗಳು, ದೃಷ್ಟಿಕೋನಗಳು ಕಲ್ಪನೆಗಳು ಮತ್ತು ದರ್ಶನಗಳು. ಕಾಸಿಗಾಗಿ ಮೋಸಮಾಡಿವ ವ್ಯಾವಹಾರಿಕ ಜೀವನವು ಅದಕ್ಕಾಗಿಯೂ ಮೋಸ ಮಾಡಲುದ್ಯೋಗಿಸಿ, ರಾಜಕಾರಣವೆಂಬ ಮಹಾಶಾಸ್ತ್ರವನ್ನು ಹಡೆಯಿತು. ವಾರಾಂಗನೇವ ನೃಪ ನೀತಿರನೇಕ ರೂಪಾ ಎಂದು ಅದು ಪ್ರಸಿದ್ಧಿ ಪಡೆಯಿತು. Everything is right in war and love—ಯುದ್ಧ ಮತ್ತು ಪ್ರೇಮಗಳಲ್ಲಿ ಏನು ಮಾಡಿದರೂ ಅದು ನ್ಯಾಯವೇ ಎಂದ ಚರ್ಚಿಲ್ಲರ ಮಹಾವಾಕ್ಯವೆ ರಾಗದ್ವೇಷಮಯವಾದ ಇಡಿ ಮಾನವ ಜೀವನದ ವ್ಯಾಖ್ಯೆಯನ್ನೇ ಮಾಡಿದೆಯೆನ್ನಬೇಕು. ರಾಗ-ದ್ವೇಷಗಳನ್ನು ಬಿಟ್ಟರೆ ಜೀವನವೇ ಇಲ್ಲ, ಅವೆರಡರಿಂದ ಪ್ರೇರಿತವಾಗದ ಮಾನವ ಕಾರ್ಯವಿಲ್ಲ. ಆ ಆಕರ್ಷಣ-ಅಪಕರ್ಷಣ ಶಕ್ತಿಗಳಿಂದ ಆಗುವುದೆಲ್ಲ ನ್ಯಾಯವೆಂದರೆ ಮುಗಿಯಿತಲ್ಲಾ ಅಂದರೆ ಜೀವನದಲ್ಲಿ ಇರುವುದೆಲ್ಲಾ ನ್ಯಾಯನೇ—ನ್ಯಾಯವೂ ಅನ್ಯಾಯದ ನ್ಯಾಯವೂ ಒಂದೇ

ಅಂತಾರಾಷ್ಟ್ರೀಯ ಶೋಷಣೆಗಳನ್ನು ದಿನಬೆಳಗೂ ನಾವು ಪತ್ರಿಕೆಗಳಲ್ಲಿ ಓದುತ್ತೇನೆ. ಅಂತಾ ರಾಜಕೀಯ ಅನ್ಯಾಯಗಳನ್ನೂ ನಿತ್ಯವೂ ನೋಡುತ್ತೇವೆ ಉದಾ, ಕನ್ನಡಿಗರನ್ನು ಕಾಸರಗೋಡಿಸುವುದು. ಪ್ರದೇಶಗಳಲ್ಲಿ ಜಾತೀಯಿಸುವುದು, ಬಾಂಧವಿಸುವುದು ಮುಂತಾದವೆಷ್ಟೋ ಸಿಗುತ್ತವೆ. ವ್ಯಕ್ತಿ- ಸಮಾಜ--ಸಂಸ್ಥೆ-ಗಳಲ್ಲಿ ವಚನ ಭಂಗಸರ ಸ್ವಾಪಹಾರಗಳಿಗೆ ಲೆಕ್ಕ ಸಂಖ್ಯೆಯಿಲ್ಲ ಇವು ಮಾಯೆ ಮೇಣ್ ತಿಗಳಿಗೇನು ಕಡಿಮೆ ಆ ಎವಾ ಒಂದು ತೂಕ ಹೆಚ್ಚೇ ಎಂದು ಹೇಳಬೇಕು. ಹೇಳಿಮಾಡುವ ಮಾಟಗಾರಿಕೆಗಿಂತ ಹೇಳದೆ ಮಾಡುವ ಮಾಟಗಾರಿಕೆಗೆ ಹೆಚ್ಚಿಗೆ ನಂಬಕು ಕೊಡಬೇಕಲ್ಲವೆ? ಭಾರತೀಯ ಸಂಸ್ಕೃತಿಯಿಂದು ಈ ಸ್ಪರ್ಧೆಯಲ್ಲಿ ಯಶಸ್ಸನ್ನು ಸಂಪಾದಿಸಲು ಹೊರಟಿದೆ ಎನ್ನಬೇಕೇ!

ಪರಿಸ್ಥಾನ, ಗೋವೆಗಳಲ್ಲಿ ಹಾಗು ಹೊಸಪ್ರಾಂತಗಳನ್ನು ಹಡೆಯುತ್ತಿರುವ ಹಳೆಯ ಪ್ರಾಂತಗಳಲ್ಲಿ ಈ ಪಾಯಾವುತ್ಸೌಂದ್ರ ನಾಟಕವು ಚೆನ್ನಾಗಿ ನಡೆಯುತ್ತಿರುವುದು ದರ್ಶನೀಯ, ಸ್ಪರ್ಶನೀಯ. ಹೊಸ ಪ್ರಾಂತಗಳಾಗಲಿಂ ವ ಪ್ರದೇಶಗಳ ಮುಕ್ತಿದ್ದಿಗಳನ್ನೇಕರ ವಂಶಿಯಲ್ಲಿ ನಡೆಯುತ್ತಿರುವ ಕವಿತ್ವಗಳೇನಾದರೂ ಕಡಿಮೆಯ ಇಂದ್ರಜಾಲಗಳೇ? ಆ ಈ ಭೋಗ್ಯಗಳ ಹಂಚುವಿಕೆಯ ಬಗ್ಗೆ ನಡೆಯುತ್ತಿರುವ ಹಂಚಿಕೆಗಳ ಪರಿಮಳ ಆಗಲೇ ದೆಸೆದೆಸೆಗೆ ಪಸರಿಸುತ್ತಿದೆ, ಪರಿಯುತ್ತಿದೆ, ನಾರುತ್ತಿದೆ. ಜೀವನು ದೆವ್ವವಾಗಿ ತದ್ಭವಿಸಿದಂತೆ ಜನಹಿತಾರ್ಥವು ಸ್ವಾರ್ಥವಾಗಿ ಅವತರಿಸುತ್ತಿರುವ ಪ್ರಶಾಸನಿಕ ಪ್ರಮೇಯಗಳ ಪಕ್ಷಾಭಿಪ್ರಾಯಗಳಿಗೆ ವೇತನದ ಕಡಿತಾಯದ ಕಲ್ಪನೆಯೊಂದು ದೃಷ್ಟಾಂತ: ಅಭಿವೃದ್ಧಿ ಯೋಜನೆಗಳನ್ನು ಚಿಂತಿಸದ ಅಲಕ್ಷ್ಯಇನ್ನೊಂದು ಲಕ್ಷ—ಹೆಸರುಮಗಲೆಗಳ ಪಲಯನವಕರ್ನಾಟಕದ ಯತ್ನದಲ್ಲಿಂದು ಜನತೆಗಾಗಿದೆ.

ಜೀವನವು [illegible] ಅವನು ಕವೀನಾಂಕವಿಃ ಅಲ್ಲವೇ ಕಾವ್ಯಾಲಂಕಾರಗಳಲ್ಲಿ ಅತಿಶಯ ಅಥವಾ ಅಸತ್ಯ ಅಡಿಗಲ್ಲು. ಸತ್ಯದಿಂದಲೇ ಅಸತ್ಯ ಹುಟ್ಟಲ್ಲವೆ? ಆದುದರಿಂದ ಕಾವ್ಯ ಜೀವನದಲ್ಲಾದರೂ ಜೀವನ ಕಾವ್ಯದಲ್ಲಿ ಅಂತೆಯೇ ಕೆಲಬಗಲು ಬಂಟರ ನವ್ಯ ಕಾವ್ಯ ಪ್ರಚಾರವನ್ನು ಸಂರಕ್ಷಣೆಯ ತಾರೀಪು (Protection Tariff) ಕೊಟ್ಟು ಮಾರಲಾಗುತ್ತಿದೆ. ಶ್ರೀ ಅ ನ ಕೃಷ್ಣರಾಯರೆಂಬತೆ ಪರಿಷತ್ತಿನ ಕೂರ್ಮಗತಿ ಕಾರಂತರ ಪಡೆನುಡಿಯ ಶರಬತ್ತನ್ನು ತಯಾರಿಸುತ್ತ ಬಂದಿರುವುದಾದರೂ ಕೆಲ ಮತ್ಸ್ಯೇಂದ್ರರ ಕಾಟಗಾರಿಕೆಯಿಂದಲೇ ಅಲ್ಲವೇ Literature is an avenue to glory--ಸಾಹಿತ್ಯವು ವೈಭವಕ್ಕೊಂದು ಹಾದಿ ಎಂಬುದನ್ನೇತೇ ಮಠ ಕಟ್ಟಿದ ಪ್ರಚ್ಛನ್ನಕಾಮರು ಕಟ್ಟಿದೆ [illegible]ಟಕ ಪದಕಳಸವಿಂದು ಮಂಕುಬೂದಿಯ ಮತ್ತೊಂದು ಪಾಠ ಅಥವಾ ಮುದ್ರಣ ಎಂಬ ಅರಿವುಮಾಡುತ್ತಿರುವುದು ಪರವ್ಯಾಂತದ ಸಾಹಿತ್ಯಗಳ ಪರಿಚಯವಾಗುತ್ತ ಬಂದುದರಿಂದ Public memory is notoriously short—ಸಾರ್ವಜನಿಕರ ಸ್ಮರಣಶಕ್ತಿ ಬಹಳ ದುರ್ಬಲ ಎಂಬುದು ಕುಪ್ರಸಿದ್ಧ ಈ ತತ್ವವನ್ನು ನಂಬಿಸ್ವಾದೆಂಬರವನ್ನು ಪ್ರಚುರಗೊಳಿಸುವ ರಾಜಕಾರಣಿಗಳಂತೆಯೇ ಸ್ವಾಜೀನ ಅಭಿಜಾತವಾಜ್ಯಯದ ಪರಿಚಯ ಜನರ ಮನದಲ್ಲಿ ಇಂದು ಮುಸುಳಿಹೋಗಿದೆ ಎಂಬ ಗುಟ್ಟನ್ನರಿತುಕೊಂಡು ಹೊಸಾರು ಉತ್ತಮ ಆಂಗ್ಲೇಯ ಕೃತಿಗಳ ಅವಲೋಕನವು ಬಹುಸಂಖ್ಯ ವಿದ್ಯಾವಂತರಿಗಿಲ್ಲವೆಂಬ ಸುಮ್ಮನವನ್ನು ಮನದಂದು ಕೆಲ ಗದ್ಯ-ಪದ್ಯಕಾರರೂ ವಿಮರ್ಶಕಂ ಮಾನ್ಯರೂ ಉಬ್ಬಿಸಿ ಡಂಗುರ ಹೊಡೆಯುತ್ತಿರುವ ಪ್ರಚಾರೋಪದೇಶಮಾಲೆಯ ಕಾರ್ಯವಾದರೂ.

ಇಂದ್ರ ಜಾಲದಿಂದ ಬಂದ
ಸುಂದರಿಯರೊ ಎಂಬುದು
ಉಹೆ ಕೂಡ ಉಹಿಸಿಯೂ
ತನ್ನ ತಾನೆ ನಂಬದು

ಸ್ನೇಹದ ವೈವಿಧ್ಯ ಮತ್ತು ಆದರ್ಶ

ಲೇ- ಉಳುವಾನ ಗಂಗಾಧರ ಭಟ್ಟ

ಸ್ನೇಹದಲ್ಲಿಯೂ ಬಹಳ ವಿಧ. ಒಂದು ತೊಟ್ಟುಬೀಡಿಗೋ, ಒಂದು ದಮ್ಮು ಸಿಗರೇಟಿಗೊ, ಒಂದು ಗುಟುಕು ಕಾಫಿಗೋ ಆಗುವ ಸ್ನೇಹ, ಅಗ್ಗದಸ್ನೇಹ ಸಂಗಾತಿಗಳೆನ್ನಿಸಿಕೊಳ್ಳುವವರ ಹೆಗಲು ನೇಲೆ ಕೈಯಾಡಿಸಿಕೊಂಡು, ಹೋಟೇಲಿನ ಪ್ಲೇಟುಗಳನ್ನು ನುಂಗಿಕೊಂಡು, ಒನಪಿನಲ್ಲಿ ನಡೆದು, ವಾಕ್ಪ್ರಹಾರ ನೈಸ ಸ್ನೇಹ, ಒಪ್ಪದ ಸ್ನೇಹ ಸಮಾಜದಲ್ಲಿ ಸ್ಥಾನಮಾನ ಹಣ, ಅಧಿಕಾರ ಇರುವನರೊಡನೆ [illegible] ಸ್ನೇಹ ಒಗ್ಗದ ಸ್ನೇಹ. ಕಷ್ಟಕಾಲ ಬಂದಾಗ ಹಣ, ಅಧಿಕಾರ, ಸ್ಥಾನಮಾನಗಳೆಲ್ಲವೂ ಕೈಕಟ್ಟಿ ಹೋದಾಗ ಆಪತ್ತಿನ್ನಿಸಿಕೊಂಡಿದ್ದವರು ಮೂಗು ಮುರಿದು, ಸತ್ತ ಎತ್ತಿನ ಹೇನಿನಂತೆ ಗಾವುದ ಉದ್ದ ಸರಿದು ನಿಂತಾಗ ಕಷ್ಟಕ್ಕಾಗುವನೇ ಸ್ನೇಹಿತ ಎಂಬ ಮಾತು ಅಕ್ಷರಶ ಸತ್ಯವೆನಿಸುವುದು. ಜೀವನದೆಲ್ಲಿ ಸುಖದಃಖವೆಂಬುದು, ಹಗಲು ರಾತ್ರಿಗಳಂತೆ. ಸುಖದ ಸುಗ್ಗಿಯ ವೇಳೆ, ಕೊಡಲು ಕೈತುಂಬ ಇರುವಾಗ, ಬಾಲಬಡಿಯುತ್ತಾ ಒಟ್ಟಿಗೆ ಬರುವ ಸ್ನೇಹಿತರಿಪ್ಪೋ ಮಂದಿ ಇರಬಹುದು. ಆದರೆ ಕಷ್ಟಕಾಲ ಬಂದಾಗ, ದುಃಖದ ಹೊರತು ತನ್ನಲ್ಲಿ ಕೊಡಲೇನೂ ಉಳಿಯದಿದ್ದಾಗ ನಿಸ್ಪೃಹತೆಯಿಂದ ಬರುವಾತನೆ ಸ್ನೇಹ ಶುದ್ಧ ಸ್ನೇಹ.

ಸಮಾನ ಗುಣಧರ್ಮಗಳಿರುವಲ್ಲಿ ಮಾತ್ರ ಸ್ನೇಹ ನಿಲ್ಲುವುದು. ಭೋಗಿಗೂ, ತ್ಯಾಗಿಗೂ, ವಿರಾಗಿಗೂ, ಸ್ವಾರ್ಥಿಗೂ, ಕಾಮಿಗೂ ನಿಷ್ಕಾಮಿಗೂ.ದುರಾಚಾರಿಗೂ ಸದಾಚಾರಿಗೂ ಇರುವ ಸ್ನೇಹ ಎಣ್ಣೆ ಸೀಗೆಯ ಹಾಗೆ ಹಾಲು ನೀರಿನ ಸ್ನೇಹ ಏಂತಂತೆ ಹಾಲು ಉಪ್ಪಿಗೆ ಸ್ನೇಹವುಳಿದೀತೇ.

ಎರಡು ಹೃದಯಗಳನ್ನು ಸನಿಹಕ್ಕೆ ತರುವ ಸೂಕ್ಷ್ಮವೂ, ಅವ್ಯಕ್ತವೂ ಆದ ತಂತುವೇ ಸ್ನೇಹ. ಇದು ಶಿರೀಷ ಕುಸುಮದಂತೆ ಕೋಮಲವಾದುದು ಪುಷ್ಪ ಗಂಧದಂತೆ ಸೂಕ್ಷ್ಮವಾದದ್ದು. ಕದಿರೂ ವಜ್ರಕ ಸರಿಗೆಯಂತೆ ಶಕ್ತಿವುಳ್ಳದ್ದು. ಸ್ನೇಹವು, ಸ್ನೇಹಕ್ಕಾಗಿಯೇ ಹೊರತು ಬೇರೆನುದಕ್ಕೂ ಅಲ್ಲ. ಸ್ನೇಹದ ಆದರ್ಶವು ಅತ್ಯೋನ್ನತೆಯೇ ಹೊರತು ಬೇರೇನೂ ಇಲ್ಲ. ಜಗದ ಜನರೊಡನೆ ಬೆಳೆಸುವ ಅತ್ಮೀಯತೆಯೇ ಚಿರಸುಖದ ಸಾಧನವೆಂಬುದನ್ನು ಬಲ್ಲವರಿಗೆ ಹೇಳುವುದು ಬೇಡ. ನೇಹರ ಸ್ನೇಹದ ಸಹಕಾರಯುಕ್ತ ಜೀವನವು ಬೆಳೆಯದೆ ಲೌಕಿಕ ಸಂಸಾರವೂ ಸುಖಮಯವಾಗದು. ರಾಜಕೀಯ ಯೋಜನೆಗಳೂ ಕಾರ್ಯಗತವಾಗವು ಪಾರಮಾರ್ಥಿಕವಂತೂ ಇಲ್ಲವೇ ಇಲ್ಲ. ಅಖಂಡವೂ, ಅವ್ಯಕ್ತವೂ ಆದ ಪರಮಾತ್ಮಚೈತನ್ಯ , ಸಕಲ ಜೀವರಾಶಿಗಳಲ್ಲಿಯೂ ವ್ಯಕ್ತವಾಗಿ ಬಂದಿದೆಯೆನ್ನುವುದು ಉಪನಿಷತ್ತಾಲಿಂದಲೇ ರುಜುವಾದ ವಿಷಯ. ಹೀಗೆ, ಎಲ್ಲರನ್ನೂ ಪ್ರೀತಿಸಲು ಬೇಕಾದ ಪುನೋಭಾವವನ್ನು ಬೆಳಸದ ಮನುಷ್ಯನು ಪಾರಮಾರ್ಥಿಕದ ತುಟ್ಟತುದಿಯನ್ನು ಹೇಗೆ ತಾನೇ ಏರಬಲ್ಲನು!

ಮುಖ್ಯವಾಗಿ ಮೋಹಯುಕ್ತವಾದ ತಾತ್ಕಾಲಿಕ ಸ್ನೇಹಕ್ಕೂ, ಈ ಮಧುರ ಪ್ರೇಮಕ್ಕೂ ಬಹಳ ವ್ಯತ್ಯಾಸವುಂಟು. ಒಂದು ಅಸ್ಥಿರವಾದರೆ ಇನ್ನೊಂದು ಸ್ಥಿರ ಒಂದು ನಶ್ವರವಾದರೆ ಮತ್ತೊಂದು ಶಾಶ್ವತ. ಇಂದ್ರಿಯನ ಆಕರ್ಷಣೆಯಿಂದುಂಟಾಗುವ ಸ್ನೇಹವು, ರೊಗರುಜಿನಗಳಿಂದ ದೇಹವು ಸುಕ್ಕುಗಟ್ಟಿದಾಗ, ಇಲ್ಲವೇ ತಾರುಣ್ಯವು ಕಳೆದು ವೃದ್ಧಾಪ್ಯವು ಬಂದಾಗ ತಾನೇ ಶಿಥಿಲಗೊಂಡು, ಅಸ್ತಿತ್ವಕಳೆದುಕೊಳ್ಳುತ್ತದೆ. ಗುಣದ ಆಕರ್ಷಣೆಯಿಂದುಂಟಾದ ಅಂತರಂಗ ಸ್ನೇಹವು, ಸಮಯ ಕಳೆದಂತೆಯೇ ಬಲಿಯುತ್ತಾ ಬಂದು, ಅವ್ಯಕ್ತವಾದ ಆನಂದವನ್ನು ಕೊಡುವುದು. ಸ್ನೇಹವು ಚಿರಂತನವಾಗಿ ಬಾಳಿ, ಬಾಳನೆ ಮಧುರ ಸವಿಯನ್ನು ಸವಿಯಬೇಕಿದ್ದರೆ, ಸ್ನೇಹದ ಕೆಲವು ಮೂಲಭೂತವಾದ ಗುಣಗಳನ್ನು ರಕ್ತಗತವಾಗಿ ಮಾಡಿಕೊಳ್ಳಲೇಬೇಕು.

ಶುದ್ಧ ಪ್ರೇಮವನ್ನು ಬೆಳೆಸಲು ಅರ್ಥಿಕವಾದ ಖರ್ಚುವೆಚ್ಚ ಬೇಡ. ಮಾನಸಿಕವಾದ ಇಚ್ಛೆ ಮಾತ್ರ ಬೇಕು ತನಗೆ ಸ್ವಲ್ಪ ಕಷ್ಟವಾದರೂ ತೊಂದರೆಯಿಲ್ಲ. ಇತರರೂ ಸುಖದಿಂದ್ದರೆ ಸಾಕು ಎಂಬ ಮನೋಭಾವಬೇಕು. ತ್ಯಾಗವೆ ತಳಹದಿಯಲ್ಲಿ ನಿಂತ ಸ್ನೇಹವೇ ಸ್ಥಿರವಾಗಿ ನಿಲ್ಲಬಲ್ಲುದು. ಸ್ನೇಹಿತನಿಗೆ ಕಷ್ಟ ಬಂದಾಗ, ಆಪತ್ತಿನಲ್ಲಿರುವಾಗ, ತನ್ನಿಂದಾಗುವ ಎಲ್ಲಾ ಸೇವೆಗಳನ್ನೂ ಮಾಡುವುದು ಹಾಗೂ ಸ್ನೇಹಿತನ ಮನೋಗತವರಿತುಕೊಂಡು, ಅವನ ಅವಶ್ಯಕತೆಗಳನ್ನು ಪೂರೈಸಿಕೊಡುವುದು. ಮಾತ್ರವಲ್ಲ ತಾನಾಸ್ವತ ಎನನ್ನೂ ನಿರೀಕ್ಷಿಸದಿರುವುದು. ತಾನು ಮಾಡಿದ ಉಪಕಾರಕ್ಕಾಗಿ ಪ್ರತ್ಯುಪಕಾರವನ್ನು ಬಯಸಿದಾಗ ಸ್ನೇಹದ ವಿಕಾಸವು ಮಂದವಾಗಿ ಅದರ ಬೆಳವಣಿಗೆಯು ಕುಂಠಿತವಾಗುವುದು. ಕೊನೆಗೆ ಇಂದು ಸ್ನೇಹದಲ್ಲಿದ್ದವರು, ನಾಳೆ ಒಬ್ಬರಿನ್ನೊಬ್ಬರನ್ನು ದ್ವೇಷಿಸಿ ಕತ್ತಿ ಕಟ್ಟುವ ಪ್ರಸಂಗ ಬಂದರೂ ಬರಬಹುದು. ನಿರಪೇಕ್ಷ ಬುದ್ಧಿ ಇರುವಲ್ಲೂ ಸ್ನೇಹವು ಸಾರ್ಥಕ ಪರಿಪೂರ್ಣವಾಗುವುದು.

ಸ್ನೇಹದ ಎಳೆಯು ಬಹು ಸೂಕ್ಷ್ಮವಾದುದು. ಒಂದು ಸಣ್ಣ ಮಚ್ಚೆಯಿಂದ ಮುಖವೆ ಅಂದಗೆಡುವಂತೆ, ಅಜಾಗರೂಕತೆಯಿಂದ ಮಾಡುವ ಅವಿವೇಕದ ವರ್ತನೆಯಿಂದ ಸ್ನೇಹವು ಕೆಡುವುದು. ಒಬ್ಬ ಮಿತ್ರನಿಂದ ಯಾವುದಾದರೊಂದು ತಪ್ಪು ಘಟಿಸಿದಲ್ಲಿ, ಅವನನ್ನು ಮೃದುಮಧುರವಾದ ಮಾತುಗಳಿಂದ ದಾರಿಗೆ ಹಚ್ಚಬೇಕೇ ಹೊರತು ಸಾಮಾನ್ಯರಂತೆ ಗೇಲಿಮಾಡುವುದಲ್ಲ. ತಮಾಷೆಯಿಂದ ವೈಷಮ್ಯವುಂಟಾಗಬಹುದೇ ವಿನಾ ಸ್ನೇಹ ವೃದ್ಧಿಯಾಗದು.

ಸ್ನೇಹಿತನು ಅತ್ಮೀಯತೆಯಿಂದ, ವಿಶ್ವಾಸವಿದ್ದಾಗ ಹೇಳಿದ ಗೌಪ್ಯ ಮಾತುಗಳನ್ನು ಒಂದೊಮ್ಮೆಗೆ ವೈಷಮ್ಯವುಂಟಾದ ಮಾತ್ರಕ್ಕೇ ಪ್ರಕಟಿಗೊಳಿಸುವುದು ಸರಿಯಲ್ಲ. ಇನೆ ಪರಸ್ಪರರ ಹೃದಯಗಳ ಸೇರುವ ಸಂದರ್ಭ, ಈ ಪ್ರಕಟನೆಯು ಬಹಳ ವಿಘ್ನಕಾರಿಯಾದೀತು.

ಯಾರದೂ ತಪ್ಪಿಲ್ಲ, ಎಲ್ಲರದೂ ಕ್ಷಮ್ಯ. ತಿಳಿಯದೆ ಮಾಡಿದ ತಪ್ಪು,

(ಮುಂದೆನೆ ಪುಟಕ್ಕೆ)

ಸ್ನೇಹದ ವೈವಿಧ್ಯ ಮತ್ತು ಆದರ್ಶ

(ಹಿಂದಿನಪುಟ ದಿಂದ)

ಮನಸ್ಸಿಗೆ ಹಚ್ಚಿಕೊಳ್ಳತಕ್ಕುದಲ್ಲ. ತಪ್ಪಿ ತಸ್ಥನಂತಹ ಪರಿಸ್ಥಿತಿಯಲ್ಲಿದ್ದರೆ, ಎಷ್ಟೊ ತಪ್ಪು ಮಾಡುತ್ತಿವೆ. ಮಕ್ಕಳು ತಪ್ಪುಗೈದರೂ, ಹಿರಿಯರು ಪ್ರೇಮ ಇಡುವಂತೆ, ನಾವೂ ಸ್ನೇಹವನ್ನೇ ಬೆಳೆಸಬೇಕು. ತನ್ನದೇನಾದರೂ ತಪ್ಪಿದೆಯೇ ಎಂಬುದನ್ನು ಅಂತರಾವಲೋಕನದಿಂದ ನೋಡುತ್ತಿರಬೇಕು.

ವಸುಧೈವ ಕುಟುಂಬಕಮ್ ಎಂಬ ವಿಶಾಲ ಮನೋಭಾವದಿಂದ ವ್ಯವಹರಿಸುವುದೇ ಸೂಕ್ತವಾದರೂ, ಪ್ರಾರಂಭದಲ್ಲಿ ಪ್ರಾಪಂಚಿಕವಾದ ಕೆಲವು ಅಡೆತಡೆಗಳು ಬಂದರೂ ಬರಬಹುದು. ಆದಕಾರಣ ಪ್ರಾರಂಭದಲ್ಲಿ ತಾಯಿತಂದೆಯವರೇ ಮೊದಲ್ಗೊಂಡ ಗುರುಜನ, ಅರಣ್ಣನನ್ನ ತಮ್ಮಂದಿರನ್ನೂ, ಅಕ್ಕತಂಗಿಯರನ್ನೂ ಸೀಮಾತೀತವಾಗಿ ಪ್ರೀತಿಸಬಹುದು. ಇವರು ನಮ್ಮ ಪ್ರೀತಿಯನ್ನು ದುರುಪಯೋಗಪಡಿಸಿಯಾರೆಂಬ ಭಯವಿಲ್ಲ. ಪ್ರತಿಯಾಗಿ ಅವರೂ ನಮ್ಮನ್ನು ಹೆಚ್ಚುಹೆಚ್ಚಾಗಿ ಪ್ರೀತಿಸತೊಡಗುವುದರಿಂದ, ಮನೆಯಲ್ಲಿ ಸುಖಶಾಂತಿಯೇ ನೆಲೆಯಾಡುವುದು.

ತನ್ನವರು ತನ್ನದು ಎಂಬ ಆತ್ಮೀಯತೆಯೇ ಸ್ನೇಹದ ಮೂಲ. ಇಷ್ಟೇ ಜನರು ತನ್ನವರೆಂದು ಮಿತಿಯಿಡುವುದೇ ಇಡೀ ಮಾನವ ಸಮಾಜವೇ ನನ್ನದು ಇವರೆಲ್ಲರೂ ನನ್ನವರೇ ಎಂದು ಪ್ರೀತಿಸ ಹೊರಟಾಗ, ದೈವತ್ವದ ಒಂದು ಪೆಟ್ಟಿಲನ್ನು ಹತ್ತಿದಂತೆಯೇ. ನಮ್ಮ ಪ್ರೀತಿಯು, ಕ್ಷಣಿಕವೂ, ಕಪಟಯುಕ್ತವೂ ಅಸ್ಥಿರವೂ ಆಗದೆ, ಸ್ಥಿರವೂ, ಶಾಶ್ವತವೂ ಸತ್ಯವೂ ಆಗಿರುವಂತೆ ನೋಡುವುದು ಮುಖ್ಯ.

ಸಕ್ಕರೆ ಕಾರ್ಖಾನೆ ಯಂತ್ರೋಪಕರಣಗಳ ತಯಾರಿಕೆ

ಭಾರತ ಸರ್ಕಾರದವರು, ಸಕ್ಕರೆ ಕಾರ್ಖಾನೆಗಳ ಯಂತ್ರೋಪಕರಣಗಳ ತಯಾರಿಕೆಗಾಗಿ ನಾಲ್ಕು ಸಂಸ್ಥೆಗಳ ಕಾರ್ಯಕ್ರಮವನ್ನು ಮಂಜೂರು ಮಾಡಲು ನಿರ್ಧರಿಸಿರುವರು. ಈ ಸಂಸ್ಥೆಗಳು ಸದ್ಯದಲ್ಲಿ ಉತ್ಪಾದನೆಯನ್ನು ಆರಂಭಿಸಿ 1961ರ ವೇಳೆ ಪೂರ್ಣ ಸಾಮರ್ಥ್ಯವನ್ನು ಸಾಧಿಸುವುದೆಂದು ನಿರೀಕ್ಷಿಸಲಾಗಿದೆ. ಆ ವೇಳೆಗೆ ಈ ಸಂಸ್ಥೆಗಳು ಒಂದು ವರ್ಷಕ್ಕೆ 8 ಸಕ್ಕರೆ ಕಾರ್ಖಾನೆಗಳ ಯಂತ್ರೋಪಕರಣಗಳನ್ನು ತಯಾರಿಸುವ ಸಾಮರ್ಥ್ಯವನ್ನು ಹೊಂದಿರುವವು. ಈಗ ಎರಡು ಸಂಸ್ಥೆಗಳು ಮಾತ್ರ ಸಕ್ಕರೆ ಕಾರ್ಖಾನೆಯ ಯಂತ್ರೋಪಕರಣಗಳನ್ನು ತಯಾರಿಸುತ್ತಿವೆ. ಆದರೆ ಸಕ್ಕರೆ ಕಾರ್ಖಾನೆಯ ಒಟ್ಟು ಮೌಲ್ಯದಲ್ಲಿ ನೂರಕ್ಕೆ 45 ಭಾಗದ ಸಾಮಾನುಗಳ ಎರಡು ಮುಖ್ಯ ಭಾಗಗಳು ತಯಾರಾಗುತ್ತಿಲ್ಲ.

ದ್ವಿತೀಯ ಯೋಜನೆಯ ಪ್ರಕಾರ, ಸಕ್ಕರೆಯ ಉತ್ಪಾದನೆಯು ಈಗಿರುವ 16—7 ಲಕ್ಷ ಟನ್ನುಗಳ ಮಟ್ಟದಿಂದ 22,5 ಲಕ್ಷ ಟನ್ನುಗಳಿಗೆ ಏರುವ ನಿರೀಕ್ಷೆಯಿದೆ. ಸುಮಾರು 30 ಹೊಸ ಸಕ್ಕರೆ ಕಾರ್ಖಾನೆಗಳು ದೇಶದಲ್ಲಿ ಸ್ಥಾಪನೆಯಾಗುವುವು.

ಅಂಬರ್ ಚರಕದ ಪ್ರಚಾರಕ್ಕೆ ಕಾರ್ಯಕ್ರಮ

1956-57 ರ ಅಂಬರ ಚರಕದ ತಾತ್ಕಾಲಿಕ ಕಾರ್ಯಕ್ರಮಕ್ಕಾಗಿ ಭಾರತ ಸರಕಾರದವರು ಸುಮಾರು 70 ಲಕ್ಷ ರೂಗಳನ್ನು ಮಂಜೂರು ಮಾಡಿರುವರು. ಈ ಕಾರ್ಯಕ್ರಮಗಳಲ್ಲಿ 10,000 ಅಂಬರ ಚರಕದಸೆಟ್‌ಗಳ ತಯಾರಿಕೆಯೂ ಸೇರಿದೆ ಇದರಲ್ಲಿ ಅಂಬರ ಚರಕದ ಪ್ರಾಯೋಜನೆಯ ಪ್ರಕಾರ ಈ ವರ್ಷದ ಪ್ರಾರಂಭದಲ್ಲಿ ತೆರೆಯಲಾದ, 15 ವಿದ್ಯಾಲಯಗಳು (ತರಬೇತಿ ಕೇಂದ್ರಗಳು,) 6 ಕಾರ್ಯನಿರ್ವಹಣೆ ಕಚೇರಿಗಳು ಮತ್ತು 100 ಪರಿಶ್ರಮಾಲಯಗಳು [ಉತ್ಪಾದನೆ ಹಾಗೂ ತರಬೇತಿ ಕೇಂದ್ರಗಳನ್ನು] ಒಂದು ವರ್ಷಕಾಲ ಮುಂದುವರಿಸಲಾಗುವುದು. ಮತ್ತೆ 100 ಉತ್ಪಾದನೆ ಹಾಗೂ ತರಬೇತಿ ಕೇಂದ್ರಗಳನ್ನು ಒಂದು ವರ್ಷಕಾಲ ಪ್ರಾರಂಭಿಸಲಾಗುವುದು. ಒಂದುವರ್ಷಕಾಲದಲ್ಲಿ 15 ಕೇಂದ್ರಗಳಲ್ಲಿ 1500 ಮಂದಿ ಶಿಕ್ಷಕರು ಮತ್ತು 800 ಮಂದಿ ಬಡಿಗಿಗಳು ತರಬೇತಿ ಪಡೆಯುವರು. 200 ಉತ್ಪಾದನೆಹಾಗೂ ತರಬೇತಿ ಕೇಂದ್ರಗಳಲ್ಲಿ ಪ್ರತಿಯೊಂದರಲ್ಲಿಯೂ 300 ಮಂದಿ ಅಂಬರ ಚರಕದ ಕೆಲಸಗಾರರು ಎರಡು ತಿಂಗಳ ಕಾಲ ತರಬೇತಿ ಪಡೆಯುವರು. ನಂತರ ಇವರನ್ನು ಉತ್ಪಾದನಾ ಕಾರ್ಯದಲ್ಲಿ ತೊಡಗಿಸಲಾಗುವುದು.

ಮಿಡಿತೆಗಳಿಗೆ ಮಾರಕಗಾಳ ವಾದ್ಯ ಸಂಗೀತ ಪ್ರಯೋಗದಿಂದ

ಮಿಡಿತೆ ದಂಡುಗಳನ್ನು ಯಶಸ್ವಿಯಾಗಿ ಪ್ರತಿಬಂಧಿಸಲು ವಾದ್ಯಗಾಯನವನ್ನು ಉಪಯೋಗಿಸುವ ಸಾಧ್ಯತೆಯನ್ನು ಸ್ಪೈಂಡ್ ವಿಜ್ಞಾನಿಗಳು ಇತ್ತೀಚಿಗೆ ವಿಚಾರಿಸುತ್ತಾರೆಂದು ನಾಫೆನ್ ಸುದ್ದಿ ಸಂಸ್ಥೆಯಿಂದ ವರದಿ ಬಂದಿದೆ. ರಾಷ್ಟ್ರೀಯ ಕೃಷಿಕಾರ್ಮಿಕ ಸಂಶೋಧನಾಲಯದ ಧ್ವನಿವೈಜ್ಞಾನಿಕ ಶಾಸ್ತ್ರ (ಎಕೂಸ್ಟಿಕ್ ಫಿಸಿಯೋಲೊಜಿ) ದ ಪ್ರಯೋಗ ಶಾಲೆಯಲ್ಲಿ ರೇಟರಿಯು ಪ್ರಾಣಿಗಳ ಮೇಲೆ ಸ್ವರಗಳ ಪರಿಣಾಮಗಳನ್ನು ಕಂಡು ಹಿಡಿಯುವುದರಲ್ಲಿ ಉತ್ತಮ ಪ್ರಗತಿ ಹೊಂದಿದೆ. ಕೆಲವು ತೀವ್ರ ಕೊಳಲು ವಾದ್ಯದಂಥ ಸ್ವರಗಳು, ಸೊಳ್ಳೆ [ನೆಟ್] ಯಿಂದ ತಿಮಿಂಗಿಲ ಕೂಡಿ, ಬಹುತೇಕ ಎಲ್ಲ ತರಹದ ಪ್ರಾಣಿಗಳಿಗೆ, ಆಕರ್ಷಕ ಅಥವಾ ಅಪಹಸ್ಯವು ಗಬ್ಬಲ್ಲವೆಂದು ಈ ವಿಜ್ಞಾನಿಗಳು ಹಿಂದೆಯೇ ಸಿದ್ಧಪಡಿಸಿದ್ದಾರೆ. ಈ ಸಂಗತಿಯನ್ನು ಜನರ ಮುಂದಿಡಲಿಕ್ಕೆ ಪ್ರಯೋಗಶಾಲೆಯ ಮುಖ್ಯಾಧಿಕಾರಿಯು ಇತ್ತಲಾಗಿ ಪೆಂಸಿನಲ್ಲಿಯೆ ಒಂದು ವಿದ್ಯಾಲಯದಲ್ಲಿ ಚಲನಚಿತ್ರವೊಂದನ್ನು ತೋರಿಸಿದನು. ಇದರಲ್ಲಿ ಸಂಶೋಧಕ ಕಾರ್ಯಕರ್ತನೊಬ್ಬನು ತಿರಿದು ಮೂರು ಸಲತೀವ್ರವಾಗಿ ಸಿಳ್ಳುಹೊಡೆದಾಗ (ವ್ಹಿಸ್ಲ್) ಒಂದು ಮಿಡಿತೆಯು ನೆಟ್ಟಗೆ ಅವನ ಮುಖದ ಮೇಲೆ ಹಾರಿ ಬಂದಿತು ಕೂಡಲೇ ಅವನು ಅದನ್ನು ಸುಲಭವಾಗಿ ಹಿಡಿದನು ಮಿಡಿತೆಗಳಿಗೆ ಆಕರ್ಷಕವಾದ ಸ್ವರವನ್ನು ಅವನು ಹೊರಡಿಸಿದ್ದನೆಂದು ಇದರಿಂದ ಸ್ಪಷ್ಟವಾಯಿತು. ಕಪಣಮಿದ್ಯುತ್ತಣ (ಇಲೆಕ್ಟ್ರಾನಿಕ್) ಕ್ರಮದಿಂದ ಕೊಲ್ಲಲಿಕ್ಕೆ ಸುಲಭವಾಗುವಂತೆ ವಿಸ್ತಾರವಾದ ಕ್ಷೇತ್ರದ ಮೇಲೆ ರಾಶಿ ರಾಶಿ ಮಿಡಿತೆಗಳನ್ನು ಆಕರ್ಷಿಸಲಿಕ್ಕೆ ಬೇಕಾದ ಸ್ವರವನ್ನು ಹೊರಡಿಸುವ ಯಂತ್ರದ ತಯಾರಿಕೆಯು ಕ್ರಮೇಣ ಸಾಧ್ಯವಾದೀತೆಂದು ಈ ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ.

(1) ಭಾರತದಲ್ಲಿ ಮೀನು ಪಾಳನೆಯ ಅಭಿವೃದ್ಧಿಗಾಗಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ 12 ಕೋಟಿ ರೂಗಳನ್ನು ಒದಗಿಸಲಾಗಿದೆ.

ಹಿಂದೂ ಉತ್ತರಾಧಿಕಾರ ಕಾನೂನು

(ಹಿಂದೂ ಉತ್ತರಾಧಿಕಾರ ಕಾನೂನನ್ನು ಕ್ರೋಢೀಕರಿಸುವ ಪ್ರಶ್ನೆಯು 1941 ರಿಂದಲೂ ಸರ್ಕಾರವವರ ಗಮನವನ್ನು ಸೆಳೆಯುತ್ತಿದೆ.)

ಹಿಂದೂಗಳ ವಿವಾಹ ಹಾಗೂ ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ 1955 ರ ಹಿಂದೂ ವಿವಾಹ ಕಾನೂನು 1955 ಮೇ 18 ರಂದು ರಾಷ್ಟ್ರಪತಿಗಳ ಸಹಿ ಹಾಕಿ ಕಾನೂನಾಯಿತು. 1956 ರ ಹಿಂದೂ ಉತ್ತರಾಧಿಕಾರ ಮಸೂದೆಯು 1956 ರ ಜೂನ್ 17 ರಂದು ಕಾನೂನಾಯಿತು.

ಯೋಜನೆ ಪದ್ಧತಿಗಳು

ಹಿಂದೂ ನ್ಯಾಯಶಾಸ್ತ್ರದಲ್ಲಿ ಉತ್ತರಾಧಿಕಾರವು ಅತಿಮುಖ್ಯವಾದ ಹಾಗೂ ಅತಿ ಕ್ಲಿಷ್ಟವಾದ ಭಾಗವಾಗಿದೆ. ಹಿಂದೂ ನ್ಯಾಯ ಶಾಸ್ತ್ರದಲ್ಲಿ ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ಎರಡು ಸಾಮಾನ್ಯ ಪದ್ಧತಿಗಳಿವೆ. ಒಂದು ಮಿತಾಕ್ಷರ ಪದ್ಧತಿ ಮತ್ತೊಂದು ದಾಯಭಾಗ ಪದ್ಧತಿ. ದಾಯಭಾಗ ಪದ್ಧತಿಯು ಬಂಗಾಲದಲ್ಲಿ ಆಚರಣೆಯಲ್ಲಿದೆ. ಮಿತಾಕ್ಷರ ಪದ್ಧತಿಯು ಭಾರತದ ಉಳಿದ ಭಾಗಗಳಲ್ಲಿ ಅನುಸರಣೆಯಲ್ಲಿದೆ. ಇದರ ಜೊತೆಗೆ ಭಾರತದ ನೈರುತ್ಯ ಕರಾವಳಿ ಭಾಗದಲ್ಲಿ ಮರುಪಕ್ಕತ್ಥಾಯಂ ಮತ್ತು ಅಳಿಯ ಸಂತಾನ ಉತ್ತರಾಧಿಕಾರ ಪದ್ಧತಿಯು ಜಾರಿಯಲ್ಲಿದೆ.

ಮಿತಾಕ್ಷರ ಪದ್ಧತಿಯು ಎರಡು ಆಸ್ತಿಪಾಸ್ತಿ ಸಂಪ್ರದಾಯಗಳನ್ನು ಅಂಗೀಕರಿಸಿರುವುದು ಒಂದು ವಿವಿಧಕ್ಕಾಗಭವದಲ್ಲಿ ಮಿಕ್ಕವರು ತೀರಿಕೊಂಡ ಮೇಲೆ ಉಳಿದವನೇ ಎಲ್ಲಾ ಆಸ್ತಿಯ ಹಕ್ಕುದಾರನಾಗುವುದು ಮತ್ತೊಂದು ಉತ್ತರಾಧಿಕಾರ. ಮೊದಲನೆಯದನ್ನು ಅವಿಭಕ್ತ ಕುಟುಂಬದ ಆಸ್ತಿಪಾಸ್ತಿಗಳಿಗೆ ಸಂಬಂಧಿಸುವುದು. ಎರಡನೆಯದು ಸ್ವಯಾರ್ಜಿತ ಆಸ್ತಿಪಾಸ್ತಿಗಳಿಗೆ ಸಂಬಂಧಿಸುವುದು.

ರಾಯ ಭಾಗವು ಉತ್ತರಾಧಿಕಾರ ಆಸ್ತಿ ಸ್ವಾಸ್ತ್ಯ ವಿಧಾನವನ್ನು ಮಾತ್ರ ಅಂಗೀಕರಿಸುವುದು.

ಮಿತಾಕ್ಷರ ನ್ಯಾಯ ಶಾಸ್ತ್ರದಲ್ಲಿ ಮಿಥಿಲಾ, ಮುಂಬಯಿ, ಕಾಶಿ, ಮದ್ರಾಸು ಮತ್ತು ಮಯೂಖ ಸಂಪ್ರದಾಯಗಳಿವೆ. ಈ ವಿಭಾಗಗಳಲ್ಲಿ ಸ್ವಯಾರ್ಜಿತ ಆಸ್ತಿಯ ಬಗ್ಗೆ ಉತ್ತರಾಧಿಕಾರದ ವರ್ಗವು ಬೇರೆ ಬೇರೆಯಾಗಿರುವುದು. ಕೆಲವು ವಿಶೇಷ ಸಂಧರ್ಭಗಳ ಹೊರತಾಗಿ ಯಾವ ಪದ್ಧತಿಯಲ್ಲಿಯೇ ಆಗಲಿ ಹೆಣ್ಣು ಮಕ್ಕಳಿಗೆ ಆಸ್ತಿ ದೊರಕುವುದಿಲ್ಲ. ಮಿತಾಕ್ಷರ ಸಹಭಾಗಿತ್ವದಲ್ಲಿ ಮಹಿಳೆಯು ದಾಯಾದಿಯಾಗುವುದಿಲ್ಲ. ಪುರುಷ ದಾಯಾದಿಯ ಮರಣಾನಂತರ ಆಸ್ತಿಯು ಸಹಭಾಗಿತ್ವದಲ್ಲಿ ಉಳಿದ ಪುರುಷರಿಗೆ ಬರುವುದು.

ಮಿತ ಹಕ್ಕುಗಳು

ಮಿತ ಸಂಪ್ರದಾಯ ಪ್ರಸಂಗಗಳಲ್ಲಿ ಮಹಿಳೆಯರು ವಿಧವೆಯಾಗಿದ್ದಾಗ ಆಸ್ತಿಯಲ್ಲಿ ಪಾಲುಪಡೆಯುವಅವಕಾಶವುಂಟು ಆದರೆ ಅವರಿಗೆ ಆಜೀವ ಪರ್ಯಂತ ಆಸ್ತಿಯನ್ನು ಅನುಭವಿಸಲು ಮಾತ್ರ ಹಕ್ಕಿರುವುದು. ಇವರ ಮರಣಾನಂತರ, ಆಸ್ತಿಯು ಪುನಃ ಕಟ್ಟುಕಡೆಯ ಬಾಧ್ಯಸ್ಥರಿಗೆ ಹೋಗುವುದು. ಮಿತಹಕ್ಕುದಾರಿಕೆಯು ಅನೇಕ ಪ್ರಸಂಗಗಳಲ್ಲಿ ಕೋರ್ಟು ವ್ಯವಹಾರಗಳಿಗೆ ಒಯ್ದಿದೆ.

ಸ್ತ್ರೀಧನ ಆಸ್ತಿಯ ವಿಷಯದಲ್ಲಿ ಮಾತ್ರ ಮಹಿಳೆಗೆ ಪೂರ್ಣ ಹಕ್ಕಿರುವುದು ಸ್ತ್ರೀಧನ ಆಸ್ತಿಯ ವಿಷಯದಲ್ಲಿ ಉತ್ತರಾಧಿಕಾರದ ವರ್ಗವು ಎಲ್ಲ ಕಡೆಯಲ್ಲಿಯು ಏಕರೀತಿಯಲ್ಲಿಲ್ಲ.

ಭಾರತದ ನೈರುತ್ಯ ಕರಾವಳಿ ಪ್ರದೇಶದಲ್ಲಿ ಮಾತೃಯಾಜಮಾನ್ಯ ಪದ್ಧತಿ ಇರುವುದು. ಈ ಪದ್ಧತಿಯನ್ನು ಬಹು ಮಟ್ಟಿಗೆ ಕ್ರೋಢೀಕರಿಸಲಾಗಿದೆ. ಇದು ಭಾರತದ ಉಳಿದ ಭಾಗಗಳಲ್ಲಿಲ್ಲದ ಪದ್ಧತಿಯಾಗಿರುವುದು. ಈ ಪದ್ಧತಿಯು ಮಹಿಳೆಯರಿಗೂ ಮತ್ತು ಪುರುಷರಿಗೂ ಸಮಾನ ಹಕ್ಕುಗಳನ್ನು ನೀಡುವುದು. ಹೆಣ್ಣು ಮಕ್ಕಳು ಗಂಡುಮಕ್ಕಳೊಂದಿಗೆ ಆಸ್ತಿಯಲ್ಲಿ ಸಮಭಾಗ ಪಡೆಯುವರು.

ಏಕರೀತಿಯ ಹಕ್ಕು

1956 ಹಿಂದೂ ಉತ್ತರಾಧಿಕಾರ ಕಾನೂನು ಇಡೀ ದೇಶಕ್ಕೆ ಏಕರೀತಿಯ ಕಾನೂನನ್ನು ರೂಪಿಸುವ ಗುರಿಯನ್ನು ಹೊಂದಿದೆ. ಅಂತಿಮ ಇಚ್ಛಾ ಪತ್ರ ಬರೆಯದೇ ಮರಣ ಹೊಂದಿದವರ ಆಸ್ತಿಪಾಸ್ತಿಯ ವಿಷಯದಲ್ಲಿ ಉತ್ತರಾಧಿಕಾರ ಸಂಬಂಧದ ಕಾನೂನನ್ನು ಕೊಸಿಸುವುದು 1956 ರ ಹಿಂದೂ ಉತ್ತರಾಧಿಕಾರ ಕಾನೂನಿನ ಉದ್ದೇಶವಾಗಿ. ಉತ್ತರಾಧಿಕಾರಿಗಳ ಪಟ್ಟಿಯನ್ನು ಸಮನ್ವಯಗೊಳಿಸಬೇಕಾಗುವುದು.

1956 ಹಿಂದೂ ಉತ್ತರಾಧಿಕಾರ ಕಾನೂನು ಎಲ್ಲ ಹಿಂದೂಗಳಿಗೂ ಅನ್ವಯಿಸುವುದು.ಹಿಂದೂ, ಬೌದ್ಧ, ಜೈನರ ಅಥವಾ ಸಿಖ್ ಮತಾವಲಂಬಿಗಳಿಗೂ ಮುಸ್ಲಿಂ, ಕ್ರೈಸ್ತರಿಗೆ, ಪಾರ್ಸಿ ಅಥವಾ ಯಹೂದಿ ಮತಾವಲಂಬಿಗಳಲ್ಲದವರಿಗೂ ಈ ಕಾನೂನು ಅನ್ವಯಿಸುವುದು.

ಕಾನೂನಿನ ವ್ಯಾಪ್ತಿ

ಅಂತಿಮ ಇಚ್ಛಾಪತ್ರ ಬರೆಯದೇ ಮರಣ ಹೊಂದಿದ ಹಿಂದೂ ಪುರುಷ ಅಥವಾ ಹಿಂದೂ ಮಹಿಳೆಯ ವಿಷಯದಲ್ಲಿ ಎಲ್ಲ ಆಸ್ತಿಪಾಸ್ತಿಗಳು ಉತ್ತರಾಧಿಕಾರವನ್ನು ಈ 5 ಕಾನೂನು ಕ್ರಮ ಬದ್ಧಗೊಳಿಸುವುದು. ಆದರೆ ಕೆಲವು ವ್ಯತಿರೇಧಗಳಿಗೆ ಇವುಗಳ ವಿಷಯದಲ್ಲಿ ಕಾನೂನು ಅನ್ವಯವಾಗುವುದಿಲ್ಲ. ಇವಾವುವೆಂದರೆ:-

ವಿಶೇಷಾಂಶಗಳು

(1) ವಿಶೇಷ ವಿವಾಹ ಕಾನೂನಿನ ಪ್ರಕಾರ ಇಬ್ಬರು ಹಿಂದೂಗಳು ವಿವಾಹವಾದಲ್ಲಿ, ಅಂತಹವರ ಆಸ್ತಿಪಾಸ್ತಿಯ ಹಾಗೂ ಅಂತಹ ವಿವಾಹದ ಪರಿಣಾಮವಾಗಿ ಹುಟ್ಟುವ ಮಕ್ಕಳ ಆಸ್ತಿಪಾಸ್ತಿಯು ಉತ್ತರಾಧಿಕಾರವನ್ನು ಭಾರತೀಯ ಉತ್ತರಾಧಿಕಾರ ಕಾನೂನಿನಿಂದ ಕ್ರಮಬದ್ಧಗೊಳಿಸಲಾಗುವುದು.

(2) ಭಾರತ ಸರಕಾರದೊಡನೆ ಹಿಂದಿನ ಭಾರತೀಯ ಸಂಸ್ಥಾನದ ಅರಸರು ಮಾಡಿಕೊಂಡ ಒಪ್ಪಂದದ ನಿಯಮಾವಳಿಗಳಿಗನುಸಾರವಾಗಿ ಉತ್ತರಾಧಿಕಾರಿಗೆ ಬರುವ ಆಸ್ತಿಯ ವಿಷಯದಲ್ಲಿ ಅಥವಾ ಈ ಕಾನೂನು ಅನುಷ್ಠಾನಕ್ಕೆ ಬರುವುದಕ್ಕೆ ಪೂರ್ವದಲ್ಲಿ ಉತ್ತರಾಧಿಕಾರಿಗೆ ಬರುವ ಆಸ್ತಿಯ ವಿಷಯದಲ್ಲಿ ಮಿತ ಸಂಖ್ಯೆಯ ಪ್ರಕರಣಗಳಲ್ಲಿ ಜ್ಯೇಷ್ಠಾಧಿಕಾರ ನಿಯಮಕ್ಕೆ ಮನ್ನಣೆ ಕೊಡಲಾಗಿರುವುದು.

(3) ಭಾರತದೊಂದಿಗೆ ಕೊಚ್ಚಿಹೋದ ಸಂಸ್ಥಾನವು ವಿಲಯನಗೊಳ್ಳುವುದಕ್ಕೆ

(ಮುಂದೀನೆ ಪುಟಕ್ಕೆ)

ಹಿಂದೂ ಉತ್ತರಾಧಿಕಾರ ಕಾನೂನು

(ಹಿಂದಿನ ಪುಟದಿಂದ ಬಂದಿದೆ)

ಪೂರ್ವದಲ್ಲಿ ಕೊಚ್ಚಿನ್ ಮಹಾರಾಜರು ತಾಸನವೊಂದರಿಂದ ಕಲ್ಪಿಸಿದ ಟ್ರಸ್ಟ್‌ಗೆ ಸೇರಿದ ಆಸ್ತಿ ಪಾಸ್ತಿಗಳು.

ಮೇಲ್ಕಾಣಿಸಿದ ವಿನಾಯಿತಿಗಳ ಹೊರತಾಗಿ, ಕಾನೂನುಅಂತಿಮಇಷ್ಟಪತ್ರವನ್ನು ಬರೆಯದೇ ಮೃತಹೊಂದಿದ ಹಿಂದೂವಿನ ಎಲ್ಲ ರೀತಿಯ ಆಸ್ತಿಪಾಸ್ತಿಗಳ ಉತ್ತರಾಧಿಕಾರವನ್ನು ಕ್ರಮ ಬದ್ಧಗೊಳಿಸುವುದು. ಹಿಂದೂ ಪುರುಷನ ಆಸ್ತಿಯು ಸ್ವಯಾರ್ಜಿತ ಆಸ್ತಿ ಅಥವಾ ಮಿತಾಕ್ಷರ ಸಹಭಾಗಿತ್ವದಲ್ಲಿನ ಪಾಲಿಗೆ ಸಂಬಂಧಿಸಬಹುದು.

ಮೂಲ ಉತ್ತರಾಧಿಕಾರಿಗಳು

ಹಿಂದೂವೊಬ್ಬನ ಉತ್ತರಾಧಿಕಾರಗಳನ್ನು ಈ ಕಾನೂನಿನ ಪರಿಶಿಷ್ಟದಲ್ಲಿ ಎರಡು ಭಾಗಗಳಲ್ಲಿ ಸೂಚಿಸಲಾಗಿದೆ. ಮೃತ ಹಿಂದೂವಿನ ಮರಣಾನಂತರ ಆತನ ಆಸ್ತಿಯು ಭಾಧ್ಯಸ್ಥರು ನಾಲ್ವರು ಮಾತ್ರ ಇರುವರು. ಆ ಬಾಧ್ಯಸ್ಥರಾರೆಂದರೆ– ಮಗ, ಮಗಳು, ವಿಧವೆ ಮತ್ತು ತಾಯಿ. ಇವರೆಲ್ಲರಿಗೂ ಆಸ್ತಿಯಲ್ಲಿ ಸಮಪಾಲಿರುವುದು.

ಮಗನು ತಂದೆಗಿಂತ ಮುಂಚಿತವಾಗಿಯೇ ಮೃತಹೊಂದಿದ್ದಾರೆ, ಆತನ ಗಂಡು ಅಥವಾ ಹೆಣ್ಣುಮಕ್ಕಳು ಮೃತ ಹೊಂದಿದವನ ಪಾಲಿನಲ್ಲಿ ಸಮಭಾಗ ಪಡೆಯುವರು.

ಮಗನು ಅಥವಾ ಆತನ ಮಗನು ತಂದೆಗಿಂತ ಮುಂಚಿತವಾಗಿಯೇ ಮೃತ ಹೊಂದಿದ್ದರೆ, ಮೃತಹೊಂದಿದ ಮಗನ, ಮಗ, ಮಗಳು. ಇವರಿಗೆ ಸಮವಾಗಿ ಬರುವ ಆಸ್ತಿಯಲ್ಲಿ ಪಾಲುಗೊಳ್ಳುವರು.

ಮೇಲೆ ಉಲ್ಲೇಖಿಸಿರುವ ಎಲ್ಲ ಉತ್ತರಾಧಿಕಾರಗಳನ್ನೂ ಮೊದಲನೆಯ ದರ್ಜೆಯಲ್ಲಿ ಸೇರಿಸಲಾಗಿದೆ. ಇವರ ಒಟ್ಟು ಸಂಖ್ಯೆಯು 12

ಎರಡನೆಯ ದರ್ಜೆಯ ಉತ್ತರಾಧಿಕಾರಿಗಳು

ಮೊದಲನೆಯ ದರ್ಜೆಯ ಉತ್ತರಾಧಿಕಾರಿಗಳಿಲ್ಲದೇ ಹೋದಲ್ಲಿ, ಎರಡನೆಯ ದರ್ಜೆಯ ಉತ್ತರಾಧಿಕಾರಿಗಳು ಆಸ್ತಿಪಾಸ್ತಿಗೆ ಅರ್ಹರಾಗುವರು–

i ತಂದೆ.

ii (1) ಮಗನ ಮಗಳ ಮಗ (2) ಳ ಮಗನ ಮಗಳು (3) ಸಹೋದರ (4) ಸಹೋದರಿ.

iii ಮಗಳ ಮಗನ ಮಗ (2) ಮಗಳ ಮಗನ ಮಗಳು (3) ಮಗಳ ಮಗಳು (4) ಮಗಳ ಮಗಳ ಮಗಳು.

iv (1) ಸಹೋದರನ ಮಗ (2) ಸಹೋದರಿಯ ಮಗ (3) ಸಹೋದರನ ಮಗಳು (4) ಸಹೋದರಿಯ ಮಗಳು

v (1) ತಂದೆಯ ತಂದೆ [2] ತಂದೆಯ ತಾಯಿ.

vi ವಿಧವೆ ತಾಯಿ, ವಿಧವೆ ಅತ್ತಿಗೆ. ನಾದಿನಿ. vii ತಂದೆಯ ಸಹೋದರ, ತಂದೆಯ ಸಹೋದರಿ.

viii ತಾಯಿಯ ತಂದೆ, ತಾಯಿಯ ತಾಯಿ.

iv ತಾಯಿಯ ಸಹೋದರ ತಾಯಿಯ ಸಹೋದರಿ.

ಉಳಿದ ಉತ್ತರಾಧಿಕಾರಿಗಳು

ಪರಿಶಿಷ್ಟದಲ್ಲಿ ಉಲ್ಲೇಖಿಸಿರುವ ಮೊದಲನೆಯ ಅಥವಾ ಎರಡನೆಯ ದರ್ಜೆಯ ಉತ್ತರಾಧಿಕಾರಿಗಳು ಇಲ್ಲದೇ ಹೋದಲ್ಲಿ, ರಕ್ತಸಂಬಂಧದ ಅಥವಾ ದತ್ತು ಸ್ವೀಕಾರದ ಮೂಲಕ ಮೃತಹೊಂದಿದವನಿಗೆ ಸಂಬಂಧ ಪಡೆದಿರುವ ವ್ಯಕ್ತಿಗಳು ಉತ್ತರಾಧಿಕಾರಿಗಳಾಗಲು ಅರ್ಹರಾಗಿರುವರು. ಆದರೆ ಅವರು ಮೃತಿ ಹೊಂದಿರುವರ ವಂಶಕ್ಕೆ ಸೇರಿರಬೇಕು. ಮೊದಲನೆಯ ಅಥವಾ ಎರಡನೆಯ ದರ್ಜೆಯ ಸಂಬಂದಿಗಳಿಲ್ಲದೇ ಹೋದಲ್ಲಿ ಸಗೋತ್ರದವರಾಗಲಿ ವಂಶಕ್ಕೆ ಸೇರಿದವರಾಗಲಿ ಯಾರೂ ಇಲ್ಲದೆ ಹೋದಲ್ಲಿ, ಆಸ್ತಿಯು ಸರ್ಕಾರಕ್ಕೆ ಸೇರುವುದು.

ಮಹಿಳೆಯರಿಗೆ ಪೂರ್ಣ ಹಕ್ಕುಗಳು

ಮಿತ ರೀತಿಯಲ್ಲಿ ಆಸ್ತಿಯನ್ನು ಅಥವಾ ಹಿಂದೂ ಮಹಿಳಾ ಆಸ್ತಿ ಅನುಭವಿಸುವ ಹಕ್ಕನ್ನು ನೀಡಿದ್ದ ಕಾನೂನು ಇನ್ನು ಮುಂದೆ ಕಾನೂನಾಗಿರುವುದಿಲ್ಲ. ಹೊಸ ಕಾನೂನಿನ ಪ್ರಕಾರ ಮಹಿಳೆಗೆ ಸೇರಿದ ಆಸ್ತಿಯು ಅವರ ಸರ್ವಸ್ವಾಮ್ಯ ಆಸ್ತಿಯಾಗಿರುವುದು. ಅಂತಿಮ ಇಷ್ಟ ಪತ್ರ ಬರೆದಿಡದೇ ಮೃತಿಹೊಂದುವ ಮಹಿಳೆಯ ಉತ್ತರಾಧಿಕಾರಿಗಳು ಈ ರೀತಿ ಇರುವರು.

(1) ಗಂಡುಮಕ್ಕಳು, ಹೆಣ್ಣುಮಕ್ಕಳು ಮತ್ತು ಪತಿ ಎಲ್ಲರೂ ಸಮ-ಸಮವಾಗಿ ಹಂಚಿ ಕೊಳ್ಳುವರು. ಆದರೆ, ಯಾವುದೇ ಪುರುಷ ಅಥವಾ ಸ್ತ್ರೀಯ ಮೃತ್ಯುವು ಅವರ ತಂದೆತಾಯಿಗಳಿಗಿಂತ ಮೊದಲೇ ಆಗಿದ್ದರೆ, ಆಗ, ಅವರ ಮಾತಾಪಿತರಿಗೆ ದೊರೆಯುವ ಆಸ್ತಿಯ ಪಾಲನ್ನು ಅವರ ಮೊಮ್ಮಕ್ಕಳಲ್ಲಿ ಸಮಸಮವಾಗಿ ಹಂಚಲಾಗುವುದು.

2) ಗಂಡನ ದಾಯಾದಿಗಳು.

3) ತಂದೆ ತಾಯಿಗಳು.

4) ತಂದೆಯ ದಾಯಾದಿಗಳು.

5) ತಾಯಿಯ ದಾಯಾದಿಗಳು.

ಹಿಂದೂ ಪುರುಷರ ಆಸ್ತಿಯ ಸಂಬಂಧವಾಗಿ ಹೇಳಲಾಗಿರುವಂತೆ, ಹಿಂದೂ ಮಹಿಳೆಯರ ಆಸ್ತಿಯ ಉತ್ತರಾಧಿಕಾರದ ಪ್ರಶ್ನೆಯು ಎದ್ದಾಗಲೂ ಸಹ ಮೇಲ್ಕಂಡ ಸೂಚನೆಯಲ್ಲಿ ಉಲ್ಲೇಖಿಸಿರುವ ಕ್ರಮದಂತೆ, ದಾಯಾದಿಗಳ ಹಕ್ಕುಬರುವುದು.

ತಂದೆತಾಯಿ ಮತ್ತು ತಂದೆಯ ದಾಯಾದಿಯಾರು ಎಂಬ ಪ್ರಶ್ನೆ ಉದ್ಭವಿಸಿದಾಗ, ಅವರು ತಮ್ಮ ಅಂತಿಮ ಇಷ್ಟ ಪತ್ರ ಬರೆಯದೆ ಮೃತ್ಯು ಹೊಂದಾಗ ಅವರ ಆಸ್ತಿಯು ಉತ್ತರಾಧಿಕಾರಿ ಯಾರೆಂಬುವುದನ್ನು ನಿರ್ಣಯಿಸುವ ಸಮಯದಲ್ಲಿ ಅನ್ವಯಿಸುವ ನಿಯಮಗಳನ್ನೇ ಈಗಲೂ ಅನುಸರಿಸಲಾಗುವುದು.

ಹಿಂದೂ ಮಹಿಳೆಗೆ ದೊರೆತಿರುವ ಆಸ್ತಿ ಪರಿವಾರದ ... ಸ್ವಾಧಿನಕ್ಕೆ ಹೊಗದಿರುವಂತೆ, ಮಹಿಳೆಯರ ಹಕ್ಕನ್ನು ಸೂಚಿಸುವ ನಿಯಮಗಳಲ್ಲಿ ಒಂದು ವಾಕ್ಯ ತ್ಪರ್ಣ ವಿನಾಯಿತಿಯನ್ನು ಅಳವಡಿಸಲಾಗಿದೆ. ಉದಾಹರಣೆಗೆ ಯಾವ ಹಿಂದೂ ಮಹಿಳೆಯಾದರೂ, ತನ್ನ ತಂದೆ ಅಥವಾ ತಾಯಿಯಿಂದ ಆಸ್ತಿ ಹೊಂದಿದ್ದರೆ, ಹಾಗೂ ಆಕೆಗೆ ಮಕ್ಕಳು–ಮೊಮ್ಮಕ್ಕಳು ಯಾರೂ ಇಲ್ಲದಿದ್ದರೆ ಆಕೆಯು ಜೀವಂತವಾಗಿದ್ದರೂ ಅತನಿಗೇ ಸೇರದೆ. ಆಕೆಯ ತಂದೆಗೆ ವಾಪಸು ಹೋಗಿ ಸೇರುವುದು. ಈ ಪ್ರಕಾರ ಯಾವ ಹಿಂದೂ ಮಹಿಳೆಗೇ ಆಗಲಿ, ತನ್ನ ಪತಿ ಅಥವಾ ಮಾವನಿಂದ ಆಸ್ತಿಯು ದೊರಕಿದ್ದು, ಆಕೆಗೆ ಮಕ್ಕಳು ಇಲ್ಲದಿದ್ದರೆ, ಆಕೆಯ ಆಸ್ತಿ ಆಕೆಯ ಕಡೆಯ ದಾಯಾದಿಗಳಿಗೆ ಹೋಗುತ್ತದೆ. ಈ ವಿನಾಯಿತಿಗಳ ಹೊರತು ಆಸ್ತಿಯ ಹಕ್ಕಿನ ನಿರ್ಣಯವು ಮೇಲೆ ಹೇಳಿದ ಸೂಚಿಯ ಅನುಸಾರವಾಗಿ ಆಗುವುದು.

ನವಭಾರತಕ್ಕೆ
ಜಂದಾದಾರರಾಗಿರಿ

ಚಿನ್ನದ ಗಣಿ ಕಂಪೆನಿಗೆ ೧೧೯ ಲಕ್ಷರೂ.ಪರಿಹಾರ

ಸಚಿವ ಶ್ರೀ ಹೆಚ್.

ಸಿದ್ಧವೀರಪ್ಪನವರ ಪ್ರಕಟಣೆ

ಭಾರತ ಸರ್ಕಾರದ ಸೂಚನೆ ಪ್ರಕಾರ ಮಸೂದೆಯಲ್ಲಿ ತಿದ್ದುಪಡಿಗಳು

ಕೋಲಾರ ಚಿನ್ನದ ಗಣಿಯನ್ನು ರಾಷ್ಟ್ರೀಕರಣ ಮಾಡುವುದರಿಂದ,ಚಿನ್ನದ ಗಣಿಯ ಕಂಪೆನಿಯವರಿಗೆ 119 ಲಕ್ಷ ರೂಪಾಯಿಗಳನ್ನು ಪರಿಹಾರದರೂಪದಲ್ಲಿ ಕೊಡಲು ಮೈಸೂರು ಸರ್ಕಾರದವರು ಒಪ್ಪಿದ್ದಾರೆ.

ಹಿಂದೆ 87 ಲಕ್ಷ ರೂಪಾಯಿಗಳನ್ನು ಪರಿಹಾರದ ರೂಪದಲ್ಲಿ ಕೊಡುವುದಾಗಿ ಮೈಸೂರು ಸರಕಾರ ಕೇಂದ್ರ ಸರ್ಕಾರಕ್ಕೆ ತಿಳಿಸಿತ್ತು ಎಂದು ಸಚಿವ ಶ್ರೀ ಸಿದ್ಧವೀರಪ್ಪನವರು ತಿಳಿಸಿದರು.

ಕೋಲಾರ ಚಿನ್ನದ ಗಣಿಯನ್ನು ರಾಷ್ಟ್ರೀಕರಣ ಮಾಡುವ ಸಂಬಂಧವಲ್ಲಿ ಮೈಸೂರು ಸರಕಾರದವರು ಮಸೂದೆಯನ್ನು ತಯಾರಿಸಿ, ಕೇಂದ್ರ ಸರಕಾರದ ಪರಿಶೀಲನೆಗೆ ಕಳುಹಿಸಿಕೊಟ್ಟಿದರಲ್ಲಿ ಕೇಂದ್ರದವರು ಮೂರುತಿದ್ದುಪಡಿಗಳನ್ನು ಸೂಚಿಸಿದ್ದರು. ಆ ಮೂರು ತಿದ್ದುಪಡಿಗಳನ್ನು ಕೇಂದ್ರ ಸರ್ಕಾರದ ಸೂಚನೆಗೆ ಅನುಗುಣವಾಗಿ ಬದಲಾಯಿಸಿದ್ದನ್ನು ಒಪ್ಪಿಕೊಂಡು ನಿನ್ನೆ ತಾನೇ ಪತ್ರವನ್ನು ಕೇಂದ್ರಕ್ಕೆ ಕಳುಹಿಸಿ ಕೊಡಲಾಗಿದೆ. ಎಂದೂ ಸಚಿವರು ಹೇಳಿದರು.

ಮಾನವ ಕುಲ ಸಂಹಾರಕ

ಅಣ್ಣು ಹಾಗೂ ಜಲಜನಕ ಅಸ್ತ್ರ ಪ್ರಯೋಗಗಳು ದಿನ ದಿನವೂ ಹೆಚ್ಚಾಗುತ್ತಿರುವದನ್ನು ಕಂಡು, ಅವರ ಅನಾಹುತಗಳನ್ನು ಅರಿತ ವಿಜ್ಞಾನಿಗಳು, ಶಾಂತಿಪ್ರಿಯ ವಿಜ್ಞಾನಿಗಳು ಡಾಕ್ಟರುಗಳು ಮತ್ತೊಮ್ಮೆ ಜಗತ್ತನ್ನು ಎಚ್ಚರಿಸಿವ್ವಾರಿ ನಿಲುಕ್ಷಿಪಲಿಕ್ಕಾದ ಬೆಳವಣಿಗೆಗಳವು ಎಂದಿದ್ದಾರೆ.

ನ್ಯೂಕ್ಲಿಯರ್ ಪ್ರಯೋಗಗಳಿಂದಾದ ರೇಡಿಯೋ ಆಕ್ಟಿವಿಟಿ ಕ್ರಿಯೇ ಬಾಹ್ಯ ಕೃಷ್ಟೆ ಸಂಬಂಧಿಸಿಲ್ಲ, ಮಾನವನಸ್ಥಿಎಲು ಜೀವಗಳಲ್ಲಿ ಅದು ಸಂಗ್ರಹಗೊಳ್ಳುತ್ತದೆ— ಎಂಬ ಭೀಕರ ಸತ್ಯವನ್ನು ವಿಜ್ಞಾನಿಗಳು ಪ್ರಮುಖ ಡಾಕ್ಟರುಗಳು ಇದೀಗ ಹೊರ ಹಾಕಿದ್ದಾರೆ.

ಅಣು ಅಸ್ತ್ರ ಪ್ರಯೋಗಗಳಿಂದ ಆಗಬಹುದಾದ ಒಳಿತು ಕೆಡಕುಗಳ ಪರಿಶೀಲನೆಗೆ ಇಂಗ್ಲೆಂಡಿನಲ್ಲಿ ಸಮಿತಿಯೊಂದು ರಚಿಸಲ್ಪಟ್ಟಿತ್ತು. ಆ ಸಮಿತಿಯವರು ಹೀಗೆಹೇಳುತ್ತಾರೆ.

ಇಲ್ಲಿಯವರೆಗಿನ ನೀರೀಕ್ಷಣೆಗಳಿಂದ ಆಪತ್ತಿಂದು ಅಪಾಯ ಕಂಡು ಬಂದಿಲ್ಲ. ಆದರೆ ಈ ಪ್ರಯೋಗಗಳು, ಥರ್ಮೋನ್ಯೂಕ್ಲಿಯರ್ ಪ್ರಯೋಗಗಳು ಹೆಚ್ಚಾದರೆ ಅವುಗಳ ಪರಿಣಾಮವನ್ನು ನಿರ್ಲಕ್ಷಿಸಲಿಕ್ಕಾಗುವದಿಲ್ಲ ಒಂದು ಕಣ್ಣ ಜನಸಮುದಾಯದಲ್ಲಿ ಇದರ ಪರಿಣಾಮ ಮೊದಲು ತೋರುತ್ತದೆ. ಮನುಷ್ಯನ ಎಲುಬಿನಲ್ಲಿ ಸೇರಿಕೊಂಡು ನಡೆಯುವ ರೇಡಿಯೋ ಆಕ್ಟಿವಿಟಿಯಿಂದ ಕ್ಯಾನ್ಸರ್ ರೋಗಹಬ್ಬುತ್ತದೆ.

ಹೈಡ್ರೋಜನ್‌ಬಾಂಬ್ ಆಸ್ಫೋಟದಿಂದ ಉಂಟಾಗುವ ಅಪಾಯಗಳಿಗೆ ಕ್ಷಿಪ್ರ ಕರಣ ಪ್ರಯೋಗ ನಡೆಸಬೇಕಾದರೆ ಇಂದಿಗಿಂತ ೨೨ ಪಟ್ಟು ಹೆಚ್ಚು ಶ್ರಮವಾಗುತ್ತದೆ. ಎಂದು ಅವರು ಹೇಳುತ್ತಾರೆ.

ಇಂಗ್ಲೆಂಡಿನ ಹಲವು ಪ್ರಮುಖ ಪತ್ರಿಕೆಗಳು ಅಣು ಪ್ರಯೋಗಗಳ ಹತೋಟಿಯನ್ನು ಪ್ರತಿಪಾದಿಸುತ್ತ ಹೀಗೆ ಬರೆಯುತ್ತವೆ.

ಬೆಳೆ ತಿನ್ನುವ ಹಕ್ಕಿಗಳನ್ನು ಓಡಿಸಲಿಕ್ಕೆ ಸಂಗೀತ

ಬೆಳೆಗಳಿಗೆ ಹಕ್ಕಿಗಳು ಎಷ್ಟು ಹಾನಿ ಮಾಡುತ್ತವೆ ಎಂಬುದು ಎಲ್ಲರಿಗೂ ಗೊತ್ತಿದ್ದ ಸಂಗತಿಯೇ. ಅವುಗಳ ಉಪದ್ರವನ್ನು ತಡೆಯುವದಕ್ಕಾಗಿ ಸಂಯುಕ್ತ ಸಂಸ್ಥಾನದಲ್ಲಿಯ ಪೆನ್ಸಿಲ್ವೇಯಾ ವಿದ್ಯಾಪೀಠದ ಡೊಕ್ಟರ್ ಫ್ರೀರುರ್ ಎಂಬವನು ಒಂದು ನಿಚಿತ್ರ ಯುಕ್ತಿಯನ್ನು ಕಂಡು ಹಿಡಿದಿದ್ದಾನೆ. ಯಾವುದೂ ಒಂದು ಪಕ್ಷಿಯನ್ನು ಹಿಡಿದು, ಅದು ಪ್ರಾಣ ಭೀತಿಯಿಂದ ಕೂಗಿದಾಗ, ಅದರ ಧ್ವನಿ ಮುದ್ರಿಕೆಯನ್ನು ತಯಾರಿಸುವದೇ ಈ ಯುಕ್ತಿಯಾಗಿರುತ್ತದೆ. ಆ ಜಾತಿಯ ಹಕ್ಕಿಗಳು ಗದ್ದೆಗಳಲ್ಲಿ ಬಂದಾಗ, ಈ ಧ್ವನಿ ಮುದ್ರಿಕೆಯನ್ನು ಶಬ್ದ ಪ್ರತಿಧ್ವನಿಯಂತ್ರ ಗ್ರೆಮೊಫೋನ್‌ಕ್ಕೆ ಹಚ್ಚಿದರೆ, ಅವುಹೆದರಿ ಓಡಿ ಹೋಗುತ್ತವಲ್ಲದೆ, ಇನ್ನು ಮುಂದೆ ಆ ಕಡೆ ಸುಳಿಯುವದಿಲ್ಲ. ಹೊಲಗಳಿಗೆ ಉಪದ್ರವ ಕೊಡುವ ಹಕ್ಕಿಗಳನ್ನು ಈ ಯುಕ್ತಿಯಿಂದ ಓಡಿಸಿ, ಬೆಳೆಗಳನ್ನು ರಕ್ಷಿಸಲು ಸುಲಭವಾದೀತೆಂದು ಎಣಿಸಲಾಗುತ್ತಿದೆ.

ಕೀಟಗಳ ವಿಚಿತ್ರ ಶ್ರವಣೇಂದ್ರಿಯಗಳು

ಕೀಟಗಳಿಗೆ ಧ್ವನಿಗಳನ್ನು ಕೇಳಲಿಕ್ಕೆ ೨ ತರಹದ ಶ್ರವಣೇಂದ್ರಿಯಗಳಿವೆ (1) ಧ್ವನಿತರಂಗಗಳನ್ನು ಚಲನಗೊಳಿಸುವ ಸೂಕ್ಷ್ಮ ಕೂದಲು ಅಥವಾ (2) ಮಾನವ ಕರ್ಣವ್ಯದಂಗ ಇಯರ್‌ಡ್ರಮ್ ದಂತಿರುವ ಗರ್ಭಶ್ರವಣಕ ಟಿಂಪನಿಕ್ ಅವರಣ ಮೆಂಬ್ರೇನ್ ಆದರೆ ಇವು ಕೀಟಗಳ ದೇಹದ ಅನೇಕ ಅಂಗಗಳ ಮೇಲೆ ಹಂಚಿಸಲ್ಪಟ್ಟು, ಅದ್ಭುತ ಶ್ರವಣಶಕ್ತಿಗೆ ಸಂಪಡಿಸಿರುತ್ತವೆ. ಸಮಿಸಮೂಪ ಮಿಡಿತ ವರ್ಗಕ್ಕೆ ಸೇರಿರುವ ಚಿಮ್ಮಂಡಿ ಅಥವಾ ಜಿಟ್ಟೆ ಕ್ರಿಕಟ್‌ಯು ತನ್ನ ರೆಕ್ಕೆ ಕವಚದ ತಳಗಳ ಘರ್ಷಣೆಯಿಂದ ಒಂದು ಕೀಚ್ ಕೀಚು ಚರ್ಪಿಂಗ್ ಅಥವಾ ಕಿರುಗುಟ್ಟುವ ಕ್ರೇಕಿಂಗ್ ಧ್ವನಿಯನ್ನು ಹೊರಡಿಸುತ್ತದೆ. ಕೆಲವು ಲೇಖಕರು ಜಿಟ್ಟೆಗೆ ಮೊಣಕಾಲುಗಳ ಮೇಲೆ ಕಿವಿಗಳವೆಯೆಂದು ಹೇಳುತ್ತಾರೆ ಸಿಕಾಡಾ ಎಂಬ ಜಾತಿಯ ಗಂಡು ಹೈಳಕ್ಕೆದೇಹದ ಎರಡೂಕಡೆ ಸುಮಾರು ದೂರದ ವರೆಗೆ ಕೇಳಿ ಬರುವಂಥ ಕರ್ಕಶ ಶ್ರಿಲ್ ಧ್ವನಿಯನ್ನು ಹೊರಡಿಸುವ ಇಂದ್ರಿಯವಿದೆ. ಈ ವಿಷಯ ಸಹ ಆ ಲೇಖಕರು ಸಿಕಾಡಾಗೆ ಹೊಟ್ಟೆಯ ಮೇಲೆ ಕಿವಿಗಳಿವೆಯೆಂದು ಅನ್ನುತ್ತಾರೆ ಜಲವಾಸಿ ಜಾತಿಯ ಸಣ್ಣ ಹುಳ ಮೊಟರ್-ಬೀಟ್ಸ್‌ಪು ಧ್ವನಿಗಳನ್ನು ತನ್ನ ಎದೆಯಿಂದ ಕೇಳುತ್ತದಂತೆ ಅನೇಕ ಕೀಟ ಹಾಗೂ ಹುಳಗಳ ಶ್ರವಣ ಶಕ್ತಿಯು ಮಾನವನಿಗಿರುವದಕ್ಕಿಂತ ಪ್ರಬಲವಿರುತ್ತದೆ.

ಚಂದಾದಾರರಲ್ಲಿ ವಿನಂತಿ

ನವಭಾರತದೊಂದಿಗೆ ನಡೆಸುವ ಯಾವದೇ ಪತ್ರವ್ಯವಹಾರದಲ್ಲಿ ತಮ್ಮ ಚಂದಾದಾರರು ದಯವಿಟ್ಟು ತಮ್ಮ ಚಂದಾನಂಬರನ್ನು ತಪ್ಪದೆ ನಮೂದಿಸಬೇಕು. ಚಂದಾ ನಂಬರು ಇಲ್ಲದ ಪತ್ರಗಳಿಗೆ ಖಂಡಿತ ಗಮನ ಕೊಡುವುದಿಲ್ಲ.

ಇಂತು

ವ್ಯವಸ್ಥಾಪಕ

ವಚನ ಸಾಹಿತ್ಯ

ಭಾರತದಲ್ಲಿ ಅತಿಪ್ರಾಚೀನ ಕಾಲದಿಂದಲೂ ಜನರೂ ಶಿವನನ್ನು ಪೂಜಿಸುತ್ತಿರುವರು. ಹಿಂದೆ ಕೆಲವು ಪಂಥದವರು ಶಿವನು ಘೋರ ರೂಪಿಯೆಂದು ನಂಬಿ ನರಬಲಿ, ಪಶುಬಲಿಗಳನ್ನು ಕೊಡುತಿದ್ದರು. ಶಿವನು ಸೌಮ್ಯ ಸ್ವರೂಪಿಯೆಂದು ಪತ್ರ, ಪುಷ್ಪಗಳಿಂದಲೇ ಭಕ್ತಿಯಿಂದ ಪೂಜಿಸುತ್ತಾ ಒಳ್ಳೆಯ ಮಾರ್ಗದಲ್ಲಿ ನಡೆಸಿ ಅವನು ಒಲಿಯುವನೆಂದೂ ಬೋಧಿಸುವುದು ಅಗತ್ಯವಾಗಿತ್ತು. ಕರ್ನಾಟಕದಲ್ಲಿ ಅಂತಹ ಸುಧಾರಣೆಗಳನ್ನು ತಂದವರು ವಚನಕಾರರು.

ವಚನಕಾರರು ನಮ್ಮ ನಾಡಿನಲ್ಲಿ ಧರ್ಮ ಪ್ರಚಾರಮಾಡಿದ ಶಿವರರಣರು. ಅವರ ಅನುಯಾಯಿಗಳೇ ವೀರಶೈವರು. ತಮ್ಮ ಮತ ತತ್ವಗಳನ್ನು ಎಲ್ಲರಿಗೂ ತಿಳಿಯುವಂತೆ ಅವರು ತಿಳಿಗನ್ನಡದಲ್ಲಿ ಬೋಧಿಸಿದರು. ಅವರ ಅನುಭವದ ನುಡಿಗಳೇ ವಚನಗಳು,ಅದೇ ವಚನ ಸಾಹಿತ್ಯ

ಈ ಒಂದೊಂದು ವಚನಗಳೂ ಒಂದೊಂದು ಅಣಿ ಮುತ್ತಿನಂತೆ. ಈ ಒಂದೊಂದು ವಚನಗಳಲ್ಲಿ ಜಗತ್ತಿನ ಎಲ್ಲ ಧರ್ಮಗಳೂ, ಶಾಸ್ತ್ರಗಳೂ ನೀತಿಗಳೂ ಅಡಗಿವೆ ಅಂತೆಯೇ ವಚನ ಸಾಹಿತ್ಯವು ಜನಪ್ರಿಯವಾಗಿದೆ.

ವಚನಕಾರರಲ್ಲಿ ಅಗ್ರಗಣ್ಯರು ಮತ್ತು ಪ್ರಸಿದ್ಧಿಪಡೆದವರು ಬಸವಣ್ಣನವರು.

ಬಸವಣ್ಣನವರು ಹನ್ನೆರಡನೇ ಶತಮಾನದಲ್ಲಿದ್ದರು. ಅಂದು ನಾಡು ಅಶಾಂತಿ, ಅಸತ್ಯ, ಅಧರ್ಮ, ಅನ್ಯಾಯಗಳಿಂದ ಕೂಡಿದ್ದ ಕಾಲ. ಅವನ್ನೆಲ್ಲ ಪರಿಹರಿಸಲೋಸುಗವಾಗಿಯೇ ಎಂಬಂತೆ ಬಸವಣ್ಣನವರು ಜನ್ಮವೆತ್ತಿದರು.

ಅವರು ಬ್ರಾಹ್ಮಣರಾಗಿ ಹುಟ್ಟಿದರೂ ವೀರಶೈವ ಪಂಥವನ್ನು ಹಿಡಿದು ಶೈವರಾದರು. ಅಂದಿನ ಕಲ್ಯಾಣದ ಬಿಜ್ಜಳ ರಾಜನಲ್ಲಿ ಮಂತ್ರಿಯಾಗಿದ್ದು ಕೊಂಡು ಅಶಾಂತಿ, ಅಧರ್ಮ, ಅಸತ್ಯಗಳನ್ನು ನಿವಾರಿಸಲು ಸಾಕಷ್ಟು ಶ್ರಮಿಸಿದರು

ಬಸವಣ್ಣನವರ ಆರಾಧ್ಯ ದೈವರು ಕೂಡಲಸಂಗಮದೇವ. ಆದ್ದರಿಂದಲೇ ತಮ್ಮ ಪ್ರತಿಯೊಂದು ವಚನಗಳ ಕೊನೆಯಲ್ಲಿ ಕೂಡಲ ಸಂಗಮ ದೇವನನ್ನು ಸ್ಮರಿಸಿದ್ದಾರೆ.

ಕಳಬೇಡ, ಕೊಲಬೇಡ,
ಹುಸಿಯ ನುಡಿಯಲು ಬೇಡ, ಮುನಿಯ ಬೇಡ
ಅನ್ಯರಿಗೆ ಅಸಹ್ಯ ಪಡಬೇಡ, ತನ್ನ
ಬಣ್ಣಿಸಬೇಡ, ಇದೇ ಅಂತರಂಗ ಶುದ್ಧಿ.
ಇದೇ ಬಹಿರಂಗ ಶುದ್ಧಿ ಇದೇ ನಮ್ಮ
ಕೂಡಲಸಂಗಮ ದೇವರನೊಲಿಸುವವರಿ,

ಬದನೆಕಾಯಿಗಳನ್ನು ಲಿಂಗಗಳನ್ನಾಗಿಯೂ, ಜೋಳವನ್ನು ಮುತ್ತನ್ನಾಗಿಯೂ ಬದಲಾಯಿಸಿ ಪವಾಡಗಳನ್ನು ಮಾಡಿ, ಪವಾಡ ಪುರುಷರೆಂಬಕೀರ್ತಿಯನ್ನೂ ಗಳಿಸಿದ್ದಾರೆ ಬಸವಣ್ಣನವರು.

ಅವರಿದ್ದ ಕಲ್ಯಾಣ ಪಟ್ಟಣದಲ್ಲಿ, ಅನುಭವ ಮಂಟಪ ಎಂಬ ಧರ್ಮ ಸಂಸ್ಥೆಯನ್ನು ಸ್ಥಾಪಿಸಿ, ತಮ್ಮ ನೂತನ ವೀರಶೈವ ಪಂಥವನ್ನು ಪ್ರಚಾರ ಮಾಡುತ್ತಿದ್ದರು. ಅವರ ಪ್ರಭಾವವನ್ನು ಕೇಳಿ ನಾಡಿನಮೂಲೆ ಮೂಲೆಗಳಿಂದ ಶರಣರು ಬಂದು ಉಪದೇಶ ಪಡೆಯುತ್ತಿದ್ದರು ಬಸವಣ್ಣನವರು ವೀರಶೈವಮತ ಸ್ಥಾಪಕರಾಗಿ, ತಮ್ಮ ಅನ್ಯತ ವಚನಗಳಿಂದ ನಾಡಿನಲ್ಲಿ ನೀತಿ, ನಿಷ್ಠೆಗಳನ್ನು ಸ್ಥಾಪಿಸಿದರು.

ಬಸವಣ್ಣನವರ ನಂತರ ಇತರ ಶರಣರೂ ಮತಪ್ರಚಾರವನ್ನು ಮಾಡಿದರು. ಇವರ ದಲೂ ವಚನ ಸಾಹಿತ್ಯವು ಅಖಂಡವಾಗಿ ಬೆಳೆಯಿತು.

ಅವರ ಆ ಮೇಲ್ಪಂಕ್ತಿಯನ್ನು ಅನುಸರಿಸಿ ಅಲ್ಲಮ ಪ್ರಭು, ಚೆನ್ನಬಸವಣ್ಣ, ಸೊನ್ನಲಿಗೆಯ ಸಿದ್ಧರಾಮಣ್ಣ, ಅಕ್ಕಮಹಾದೇವಿ ಮುಂತಾದ ವೈದ ಶರಣರು ವಚನ ಸಾಹಿತ್ಯವನ್ನು ಬೆಳಸಿ ಅದು ಅಮರವಾಗುವಂತೆಮಾಡಿದರು.

ಅಚಾರವನರಿಯದೆ, ವಿಭವವಳಿಯದೆ,
ಕೋಪ ಮುರಿಯದೆ, ತಾಪ ಉಡುಗದೆ,
ಬರಿದೆ,
ಭಕ್ತರಾದೆವೆಂದು ಬೆಚ್ಚನೆ ಬೆರೆವವರ
ಕೇಡಿಂಗೆ ನಾನು ಮರುಗುವ ಕಣಾ
ಗುಹೇಶ್ವರಾ.

—ಅಲ್ಲಮ ಪ್ರಭು

ತಾ ಮಾಡಿದ ಹೆಣ್ಣು ತನ್ನ ತಲೆಯ ನೇರಿತ್ತು.
ತಾ ಮಾಡಿದ ಹೆಣ್ಣು ತನ್ನ ಕೊಡೆಯ ನೇರಿತ್ತು
ತಾ ಮಾಡಿದಹೆಣ್ಣು ಬ್ರಹ್ಮನ ನಾಲಿಗೆಯ ನೇರಿತ್ತು.
ತಾ ಮಾಡಿದ ಹೆಣ್ಣು ನಾರಾಯಣನ ಎದೆಯ ನೇರಿತ್ತು
ಹೆಣ್ಣುಪ್ರತ್ಯಕ್ಷ ಕಪಿಲ ಸಿದ್ಧಮಲ್ಲಿಕಾರ್ಜುನ ನೋಡಾ.

....ಸೊನ್ನಲಿಗೆಯ ಸಿದ್ಧರಾಮ.

ಅಂತೆಯೇ ಕನ್ನಡದಲ್ಲಿ ಮೂಡಿದ ಈ ವಚನಗಳು ದೊಡ್ಡರಾಶಿಯಾಗಿ ಬೆಳೆದವು. ಅವು ವೀರಶೈವರಿಗೆ ಮಾತ್ರವಲ್ಲಾ ಎಲ್ಲಾ ಮತದವರಿಗೂ, ಒಪ್ಪತಕ್ಕಮಹೋನ್ನತ ಉಪದೇಶಗಳಾಗಿವೆ. ಕೆಲವು ವಚನಗಳನ್ನ ಂತೂ ಸುಮಧುರ ರಾಗದಲ್ಲಿ, ಹೊಗಸಾಗಿ ಹಾಡುವಂತಿವೆ. ಈ ಅಮೂಲ್ಯ ವಚನಗಳು ಕನ್ನಡ ಸಾಹಿತ್ಯಕ್ಕೆ ಒಂದು ಅಪೂರ್ವ ಕಾಣಿಕೆ. ಈ ವಚನ ಸಾಹಿತ್ಯದಿಂದ ಕನ್ನಡ ಭಾಷೆಗೆ ಹೊಸ ಶಕ್ತಿ ಬಂತು. ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ನೀಡಿದ ಅಮರ ಕಾಣಿಕೆಯಾದ ವಚನ ಸಾಹಿತ್ಯವು ಇಂದೂ ತಾರೆಯಂತೆ ಪ್ರಜ್ವಲಿಸುತ್ತಿದೆ.

ಬೇಲೂರ್ ಕೊಲೆ ಮೊಕದ್ದಮೆ

ಸಿಟಿ ಮ್ಯಾಜಿಸ್ಟ್ರೇಟರ ಆಜ್ಞೆ

ಬೇಲೂರು ಶ್ರೀನಿವಾಸ ಐಯ್ಯಂಗಾರ್ಯರ ಮನೆಯಲ್ಲಿ ನಡೆದ ಹತ್ಯಾಕಾಂಡದಲ್ಲಿ ಆಪಾದಿತರಾದ ಕೃಷ್ಣ,ಮುನಿಸ್ವಾಮಿ ಮತ್ತು ಗೋವಿಂದ ರೆಡ್ಡಿಯವರುಗಳನ್ನು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರಾ—ಶ್ರೀ ಎ ರಂಗಾಸ್ವಾಮಯ್ಯನವರು ಸೆಷನ್ಸ್ ವಿಚಾರಣೆಗೆ ಗುರಿಮಾಡಿದರು.

ಕೊಲೆ ನಡೆಸಿದವರು, ಖೂನಿ ಮಾಡಲು ಗಾಯಪಡಿಸಿದರು, ಪಿತೂರಿ ನಡೆಸಿದರು ಕಂಬಿಕಿತ್ತು ಒಳಗೆ ಪ್ರವೇಶಿಸಿದರು ಕಳ್ಳತನ ಮಾಡಿದರು, ಕೊಲೆಮಾಡಲು ಹಿಂಸಿಸಿದರು, ದರೋಡೆ ಮಾಡಿದರು, ಎಂಬುವಾಗಿ ಒಟ್ಟು 13 ಆಪಾದನೆಗಳನ್ನು ಸಿಟಿ ಮ್ಯಾಜಿಸ್ಟ್ರೇಟರು ಆಪಾದಿತರುಗಳ ಮೇಲೆ ಹೊರಿಸಿದ್ದಾರೆ. ಆಪಾದಿತರುಗಳ ಮೇಲೆ ಸ್ಪೆಷಲ್ ಫೀಸು ಕೇಸು ಇರುವುದು ಸ್ಪಷ್ಟವಾಗಿ ವ್ಯಕ್ತಪಟ್ಟಿದೆಯೆಂದು ಮ್ಯಾಜಿಸ್ಟ್ರೇಟರು ತಮ್ಮ ಆಜ್ಞೆಯಲ್ಲಿ ತಿಳಿಸಿದ್ದಾರೆ.

ಆಪಾದಿತರುಗಳಾದ ಕೃಷ್ಣ, ಮುನಿಸ್ವಾಮಿ ಮತ್ತು ಗೋವಿಂದ ರೆಡ್ಡಿಯವರು ಹಾಜರಿದ್ದರು. ಪ್ರಾಸಿಕ್ಯೂಷನ್ ಪರ ಮತ್ತು ಆಪಾದಿತರುಗಳ ವಿಲಾಯರ್ ಗಳೂಹಾಜರಿದ್ದರು.

ಮುಂಬರುವ

ಚುನಾವಣೆ, ಆರಿಸಿ ಬರುವವರಾರು?

ದಳಗಳ ವೈಶಿಷ್ಟ್ಯ:—

ಭಾರತದಲ್ಲಿ ಮುಖ್ಯವಾಗಿ ಕಾಂಗ್ರೆಸ್, ಸೋಶಿಯಲಿಸ್ಟ್, ಪಿ ಯುಸ್ ಪಿ, ಕಮ್ಯೂನಿಸ್ಟ್ ಪಾರ್ಟಿಗಳೂ, ಜಮೀ.ಖ್ಯವಾದವು ಹಿಂದೂ ಮಹಾಸಭೆ, ಜನಸಂಘ ರಾಮರಾಜ್ಯಸಂಘ ವಗೈರೇ ಇವೆ. ಇವರಲ್ಲವೆ ಯಾವಪಾರ್ಟಿಗೂ ಸೇರದೆ, ಸ್ವಯಂ ಶಕ್ತಿಯ ನೇಲೆ ಹೋರಾಡುವ ಸ್ವತಂತ್ರ ರಿದ್ದಾರೆ. ಈ ಇಂಡಿಪೆಂಡೆಂಟುಗಳಲ್ಲಿ ಶ್ರೀಮಂತರು ಅಥವಾ ಹಣವಿಲ್ಲದವರು, ಅಥವಾ ಹಣ ತರಬಲ್ಲ ಶಕ್ತಿ ಇದ್ದವರು. ಒಂದು ಪಕ್ಷ ಇನ್ನೊಂದು ಪಕ್ಷದವರಿಂದ ಸದರಿ ಕ್ಷೇತ್ರದ ಪ್ರತಿಭಾವಂತ ಉಮೇದ್ವಾರನಿಗೆ ಮುರಿಯಬೇಕೆಂದು ಅಥವಾ ಅವನ ಹಣ ಹೇರಳವಾಗಿ ಖರ್ಚು ಮಾಡಿಸಬೇಕೆಂದು ಕಿರುಕುಳ ಕೊಡುವ ಸುದ್ದೀತೆಯಿಂದ ವಿಪಾಟಿಯ ಕಟ್ಟಿ ಕೆಲ ಬೆಂಬಲಿಗರೊಂದಿಗೆ ಅಲ್ಲಲ್ಲಿ ಓಡಾಡುವರು. ಇವಲ್ಲದೆ ದಂಗೇಕೋರ ಸ್ವತಂತ್ರರೂ ಇದ್ದಾರೆ, ಅವರು ಪಾರ್ಟಿಯ ಟಿಕೆಟ್‌ಗಾಗಿ ಪ್ರಯತ್ನಪಟ್ಟು ವಿಫಲರಾದಾಗ ಪಾರ್ಟಿಯ ನಿಯಮನಿಬಂಧನೆಗಳನ್ನು ಗಾಳಿಗೆ ತೂರಿ ದಂಗೆ ಎದ್ದು ಸ್ವತಂತ್ರರಾಗಿ ನಿಲ್ಲುತ್ತಾರೆ. ಆಗ ಇವರು ಪ್ರಬಲ ಪಕ್ಷದಿಂದ ಚುನಾವಣೆಯಲ್ಲಿ ಭಿನ್ನ ಭಿನ್ನ ಮುಖಗಳಲ್ಲಿ ಹಣವನ್ನು ನೀರು ಚೆಲ್ಲಿದಂತೆ ಖರ್ಚುಮಾಡುತ್ತಾರೆ ತಾವುಗೆಲ್ಲುವುದೊಂದೆಗಿರಲಿ ಪಾರ್ಟಿಯು ಪರವಾಗಿ ನಿಂತ (ಮುಖ್ಯವಾಗಿ ಕಾಂಗ್ರೆಸ್) ಉಮೇದುವಾರರಿಗೆ ಚುನಾವಣೆ ಮುಗಿಯುವವರಿಗೂ ತಲೆನೋವಿನ ಬಾಧೆಯನ್ನು ಕೊಡುತ್ತಾರೆ. ಇನ್ನೂ ಕೆಲವಕ್ಷೇತ್ರಗಳಲ್ಲಿ ಕೆಲ ಉಮೇದುವಾರರು ಹಿಂದಿನೆಯು ವದಿನದವರೆವಿಗೂ ನಿಂತುಕೈಬಿಟ್ಟಿಗೆ ಮಾಡಿದ ಮೇಲೆ ಅಥವಾ ನಿಮ್ಮನ್ನು ಮರೆಯುವುದಿಲ್ಲ. ನಿನ್ನ ಆ ಕೆಲಸ ಈಕೆಲಸ ಮಾಡಿಸಿಕೊಹುತ್ತೇವೆ ಎಂದು ವೈಸ್ಯ ಪಟ್ಟುನೇಲೆ ತಮ್ಮ ಉಮೇದುವಾರಿಕೆಯನ್ನು ಹಿಂದೆಗೆದುಕೊಳ್ಳುವವರೂ ಇದ್ದಾರೆ.

ಕ್ಷೇತ್ರವಿಸ್ತಾರ, ಖರ್ಚಿನ ಪರಿಸ್ಥಿತಿ:

ಗೆಲ್ಲುವ ಉದ್ದೇಶದಿಂದ ನಿಲ್ಲಿ ಜಯಿಸುವ ಮಹನೀಯರು 80 ಸಾವಿರ ಜನ ಸಂಖ್ಯೆಯಿಂದ 1 ಲಕ್ಷ 30 ಸಾವಿರದವರೆಗಿನ ಕ್ಷೇತ್ರದಲ್ಲಿ 50 ರಿಂದ 70 ಸಾವಿರದವರೆಗೆ ಇರುವ ಮತದಾರರನ್ನು ಅವರ ದನಿಗಳನ್ನು ಭಿನ್ನ ಭಿನ್ನ ಗ್ರಾಮಗಳ ಪ್ರತಿಭಾವಂತರಿಗೆ ಹೆಚ್ಚು, ವಿಜಯಂಟನ್ನು. ಈವಿದ್ಯೆಯಲ್ಲಿ ಸಳಗಿದವರನ್ನು ಮನವೊಲಿಸಬೇಕಾಗುತ್ತದೆ. ಈ ಓಡಾಟವು ಒಂದು ಸಲವಲ್ಲ. ಹತ್ತಾರು ಸಲವಾಗಬೇಕಾಗುತ್ತದೆ. ಒಂದೊಂದು ಸಲ ಒಂದೊಂದು ವಿಧವಾಗಿ ಒಬ್ಬನೇ ಉಮೇದುವಾರ ಭಿನ್ನ ಭಿನ್ನವೇಷಗಳನ್ನು ಧರಿಸಿ ಪ್ರಚಾರರಂಗದಲ್ಲಿಳಿಯಬೇಕಾಗುತ್ತದೆ ಉದಾಹರಣಾರ್ಥವಾಗಿ ಕುರುಬರ ಮುಂದೆ ಲಿಂಗಾಯ್ತರ ಮುಂದೆ ಕೆಲವೇಡರ ಧುರೀಣ, ಹರಿಜನ ಲೀಡರ್ ವಗೈರೆ ವಗೈರೆ ಕರೆತಂದಾಗ ಅವರು ಕೇಳಿದ್ದನ್ನೆಲ್ಲ ಮಾಡುತ್ತೇನೆನ್ನಬೇಕು. ಜನಸಂಖ್ಯೆಯಲ್ಲಿ ಈಗ ಸ್ತ್ರೀಯರೂ ಅರ್ಧದಷ್ಟಿರುವದರಿಂದ ಸ್ತ್ರೀಯರ ಪರವಾಗಿ ಒಳ್ಳೆಯ ಭಾಷಣಕಾರರನ್ನು ಕರೆಸುವುದೂ ಅಸಂಭವನೀಯವಲ್ಲ.

ಮೋಟಾರ್‌ಬಾಡಿಗೆ, ಪೆಟ್ರೋಲ್—ಎಜುಟರ ಖರ್ಚು, ಹೋಟೆಲ ಫಲಾಹಾರ ನುಮ್ರಣ ಕರಪತ್ರ, ಓಟಿಂಗ್ ದಿನ ಎಲ್ಲ ಪೋಲಿಂಗ್ ಕೇಂದ್ರಗಳಲ್ಲಿ ತಮ್ಮ ಎಜಂಟರನ್ನು ಕಳುಹಿಸಿ ಕೊಡಿಸುವ ಕೆಲಸ, ಬೆಂಬಲಿಗರು ಬಾಲಬಡೆಯುವವರ ನಿತ್ಯಂ ಪ್ರತಿ ಖರ್ಚುಗಳಿಗಾಗಿ ಸಾಹುಕಾರುಉಮೇದುವಾರರು ಒಬ್ಬ ಓಟರಿಗೆ 1 ರೂ ಪ್ರಕಾರ ಖರ್ಚು ಮಾಡುತ್ತಾರೆ. ಎರಡನೇ ದರ್ಜೆ ಉಳ್ಳವರೂ ೪...೫...ಓಟರಿಗೆ 1 ರೂ ಪ್ರಕಾರ ವೆಚ್ಚಮಾಡಬೇಕಾಗುತ್ತದೆ. ಎಷ್ಟೇ ಬಡವನೆಂದರೂ 15 ರಿಂದ 20 ಸಾವಿರವರೆಗೂ ಖರ್ಚುಮಾಡಬೇಕು. 60 ಸಾವಿರ ಮತದಾರರಿಲ್ಲಿ ಮತಗಟ್ಟೆಗಳಿಗೆ ಬರುವವರು 30 ಸಾವಿರ ಎಲ್ಲೆ ಆಗಲಿ ಕೇಕತ ಅರ್ಧಕ್ಕಿಂತಲೂ ಹೆಚ್ಚಿಗೆ ಹೋಲಾಗುವುದು ಅಸಂಭವ.

ಈ ಕಾರಣ ಎಷ್ಟೇವಿದ್ಯಾವಂತನಿರಲಿ, ನಾಗ್ಮಿಯಿರಲಿ, ಸಕಲಗುಣ ಸಂಪನ್ನನಿರಲಿ, ನುರಿತ ಕಾರ್ಯಕರ್ತನಿರಲಿ, ಒಳ್ಳೆಯಂಥಾ ಕಾರಣ ಪಟ್ಟದಲ್ಲಿರಲಿ, ಅವನಲ್ಲಿ ಹಣವಿಲ್ಲದೆ ಜನ ಬೆಂಬಲಿಗರಿಲ್ಲದೆ 1...20 ಸಾವಿರವೂ ಖರ್ಚುಮಾಡುವ 'ತಾಖತ್', ಇಲ್ಲದಿದ್ದರೆ, ಅವನಲಿವೋಫೆ ಗುಣಗಳೆಲ್ಲ ವ್ಯರ್ಥ ಅರಿಸಿ ಕಳುಹಿಸುವ ಹೆಸರುಗಳಲ್ಲಿ ಪ್ರಥಮಯೋಗ್ಯತೆಯೆಂದರೆ ಖರ್ಚುಮಾಡುವ ಶಕ್ತಿ. ಹಣವಿದ್ದವನಿಗೆ ಎಲ್ಲ ಅನುಕೂಲತೆಗಳೂ, ಸೌಲಭ್ಯಗಳೂ ಯಾವಾಗಲೂ ದೊರೆಯುತ್ತವೆ. ನಿರ್ಧಾಂತ, ಆದರ್ಶ ನಡೆನುಡಿ, ಇಂಟ್ರೆಸ್ಟ್, ಆಸಕ್ತಿ ಖರ್ಚುಮಾಡುವ ಶಕ್ತಿ ಇರುವವನಿಗೆ ಸಂಬಂಧಿಸಿಲ್ಲ. ಹಣವಿದ್ದಲ್ಲಿ ಹೆಣವಾದರೂ ಬಾಯ್ತೆರೆದೀತು. ದೊಡ್ಡ ದೊಡ್ಡ ಧುರೀಣರು ದೊಡ್ಡ ದೊಡ್ಡ ಶ್ರೀಮಂತರ ದಿನ್ನರ್ ಲಂಚ್ ಸ್ವೀಕರಿಸುವರಾಗಲಿ, ಬಡಕಾರ್ಯಕರ್ತನ (ಜೊತೆಯಲ್ಲಿ ಜೈಲುವಾಸ ಭೋಗಿಸಿದವನ) ಮನೆಯ ರೊಟ್ಟಿ—ಚಟ್ನಿಗೆ ಬರುವವರೇನು?

ರಂಗ ಮಂಚದಮೇಲೆ ಸಮತಾವಾದದ ಎಷ್ಟೇ ಘೋಷಣೆಗಳಾದರೂ ಕಾರ್ಯರೂಪದಲ್ಲಿ ಕೊನೆಗೆ ದುಡ್ಡಿದ್ದವನನ್ನೇ ಆಶ್ರಯಿಸಲು ಹೋಗಬೇಳು-ಇದು ಒಂದು ಕಾಡಕ್ಯ. ಯಾವಪಾರ್ಟಿಯಲಿಸ್ತ್ವವಾದರೂ ದುಡ್ಡಿನಿಂದಲೇ! **ಈ ಕಾರಣ ಯಾರು ಹೆಚ್ಚು ಹಣ ಖರ್ಚುಮಾಡುವರೋ ಅವರೇ ಆರಿಸಿ ಬರುವ ಸಂಭವಹೆಚ್ಚಿಗುಂಟು.**

—ಸ್ವೀಕಾರ-ವಿಮರ್ಶೆ—

"ಪ್ರಾರ್ಥನೆ" ಕ್ರಯ ೦-೨-೦

ಸರೋದಯ—ಅರವಟಿಗೆ

ಧಾರವಾಡ—ಜಿಲ್ಲ.

ಧಾರವಾಡ ಜಿಲ್ಲ ಅರವಟಿಗೆ ಸರ್ವೋದಯ ಯೋಜನೆಯ ಸಂಚಾಲಕರಾದ ಶ್ರೀ ನರಸಿಂಹ ದಾಬಡೆಯವರು ಮೂರನೆಯ ಆವೃತ್ತಿ "ಪ್ರಾರ್ಥನೆ, ಯನ್ನು ಲೋಕಮಾನ್ಯರ ಶತವಾರ್ಷಿಕ ಜಯಂತಿಯ ದಿನ ಪ್ರಕಟಿಸಿರುತ್ತಾರೆ. ಗಾಂಧೀಜಿಯು ನಿತ್ಯ ಪ್ರಾರ್ಥನೆಯ ಸರಳ ಕನ್ನಡಾನುವಾದವು ಈ ಚಿಕ್ಕಹೊತ್ತಿಗೆಯನ್ನು ಎಲ್ಲರೂ ಸಂಗ್ರಹಿಸಬೇಕಾದುದು ಅವಶ್ಯಕ.

ಮೋಟಾರು ವಾಹನಗಳ ಅವಶ್ಯಕ ವಿಮಾ

ಕಾಂಪ್ರಹೆನ್ಸಿವ್ ಪಾಲಿಸಿಗಳಿಗೆ ಅತಿ ಸುಲಭವಾದ ದರಗಳನ್ನೂ, ಮತ್ತಿತರ ವಿಧ ವಿಧವಾದ ಆಕರ್ಷಕ ಷರತ್ತುಗಳನ್ನೂ — ಎಲ್ಲಾ ತರದ ಮೋಟಾರು ವಾಹನಗಳಿಗೆ ನಾವು ಕೊಡುತ್ತೇವೆ.

ವಿವರಗಳಿಗೆ—

ಕಾರ್ಯದರ್ಶಿ

ಮೈಸೂರು ಸರ್ಕಾರದ ವಿಮಾಶಾಖೆ

ಬೆಂಗಳೂರು

ಅಥವಾ ಹತ್ತಿರ ಇರುವ ನಮ್ಮ ವಿಮಾ ಏಜಂಟರಿಗೆ

ಭಾಯೆ—ಭಾಯೆ

ಕಥಾ ಸಾರಾಂಶ

ಇದು ಇಬ್ಬರು ಸಹೋದರರ ಸುಂದರ ಕಥೆಯೆಂದು ಹೆಸರಿನಿಂದಲೇ ಗೊತಾಗುತ್ತದೆ. ರಾಜ ಮತ್ತು ಅಶೋಕ ಇಬ್ಬರ ದೇಹದಲ್ಲಿಯೂ ಒಂದೇ ರಕ್ತವಿತ್ತು. ಆದರೆ ದೇವರು ಅವರನ್ನು ಬಾಲ್ಯದಲ್ಲಿಯೇ ಬೇರ್ಪಡಿಸಿದ್ದನು.

ಯವ್ವನದಲ್ಲಿ ಪುನಃ ಈ ಸಹೋದರರು ಸಂಧಿಸಿದರು. ದೊಡ್ಡ ಅಣ್ಣ ಅಶೋಕನಿಗೆ ತಮ್ಮ ರಾಜನ ಗುರುತು ಸಿಕ್ಕಿದರೂ ಗುರುತಿಸಲು ತಿರಸ್ಕರಿಸಿದ. ಏಕೆಂದರೆ ಅಗ ಅವನನ್ನು ಅವನಾಶ್ವರ್ಯ ಸೌಂದರ್ಯಗಳು ಕುರುಡನನ್ನಾಗಿ ಮಾಡಿತ್ತು. ಅವನು ಸ್ವಾರ್ಥ, ಲೋಭಗಳ ಬೇಟೆಯಾಗಿದ್ದನು. ರಾಜನು ಸಹೋದರನ ಬುದ್ಧಿಯನ್ನು ತಿಳಿದನು. ಆವನೂ ಸಹ ತನ್ನ ಪರಿಚಯವನ್ನು ಹೇಳಿಕೊಳ್ಳಲಿಲ್ಲ.

ಅಶೋಕನು ನಿರ್ಲಜ್ಜೆಯ ಒಬ್ಬ ಸುಂದರ ರೂಪಸಸಿರ್ಣಿಯ ಬಲೆಯಲ್ಲಿ ಬಿದ್ದಿದ್ದನು. ಅದ್ದರಿಂದ ಅವನು ತನ್ನ ಮಕ್ಕಳು, ಕೈಹಿಡಿದ ಹೆಂಡತಿಯನ್ನು ಮರೆತು ಬಿಟ್ಟಿದ್ದನು.

ರಾಜನು ಒಬ್ಬ ನಿರ್ಗತಿಕ ಹೆಣ್ಣಿಗೆ ತನ್ನ ಮನೆಯಲ್ಲಿ ಆಶ್ರಯ ಕೊಟ್ಟನು. ತನ್ನ ಸಹಾಯಗಾರನು ತನ್ನ ಮೈದುನನೆಂದು ಆ ಹೆಂಗಸಿಗೆ ಗೊತ್ತಿರಲಿಲ್ಲ. ರಾಜನು ಆ ಹೆಂಗಸನ್ನು ಸುಖವಾಗಿ ಅವಳ ಮನೆಗೆ ಕಳುಹಿಸುತ್ತೇನೆಂದು ಮಾತು ಕೊಟ್ಟಿದ್ದನು.

ರಾಜನು ತಾನು ಕೊಟ್ಟ ಮಾತನು ಉಳಿಸಿಕೊಂಡನೆ?

ಇಬ್ಬರು ಸಹೋದರರು ಪರಸ್ಪರ ಸಂಧಿಸಿದರೆ?

ಆ ಸುಂದ ರೂಪಸಸಿರ್ಣಿಯುಏನಾದಳು.

ಇವುಗಳನ್ನು ತಿಳಿಯುವುದಕ್ಕೆ ತಾವು ಚಿತ್ರವನ್ನು ರಜತಪರದೆಯ ಮೇಲೆ ತಪ್ಪದೆ ನೋಡಿ.

ನವಭಾರತಕ್ಕೆ

ಚಂದಾದಾರರಾಗಿರಿ

ಭಾರತದ ಖನಿಜ ತೈಲ ಸಂಪತ್ತು

ಭಾರತವು ಪ್ರತಿವರ್ಷವೂ ಖನಿಜ ತೈಲವನ್ನು ಆಮದು ಮಾಡಿಕೊಳ್ಳುವ ಬಗ್ಗೆ 75 ಕೋಟಿರೂ, ಗಳಿಗೂ ಮೀರಿದ ಹಣವನ್ನು ವಿದೇಶೀಯ ಧನ ವಿನಿಮಯದಲ್ಲಿ ವೆಚ್ಚಮಾಡುತ್ತಿದೆ. ಆದರೆ ಖನಿಜ ತೈಲದ ಪ್ರಾಮುಖ್ಯತೆಯನ್ನು ವಿದೇಶೀಯ ಧನವಿನಿಮಯದಿಂದ ಮಾತ್ರವೇ ಬೆಲೆ ಕಟ್ಟುವಂತಿಲ್ಲ. ಅದು ಯುದ್ಧದ ದೃಷ್ಟಿಯಿಂದ ಮಹತ್ವ ಪೂರ್ಣವಾದ ವಸ್ತುವಾಗಿರುವುದೇ ಅಲ್ಲದೇ ದೇಶದ ಕೈಗಾರಿಕಾಭಿವೃದ್ಧಿಗೂ ಅದು ಮಹತ್ವಪೂರ್ಣವಾದುದಾಗಿದೆ, ವಿಶ್ವದಲ್ಲಿ ಅಣುಶಕ್ತಿಯನ್ನು ತರಿತ್ವವಾಗಿ ಅಭಿವೃದ್ಧಿಪಡಿಸುವ ಬಗ್ಗೆ ಪ್ರಯತ್ನ ನಡೆಸುತ್ತಿರುವಾಗಿನ ಖನಿಜತೈಲವು ಮುಖ್ಯವಸ್ತುವಾಗಿಯೇ ಉಳಿಯುವುದು.

ಭಾರತವು ಬಳಸುವ ಎಲ್ಲ ಖನಿಜ ತೈಲಕ್ಕಾಗಿ ಅಂದರೆ ಡೀಸೆಲ್ ಎಣ್ಣೆ, ಮೋಟಾರು ವಾಹನಗಳಿಗಾಗಿ ಉಪಯೋಗಿಸುವ ಪೆಟ್ರೋಲ್ ವಿಮಾನಗಳಿಗಾಗಿ ಬಳಸುವ ಪೆಟ್ರೋಲ್ ದೀಪೈಲತೈಲ ವರ್ಷಕ್ಕೆ 50 ಲಕ್ಷಟನ್ನುಗಳ ಕ್ರೂಡ್ ಆಯಿಲನ್ನು ಉತ್ಪಾದಿಸಬೇಕಾಗುವುದು. ಈ ಪ್ರಮಾಣದಲ್ಲಿ ಅಸ್ಸಾಂ ಎಣ್ಣೆ ಕಂಪನಿಯವರಿಗೆ ಸೇರಿದ ಹಾಗೂ ಭಾರತದಲ್ಲೆಲ್ಲಾ ಎಣ್ಣೆಕ್ಷೇತ್ರವಿರುವ ದಿಗ್ಬಾಯನಲ್ಲಿಕೇವಲ 4 ಲಕ್ಷಟನ್ನುಗಳಷ್ಟು ಕ್ರೂಡ್ ಆಯಿಲ್‌ನ್ನು ಉತ್ಪಾದಿಸಲಾಗುತ್ತದೆ. ಮುಂಬೈಗೆ ಸಮೀಪದಲ್ಲಿ ಇತ್ತೀಚೆಗೆ ಸ್ಥಾಪಿಸಲಾದ ಎರಡು ಶೈಲ ಶುದ್ಧೀಕರಣ ಕಾರ್ಖಾನೆಗಳಲ್ಲಿ ಆಮದು ಮಾಡಿಕೊಂಡ ಕ್ರೂಡ್‌ಆಯಿಲನ್ನು ಶುದ್ಧಿಪಡಿಸಿ ದೇಶದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲಾಗುತ್ತಿದೆ.

1955,56 ರಲ್ಲಿ ಭಾರತದಿಂದ 10—72 ಕೋಟಿ ರೂಗಳ ಬೆಲೆಬಾಳುವ 9,21 ಲಕ್ಷ ಟನ್ನುಗಳಷ್ಟು ಮ್ಯಾಂಗನೀಸ್ ಅದಿರನ್ನು ರಫ್ತು ಮಾಡಲಾಯಿತು.

1955 ರಲ್ಲಿ, ಭಾರತದಲ್ಲಿ 6,28,500 ರೂಗಳ ಬೆಲೆಬಾಳುವ ತೈಲ ಕಾರ್ಖಾನೆಗಳಿಗೆ ಬೇಕಾಗುವ ಯಂತ್ರೋಪಕರಣಗಳನ್ನು ತಯಾರಿಸಲಾಯಿತು.

ಕಂಪ್ಲಿ ಸಕ್ಕರೆ ಕಾರ್ಖಾನೆ

(ಬಳ್ಳಾರಿ ಶೆಂಟ್ರಲ್ ಕೋ ಆಪರೇಟೆವ್ ಸ್ಟೋರ್ಸ್ ಲಿಮಿಟೆಡ್ ಆಶ್ರಯದಲ್ಲಿ)

THE KAMPLI SUGAR FACTORY

of

(The Bellary Central Co-op Stores Ltd.,)

ಕಾರ್ಖಾನೆಯಲ್ಲಿ ೧—೨—೧೯೫೭ ರಿಂದ ಸಕ್ಕರೆಯು ಉತ್ಪನ್ನವಾಗಲಿದೆ.

TARGET DATE OF PRODUCTION OF SUGAR IN THE FACTORY 1—2—1957

ಅಧಿಕೃತ ಷೇರು ಭಂಡವಲ ರೂ. ೫೫,೦೦,೦೦೦

ಚಂದಾರೂಪದಲ್ಲಿ ರೂ ೨೦,೮೩,೦೦೦



(ಬಳ್ಳಾರಿಯಲ್ಲಿ ಬಿ. ಶೆ. ಶೆ. ಸ್ಟೋರ್ಸದ ಭವ್ಯ ಭವನ)

ಹಣ ಸಂಗ್ರಹದ ವಿವರಗಳು

1. ಮೈಸೂರು ಸರ್ಕಾರದ ಷೇರು ಮೊತ್ತ	10,00,000
2. .....ಕಂಪ್ಲಿ ಭಾಗದ ಕಬ್ಬು ಬೆಳೆಯುವ ರೈತರಿಂದ ಷೇರು ಹಣ	10,11,000
3. ಭಾರತದ ಇಂಡಸ್ಟ್ರಿಯಲ್ ಫೈನಾನ್ಸ ಕಾರ್ಪೋರೇಶನ್ ಎಂಬ ಆರ್ಥಿಕ ಸಂಸ್ಥೆಯಿಂದ ದೊರೆತ ಸಾಲ	40,00,000
ಒಟ್ಟು ಮೊತ್ತ—	60,11,000.

ಈ ವಿಧೆವಾಗಿ ಸ್ಕ್ಕರೆ ಕಾರ್ಖಾನೆಗೆ ದೊರೆತಿರುವ ಹಣದಲ್ಲಿ ದಿನಕ್ಕೆ ೬೦೦ ರಿಂದ 800 ಟನ್ನು ಕಬ್ಬನ್ನು ಅರಗಿಸಬಲ್ಲ ಯಂತ್ರಸಾಮಗ್ರಿಗಳಿಗಾಗಿ 49,30,000 ರೂ ಖರ್ಚಿಸಲಾಗಿದೆ. ಈಗಾಗಲೇ ಯಂತ್ರ ಸಾಮಗ್ರಿಗಳನ್ನು ತರಿಸಲು ಭಾರತ ಸರ್ಕಾರದ ಲೈಸನ್ಸ್ ಪಡೆದು ಪಶ್ಚಿಮ ಜರ್ಮನಿಯ ಕಂಪನಿಯವರಿಗೆ ಆರ್ಡರ್ ಕೊಡಲಾಗಿದೆ. (M/S. Braunschweigische maschinenbauan stalt Braunschweig)

ಇವರು ೨ ಸಾವಿರ ಟನ್ನು ತೂಕದ ಈ ಮಾಲನ್ನು ಒದಗಿಸಲು ಸಿದ್ಧರಿದ್ದು—ಈಗಾಗಲೇ 500 ಟನ್ನುಗಳನ್ನು ಹಡಗಿಗೇರಿಸಿರುವರು. ಬೊಂಬಾಯಿಯ ಸ್ಕ್ಕರೆಲ್ ಎಂಜಿನಿಯರಿಂಗ್ ವರ್ಕಸ್‌ರವರಿಂದ 520 ಟನ್ ಕಬ್ಬಿಣ ಮತ್ತು 520 ಟನ್ ಫ್ಯಾಬ್ರಿಕೇಟೆಡ್ ಸಾಮಗ್ರಿಗಳು ಸುಮಾರು 4 ಲಕ್ಷ ರೂ ಬೆಲೆಯವು ಬಂದಿವೆ. ಯಂತ್ರಗಳನ್ನು ಜೋಡಿಸಿ ಸ್ಥಾಪಿಸುವ ಕಾರ್ಯವನ್ನು ಬೊಂಬಾಯಿಯ ರಾಮಜಿ ದಯಾಳ ಲಾ ಅಂಡ್ ಸನ್ಸ್‌ರವರಿಗೆ 4 ಲಕ್ಷಕ್ಕೆ ಒಪ್ಪಿಸಲಾಗಿದೆ. ಯಂತ್ರಗಳ ಅಸ್ತಿಭಾರ ಮತ್ತು ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಮುಜ್ಯಾಸಿನ ಗ್ಯಾನನ್ ಡಂಕರ್ಲಿ ಕಂಪನಿಯವರಿಗೆ 7,30,000 ರೂ ಲಕ್ಷ ರೂ. ಗಳಿಗೆ ಒಪ್ಪಿಸಲಾಗಿದೆ.

ಚೀಫ್ ಇಂಜನಿಯರ್, ಅಸಿಸ್ಟೆಂಟ್ ಇಂಜನಿಯರ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರ್‌ರವರನ್ನು ನಿಯಮಿಸಲಾಗಿದೆ-ಯಂತ್ರಗಳ ಜೋಡಣೆ, ಮತ್ತು ಸ್ಥಾಪನೆಯ ಕಾರ್ಯವನ್ನು ಖುದ್ದಾಗಿ ಪರಿವೀಲಿಸಿ ಉತ್ಪನ್ನ ಕಾರ್ಯವನ್ನು ಯಶಸ್ವಿಯಾಗಿ ಪ್ರದರ್ಶಿಸಿ ತೋರಿಸಲು ಜರ್ಮನಿಯಿಂದ 6 ಎಂಜಿನಿಯರ್‌ರವರು, ಕೆಲವಿನಗಳಲ್ಲಿ ಬರಲಿದ್ದಾರೆ.

ಎಲ್ಲ ತರದ ಕಾರ್ಮಿಕರಿಗೂ ಭರದಿಂದಲೂ ಉತ್ಸಾಹದಿಂದಲೂ ಸಾಗಿದೆ

ಪ್ರೊ. ರಾಮಮೂರ್ತಿ, ಬಿ. ಎ.
ಕಾರ್ಯದರ್ಶಿ,

ಪ್ರೊ. ಲಿಂಗಾರೆಡ್ಡಿ, ಬಿ. ಎ. ಬಿ. ಎಲ್.
ಅಧ್ಯಕ್ಷ.

ಬಳ್ಳಾರಿ "ಪ್ರಭಾತ್" ಚಿತ್ರಮಂದಿರದಲ್ಲಿ

೪ ನೆಯ ವಾರ

ನಾಲ್ಕನೆಯವಾರ ವೈಭವವಾಗಿ ನಡೆಯುತ್ತಿರುವ

ಭಾಯೀ-ಭಾಯೀ

(ಎ. ವಿ. ಯಂ ರವರ ಹಿಂದೀ ಚಿತ್ರ)

ಅಶೋಕ ಕುಮಾರ್, ಕಿಶೋರ್, ಕುಮಾರ್, ನಿಮ್ಮಿ, ನಿರೂಪರಾಯ್, ಮುಮ್ತಾಜ್.

ನಟಿಸಿರುವ ಸಂಗೀತ ಚಿತ್ರಪಟ.

ಬಳ್ಳಾರಿ ಪ್ರಭಾತ್‌ದಲ್ಲಿ

ಶ್ರೇಷ್ಠವಾಗಿ ಪ್ರದರ್ಶಿಸಲಿರುವ ತಮಿಳು ಚಿತ್ರ

ಪಾರಿಜಾತ ಪಿಕ್ಚರ್ಸ್‌ರವರ

"ನಾನ್‌ಪೆಟ್ರ ಸೆಲ್ವಂ"

(చూసినెర్చుకో) (తెలుగు కామెంట్రీయొడనే.

ಬಳ್ಳಾರಿ "ಮುಬಾರಕ್" ಟಾಕೀಸ್‌ದಲ್ಲಿ

ಅನೋಘ-ಸಂಗೀತ 15-8-56 ರ ಸ್ವಾತಂತ್ರೋತ್ಸವದ ದಿನ ಅಪೂರ್ವ ದೃಶ್ಯ

ವಿನೋದಾವರ

ಚಿರಂಜೀವುಲು

(ತೆಲುಗು-ಚಿತ್ರ)

ನಟರು:—

ಎನ್. ಟಿ. ರಾಮರಾವ್, ಸಿ ಯಸ್, ಆರ್ ಗುಮ್ಮಡಿ, ವೆಂಕಟೇಶ್ವರರಾವ್.

ನಟಿಯರು:—

ಜಮುನ, ಸುರಭಿಬಾಲಸರಸ್ವತಿ, ಸೂರ್ಯಕಾಂತ, ಭಾಯೊನೇವಿ ಮೊದಲಾದವರು

ಬಳ್ಳಾರಿ 'ಮುಬಾರಕ' ದಲ್ಲಿ

ಇಲವೆಲುಪು (ತೆಲುಗು ಚಿತ್ರ)

೫೧ ನೆಯ ದಿನದ ಪ್ರದರ್ಶನೋತ್ಸವವು ಮುದ್ರಾಸಿನ ನೂಜರೆವಿನಸ್ಯ ಮಂತ್ರಿಗಳಾಗಿದ್ದ ಶ್ರೀ ಹಾ, ಶ್ರೀತಾರಾಪುರೆಡ್ಡಿಯವರಧ್ಯಕ್ಷತೆಯಲ್ಲಿ 11-8-56 ಪಾರ್ಥಲಾಭವನದಲ್ಲಿ ನೆರವೇರಿತು. ಚಿತ್ರವ್ಯಾಪಕ್ಷನ್ನು ಮತ್ತು ಪೂರ್ಣಿಮ ಪಿಕ್ಚರ್ಸ್ ವಿಜಯವಾಡ ಗುಂತಕಲ್ಲು ಇವರ ಪ್ರತಿನಿಧಿಗಳೇ ಅಲ್ಲದೆ ಸದರಿ ಚಿತ್ರಪಟಕ್ಕೆ ಸಂಬಂಧಿಸಿದ ಉತ್ಪಾದಕ ವ್ಯವಸ್ಥಾಪಕರುಮತ್ತು ಕಲಾವಿದರು ಆಗಮಿಸಿದ್ದರು. ಮುಬಾರಕ್ ಮಾಲೀಕರಾದ ಜನಾಬ್ ಎಂ. ಎ. ಹಕೆ ರವರು ಎಲ್ಲ ವ್ಯವಸ್ಥೆಗಳನ್ನು ಮಾಡಿ ಕಲಾವಿದರಿಗೆ ಸನ್ಮಾನೋತ್ಸವಕಗಳನ್ನು ಅರ್ಪಿಸಿದರು.

ನವ ಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ: ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.

(Regd. M. No. 1716.)

To

Sri.

Edited, Printed & Published by T. B. KESHAVA RAO. at Nava Bharat Printing Press, Bellary.

ನವಚೈತನ್ಯ

ಸೋಮವಾರ, ಸೆಪ್ಟೆಂಬರ್ 17,24–9–1956

ವರ್ಷ 20 | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ 6–7 | ಉತ್ತಿಷ್ಠತ! ಜಾಗೃತ!! ಪ್ರಾಪ್ಯವರಾನ್ನಿಬೋಧತ !!! | ಟಿ. ಬಿ. ಕೇಶವರಾವ್

ಮಧ್ಯಪೂರ್ವದಲ್ಲಿ ಯುದ್ಧ ಸಂಭವ

ಸೂಯೆಜ್ ಕಾಲುವೆ ಈಜಿಪ್ಟ್ ಅಭಿಪ್ರಾಯ

ಸೂಯೆಜ್ ಕಾಲುವೆಯನ್ನು ಜಂಟಿ ಬಂಡವಾಳ ಶಾಹಿಯ ಕರುಣೆಗೆ ಈಡು ಮಾಡುವಂಥ ಯಾವ ಏರ್ಪಾಡನ್ನೂ ಈಜಿಪ್ಟು ಒಪ್ಪಲು ಸಿದ್ಧವಾಗಿಲ್ಲ, ಎಂದು ಕೈರೋ ರೇಡಿಯೋ ಸಾರಿತು.

ಕಾಲುವೆ ಬಳಸುವವರ ಅಂತರ ರಾಷ್ಟ್ರೀಯ ಸಂಸ್ಥೆಯೊಂದನ್ನು ಏರ್ಪಡಿಸುವ ಯೋಜನೆ ಕುರಿತು ಅನೌಪಚಾರಿಕ ಸ್ವಿಟ್ಸ್ ಸೈಕ್ಲೋ ಮಿ। ಡಲ್ಲೆಸರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ ಸಂಗತಿಯನ್ನು ಬ್ರಾಡ್‌ಕ್ಯಾಸ್ಟ್ ಮಾಡಿದ ಕೂಡಲೆ ಕೈರೋ ರೇಡಿಯೋ ಈ ಟೀಕೆ ಮಾಡಿತು.

ಇದರ ಅರ್ಥವೇನು ?

ಈಜಿಪ್ಟಿನ ನ್ಯಾಯಬದ್ಧವಾದ ಹಕ್ಕು ಭಾಧ್ಯತೆ ಮತ್ತು ಪ್ರಭುತ್ವಾಧಿಕಾರದ ಮೇಲೆ ಕೆಲವು ರಾಷ್ಟ್ರಗಳುದಬ್ಬಾಳಿಕೆ ನಡೆಸಲು ನಿರ್ಧರಿಸಿಯೆಂಬು ದೊಂದೇ ಈ ಸಾಮ್ರಾಜ್ಯ ಶಾಹೀ ಬ್ರಿಟಿಷ್ ಯೋಜನೆಗೆ ಮಾಡಬಹುದಾದ ಅರ್ಥ.

ಈ ಜಿಪ್ಟು ಸೂಯೆಜ್ ಕಾಲುವೆಯ ಆಡಳಿತ ನಡೆಸಲು ಸಮರ್ಥವಾಗಿದ್ದರೂ, ಕಾಲುವೆಯ ಮೇಲಿರುವ ತನ್ನ ಪೂರ್ಣಾಧಿಕಾರಕ್ಕೆ ಬದ್ಧವಾಗಿದ್ದರೂ ಶಾಂತಿಯುತವಾದ ಇತ್ಯರ್ಥವನ್ನೇನೂ ಬೇಡವೆಂದು ಹೇಳಿಲ್ಲ.

ಆದರೆ ಒಂದು ರಾಜ್ಯದ ಅಧೀನಕ್ಕೆ ಕಾಲುವೆಯನ್ನು ಒಪ್ಪಿಸುವ ಮತ್ತು ಜಂಟಿ ಬಂಡವಾಳ ಶಾಹಿಯ ಕರುಣೆಗೆ ಅದನ್ನು ಈಡು ಮಾಡುವ ಯಾವ ಏರ್ಪಾಡನ್ನೂ ಈಜಿಪ್ಟು ಒಪ್ಪಿಲ್ಲ ಎಂದು ಕೈರೋ ರೇಡಿಯೊ ಸ್ಪಷ್ಟಪಡಿಸಿದೆ.

ರಷ್ಯಾ ಅಭಿಪ್ರಾಯ

ಸೂಯೆಜ್ ಕಾಲುವೆಯನ್ನು ಬಳಸುವವರ ಒಂದು ಸಂಸ್ಥೆಯನ್ನು ಕಟ್ಟಿಕೊಳ್ಳಬೇಕೆಂಬ ಪಾಶ್ಚಾತ್ಯರ ಯೋಜನೆ ಪ್ರಪಂಚ ಸಂಸ್ಥೆಯ ಪ್ರಣಾಳಿಕೆಗೂ, ಶಾಂತಿ ಭದ್ರತೆಗಳಿಗೂ ವಿರೋಧವಾದ ದ್ದೆಂದು ಮಾಸ್ಕೋರೇಡಿಯೋ ಪ್ರಸಾರ ಮಾಡಿತು.

ಸೂಯೆಜ್ ಸಮಸ್ಯೆ ಬಗೆಹರಿಸಲು ಈ ಯೋಜನೆ ತೀರಾ ಅನುಚಿತವೂ ಅನ್ಯಾಯವೂ ಆದದ್ದೆಂಬುದು ಲೋಕಾಭಿಪ್ರಾಯ ಎಂದೂ ರೇಡಿಯೋ ತಿಳಿಸಿದೆ

ಈ ಯೋಜನೆ ಹಿಂದಿನ ಸೂಯೆಜ್ ಕಾಲುವೆ ಕಂಪೆನಿಯನ್ನು ಪುನರುಜ್ಜೀವನ ಮಾಡುತ್ತದೆ. ಬೇರೆ ಮಾತಿನಲ್ಲಿ ಹೇಳಬೇಕೆಂದರೆ ಈಜಿಪ್ಟ್‌ನ್ನು ಹಿಂದಿನ ಪರಾಧೀನ ಸ್ಥಿತಿಗೆ ನೂಕುತ್ತದೆ ಎಂದೂ ಮಾಸ್ಕೋ ರೇಡಿಯೋ ಟೀಕೆ ಮಾಡಿದೆ.

ಇನ್ನೂ ಎರಡು ಮಲೇರಿಯಾ ಕೇಂದ್ರಗಳು

ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಇನ್ನೂ ಎರಡು ಮಲೇರಿಯಾ ಪರಿಶೀಲನಾ ಕೇಂದ್ರಗಳನ್ನು ಸಂಸ್ಥಾನಕ್ಕೆ ಕೊಡಲಾಗುವುದೆಂದೂ 10 ಲಕ್ಷ ಜನ ಸಂಖ್ಯೆಯ ಪ್ರದೇಶಗಳಿಗೆ ಒಂದರಂತೆ ಈ ಕೇಂದ್ರಗಳು ಕೆಲಸ ಮಾಡುವುವೆಂದೂ ರಾಜಕುಮಾರಿ ಅಮೃತ್ ಕೌರ್ ತಮ್ಮ ಭಾಷಣದಲ್ಲಿ ತಿಳಿಸಿದರು.

'ದೇಶದಲ್ಲಿ ಉಕ್ಕಿನ ತಯಾರಿಕೆಗಾಗಿ ಅಧಿಕವಾಗಿ ವಿದೇಶೀ ತಂತ್ರಜ್ಞರನ್ನು ಕರೆಸಿಕೊಳ್ಳುವುದು ನಾಡಿನ ಹಿತಕ್ಕೆ ವಿರುದ್ಧವಾದುದು. ಬುದ್ಧಿ ಶಕ್ತಿಯೂ ಸಾಮರ್ಥ್ಯವೂ ಉಳ್ಳ ಯುವಕರನ್ನು ಹೆಚ್ಚುಹೆಚ್ಚಾಗಿ ನಾಡಿನ ಮೂರು ಉಕ್ಕಿನ ಕಾರ್ಖಾನೆ ಕೆಲಸಗಳಿಗೆ ತೆಗೆದುಕೊಳ್ಳದಿರುವುದು ವಿಷಾದಕರ. ಎಂದು ತಯಾರಿಕೆಗಾರರ ಸಮಿತಿಯ ಸಭೆಯಲ್ಲಿ ಡಾ॥ ಬಿಶ್ವೇಶ್ವರಯ್ಯನವರು ಭಾಷಣವಿತ್ತರು.

ಜಬ್ಬಲ್ಪುರದಲ್ಲಿಂದು ಮತ್ತೆ ಮತೀಯ ಉದ್ರೇಕದ ಗಲಭೆಗಳು ನಡೆದು ಸಾಲ್ಕು ಜನ ಸತ್ತರು, 17 ಮಂದಿ ಗಾಯಿಗೊಂಡರು.

ಬೊಂಬಾಯಿಯ ಭಾರತೀಯ ವಿದ್ಯಾಭವನದವರು ಪ್ರಕಟಿಸಿದಮತೀಯ ಮುಖಂಡರು ಎಂಬ ಪುಸ್ತಕದಲ್ಲಿ ಮಹಮದ್ ಪೈಗಂಬರ್ ಬಗ್ಗೆ ಆಕ್ಷೇಪಾರ್ಹ ಅಂಶಗಳು ಪ್ರಕಟವಾಗಿರುವ ಬಗ್ಗೆ ಪ್ರತಿಭಟನಾರ್ಥ ಪ್ರಾರಂಭವಾದ ಪ್ರದರ್ಶನಗಳು ಈಗ ತೀವ್ರ ಗಲಭೆಯ ಸ್ವರೂಪ ತಾಳಿವೆ.

ಸೂಯೆಜ್ ವಿವಾದದ ಬಗ್ಗೆ ಹೊಸ ಸಮ್ಮೇಳನ ನಡೆಸಬೇಕೆಂಬ ಈಜಿಪ್ಟಿನ ಸಲಹೆಗೆ ರಷ್ಯವೂ ಭಾರತವೂ ಸೇರಿ 20 ರಾಷ್ಟ್ರಗಳು ಒಪ್ಪಿವೆಯೆಂದು ಈಜಿಪ್ಟ್ ವಾರ್ತಾ ಶಾಖಾಧಿಕಾರಿ ತಿಳಿಸಿದ್ದಾರೆ.

ಈ ದೇಶಗಳು ಯಾವುವೆಂದರೆ, ಜನಾನು, ಪಾಕಿಸ್ತಾನ, ಇಂಡೋನೇಸ್ಯ, ಅಫ್ಘಾನಿಸ್ತಾನ, ಜೋರ್ಡಾನ್, ಸಿರಿಯಾ ರುಮೇನಿಯಾ, ಸೂಡಾನ್. ಲಿಬಿಯ, ಪೋಲೆಂಡ್, ಸೌದಿ ಅರೇಬಿಯ, ಲೆಬನಾನ್,ಜನತಾ ಚೀನಾ, ಪೂರ್ವ ಜರ್ಮನಿ, ಜೆಕೆಸ್ಲೋವಾಕಿಯ, ಹಂಗೇರಿ,ಬಲ್ಗೇರಿಯ ಮತ್ತು ಯುಗೊಸ್ಲಾವಿಯ.

ಸುಖಾಶ್ರಯ-ಪ್ರಬೋಧ—

ಸಂಸ್ಥಾಪಕರು:— ಪೀಠಾಧಿಪತಿ ಸಚ್ಚಿದಾನಂದ ಸ್ವಾಮಿಗಳು

ವಾರ್ಷಿಕ ಚಂದಾ 4—0—0 ಸಂಪಾದಕರು:— ಶ್ರೀ ಕೆ. ಜಡೆಸಿದ್ದಪ್ಪ

ವೇದಾಂತ ಸಂಬಂಧೀ ಈ ಮಾಸ ಪತ್ರಿಕೆಯು ಅಚ್ಚ ಕನ್ನಡ ಭಾಷೆಯ ಸರಳ ಶೈಲಿಯಲ್ಲಿ ರಾಯದುಗಕ್ಕದಿಂದ ಮತ್ತೆ ಹೊರಟಿರುವದು ಜಿಜ್ಞಾಸುಗಳಿಗೆ ಆನಂದಾಯಕವಾದ ಸಮಾಚಾರವಾಗಿದೆ. ಇದನ್ನು ಸರ್ವಾಂಗ ಸುಂದರವಾಗಿ ಮಾಡಿ ಪಂಡಿತ ಪಾಮರರಿಗೂ ಆಕರ್ಷಕವಾಗಿ ಮಾಡಲು ಯತ್ನಗಳು ನಡೆಯುತ್ತಲಿವೆ. ಜೀವನದಲ್ಲಿ ನೈರಾಶ್ಯವು ಹೆಚ್ಚಿ ನಾಸ್ತಿಕತೆಯ ವ್ಯಾಪಕವಾಗುತ್ತಿರುವ ಈ ಆಧುನಿಕ ಯುಗದಲ್ಲಿ ಇಂತಹ ಪತ್ರಗಳು ನವಜೀವನದ ಆಶಾಕಿರಣವಿದ್ದಂತೆಂಬುದನ್ನು ಮರೆಯಬಾರದು. ಪ್ರಾಚೀನ ಸಂಸ್ಕೃತಿಯ ಪರಂಪರೆಯನ್ನು ರಕ್ಷಿಸಿಕೊಂಡು ಬಂದ ಭಾರತದಲ್ಲಿ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಆಧ್ಯಾತ್ಮಿಕತೆಯು ರಕ್ತಗತವಾಗಿದ್ದು ಇದಕ್ಕೆ ಪ್ರೋತ್ಸಾಹ ಕೊರೆಯುವದರಲ್ಲಿ ಸಂಶಯವಿಲ್ಲ.

ಶ್ರೀ ಸಚ್ಚಿದಾನಂದ ಸ್ವಾಮಿಗಳು ಲೌಕೀಕದಲ್ಲಿಳಿದು ಪರಿಶ್ರಮಿಸಿ ಪತ್ರಿಕೆಗಾಗಿ ಮುದ್ರಣ ಯಂತ್ರವನ್ನು ದೊರಕಿಸಿರುವರು. ಅಂಚೆಸೌಲಭ್ಯ ಇತರ ಸೌಕರ್ಯಗಳು ದೊರೆತ ಕೂಡಲೇ ಚಂದಾದಾರರಿಗೆ ಸಕಾಲಕ್ಕೆ ಪತ್ರಿಕೆಗಳು ದೊರೆಯುತ್ತವೆ. ಅಲ್ಲಿಯವರವಿಗೂ ಸ್ವಲ್ಪ ತಾಳ್ಮೆ ವಹಿಸಲು ನಮ್ಮ ಕೋರಿಕೆ. (ಸಂಪಾದಕ—ನವಭಾರತ)

ಬಳ್ಳಾರಿಯಲ್ಲಿ ವ್ಯವಸಾಯ ಮಂತ್ರಿ

ಶ್ರೀ ಹೆಚ್.ಎಂ. ಚನ್ನಬಸಪ್ಪನವರು

ಮೈಸೂರು ವ್ಯವಸಾಯ ಮಂತ್ರಿ ಶ್ರೀ ಹೆಚ್ ಎಂ. ಚನ್ನಬಸಪ್ಪನವರು 11 ನೆಯ ತಾ! ರಾತ್ರಿ ಆಗಮಿಸಿದರು— 12 ನೆಯ ತಾ! ಪ್ರಾತಃಕಾಲ ಜೋಳದ ರಾಸಿ, ಹಗರಿ ಗ್ರಾಮಗಳಲ್ಲಿ ವ್ಯವಸಾಯ ಪರಿಶೋಧನಾ ಕೇಂದ್ರಗಳನ್ನು ಸಂದರ್ಶಿಸಿ. 11-30 ಯಿಂದ 1-30 ವರಿವಿಗೆ ಅಧಿಕಾರಿಗಳೊಡನೆ ಆಹಾರ ಮತ್ತು ಇತರ ಮುಖ್ಯಸಮಸ್ಯೆಗಳನ್ನು ಚರ್ಚಿಸಿ— ಸೂಕ್ತ ಸಲಹೆಗಳನ್ನು ಕೊಟ್ಟರು.

ಮಧ್ಯಾನ್ಹ ತುಂಗಭದ್ರಾ ನೀರಾವರಿ ಅಭಿವೃದ್ಧಿ ಸಮಿತಿಯ ಸಭೆಯು— ಕುರುಗೋಡಿನ ಶ್ರೀ ಮರಿಬಸವನಗೌಡರ ತೋಟದಲ್ಲಿ ಸಮಾವೇಶವಾಗಿದ್ದಿತು. 1—4—56 ರಲ್ಲಿ ನಡೆದ ಸಭೆಯ ಕಾರ್ಯಕಲಾಪಗಳನ್ನೋದಿ ದಿರಿಷಾರ್ಡು ಮಾಡಲಾಯಿತು. ಸ್ಪೆಶಲ್ ಆಗ್ರಿಕಲ್ಚರಲ್ ಆಫೀಸರ್ ಶ್ರೀ ಶಿ. ರಾಮಯ್ಯನವರು ಇಲ್ಲಿಯವರಿಗಾದ ಅಭಿವೃದ್ಧಿಯನ್ನು ಕುರಿತು ವರದಿಯನ್ನೋದಿದರು—ಇದಾದ ನಂತರ ವಿಷಯಗಳ ಚರ್ಚೆಗಾರಂಭವಾಯ್ತು. ರೈತರಿಗೆ ಸನ್ ಹೆಂಪ್, ಸಬ್ಬಕ್ಕಿ ನಿಯಾ ಬೆಳೆಯಲು ಸಿರುಗಂದಾಯ ಹಾಕವೆ ಪ್ರೋತ್ಸಾಹಿಸಬೇಕು. ತುಂಗಭದ್ರಾ ಕೆಳಕಾಲುವೆ ಯಾವಾ ಮುಚ್ಚಬೇಕೆಂಬುದನ್ನು ನಿರ್ಧರಿಸಬೇಕು. ನೀರಾವರಿ ಭೂಮಿಗಳ ಬಳಿ ನೀರು ಹರಿದುಹೋಗಲು ಸೌಕರ್ಯಗಳನ್ನೊದಗಿಸಬೇಕು. ಆಯಕಟ್ಟು ಭಾಗದಲ್ಲಿ ಹುಳನಾಶನ ಮಾಡುವ ರಾಸಾಯನಿಕಗಳನ್ನು ಎಲೆಗೊಬ್ಬರಕ್ಕಾಗಿ ಬೀಜಗಳನ್ನು ಉರ್ಧರೇಟಿಗೆ ಒದಗಿಸಬೇಕು. ಕಾಲುವೆ ಹೊಲ ಕಾಲುವೆಗಳಲ್ಲಿ ಮುಚ್ಚುವ ತೆಗೆಯುವ ಪರಿಕರಗಳನ್ನು ಹಂಚಬೇಕು. ನೀರು ಗಂಟೆಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಆಯಕಟ್ಟುರಸ್ತೆಗಳನ್ನು ನಿರ್ಮಿಸಬೇಕು— ವಗೈರೆ ಮುಖ್ಯವಿಷಯಗಳ ನಿರ್ಣಯಕ್ಕಾಗಿ ಇನ್ನು ಒಂದು ಧಾರದೊಳಗಾಗಿ ಬೆಂಗಳೂರಲ್ಲಿ ಈ ಸಭೆಯು ಕರೆಯಬೇಕೆಂದು ಮಂತ್ರಿಗಳು ಸೂಚಿಸಿದರು.

ಸ್ವೀಕಾರ ವಿಮರ್ಶೆ

ಶ್ರೀ ರುದ್ರಮುನಿ ಸ್ವಾಮಿಗಳ

ಚರಿತಾಮೃತ ಬೆಲೆ 2—0—0

ದೊರೆಯುವ ಸ್ಥಳ:— ದಾಸೋಹ ಮಠ-ಅಣ್ಣಿಗೇರಿ (ಧಾರವಾಡಜಿಲ್ಲಾ)

ಸಂಗ್ರಹ ಯೋಗ್ಯವಾದುದು. ಮಹಾಪುರುಷರ ಜೀವಿತ ವಿಶೇಷಗಳನ್ನು ತಿಳಿಯುವುದೂ, ಅವರ ಆದರ್ಶಗಳ ಅನುಕರಣೆ ಮಾಡುವುದೂ ಆಗತ್ಯವಾದುದು.

ರಷ್ಯಾದಲ್ಲಿ ಅಟಾಮಿಕ್ ಅಸ್ತ್ರಗಳ ಪ್ರಯೋಗವು ಕಳೆದ ತಿಂಗಳು ಕೊನೆಯ ವಾರದಲ್ಲಿ ಎರಡು ಸಲ ನಡೆಯಿತೆಂದು ಅಮೆರಿಕಾದ ಅಧ್ಯಕ್ಷರು ಪ್ರಕಟಿಸಿದರು. ನಂತರ ರಷ್ಯಾ ಸರ್ಕಾರವೂ ಒಪ್ಪಿಕೊಂಡಿತು.

ಭಾರತದ ಅಭಿಪ್ರಾಯ

ಶ್ರೀ ಕೃಷ್ಣಮೆನನ್‌ರ ಹೇಳಿಕೆ

ಪ್ರಪಂಚದ ಕಣ್ಣೆಲ್ಲವೂ ಈಗ ಸೂಯಜ್ ಮೇಲಿದೆ. ಸೂಯಜ್ ಬಿಕ್ಕಟ್ಟು ಯಾವರೀತಿ ಪರಿಣಮಿಸುವದು ಎಂದೇ ನಾಗುವುದು ಎಂಬುದನ್ನು ಹೇಳಲು ಸಾಧ್ಯವಿಲ್ಲ ಅಂತೂ ಬಹು ಕಷ್ಟವಿಷಮ ಪರಿಸ್ಥಿತಿ ಒದಗಿದೆ—

ಭಾರತ ಸರ್ಕಾರವು ಸೂಯಜ್ ಬಿಕ್ಕಟ್ಟಿನ ಇತ್ತೀಚಿನ ವಿದ್ಯಮಾನಗಳನ್ನು ಪರೀಕ್ಷೀಲಿಸುತ್ತಿದೆ. ಲೋಕ ಸಭೆಯಲ್ಲಿ ಪ್ರಧಾನಿ ನೆಹರು ಕೊಟ್ಟಿರುವ ಹೇಳಿಕೆಯಿಂದಲೂ ವಿದೇಶಾಂಗ ಕಚೇರಿಗೆ ಪಶ್ಚಿಮ ಯೂರೋಪಿನ ಮತ್ತು ವಿಶ್ವದ ದೇಶಗಳ ರಾಯಭಾರಿಗಳು ಕೊಡುತ್ತಿರುವ ಭೇಟಿಗಳಿಂದಲೂ ಕಾತ ರೆಯ ಮತ್ತಕ ತೆಗಳಿಂದಲೂ, ವಿಷಮ ಪರಿಸ್ಥಿತಿಯು ವ್ಯಕ್ತವಾಗುತ್ತಿದೆ.

ಬ್ರಿಟನ್ನಿನ ಕೈಕಮೊಪನ್ಸ್ ಮಿನಿಸ್ಟರ್ ಮಿ| ಮನಾಲ್ಡಂ ಮ್ಯಾಕ್ಡೊನಾಲ್ಡರೂ ಅಮೆರಿಕದ ರಾಯಭಾರ ಪ್ರತಿನಿಧಿ ಮಿ| ಎಫ್ ಪಿ ಬಾರ್ಟಿಟರೂ ಭೇಟಿಯಿತ್ತು ಶ್ರೀ ವಿ. ಕೆ. ಕೃಷ್ಣಮೆನನ್‌ರೊಡನೆ ಬೇರೆ ಬೇರೆಯಾಗಿ ಮಾತುಕತೆ ನಡೆಸಿದರು.

ನೆಹರೂರವರು ಲೋಕಸಭೆಯಲ್ಲಿ ಕೊಟ್ಟ ಹೇಳಿಕೆಯ ಪ್ರತಿಗಳನ್ನು ವಿದೇಶ ರಾಯಭಾರಿಗಳಿಗೆ ಕೊಡಲಾಯಿತು.

ಇಂದಿನ ಸನ್ನಿವೇಶದಲ್ಲಿ ಬ್ರಿಟನ್, ಫ್ರಾನ್ಸ್‌ಗಳ ಉದ್ರಿಕ್ತ ವರ್ತನೆ ಸರಿಯಲ್ಲ ಅಧ್ಯಕ್ಷ ನಾಸರ್ ಮತ್ತು ಅವರ ಆಳ್ವಿಕೆಯನ್ನು ನಾಶ ಮಾಡುವುದೇ ಈ ವರ್ತನೆಯ ಉದ್ದಿಶ್ಯ ಎಂದು ಹೇಳಲಾಗಿದೆ.

ಈಗಲೂ ಸಪ ಶಾಂತಿ ಮತ್ತು ವಿವೇಕದಿಂದ ಸಂಧಾನಮಾರ್ಗ ಅವಲಂಬಿಸಿ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಬಹುದೆಂದು ಅಭಿಪ್ರಾಯವಿದೆ. ಶಾಂತಿ ಸಂಧಾನಕ್ಕಾಗಿಯೇ ಭಾರತವು ತನ್ನ ಪ್ರಭಾವವನ್ನು ಹಾಕುತ್ತಿದೆ.

ಸೆಕ್ಯೂರಿಟಿ ಕೌನ್ಸಿಲಿಗೆ ಈಜಿಪ್ಟು ಸೂಯಜ್ ಪ್ರಶ್ನೆಯನ್ನು ತರಬಹುದು. ಆದರೆ ಸೆಕ್ಯೂರಿಟಿ ಕೌನ್ಸಿಲು ನ್ಯಾಯದಿಂದ ಪರೀಕ್ಷಿಸುವುದೇ ಎಂಬುದು ಸಂದೇಹಕರವಾಗಿದೆ.

ಅಖಿಲ ಭಾರತ ಕೈಕಸಬುಗಳ ಮಂಡಲಿಯು ಜರತಾರಿ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸುವುದ ಕ್ಕೋಸ್ಕರವಾಗಿ ಸೂರತ್ತಿನಲ್ಲಿ ಒಂದು ಪ್ರಾಯೋಗಿಕ ಕೇಂದ್ರವನ್ನು ಸ್ಥಾಪಿಸಿದೆ. 1959 ರಲ್ಲಿ ಜೂಲೈ ಕೊನೆಯ ಕೊತ್ತಿಗೆ ಈ ಹಂಚಿಕೆಗೆ 40,000 ರೂ ಳ ಖರ್ಚುಆಗಲಿದೆ.

ಕುಷ್ಠ ರೋಗಿಗಳಿಗೆ ಸುಲಭ ಚಿಕಿತ್ಸೆ

ಕುಷ್ಠರೋಗಿಗಳು ನಿರಾಶರಾಗುವ ಕಾರಣವಿಲ್ಲ. ಈ ವಿಷಯದಲ್ಲಿ ಜಗತ್ತಿನ ಶ್ರೇಷ್ಠ ಪರಿಶೋಧಕರು ಅತ್ಯಂತ ಸುಲಭ ಸಾಧ್ಯವಾದ ಚಿಕಿತ್ಸೆಯನ್ನು ಕಂಡುಹಿಡಿದಿರುತ್ತಾರೆ. ಸರ್ಕಾರದವರು ರೋಗಿಗಳಿಗೆ ಉಚಿತವಾಗಿ ಈ ಔಷಧಿಗಳನ್ನು ಕೊಡಲೇರ್ಪಡಿಸಿರುತ್ತಾರೆ. ಜಿಲ್ಲಾ ಆಸ್ಪತ್ರೆಯಲ್ಲಾಗಲಿ, ಡಿಸ್ಪೆನ್ಸ್ಕ್ಯ ಹೆಲ್ತ್ ಆಫೀಸರ್‌ರವರ ಮೂಲಕವಾಗಲಿ ತಮ್ಮೂರಿನ ಆಸ್ಪತ್ರೆಯಿಂದಾಗಲಿ ಈ ಔಷಧ ಪಡೆಯಬಹುದು. ಈ ಕಾರಣ ತೀರನಿರ್ಗತಿಕರಾದ ಕುಷ್ಠರೋಗಿಗಳೂ ಸಹ ಇದರ ಲಾಭಪಡೆಯಬಹುದು.

ನಮ್ಮದೇಶದಲ್ಲಿ ಬಡವ ಬಲ್ಲಿದನೆಂಬ ಭೇದಭಾವವಿಲ್ಲದೆ ವಿವಿಧ ಮಟ್ಟದ ಜನರು ಈ ರೋಗಕ್ಕೆ ಆಹುತಿಯಾಗಿರುವರು. ಈ ರೋಗಿಗಳನ್ನು ಸಮಾಜವು ಬಹಿಷ್ಕರಿಸಿ, ಅಸ್ಪೃಶ್ಯತೆಯನ್ನು ಹೇರಿರುವ ಕಾರಣ ಆ ಕಳಂಕವ ಭಯದಿಂದ ತಮ್ಮ ರೋಗವನ್ನು ಮುಚ್ಚಿಕೊಂಡು ಸಾವಿರಾರು ಜನರು ಪೀಡೆಯನ್ನು ಗುಪ್ತವಾಗಿ ಅನುಭವಿಸುತ್ತಾ ರೋಗನಿವಾರಣೆಗಾಗಿ ಪ್ರಕಟಮಾಡದೆ, ಅದೃಶ್ಯರಾಗಿರುವರು. ಈ ರೋಗವು ಭಯಂಕರವಾದ ವ್ಯಾಧಿಯಾಗದ, ಅಂಟು ಜಾಡ್ಯವೆಂದು ಜನತೆಯು ನಂಬಿರುವುದು ನಾಡಿನ ಆರೋಗ್ಯ ರಕ್ಷಣೆಗೆ ಘಾತುಕವಾಗಿದೆ. ಆಧುನಿಕ ಪರಿಶೋಧನೆಗಳ ಈ ವಿಜ್ಞಾನೀ ಜಗತ್ತಿನಲ್ಲಿ ಸತ್ಯವರು ವುನರ್ಜೀವಿಗಳಾಗಿ ಬರುವುದೊಂದರ ಹೊರತಾಗಿ ಉಳಿದ ಕಾರ್ಯಗಳನ್ನೆಲ್ಲ ಈ ವಿಜ್ಞಾನೀಮಾನವನು ಯಶಸ್ವಿಯಾಗಿ ಮಾಡಿ ತೋರಿಸಿದ್ದಾನೆ.

ಭಾರತದಲ್ಲಿ ಈ ರೋಗಗ್ರಸ್ತರು ವೈದ್ಯರೆಡೆಗೆ ಹೋಗುವುದು ಕಡಮೆ. ದಾರಿದ್ರ್ಯದಿಂದ ನಿಧಾನವಾಗಿ ಹಿಡಿತಕ್ಕೆ ಬರುವ ಈ ರೋಗವ ಚಿಕಿತ್ಸೆಗಾಗಿ ಅಧುನಿಕ ಡಾಕ್ಟರರು ಬೇಡುವಷ್ಟು ಹಣಕೊಡಲಾರದೆ ರೋಗದ ಸಂಪೂರ್ಣನಿವಾರಣೆಯಾಗುವಂತಿಲ್ಲ. ಅಲ್ಲದೆ ಈ ಕಾರಣದಿಂದ ನೂತನ ಸಂಶೋಧಗಳಿಗೂ ಪ್ರೋತ್ಸಾಹ ದೊರಕಿಲ್ಲ ರೋಗಿಗಳಲ್ಲಿ, ವೈದ್ಯರಲ್ಲಿ ಅಪರಿಮಿತ ತಾಳ್ಮೆಬೇಕು.

ಬೆಂಗಳೂರಿನ ಶೆಂಟ್ರಲ್ ಲೆಪ್ರೋರಿಯಂ ಎಂಬ ಕುಷ್ಠರೋ-ನಿವಾರಣಾ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿರುವ ನೂರಾರು ರೋಗಿಗಳನ್ನು ಕಾಣಬೇಕು. ಅಲ್ಲಿನ ಚಿಕಿತ್ಸಕರ ತಾಳ್ಮೆಯು ಪ್ರಶಂಸನೀಯ. ಸಾಮಾನ್ಯ ಪರಿಸ್ಥಿತಿಯಿಂದ ಭಯಂಕರ ವ್ರಣಗಳವರೆಗೆ ದೇಹವು ಕೊಳೆಯುತ್ತಿರುವ ಸ್ತ್ರೀಪುರುಷರೋಗಿಗಳ ದೈಹಿಕ ಮತ್ತು ಮಾನಸಿಕ ವೇದನೆಯು ಅಸಹ್ಯವಿದ್ದರೂ, ಡಾಕ್ಟರರ ದಯಾಯುಕ್ತ ಚಿಕಿತ್ಸೆಯಿಂದ ಶೇಕಡ 60, ಜನರು ಪೂರ್ಣವಾಗಿ ಗುಣಹೊಂದಿ ಹೊರಹೋಗುತ್ತಿರುವರು. ಇನ್ನುಳಿದ ಅಂಶದವರು ದೇಹಾರೋಗ್ಯವನ್ನು ಸರಿಯಾಗಿ ಇಟ್ಟುಕೊಳ್ಳವೆ ಇನ್ನೂ ಕಸರನ್ನು ಇಟ್ಟುಕೊಂಡಿರುವರು. ಒಳ್ಳೆಯ ಆಹಾರ ನಿಯಮಿತ ಮತ್ತು ಸಾಮಯಿಕ ಸದಭ್ಯಾಸಗಳಿಂದ ಆರೋಗ್ಯವನ್ನು ಕಾಪಾಡಿಕೊಂಡರೆ—ಯಾವ ರೋಗವೂ ಬರುವುದಿಲ್ಲ ಕುಷ್ಠರೋಗದ ಬೆಳವಣಿಗೆಯೂ ಕುಂಠಿತವಾಗುತ್ತದೆ.

ಕುಷ್ಠ ನಿದಾನ, ಸಂಪ್ರಾಪ್ತಿಯ ಬಗ್ಗೆ ವೌರ್ವಾತ್ಯ ಮತ್ತು ವಾಸ್ಟಿನೂತ್ಯ ದೇಶಗಳಲ್ಲಿ ವೈದ್ಯರಲ್ಲಿ ಭಿನ್ನಾಭಿಪ್ರಾಯವಿರುವುದಾದರೂ, ಕೆಲವಿಷಯಗಳಲ್ಲಿ ಏಕ್ಯಾಭಿಪ್ರಾಯವುಂಟು. ಓಕರಿಕೆ, ಮಲಮೂತ್ರಾದಿಗಳ ವೇಗ ತಡೆವುದು, ಊಟವಾದನಂತರ ಶ್ರಮಜನ್ಯ ಕೆಲಸಕ್ಕೆ ತೊಡಗುವುದು, ಯಾವಾಗಲೂ ಬಿಸಿಲು ಬೆಂಕಿ ಜಳಕಾಸಿಕೊಳ್ಳುವ ಸುರಭ್ಯಾಸ, ಬಿಸಿಲಿನಿಂದ ಬಂದಾಗಲಿ, ದಣಿವು ಬಂದಾಗಲಿ, ನೀರು ಕುಡಿಯುವಿಕೆ, ಅಜೀರ್ಣವಿದ್ದರು ಊಟ ಮಾಡುವುದು ಉದ್ದು, ಮೂಲಂಗಿ ಎಳ್ಳು, ಬೆಲ್ಲ, ಆತಿಯ ಸೇವಿಸುವುದು—ಹಗಲು ನಿದ್ದೆಮಾಡುವುದು ವಗೈರೆ ಪಾಶ್ಚಿಮಾತ್ಯ ವೈದ್ಯರು 'ಚರಿತಿಸಂಹಿತೆಯಲ್ಲಿ ವರ್ಣಿತವಾದ ಪೂಜ್ಯರೆ ಅಪಮಾನ ಮತ್ತು ಪಾಪಕರ್ಮಗಳಲ್ಲಿ ವಿಶ್ವಾಸವಿಡುವುದಿಲ್ಲ. ವಾತಾದಿ ಮೂರು ದೋಷಗಳಿಂದ ತ್ವಚೆ, ರಕ್ತ ಮಾಂಸ ಮತ್ತು ಶರೀರಸ್ಥ ಜಲ, ಧಾತು ಇವು ದೂಷಿತವಾಗುತ್ತವೆಯೆಂದು ಅದರಲ್ಲಿ ಹೇಳಲಾಗಿದೆ.

7 ಮಹಾ ಕುಷ್ಠ ಮತ್ತು ಕ್ಷುದ್ರ ಕುಷ್ಠಗಳ ವರ್ಣನೆ ರೋಗಲಕ್ಷಣ ಚಿಕಿತ್ಸೆವಗೈರೇ ದೀರ್ಘವಾದ ವಿಚಾರಸರಣಿಯನಮ್ಮ ಪ್ರಾಚೀನ ಗ್ರಂಥಗಳಲ್ಲಿದೆ, ರೋಗ ಹಬ್ಬದ ಶರೀರ ಭಾಗದಲ್ಲಿ ಚರ್ಮವು ಕೆಟ್ಟು ಕೆಂಪಾಗಿ—ಯಾ=ಕಪ್ಪಾಗಿ ಒಟ್ಟಿನಲ್ಲಿ ಬಣ್ಣವು ಬದಲಾಗಿ ಸ್ಪರ್ಶಜ್ಞಾನವು ಕಡಮೆಯಾಗುತ್ತದೆ. ಕೆಲಸಂದರ್ಭಗಳಲ್ಲಿ ಕಜ್ಜಿಯು ತಂಡಿಯಂತೆ ಆಗುತ್ತವೆ.ಕೆಲದೇ ಹಸ್ರಕೃತಿಗಳಲ್ಲಿ ತೀವ್ರ ಹಬ್ಬವ್ರಣಗಳಾಗಿ ಒಡೆಯುತ್ತ. ತೀವ್ರವೇದನೆಯನ್ನುಂಟುಮಾಡುತ್ತೆ ಚಿಕಿತ್ಸೆಯಿಲ್ಲದೆ ಹಾಗೆಯೇ ಬಿಟ್ಟರೆ ಕುಷ್ಠವು ಮಜ್ಜಾ ಅಸ್ಥಿಗಳವರೆಗೆ ಹೋಗಿ ಕೆವಿ, ಮೂಗುಗಳು ಬೆರಳುಗಳು ಕಳಚಿ ಬೀಳುತ್ತವೆ ಕಣ್ಣು ಕೆಂಪಾಗುತ್ತದೆ ಸ್ವರವು ಬದಲಾಗುತ್ತದೆ.

ಸಾಂಸರ್ಗದ ಕಾರಣಗಳ ಬಗೆಗೂ ಭಿನ್ನಾಭಿಪ್ರಾಯವುಂಟು. ಕುಷ್ಠವು ಸಾಮಾನ್ಯನಾಗಿ ಅಂಟು ಜಾಡ್ಯವೆಂದು ಭಾರತೀಯರ ಅಭಿಪ್ರಾಯವುಂಟು. ಆದರೆ ಪಾಶ್ಚಿಮಾತ್ಯ ಪದ್ಧತಿಯ ಪ್ರಕಾರ ಕ್ಕೆ ಇದರಲ್ಲಿ ಪಾಸಿಟಿವ್, ಮತ್ತು ನೆಗಟಿವ್ ಭಾಗಗಳೆಂದು ವಿಂಗಡಿಸಿ ಚಿಕಿತ್ಸೆಗಾಗಿ ಏರ್ಪಡಿಸುತ್ತಾರೆ. ಗಕ್ಕ ಪರೀಕ್ಷೆಯ ನಂತರ ಇದನ್ನು ನಿಶ್ಚಯಿಸುತ್ತಾರೆ. ಪಾಸಿಟಿವ್ ಭಾಗವನ್ನು ಅಂಟು ಜಾಡ್ಯವೆಂದು ಭಾವಿಸಬಹುದು. ಒಬ್ಬರಿಂದ ಮತ್ತೊಬ್ಬರಿಗೆ ಈ ಜಾಡ್ಯವು ಹಬ್ಬುವ ವಿಧಾನಗಳಲ್ಲಿ ನಿತ್ಯವೂ ಹತ್ತಿರವಿರುವಿಕೆ, ಸ್ಪರ್ಶ; ಮೈಥುನ, ಶ್ವಾಸೋಚ್ವಾಸ, ಒಂದೇ ಪಾತ್ರೆಯಲ್ಲಿ ಉಣ್ಣುವುದು, ಒಂದೇ ಹಾಸಿಗೆಯಲ್ಲಿ ಮಲಗುವುದು, ಒಂದೇ ಆಸನದಲ್ಲಿ ಕೂಡುವುದು, ರೋಗಿಗಳ ವಸ್ತ್ರವನ್ನು ಪಯೋಗಿಸುವುದು, ಅವರು ಮುಡಿದ ಹೂವಿನ ವಾಸನೆ ತೆಗೆದುಕೊಳ್ಳುವುದು. ಗಂಧಾದಿದ್ರವ್ಯಗಳ ಲೇಪನೆ ಮಾಡುವುದು,

ಕುಷ್ಠರೋಗಿಗಳನ್ನು ಅಸ್ಪೃಶ್ಯರಂತೆ ಬಹಿಷ್ಕರಿಸುವುದು ಮಹಾಪಾಪವೆಂದು ಮಹಾತ್ಮಗಾಂಧಿಯವರು ತಮ್ಮ ಆಶ್ರಮದಲ್ಲೇ ಕುಷ್ಠರೋಗಿಗಳ ಸೇವೆ—ಚಿಕಿತ್ಸೆಗೆ ಏರ್ಪಡಿಸಿ, ತಾವೇ ಸ್ವತಃ ಈ ಕೆಲಸಕ್ಕೆ ನಿಂತರು ಬೆಂಗಳೂರಲ್ಲಿ ಗಾಂಧೀಜಿ ಹೆಸರಮೇಲೆ ಡಾಕ್ಟರ್ ಪಾರ್ಥಸಾರಥಿ ಅಯಣ ಪಂಡಿತರ ನೇತೃತ್ವದಲ್ಲಿ ಇಂಥ ಒಂದು ಕೇಂದ್ರವನ್ನು ತೆಗೆದಿದ್ದಾರೆಂದು, ಪೇಪರುಗಳಲ್ಲಿ ಓದಿದ್ದೇವೆ. ಅಲ್ಲಿಯ ಚಿಕಿತ್ಸಾಕ್ರಮದ ಬಗ್ಗೆ ವಿವರಗಳು ಗೊತ್ತಾಗಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ದೃಶ್ಯ ಮತ್ತು ಅದೃಶ್ಯರೋಗಿಗಳು ಹೆಚ್ಚಿಗಿರುವರೆಂದು ಗೊತ್ತಾಗಿದೆ. ಇಲ್ಲಿಯೂ ಅಂತಹ ಕೇಂದ್ರದ ಅಗತ್ಯವುಂಟು.

ಮೈಸೂರು ಸರ್ಕಾರವೂ, ಗಾಂಧೀ ಸ್ಮಾರಕ ಸಮಿತಿಯವರೂ, ಬಳ್ಳಾರಿ ಜಿಲ್ಲೆಯ ಸಾಮಾಜಿಕ ಕಾರ್ಯಕರ್ತರ ಸಹಾಯದಿಂದ ಕುಷ್ಠನಿವಾರಣಾ ಕೇಂದ್ರವನ್ನು ಏರ್ಪಡಿಸಿದರೆ, ಮಹೋಪಕಾರವಾದೀತು.

ಭಾರತ ಮತ್ತು ಯುನೆಸ್ಕೊ

ಯುನೆಸ್ಕೊ ಸಂಸ್ಥೆಯಲ್ಲಿ ಆರಂಭದಿಂದಲು ಇರುವ ಸದಸ್ಯ ರಾಷ್ಟ್ರ ಗಳಲ್ಲಿ ಭಾರತವೂ ಒಂದು. ಯುನೆಸ್ಕೊ ಸಂಸ್ಥೆಯ ಎಲ್ಲಾ ಚಟುವಟಿಕೆ ಗಳ ಮೇಲೂ ಭಾರತದ ಪ್ರಭಾವ ಬೀಳದೆ ಇಲ್ಲ. ಭಾರತದಲ್ಲಿ ಯುನೆಸ್ಕೊ ಮತ್ತು ಭಾರತಗಳು ಕೂಡಿ ಕೈಕೊಂಡ-ಶಿಕ್ಷಣ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಭಾರತದ ಹೊರಗಡೆ ಯುನೆಸ್ಕೊ ಸಂಸ್ಥೆಯು ನಡೆಸಿದ ಚಟುವಟಿಕೆಗಳಲ್ಲಿ ಭಾರತವು ನೀಡಿದ ನೆರವನ್ನೂ ಈ ಲೇಖನದಲ್ಲಿ ಪುನರಾವಲೋಕನ ಮಾಡಲಾಗಿದೆ.

ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ (ಯುನೆಸ್ಕೊ) ಯನ್ನು ಸ್ಥಾಪಿಸಲು 1946 ರಲ್ಲಿ ನಡೆದ ಪ್ರಥಮ ಪರಿಷತ್ತಿನಲ್ಲಿ ಭಾರತ ಪ್ರತಿನಿಧಿ ರಾಜಕುಮಾರಿ ಅಮೃತ್ ಕೌರ್‌ರವರು ಮಾತನಾಡುತ್ತಾ, ಈ ಹೊಸ ಸಂಸ್ಥೆಯು ಸತ್ಯ ಹಾಗೂ ಶಾಂತಿಗಾಗಿ ಹೋರಾಡಬೇಕೆಂದು ತಿಳಿಸಿದರು. ಈ ಮಹತ್ತರವಾದ ಗುರಿಗಳನ್ನು ಜಚರಣೆಗೆ ತರಲು, ಈಡೇರಿಸಲು ನಮ್ಮಿಂದ ಸಾಧ್ಯವಾದ ನೆರವನ್ನು ನೀಡುವೆವೆಂದು ಇಲ್ಲಿರುವ ಪ್ರತಿನಿಧಿಗಳೆಲ್ಲರಿಗೂ ಭರವಸೆ ನೀಡುತ್ತೇನೆ ಎಂದು ಶ್ರೀಮತಿ ಅಮೃತ್ ಕೌರ್‌ರವರು ನುಡಿದರು.

ಅಲ್ಲಿಂದೀಚೆಗೆ ಭಾರತ ಹಾಗೂ ಯುನೆಸ್ಕೊ, ಕೂಡಿಕೊಂಡು ನಡೆಸಿದ ಕಾರ್ಯಕ್ರಮಗಳು ಈ ಭರವಸೆಯನ್ನು ನುತ್ತತ್ತಿಸ್ತು ಪುಷ್ಪಗೊಳಿಸುತ್ತವೆ.

ಯುನೆಸ್ಕೊ ಸಂಸ್ಥೆಯಲ್ಲಿ ಭಾರತವು ಮೊದಲಿನಿಂದಲೂ ಸದಸ್ಯ ರಾಷ್ಟ್ರಗಳ ಲ್ಲೊಂದಾಗಿರುವುದು. ಈ 10 ವರ್ಷಗಳಲ್ಲಿ ಯುನೆಸ್ಕೊ ಸಂಸ್ಥೆಯ ಹಲವು ಚಟುವಟಿಕೆಗಳಲ್ಲಿ ಭಾರತವು ಮುಖ್ಯ ಪಾತ್ರವನ್ನು ನಿರ್ವಹಿಸಿದೆ. 1949 ರಲ್ಲಿ ನಡುಗಾಲದ ರಾಷ್ಟ್ರೀಯ ಕಮೀಶನ್ ಪ್ರಥಮತಃ ಸಮಾವೇಶಗೊಂಡಿತ್ತು. 1952 ರ ಜಗತ್ತಿನಲ್ಲಿ ಯುನೆಸ್ಕೊಕ್ಕಾಗಿ ಭಾರತದ ರಾಷ್ಟ್ರೀಯ ಕಮಿಶನ ಎಂಬ ಸಂಸ್ಥೆಯೊಂದು ರೂಪುಗೊಂಡಿತು. ಭಾರತ ಸರ್ಕಾರದ ಶಿಕ್ಷಣ ಶಾಖೆಯ ಮಂತ್ರಿಗಳಾದ ಮೌಲಾನಾ ಅಬುಲ್ ಕಲಾಂ ಅಜಾದ್‌ರವರು ಈ ಪರಿಷತ್ತಿನ ಅಧ್ಯಕ್ಷರಾದರು.

ಭಾರತ ಬೀರಿದ ಪ್ರಭಾವ

ವಾಸ್ತವವಾಗಿ, ಯುನೆಸ್ಕೊ ಸಂಸ್ಥೆಯ ಎಲ್ಲ ಚಟುವಟಿಕೆಗಳಲ್ಲಿಯೂ ಭಾರತವು ತನ್ನ ಪ್ರಭಾವವನ್ನು ಬೀರಿದೆ. ಶಿಕ್ಷಣವು ಅದಕ್ಕೊಂದು ಉತ್ತಮ ಉದಾಹರಣೆಯಾಗಿರುವುದು.: 1952 ರ ಡಿಸೆಂಬರ್ ತಿಂಗಳಲ್ಲಿ, ದಕ್ಷಿಣ ಏಶ್ಯಾ ಮತ್ತು ಫೆಸಿಫಿಕ್ ರಾಷ್ಟ್ರಗಳಲ್ಲಿ ಉಚಿತ ಹಾಗು ಒತ್ತಾಯ ಶಿಕ್ಷಣ ವಿಷಯದ ಮೇಲೆ ಒಂದು ಪ್ರಾದೇಶಿಕ ಪರಿಷತ್ತು ಮುಂಬೈಯಲ್ಲಿ ನಡೆಯಿತು. ಒತ್ತಾಯ ಶಿಕ್ಷಣ, ಮಹಿಳೆಯರಿಗೆ ಶಿಕ್ಷಣ ಮತ್ತು ಗಾಮಾಂತರ ಪ್ರದೇಶಗಳಲ್ಲಿನ ಶಿಕ್ಷಕರಿಗೆ ತರಬೇತಿ ಮುಂತಾದ ವಿಷಯ ಕುರಿತು ಭಾರತದ ಶಿಕ್ಷಣ ತಜ್ಞರು ಬರೆದಿರುವ ಪುಸ್ತಕಗಳನ್ನು ಯುನೆಸ್ಕೊ ಸಂಸ್ಥೆಯವರು ಪ್ರಕಟಿಸಿರುವರು.

ತೈಕ್ಷಣಿಕ ಮತ್ತು ಸಾಂಸ್ಕೃತಿಕ ಸಹಕಾರಕ್ಕಾಗಿ ಇರುವ ಭಾರತೀಯ ಸಂಸ್ಥೆಯು, ಲೋಕದ ತಿಳುವಳಿಕೆಗಾಗಿ ಶಿಕ್ಷಣದ ಕೈಪಿಡಿಯನ್ನು ಪೂರ್ಣಗೊಳಿಸಿದೆ.

ಗ್ರಾಮಾಂತರ ಪ್ರದೇಶದಲ್ಲಿ ಜನಜೀವನದ ಮೂಲವನ್ನು ಹೆಚ್ಚಿಸುವ ಗುರಿಯುಳ್ಳಮೂಲ ಶಿಕ್ಷಣ ಪದ್ಧತಿಯ ಬಗೆಗೆ, ಭಾರತದ ಮತ್ತು ಯುನೆಸ್ಕೊ ಸಂಸ್ಥೆಗಳ ನಡುವೆ ಏರ್ಪಟ್ಟ ಸಹಕಾರ ಅತ್ಯಂತ ಫಲಪ್ರದವಾಯಿತು. ಮೈಸೂರು ರಾಜ್ಯದ ವಯಸ್ಕರ ಶಿಕ್ಷಣ ಕಾರ್ಯಕ್ರಮವು, ಈ ಕಾರ್ಯಕ್ರಮದ ಪ್ರಕಾರ, ಶಿಕ್ಷಕರ ಅಂತರ ರಾಷ್ಟ್ರೀಯ ತಂಡವೊಂದಕ್ಕೆ ಮೂಲ ಶಿಕ್ಷಣ ವಿಷಯದಲ್ಲಿ ತರಬೇತಿಯನ್ನೀಯುವ ಯುನೆಸ್ಕೊ ಕೇಂದ್ರಕ್ಕೆ, ಪ್ರಾಯೋಗಿಕ ತರಬೇತಿಯೋಪಾದಿಯಲ್ಲಿ ನೆರವು ನೀಡಿದೆ 1952 ರಲ್ಲಿ ಇಬ್ಬರು ಭಾರತೀಯ ಶಿಕ್ಷಕರು ಕೆನಡಾದೇಶದ ಒಬ್ಬ ಕಲಾವಿದ ಮತ್ತು ಬ್ರಿಟನ್ನಿನ ಪುಸ್ತಕಗಳಿಗೆ ಚಿತ್ರಗಳನ್ನು ರಚಿಸುವಾತನೊಬ್ಬ ಇವರು ನಿರ್ವಹಿಸಿದ ಶಿಕ್ಷಣದಲ್ಲಿ ಚಾಕ್ಷುಷ ಸಾಧನಗಳು-ಬಳಕೆ ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಲೆಯನ್ನು ನಡೆಸಲು ಮೈಸೂರನ್ನೇ ಆರಿಸಿಕೊಳ್ಳಲಾಗಿತ್ತು. ಈ ಉಪನ್ಯಾಸನಮಾಲೆಗೆ ವಿದ್ಯಾರ್ಥಿಗಳನ್ನು ಭಾರತದ ಅಸೋಸಿಯೇಟೆಡ್ ಪ್ರಾಜೆಕ್ಟ್ ಗಳಿಂದ ಆರಿಸಿಕೊಳ್ಳಲಾಗಿತ್ತು.

ವೈಜ್ಞಾನಿಕ ಕಾರ್ಯಕ್ರಮಗಳಲ್ಲಿ ಭಾರತದ ಪಾತ್ರ

ಯುನೆಸ್ಕೊ ಸಂಸ್ಥೆಯ ವೈಜ್ಞಾನಿಕ ಕಾರ್ಯಕ್ರಮದಲ್ಲಿ ಭಾರತವುಕೈಗೊಂಡಿರುವ ಪಾತ್ರವು ಅಸ್ಟೇ ಮುಖ್ಯವಾಗಿರುವುದು. 1948 ರಿಂದೀಚೆಗೆ ಯುನೆಸ್ಕೊ ಸಂಸ್ಥೆಯ ದಕ್ಷಿಣ ಏಷ್ಯಾ ಸಂಸ್ಥೆಯ ವೈಜ್ಞಾನಿಕ ಸಂಸ್ಥೆಯನ್ನು ಪ್ರಾಚೀನ ಪ್ರಧಾನ ಕಚೇರಿಯಲ್ಲಿ ತೆರೆಯಲಾಗಿದೆ. 'ಯುನೆಸ್ಕೊ, ಸರ್ವಸದಸ್ಯರ ಪರಿಷತ್ತಿನ ಮೂರನೆಯ ಅಧಿವೇಶನದಲ್ಲಿ ಭಾರತೀಯ ಪ್ರತಿನಿಧಿಯ ಸಲಹೆಯ ಫಲವಾಗಿ 1948 ರಲ್ಲಿ ಶುಷ್ಕವಲಯ ಏರಿಡ್ ಜೋನ್ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಭಾರತದ ಮರುಳುಗಾಡಿನ ಪ್ರದೇಶಗಳಲ್ಲಿ ಮಾರುತ ಹಾಗೂ ಸೂರ್ಯ ಶಕ್ತಿಯನ್ನು ಉಪಯೋಗಿಸಿಕೊಳ್ಳುವ ವಿಷಯವಾಗಿ ಯುನೆಸ್ಕೊ, ಸಂಸ್ಥೆಯೊಡನೆ ಭಾರತವು ಸಹಕಾರ ಸೂಚನೆಯಿತ್ತು, ವಿಚಾರಗೋಷ್ಠಿಯನ್ನು ಏರ್ಪಡಿಸಿತು. ಶುಷ್ಕಭೂಮಿ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ನೂತನವಾದ ಹಾಗೂ ದೊಡ್ಡ ಪ್ರಮಾಣದ ಸಾಧನ ಸಂಪತ್ತುಗಳನ್ನು ಒದಗಿಸಲು ಯುನೆಸ್ಕೊ ಸಂಸ್ಥೆಯು ಈಗ ಯೋಚಿಸುತ್ತಿದೆ. ಈ ಬೃಹದ್ ಪ್ರಾಜೆಕ್ಟಿನಲ್ಲಿ ಈಜಿಪ್ತ ಅಬಸೀನಿಯಾ, ಸಿಲೋನ್ ವರೆಗೆ ಪಸರಿಸಿರುವ ಕ್ಷೇತ್ರಗಳಲ್ಲಿ,ಸಂಶೋಧನೆ ಪ್ರಯೋಗ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳು ಸೇರಿರುವವು. ದೆಹಲಿಯಲ್ಲಿ ಈ ವರ್ಷ ನಡೆಯುವ ಸರ್ವ ಸದಸ್ಯ ಸಭೆಯಲ್ಲಿ ಈ ಪ್ರಾಜೆಕ್ಟನ್ನೇ ಅನುಮೋದಿಸಿದ್ದಾದರೆ, ಈ ಪ್ರಾಜೆಕ್ಟ್‌ಗೆ ಸಂಬಂಧಪಟ್ಟ ಕಾರ್ಯಗಳಲ್ಲಿ ಹೆಚ್ಚಿನಭಾಗ ಭಾರತದ ಪಾಲಿಗೆ ಬರುತ್ತದೆ.

ಕಟಿಕಿನ ಕೈಗಾರಿಕೋದ್ಯಮಿಗಳಾದ ಬಿ. ಪಾಟ್ನಾಯಕ್‌ರವರು ಕಳಿಂಗ ಬಹುಮಾನವೊಂದನ್ನು ಉತ್ತಮ ವಿಜ್ಞಾನಿ

ಮುಂದಿನ ಪುಟಕ್ಕೆ

ಭಾರತ ಮತ್ತು ಯುನೆಸ್ಕೊ

ಹಿಂದಿನ ಪುಂಟೆದಿಂದ

ಗಳಿಗೆ ಕೊಡುತ್ತಿರುವುದು ಭಾರತದ ವಿಜ್ಞಾನ ಕಾರ್ಯಕ್ರಮಗಳಲ್ಲಿ ಇಟ್ಟುಕೊಂಡಿರುವ ಆಸಕ್ತಿಯನ್ನು ತೋರಿಸುತ್ತದೆ. ವಿಜ್ಞಾನದ ಸಾಧನೆಗಳನ್ನು ಜನಸಾಮಾನ್ಯರಿಗೆ ಉತ್ತಮ ರೀತಿಯಲ್ಲಿ ತಿಳಿಸಿದವರಿಗೆ ಈ ಬಹುಮಾನವನ್ನು ಕೊಡಲಾಗುವದು. 1952 ರಿಂದೀಚೆಗೆ ಫ್ರಾನ್ಸಿನ ಲೂಯಿ ಬ್ರಾಗ್ಲೆ, ಬ್ರಿಟನ್ನಿನ ಡಾ|| ಜ್ಯೂಲಿಯನ್ ಹಕ್ಸ್ಲೆ, ಅಮೇರಿಕದ ವಾಲ್ಟ್ ಮರ್ ಕೇಫರ್ಟ್ ಮತ್ತು ವೆನಿಜೂಲದ ಪೈಸೂನರ್‌ರಿಗೆ ಈ ಬಹುಮಾನ ದೊರೆತಿದೆ.

ಸಮಾಜ ವಿಜ್ಞಾನ ವಿಷಯದಲ್ಲಿ, ಅಮೇರಿಕದ ಸಮಾಜ ಶಾಸ್ತ್ರಜ್ಞರಾದ ಗಾರ್ಡ್ನರ್ ಮುರ್ಫಿಯವರಿಗೆ, ಸಾಮಾಜಿಕ ಬಿಕ್ಕಟ್ಟಿನ ಸಮೀಕ್ಷೆಯನ್ನು ನಡೆಸಲು ಭಾರತವು ಸಹಾಯ ನೀಡಿತು. ಈ ಸಮೀಕ್ಷೆಯನ್ನು 1953ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ. ಈ ವರ್ಷ, ಯುನೆಸ್ಕೊ ಸಂಸ್ಥೆಯು ಕಲಕತ್ತೆಯಲ್ಲಿ ಸಂಶೋಧನ ಸಂಸ್ಥೆಯೊಂದನ್ನು ಸ್ಥಾಪಿಸುವುದು. ದಕ್ಷಿಣ ಏಶ್ಯಾದಲ್ಲಿ, ಔದ್ಯೋಗೀಕರಣದಿಂದ ಸಂಭವಿಸುವ ಸಾಮಾಜಿಕ ತೊಡಕುಗಳ ಬಗೆ ಈ ಕೇಂದ್ರದಲ್ಲಿ ಸಂಶೋಧನೆಯನ್ನು ನಡೆಸಲಾಗುವದು.

ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಹಕಾರ

ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ, ಭಾರತ ಹಾಗೂ ಯುನೆಸ್ಕೊ ಸಂಸ್ಥೆಗಳ ನಡುವಿನ ಸಹಕಾರ ಸಂಬಂಧಗಮನಾಹ ವಾಗಿದೆ. 1951 ರಲ್ಲಿ ಭಾರತ ಸರ್ಕಾರ ಮತ್ತು ಯುನೆಸ್ಕೊ ಸೇರಿ ದೆಹಲಿಯ ಸಾರ್ವಜನಿಕ ಪುಸ್ತಕ ಭಾಂಡಾರವನ್ನು ಸ್ಥಾಪಿಸಿದವು. ಭಾರತ ಹಾಗೂ ದಕ್ಷಿಣ ಏಷ್ಯಾದ ವಯಸ್ಕರ ಶಿಕ್ಷಣಕ್ಕಾಗಿ ಸಾರ್ವಜನಿಕ ಪುಸ್ತಕ ಭಾಂಡಾರವನ್ನು ಯಾವ ರೀತಿಯಲ್ಲಿ ನಿರ್ವಹಿಸಿ ಮಾಡಬಹುದೆಂಬ ದನ್ನು ತೋರಿಸುವ ಪ್ರಾಯೋಗಿಕ ಯೋಜನೆಯಿದು. ಲ್ಯಾಟಿನ್ ಅಮೇರಿಕ ಮತ್ತು ಆಫ್ರಿಕಾಗಳಲ್ಲಿ ಪುಸ್ತಕ ಭಾಂಡಾರಗಳನ್ನು ಏರ್ಪಡಿಸುವನಕ್ಕೆ ಇದು ಮಾರ್ಗವಾಗಿರುವುದು. ವಾನವನ ಹಕ್ಕು ಬಾಧ್ಯತೆಗಳ ಸಾತ್ವಿಕ ತಳಹದಿ, ಇಂದಿನ ವಿಶ್ವದಲ್ಲಿ ಮುಖ್ಯವಾಗಿ ಸಾಂಸ್ಕೃತಿಕ ಮಾರ್ಗಗಳು ಶಿಕ್ಷಣದಲ್ಲಿ ಮಾನವೀಯ ತತ್ವಶಾಸ್ತ್ರದ ಬೋಧೆ' ಮಹಾತ್ಮಾಗಾಂಧಿಯವರ ಬೋಧೆಯ ಮೇಲೆ ವಿಚಾರ ಗೋಷ್ಠಿ ಇತ್ಯಾದಿ. ಯುನೆಸ್ಕೊ ಸಂಸ್ಥೆಗಳು ನಡೆಸಿದ ಸಮೀಕ್ಷೆಗಳಲ್ಲೆಲ್ಲಾ ಭಾರತವು ಪೂರ್ಣನೆರವನ್ನು ನೀಡಿದೆ. ಯುನೆಸ್ಕೊ ಸಂಸ್ಥೆಯ ವಿಶ್ವದ ಕಲಾ ಮಾಲೆಯು, ಅಜಂತಾದ ವರ್ಣಚಿತ್ರಗಳಿಗೆ ನೆರವನ್ನಿತ್ತಿದೆ. ಎಂಬುದನ್ನು ಇಲ್ಲಿ ಗಮನಕ್ಕೆ ತಂದುಕೊಳ್ಳಬಹುದು.

ಯುನೆಸ್ಕೊ ಸಂಸ್ಥೆಯ ಕೂಪನ್, ಯೋಜನೆಗೆ ಭಾರತದಲ್ಲಿ ಉತ್ತಮ ಸ್ವಾಗತ ದೊರೆಯಿತು. ಯುನೆಸ್ಕೊ ಸಂಸ್ಥೆಯ ಕೂಪನ್‌ಗಳನ್ನು ಅಧಿಕ ಪ್ರಮಾಣದಲ್ಲಿ ಉಪಯೋಗಿಸುತ್ತಿರುವ ರಾಷ್ಟ್ರಗಳಲ್ಲಿ ಭಾರತವೂ. ಒಂದು ಪುಸ್ತಕಗಳು, ಶೈಕ್ಷಣಿಕ ಚಲನಚಿತ್ರಗಳು, ವೈಜ್ಞಾನಿಕ ಉಪಕರಣಗಳನ್ನು ಕೊಂಡುಕೊಳ್ಳಲು ಈ ಕೂಪನ್‌ಗಳು ವಿದೇಶಿ ವಿನಿಮಯದ ರೂಪದಲ್ಲಿ ಉಪಯೋಗಕ್ಕೆ ಬರುವವು. ಭಾರತಕ್ಕೆ ಸುಮಾರು 880, ಡಾಲರುಗಳಷ್ಟು ಬೆಲೆ ಬಾಳುವ ಕೂಪನ್‌ಗಳನ್ನು ಈಗಾಗಲೇ ಕೊಡಲಾಗಿದೆ.

ತಾಂತ್ರಿಕ ಸಹಾಯ

ಆರ್ಥಿಕ ಅಭಿವೃದ್ಧಿಗಾಗಿ ಅಗತ್ಯವಾಗುವ ತಾಂತ್ರಿಕ ಸಹಕಾರ ಕ್ಷೇತ್ರದಲ್ಲಿ ಭಾರತ ಹಾಗು ಯುನೆಸ್ಕೊ ಸಂಸ್ಥೆಯೂ ಕೂಡಿ ಕೆಲಸವಾಡಿದ್ದರಿಂದ ಹೆಚ್ಚಿನ ಪ್ರಯೋಜನ ದೊರೆತಿದೆ. ಭಾರತದಲ್ಲಿ ದೀರ್ಘ ಕಾಲಾವಧಿಯ ವೈಜ್ಞಾನಿಕ ಸಂಶೋಧನೆಗೆ ಮತ್ತು ತರಬೇತಿ ಯೋಜನೆಯನ್ನು ವಿಸ್ತರಿಸಲು, ಇದು ಸಹಾಯಕವಾಯಿತು. ಕಲ್ಕತ್ತೆಯ ಹತ್ತಿರ ಖರಗಪುರದಲ್ಲಿ ಭಾರತೀಯ ಔದ್ಯೋಗಿಕ ಸಂಸ್ಥೆಗೆ ಅಂತರ ರಾಷ್ಟ್ರೀಯ ಸಂಪರ್ಕವನ್ನು ಪೂರೈಸಿತು. ಮುಂಬೈಯಲ್ಲಿ ಇಷ್ಟರಲ್ಲಿಯೇ ಸ್ಥಾಪಿಸಲಾಗುವ ಎರಡನೆಯ ಔದ್ಯೋಗಿಕ ತಂತ್ರ ಸಂಸ್ಥೆಗೂ ಇದೇ ರೀತಿಯ ಸಹಕಾರ ದೊರೆಯುವದು. ದೆಹಲಿಯಲ್ಲಿರುವ ಭಾರತೀಯ ವೈಜ್ಞಾನಿಕ ದಾಖಲೆಗಳ ಕೇಂದ್ರ ತಾಂತ್ರಿಕ ಸಂಸ್ಥೆಯು ತಾಂತ್ರಿಕ ನೆರವನ್ನು ನೀಡಿತು.

ತಾಂತ್ರಿಕ ಸಹಕಾರ ದ್ವಿಮಾರ್ಗ ಸಂಬಂಧ ಭಾರತದಲ್ಲಿ ಈಗ 8 ಮಂದಿ ತಜ್ಞರು ತಾಂತ್ರಿಕ ಸಹಕಾರವನ್ನು ನೀಡುತ್ತಿದ್ದಾರೆ, ಸಮಾರು 10 ಮಂದಿ ಭಾರತೀಯ ತಜ್ಞರು ಆಫ್ಘಾನಿಸ್ತಾನ, ಬ್ರೆಜಿಲ್, ಇರಾಕ್, ಲೈಬೀರಿಯಾ, ಲಿಬಿಯ ಮತ್ತು ಫಿಲಿಫೈನ್ಸ್‌ಗಳಲ್ಲಿರುವ ಯುನೆಸ್ಕೊ ತಾಂತ್ರಿಕ ಸಲಹಗಾರ ಮಂಡಲಿಗಳಲ್ಲಿ ಕೆಲಸವಾಡುತ್ತಿರುವರು.

ಭಾರತದಲ್ಲಿ 1956 ರಲ್ಲಿ 1,20,0 ರೋಗಳು ಬೆಲೆ ಬಾಳುವ ಕಾಗದದ ಕಾರ್ಖಾನೆಗೆ ಅಗತ್ಯವಾಗುವ ಯಂತ್ರೋಪಕರಣಗಳನ್ನು ತಯಾರಿಸಲಾಗಿದೆ.

ಮೈಸೂರು ಸಂಸ್ಥಾನದಲ್ಲಿ ಆಹಾರಪರಿಸ್ಥಿತಿ

ಭೂಮಿಗಳ ಹಂಚುವಿಕೆ

ವ್ಯವಸಾಯ ಮಂತ್ರಿಗಳ ಹೇಳಿಕೆ

ಮೈಸೂರು ಸೀಮೆಯಲ್ಲಿ ಭೂಮಿಗಳಿಲ್ಲದಿರುವವರಿಗೆ ಭೂಮಿಗಳನ್ನು ಹಂಚುವ ಉದ್ದೇಶದಿಂದ ಕೊಡಲಿರುವ ಭೂಮಿಗಳ ವಿಸ್ತೀರ್ಣ ಸರ್ವೇ ನಂಬರ್ ವಗೈರೆ ವಿವರಗಳ ಪಟ್ಟಿಯನ್ನು ಪ್ರತ್ಯೇತಾಲೂಕು ಆಫೀಸಿನ ಹೊರಗೆ ಹಾಕಲಾಗಿದೆ. ನಾನ್ನ ಇದರ ಪರೀಕ್ಷೆ ಮಾಡಿದ್ದೇನೆ. ಭೂಮಿಗಳಿಲ್ಲದವರಿಗೂ (ಹರಿಜನರು ರಾಜಕೀಯ ಬಾಧಿತರೂ ಸಹ) ಸ್ವಲ್ಪಭೂಮಿ ಇರುವವರಿಗೂ ಪಟ್ಟಿ ಹೆಂಚಲಾಗುತ್ತೆ.

ನಾನು ಬೆಂಗಳೂರಿಂದ ಹೊರಟ ನಂತರ ತುರುವೇಕೆರೆ, ಗುಬ್ಬಿ, ತಿಪಟೂರು ತುಮಕೂರು ಜಿಲ್ಲೆಯಲ್ಲಿ, ಅರಸೀಕೆರೆ ಹಾಸನ ಅಜ್ಜಂಪುರ ಭಾಗಗಳನ್ನು ಸಂದರ್ಶಿಸಿ ಅಕ್ಕಿ ಹಂಚಿಕೆಯಬಗ್ಗೆ 2 ಸೇರು ಮಾರುವದಕ್ಕೆ ಏರ್ಪಾಟುಗಳನ್ನು ಪರೀಕ್ಷಿಸಿದ್ದೇನೆ ಕಾಂಗ್ರೆಸಿಗರ ಮತ್ತು ಇತರ ಮುಖ್ಯರ ಸಭೆಯಲ್ಲಿ ಆರ್ಥಿಕ ಮತ್ತು ಇತರ ಸಮಸ್ಯೆಗಳನ್ನು ಚರ್ಚಿಸಿದ್ದೇನೆ. ನಿರುದ್ಯೋಗಿಗಳಿಗೆ ಕೆಲಸವನ್ನೊದಗಿಸಲು ಕ್ಷೇತ್ರಕ್ಕನುಕೂಲವಾದ ಉದ್ಯೋಗಗಳನ್ನಾರಂಭಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಹೇಳಲಾಗಿದೆ. ಪರಿಸ್ಥಿತಿಯು ಅಷ್ಟೊಂದು ಚಿಂತಾಜನಕವಿಲ್ಲ.

ಎಂದು ಮೈಸೂರು ವ್ಯವಸಾಯ ಮಂತ್ರಿ ಶ್ರೀ ಚೆನ್ನಬಸಪ್ಪನವರು ಬಳ್ಳಾರಿಯ ಪತ್ರಿಕೋದ್ಯೋಗಿಗಳಿಗೆ ಸಂಭಾಷಣ ಪೊಂದರಲ್ಲಿ ತಿಳಿಸಿದರು.

ಬಳ್ಳಾರಿ ಜಿಲ್ಲೆಯ ಹರಿಜನಾಭಿವೃದ್ಧಿ

ಸಲಹಾಸಮಿತಿಯು ಶ್ರೀ ಟಿ. ವಿ. ರೆಡ್ಡಿಯವರಧ್ಯಕ್ಷತೆಯಲ್ಲಿ ಸಮಾವೇಶವಾಗಿತ್ತು ಪ್ರತಿತಾಲೂಕಿಗೆ ಪ್ರತ್ಯೇಕ ದೆವಿನ್ಯೂ ಇನ್‌ಸ್ಪೆಕ್ಟರ್ ಇರಬೇಕೆಂಬತತ್ವವನ್ನೊಪ್ಪಲಿಲ್ಲ. ಪೂಜಾರಿ ಹಳ್ಳಿ ತಾಂಡದಲ್ಲಿ ಶಾಲೆ, ಚಿಕ್ಕಜೋಗಿ ಹಳ್ಳಿ ತಾಂಡದಲ್ಲಿ, ಭಜನಮಂದಿರಗಳ ನಿರ್ಮಾಣ ಮಾಡಲು ನಿಶ್ಚಿತವಾಯಿತು. ಶಾಲೆಗಳಲ್ಲಿ ಹರಿಜನ ಶಾಲೆಗೆ ಆ ಮತದ ಉಪಾಧ್ಯಾಯನನ್ನಿಯುಕ್ತಿಗೆ ಡಿ. ಯಿ. ಒರಿಗೆ ಬರೆಯಬೇಕೆಂದಾಯಿತು. ಶ್ರೀದರಗಡ್ಡೆ ನೀರಿನ ಸೌಕರ್ಯಕ್ಕೆ ಪದುಪಾಯಗಳನ್ನು ಕಲ್ಪಿಸಲುಯೋಚಿಸಲಾಯಿತು. ಬಸವೀ ಪದ್ಧತಿ ತಪ್ಪಿಸಲು ಪೋಲೀಸ್ ಸಹಾಯ ಕೇಳಲಾಯಿತು. ಮನೆಗಳ ನಿವೇ ಶನಕ್ಕೆ ಕ್ರಮವನ್ನನು ಸರಿಸಲಾಗುವುದೆಂದು ಅಧ್ಯಕ್ಷರು ಹೇಳಿದರು.

ನಾಸರ್—ಮೆನ್ಜೀಸ್ ಮಾತುಕತೆ ವಿಫಲ

೧೮ ರಾಷ್ಟ್ರಗಳ ಸಲಹೆಗೆ ನಾಸರ್‌ರ ನಿರಾಕರಣೆ

ಸೂಯೆಜ್ ಕಾಲುವೆ ವಿಚಾರವಾಗಿ ಕೈರೋದಲ್ಲಿ ಅಧ್ಯಕ್ಷ ನಾಸರ್‌ರಿಗೂ ಮೆನ್ಜೀಸ್ ಸಮಿತಿಗೂ ನಡೆಯುತ್ತಿದ್ದ ಮಾತುಕತೆ 9 ನೆಯ ರಾತ್ರಿ ಮುಕ್ತಾಯವಾಯಿತು.

ಸೂಯೆಜ್ ಕಾಲುವೆಯನ್ನು ಅಂತರರಾಷ್ಟ್ರೀಯ ಹತೋಟಿಗೆ ಒಳಪಡಿಸಲು ಪದಿನೆಂಟು ರಾಷ್ಟ್ರಗಳು ಮಾಡಿರುವ ಸಲಹೆ ಈಜಿಪ್ಟ್‌ನ ಜನತೆಯನ್ನು ತೀವ್ರವಾಗಿ ಉದ್ರೇಕಿಸುವಂತಹದು ಎಂಬುದಾಗಿ ಈಜಿಪ್ಟ್‌ನ ಅಧ್ಯಕ್ಷ ನಾಸರ್ ಸ್ಪಷವಾಗಿ ಖಂಡಿಸಿ ಅದನ್ನು ನಿರಾಕರಿಸಿದ ನಂತರವೇ ಮಾತುಕತೆ ಮುಕ್ತಾಯಗೊಂಡಿದ್ದು.

9—9—56 ನಡೆದ 25 ನಿಮಿಷಗಳ ಕೊನೆಯ ಭೇಟಿಯಿಂದ ಹೊರಕ್ಕೆ ಬಂದ ಮಿ|| ಮೆನ್ಜೀಸ್‌ರವರು ಪರಿಸ್ಥಿತಿ ಬಹಳ ವಿಷಮಗೊಂಡಿದೆ ಎಂದು ತಿಳಿಸಿದರು.

ಅಧ್ಯಕ್ಷ ನಾಸರ್‌ರವರು ಮಿ|| ಮೆನ್ಜೀಸ್‌ರಿಗೆ ಬಗೆದಿರುವ ದೀರ್ಘ ಪತ್ರ ವೊಂದರಲ್ಲೇ ಅವರು 18 ರಾಷ್ಟ್ರಗಳ ಸಲಹೆಯನ್ನು ಮೇಲೆಕಂಡಂತೆಖಂಡಿಸಿರುವುದು. ಈ ಪತ್ರ ಬೆಳಿಗ್ಗೆಯೇ ಮೆನ್ಜೀಸ್ ಸಮಿತಿಯ ಕೈಸೇರಿತಾದರೂ ರಾತ್ರಿಯವರೆಗೆ ಅದನ್ನು ಪ್ರಕಟಿಸಲಿಲ್ಲ. ಪತ್ರ ಬಂದೊಡನೆ, ತಮ್ಮ ತಮ್ಮ ರಾಜಧಾನಿಗಳಿಗೆ, ಹೋಗಲು ಸಮಿತಿಯವರು ನಿರ್ಧರಿಸಿದರು

ಮೆನ್ಜೀಸ್‌ರವರು ಬರೆದಿದ್ದ ದೀರ್ಘ ಪತ್ರವೊಂದಕ್ಕೆ ಉತ್ತರವಾಗಿಯೇ ನಾಸರ್‌ರವರು ಈ ಪತ್ರವನ್ನು ಕಳುಹಿಸಿಕೊಟ್ಟದ್ದು.

೧೮ ರಾಷ್ಟ್ರಗಳ ಸಲಹೆಯ ಉದ್ದೇಶ

ಸೂಯೆಜ್ ಕಾಲುವೆಯನ್ನು ಈಜಿಪ್ಟ್‌ನ ಕೈಯಿಂದ ತಪ್ಪಿಸಿ ಬೇರೆಯವರ ಕೈಗೊಪ್ಪಿಸುವುದೇ 18 ರಾಷ್ಟ್ರಗಳ ಸಲಹೆಯ ಉದ್ದೇಶವೆಂದು ಸಲಹೆಯನ್ನೊಪ್ಪಿದವರಿಗೆ ಸ್ಪಷ್ಟವಾಗುತ್ತದೆಂದು ಅಧ್ಯಕ್ಷ ನಾಸರ್ ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

ಇಂಥ ಕೃತ್ಯ ತನ್ನನ್ನು ತಾನೇ ನಿರರ್ಥಕಗೊಳಿಸಿಕೊಳ್ಳುವಂತೆಹುದುಮತ್ತು ಘರ್ಷಣೆ, ವೈಮನಸ್ಯ ಮತ್ತು ನಿರಂತರ ಹೋರಾಟಗಳಿಗೆ ಕಾರಣವಾಗುವಂತಿಹುದು ಎಂದು ಅಧ್ಯಕ್ಷ ನಾಸರ್ ತಿಳಿಸಿದ್ದಾರೆ.

ಈ ಕೃತ್ಯದಿಂದ ತೊಂದರೆಯು ಮುಕ್ತಾಯವಾಗುವುದಿಲ್ಲ. ಆ ರಂಭವಾಗುತ್ತದೆ. ಎಂದೂ ಅವರು ತಿಳಿಸಿದ್ದಾರೆ.

ಮೆನ್ಜೀಸ್‌ರು ಕೇಳಿದ್ದುದೇನು ?

ಹದಿನೆಂಟು ರಾಷ್ಟ್ರಗಳ ಸಮಿತಿ ನಾಸರ್‌ರವರ ಮುಂದಿಟ್ಟ ಮೂಲಭೂತ ಸಲಹೆಗಳನ್ನು ಅಂಗೀಕರಿಸಲು ಸಾಧ್ಯವಿಲ್ಲ ವೆಂಬುದೇ ನಾಸರ್‌ರವರ ನಿಲುವೇಂದು ತಾವುಭಾವಿಸಿರುವುದಾಗಿ ಮೆನ್ಜೀಸ್‌ರವರು ತಾವು ನಾಸರ್‌ರಿಗೆ ಬರೆದಿದ್ದ ಪತ್ರದಲ್ಲಿ ತಿಳಿಸಿ,ಇದು ಸರಿಯೇ ಎಂದು ಕೇಳಿದ್ದರು.

ಈಜಿಪ್ಟ್‌ನ ನೀತಿ ವಿವರಣೆ

ಸೂಯೆಜ್ ಕಾಲುವೆಯನ್ನು ಈಜಿಪ್ಟ್ ರಾಷ್ಟ್ರೀಕರಣಗೊಳಿಸಿರುವುದನ್ನು ಅಧ್ಯಕ್ಷ ನಾಸರ್ ತಮ್ಮ ಉತ್ತರದಲ್ಲಿಸಮರ್ಥಿಸಿಕೊಂಡಿದ್ದಾರೆ.

ಸೂಯೆಜ್ ಕಾಲುವೆಯಲ್ಲಿ ನೌಕಾ ಸ್ವಾತಂತ್ರ್ಯಕ್ಕೆ ಮತ್ತು ಯಾವ ಪಕ್ಷಪಾತವೂ ಇಲ್ಲದೆ ಕಾಲುವೆಯನ್ನು ಬಳಸುವುದಕ್ಕೆ ವ್ಯವಸ್ಥೆ ಮಾಡುವುದು. ಮುಂದೆ ಒದಗುವ ಅಗತ್ಯಕ್ಕೆ ತಕ್ಕಂತೆ ಕಾಲುವೆಯನ್ನು ಅಭಿವೃದ್ಧಿಗೊಳಿಸುವುದು ನ್ಯಾಯವಾದ ಸುಂಕಗಳನ್ನು ವಿಧಿಸುವುದು. ಮತ್ತು ಕಾಲುವೆಯಲ್ಲಿ ತಾಂತ್ರಿಕ ದಕ್ಷತೆಯನ್ನು ಹೆಚ್ಚಿಸುವುದು ಇವೇ ಈಜಿಪ್ಟ್ ಸರ್ಕಾರದ ನೀತಿಯೆಂದು ನಾಸರ್ ತಿಳಿಸಿದ್ದಾರೆ.

ಈ ರೀತಿ ಮಾಡುವುದರಿಂದ ಸೂಯೆಜ್ ಕಾಲುವೆ ರಾಜಕೀಯದಿಂದ ಪ್ರತ್ಯೇಕಿಸಲ್ಪಡುವುದೆಂದೂ ಘರ್ಷಣೆಗೆ ಕಾರಣವಾಗುವುದರ ಬದಲು ರಾಷ್ಟ್ರ ರಾಷ್ಟ್ರಗಳ ನಡುವೆ ಪರಸ್ಪರ ಲಾಭ ಮತ್ತು ಸಹಕಾರಗಳಿಗೆ ಕಾರಣವಾಗುವುದೆಂದೂ ಈಜಿಪ್ಟ್ ಭಾವಿಸಿರುವುದಾಗಿ ನಾಸರ್ ತಿಳಿಸಿದ್ದಾರೆ.

ದ್ವಿತೀಯ ಯೋಜನೆಯಲ್ಲಿ, ಜಿಲ್ಲಾ ಆಸ್ಪತ್ರೆಗಳಲ್ಲಿ ದಂತಚಿಕಿತ್ಸಾ ವಿಭಾಗಗಳನ್ನು ತೆರೆಯಲು ರಾಜ್ಯಸರ್ಕಾರಿಗಳ ಯೋಜನೆಗಳಿಗೆ 151 ಲಕ್ಷ ರೂಗಳ ಸಹಯಧನವೆನ್ನು ಒದಗಿಸಲಾಗಿದೆ.

ಬಳ್ಳಾರಿಯು ಡಿವಿಜನ್ ಮುಖ್ಯನಗರವಾಗಬೇಕು

ಮೈಸೂರು ಅಸೆಂಬ್ಲಿ, ಸದಸ್ಯರಾದ ಶ್ರೀ ವೀರಪ್ಪ ಇಜಾರಿ, ಮತ್ತು ಶ್ರೀ ಶಾಲೆ ಪರಮೇಶ್ವರಪ್ಪನವರು ಈ ಕೆಳಗೆ ಕಂಡ ಹೇಳಿಕೆಯನ್ನು ಕೊಟ್ಟಿರುತ್ತಾರೆ.

ಬಳ್ಳಾರಿಯು ಮೈಸೂರಲ್ಲಿ ವಿಲಯನವಾಗಬೇಕೆಂದು ಸೂಕ್ತಕಾರಣಗಳನ್ನು ತೋರಿಸಿ, ಜಸ್ಟಿಸ್ ಎಲ್. ಯನ್. ಮಿಶ್ರಾರವರು ಬಳ್ಳಾರಿಯ ಮುಖ್ಯತೆಯನ್ನು ಗಮನಿಸಿ ಸರ್ಕಾರವು ಇಲ್ಲಿನ ವಿಶಾಲ ಕಟ್ಟಡಗಳ ಉಪಯೋಗಮಾಡಿಕೊಳ್ಳಲು ಮುಖ್ಯ ಕಛೇರಿಗಳನ್ನು ತಂದಿರಿಸಬೇಕೆಂದು ಶಿಫಾರಸ್ ಮಾಡಿದರು. ಮಿಶ್ರಾ ವರದಿಯನ್ನು ಭಾರತ ಸರ್ಕಾರವೂ ಮೈಸೂರು ಸರ್ಕಾರವೂ ಸ್ವೀಕರಿಸಿ ಕಾರ್ಯಾನ್ವಿತಗೊಳಿಸಿರುವ ಕಾರಣ ಬಳ್ಳಾರಿಯ ಬಗ್ಗೆ ವಾಗ್ದಾನವನ್ನು ಪೂರೈಸುವ ನೈತಿಕ ಜವಾಬ್ದಾರಿಯು ಈ ಸರ್ಕಾರಗಳ ಮೇಲುಂಟು.

ಕಳೆದ ಒಂದು ಶತಮಾನದಿಂದ ಬಳ್ಳಾರಿ ನಗರದಲ್ಲಿ ಅನೇಕ ಜಿಲ್ಲೆಗಳನ್ನೊಳಗೊಂಡ ಶಾಖಾಕಛೇರಿಗಳಿದ್ದವು. ಬಳ್ಳಾರಿ ಅನಂತಪುರ ಜಿಲ್ಲೆಗಳಿರತಕ್ಕೂ ಒಂದು ಕಾಲದಲ್ಲಿ ಇದೇ ಮುಖ್ಯನಗರವಾಗಿದ್ದಿತು. ಇದು ಸೈನ್ಯ ನಿಲ್ದಾಣಕೇಂದ್ರವಾಗಿ ಈಗಲೂ ಕಂಟೋನ್ಮೆಂಟು ಹೆಸರಿನ ಭಾಗದಲ್ಲಿ ಭವ್ಯವಾದ ವಿಶಾಲವಾದ ಕಟ್ಟಡಗಳು ಈಗ ಖಾಲಿಇವೆ ಬಳ್ಳಾರಿಯು ಹವಾಗುಣ, ವೈಶಾಲ್ಯ, ಕರ್ನಾಟಕದಲ್ಲಿನ ಕೇಂದ್ರಸ್ಥಾನ ಮತ್ತು ಇತರ ವಸತಿಗಳಿಂದ ಬಳ್ಳಾರಿಯಲ್ಲೇ ಡಿವಿಜನಲ್ ಹೆಡ್ ಕ್ವಾರ್ಟರ್ಸ ಸ್ಥಾಪಿಸಬೇಕೆಂದು. ನಾವು ಒತ್ತಾಯ ಮಾಡುತ್ತೇವೆ.....

ಶಿರುಗುಪ್ಪೆ

ಇಲ್ಲಿಯ ತಾಲೂಕು ಕಾಂಗ್ರೆಸ್ ಸಮಿತಿ, ಪಂಚಾಯ್ತಿಬೋರ್ಡು ಮತ್ತು ನಗರದ ಇತರ ಮುಖ್ಯರು ಮೈಸೂರು ಮಂತ್ರಿಗಳಾದ ಶ್ರೀ ಹೆಚ್. ಯಂ.ಚನ್ನ ಬಸಪ್ಪನವರನ್ನು ಈಡು ನಗರಕ್ಕೆ ಬೇಕಾದ ವಿದ್ಯುದೀಪ, ದೇಶನೂರಿಂದ ಹೈದ್ರಾಬಾದ್ ಭಾಗದ ಸೇತುವೆಯ ನಿರ್ಮಾಣ ಮಾಡಲು ವಿನ್ನಯಿಸಿದರು. ದೀಪಸೌಕರ್ಯಕ್ಕಾಗಿ ಎಷ್ಟಿನೇಟು ಆಗಿದೆಯೆಂದೂ ಸರಕಾರದ ಪರಿಶೀಲನೆಯಾಗಿದೆಂದೂ ಸಿದ್ದಗುಪ್ಪೆ ನಗರಕ್ಕೆ ಇದು ಅತಿ ಅವಶ್ಯವೆಂದೂ ದೇಶನೂರು ಶೀತಾವೆಯ ನಿರ್ಮಾಣದಿಂದ ಬಳ್ಳಾರಿಜಿಲ್ಲೆಯವ್ಯಾಪಾರವೂ ಹೆಚ್ಚಿ ಸಂಪತ್ಸಮೃದ್ಧವಾಗುವುದೆಂದೂ ಶ್ರೀ ಶೀತಾರಾಮಶೆಟ್ಟರು ತಿಳಿಸಿದರು.

ದ್ವಿಭಾಷಾ ವರ್ಣಮಾಲೆ

ಪ್ರಾದೇಶಿಕ ಭಾಷೆಗಳ ಮೂಲಕ ಹಿಂದೀ ಶಿಕ್ಷಣ

ಭಾರತ ಸರ್ಕಾರದ ಶಿಕ್ಷಣ ಮಂತ್ರಿ ಶಾಖೆಯವರು ಹಿಂದೀ ಮತ್ತಿತರ 12 ಮುಖ್ಯ ಪ್ರಾದೇಶಿಕ ಭಾಷೆಗಳಲ್ಲಿ ಉದ್ದೇಶಿಸಿರುವರು.

ಹಿಂದೀ ಭಾಷೆಯ ಬಳಕೆ ಇರದ ಪ್ರದೇಶಗಳಲ್ಲಿ ಹಿಂದೀ ಭಾಷೆಯನ್ನು ಕಲಿತುಕೊಳ್ಳುವವರಿಗೆ ದೇವನಾಗರ ಲಿಪಿಯ ಅಕ್ಷರಗಳನ್ನೆ ತಮ್ಮ ತಮ್ಮ ಮಾತೃ ಭಾಷೆಗಳಲ್ಲಿ ಶೀಘ್ರವಾಗಿಯೂ ತೊಂದರೆ ಇಲ್ಲದಂತೆಯೂ ಕಲಿತುಕೊಳ್ಳಲು ಸಾಧ್ಯವಾಗುವಂತೆ ಮಾಡುವುದೇ ಈ ವರ್ಣಮಾಲೆಯ ಉದ್ದೇಶವಾಗಿದೆ.

ಈ ಕಾರ್ಯದಲ್ಲಿ ಆಸಕ್ತಿಯುಳ್ಳ ಪ್ರಕಾಶಕರು ಈ ಸಂಬಂಧವ ಮಾದರಿ ವರ್ಣಮಾಲೆಗಳನ್ನು ಶಿಕ್ಷಣಮಂತ್ರಿಶಾಖೆಗೆ 1956ರ ಡಿಸೆಂಬರ್ 31 ರೊಳಗಾಗಿ ಸಲ್ಲಿಸಬೇಕು.

ಪ್ರತಿ ಭಾಷೆಯಲ್ಲಿಯೂ ಸಿದ್ಧಗೊಳಿಸಿದ ಅತ್ಯುತ್ತಮವಾದ 3 ವರ್ಣಮಾಲೆಗಳಿಗೆ ಪ್ರತಿಯೊಂದಕ್ಕೂ 500ರೂಗಳು, 200 ರೂಗಳು ಮತ್ತು 100 ರೂಗಳ ಬಹುಮಾನವನ್ನು ಕೊಡಲಾಗುವುದು. ತೀರ್ಪುಗಾರರ ಸಮಿತಿಯ ಶಿಫಾರಸುಗಳಿಗೆ ಅನುಗುಣವಾಗಿ ಈ ಬಹುಮಾನಗಳನ್ನು ಕೊಡಲಾಗುವುದು. ಪ್ರಕಾಶಕರು ಎಷ್ಟು ಅಕ್ಷರಮಾಲೆಗಳನ್ನಾದರೂ ಕಳುಹಿಸಬಹುದು. ಯಾರು ಎಷ್ಟು ಭಾಷೆಗಳಲ್ಲಿ ವರ್ಣಮಾಲೆಗಳನ್ನು ಸಿದ್ಧಗೊಳಿಸುವರೋ ಅಷ್ಟು ಭಾಷಾ ವರ್ಣ ಮಾಲೆಗಳನ್ನೂ ಕಳಿಸಬಹುದಾಗಿದೆ.

ಹೀಗೆ ಸಲ್ಲಿಸುವ ವರ್ಣಮಾಲೆಗಳು ಈ ಕೆಳಕಂಡ ಮಾಲಾಕ್ಷರಗಳನ್ನು ಪಡೆದಿರಬೇಕು.

1) ಎಲ್ಲ ವರ್ಣ ಮಾಲೆಗಳೂ ಸಚಿತ್ರವಾಗಿರಬೇಕು. ಈ ಚಿತ್ರಗಳು ಕಲಾಪೂರ್ಣವಾಗಿಯೂ ದೂರದಿಂದ ನೋಡಿದಾಗಲೂ ಸ್ಪಷ್ಟವಾಗಿ ಕಾಣುವಂಥ ಇರಬೇಕು.

2) ವರ್ಣ ಮಾಲೆಗಳು ಮನರಂಜಿತವಾಗಿರಬೇಕು.

3) ವರ್ಣ ಮಾಲೆಗಳು ಹಿಂದೀ ಮತ್ತು ಹಿಂದು ಮುಖ್ಯ ಆಧುನಿಕ ಭಾರತೀಯ ಭಾಷೆಗೆ ಸಂಬಂಧಿಸಿರಬೇಕು. ಈ ಮುಖ್ಯ ಆಧುನಿಕ ಭಾರತೀಯ ಭಾಷೆಯು ಭಾರತದ ಸಂವಿಧಾನ ಎಂಟನೆಯ ಪೆಡ್ಯೂಲಿನಲ್ಲಿ ಪ್ರಮೂದಿಸಲ್ಪಟ್ಟಿರುವುದು.

4) ಪ್ರತಿ ದೇವನಾಗರಿ ಲಿಪಿಯ ಅಕ್ಷರವನ್ನೂ ಸಂಬಂಧಪಟ್ಟ ಭಾಷೆಯಲ್ಲಿ ಅನುರೂಪವಾಗಿರುವ ಅಕ್ಷರವನ್ನೂ ದೊಡ್ಡದಾಗಿ ಬರೆದಿರಬೇಕು. ಅದೇ ಅಕ್ಷರದಿಂದ ಆರಂಭವಾಗುವ ವಸ್ತುವಿನ ಚಿತ್ರವೂ ಅದರ ಜೊತೆಯಲ್ಲಿರಬೇಕು.

ಭೀಕರ ಗರಗಸ ವಿಮಾನು

: ಅರಬ್ಬಿ ಸಮುದ್ರದಲ್ಲಿಯ ಮೀನುಗಳಲ್ಲಿ ಅತಿ ದೊಡ್ಡದು

ಸೋರ (ಶಾರ್ಕ) ಮತ್ತು ಕಿರಣ (ರೇ) ಮೀನುಗಳ ಕುಟುಂಬಗಳಿಗೆ ಸಂಬಂಧಿಸಿರುವ ಗರಗಸ ಮೀನು ಉಷ್ಣವಲಯದ ಸಮುದ್ರ ತೀರಗಳ ಸಮೀಪ ಹಿಗ್ಗುತ್ತದೆ. ಅದರ ಉದ್ದಳತೆಯು 20ರಿಂದ31 ಅಡಿವರೆಗಿರುತ್ತದೆ. ಅದಕ್ಕೆ ಬಾಯಿಯಿಂದ ಪ್ರಾರಂಭವಾಗಿ, 6 ಅಡಿ ಉದ್ದದ ಅಲಗು (ಬ್ಲೇಡು) ಇದೆ, ಇದು 2 ಬದಿಗೂ ಚೂಪಾದ ಹಲ್ಲುಗಳಿಂದ ಕೂಡಿದ ಕಸದಂತಿರುತ್ತದೆ. ಈ ಮೀನು ಅದ್ಭುತ ಶಕ್ತಿ ಹಾಗೂ ಉಗ್ರ[illegible]ದುದರಿಂದ, ಮೀನುಗಾರರು ಅದಕ್ಕೆ ಅತಿಶಯವಾಗಿ ಹೆದರುವುದು ಸಹಜವೇ. ಅರಬ್ಬಿ ಸಮುದ್ರದಲ್ಲಿ ಸಿಗುವ ಎಲ್ಲ ಮೀನುಗಳಲ್ಲಿ ಇದು ಅತಿ ದೊಡ್ಡದು.

ಅನೇಕ ವರ್ಷಗಳ ಹಿಂದೆ ಒಂದು ದೊಡ್ಡ ಗರಗಸ ಮೀನು ಅಮೆರಿಕಾದ ಪನಾಮಾ ತೀರದ ಆಚೆಗೆ ಒಂದು20ಟನ್ ಕ್ರೀಡಾನೌಕೆಯ (ಯಾಟ್) ಕೆಳಗೆ ಸೇರಿ, ಅದನ್ನು 5 ತಾಸುಗಳವರೆಗೆ ಎಳೆದುಕೊಂಡು ಹೋದ ನಂತರ ಹಿಡಿಯಲ್ಪಟ್ಟಿತು. ಅದು 31 ಅಡಿ ಉದ್ದ ಮತ್ತು ಭಾರತದಲ್ಲಿ 2½ ಟನ್ ಮಿಕ್ಕಿ ಇತ್ತು. ಪೂರ್ಣ ಬೆಳೆದ ಒಬ್ಬ ಮನುಷ್ಯನ ಸರಾಸರಿ 125 ಪೌಂಡು ಭಾರವಿರಬಹುದೆಂದು ಎಣಿಸಿದರೆ, ಈ ಮೀನು ಭಾರದಲ್ಲಿ 45ಜನರ ಒಟ್ಟಿನ ತೂಕಕ್ಕೆ ಸಮವಾಗಿತ್ತೆಂಬುದು ಆಶ್ಚರ್ಯವಲ್ಲವೇ ?

1956 ಜೂನ್‌ನಲ್ಲಿ ಭಾರತದ ಪಶ್ಚಿಮ ಕರಾವಳಿಯ ಸಮೀಪ ಮೀನುಗಾರರು 1 ಅದ್ಭುತವಾದ ಗರಗಸ ಮೀನನ್ನು ಹಿಡಿದಸಂಗತಿಯು ಮದ್ರಾಸಿನಿಂದು ವರ್ತಮಾನ ಪತ್ರಿಕೆಯಲ್ಲಿ ಅದೇ ತಿಂಗಳ 19 ನೇ ದಿನಾಂಕದ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಅದು 30 ಅಡಿ ಉದ್ದ ಮತ್ತು ವ್ಯಾಸದಲ್ಲಿ 12 ಅಡಿಯಷ್ಟು ಇತ್ತು. ಆ ಉತ್ತರ ಮಲಬಾರಿನ ಕ್ವಿಲೆಂಡಿ ಬಂದರದ ಹತ್ತಿರವಿರುವ ಚೆನಿಯಂಕೇರಿಯ ದಡದಿಂದ 15 ಮೈಲು ದೂರ ಹಿಡಿಯಲ್ಪಟ್ಟಿತ್ತು.

ಅದು ಸಮುದ್ರದಲ್ಲಿ ಈಜಾಡುತ್ತ ತೆಪ್ಪ ದೋಣಿಯಿಂದ ಅದನ್ನು ನೋಡಿಕೊಂಡಿದೆ ಅದನ್ನು ಬಲವಾಗಿ ತಿವಿದರು, ಮತ್ತು ಅದನ್ನು ಬಹಳ ಪ್ರಯತ್ನದಿಂದ ಹೋಗುವಾಗ, ಕೆಲವು ಮೀನುಗಾರರು ಜೊಪ್ಪಾದ ಮೊನೆಗಳುಳ್ಳ 4 ಉಕ್ಕಿನ ಭರ್ಚಿಗಳಿಂದ ಅದಷ್ಟು ಬಲವಾಗಿ ತಿವಿದರು, ಮತ್ತು ಅದನ್ನು ಬಹಳ ಪ್ರಯತ್ನದಿಂದ ಹಿಡಿದು ದಡಕ್ಕೆ ತೆಗೆದುಕೊಂಡು ಹೋದರು. ಅದು ಹೆಣ್ಣು ಮೀನಾಗಿದ್ದು ಅದರ ಗರ್ಭದೊಳಗೆ 16 ಜೀವಂತ ಮರಿಗಳಿದ್ದವು. ಅದರ ಯಕೃತ್ತು 217 ಪೌಂಡು ಭಾರವಿತ್ತು. ಇದರಿಂದ ಎಣ್ಣೆ ತೆಗೆಯಲಿಕ್ಕೆ ಕಲ್ಲೀಕೋಟೆಯ ಸರಕಾರಿ ಎಣ್ಣೆ ಕಾರ್ಖಾನೆಗೆ ರವಾನಿಸಲಿಕ್ಕಾಗಿ ಮೀನುಗಾರರ ಅದನ್ನು ಸರಕಾರೀ ಉಪ್ಪುಣಿಸುವ ಅಂಗಳ (ಕ್ಯೂರಿಂಗ್ ಯಾರ್ಡ್) ಕ್ಕೆ ವಹಿಸಿದರು. ಅದರ ಪಕ್ಕೆಗಳನ್ನು (ಫಿನ್ಸ್) ಉಪ್ಪುಣಿಸಿ ಬ್ರಹ್ಮದೇಶ, ಚೀನ ಇತ್ಯಾದಿ ಅನ್ಯ ದೇಶಗಳಲ್ಲಿ ಎಲ್ಲೆಲ್ಲಿ ಬೇಡಿಕೆಯಿದೆಯೋ ಅಲ್ಲಿಗೆ ಅವುಗಳನ್ನು ರಫ್ತು ಮಾಡಲು ನಿರ್ಧರಿಸಲಾಯಿತು.

ಅಂಕಿ—ಅಂಶಗಳು

1) ಅಲ್ಪ ವರಮಾನ ವರ್ಗದ ವಸತಿ ಯೋಜನೆಯನ್ನು ಕೈಗೊಳ್ಳುವುದಕ್ಕಾಗಿ ಭಾರತ ಸರ್ಕಾರದವರು 1956ರ ಮಾರ್ಚಿವರೆಗೆ ವಿವಿಧ ರಾಜ್ಯ ಸರ್ಕಾರಗಳಿಗೆ 21 .53 ಕೋಟಿರೂಗಳ ಸಾಲವನ್ನು ಮಂಜೂರುಮಾಡಿರುವರು.

2) ಭಾರತದಲ್ಲಿ ಬೆಂಕಿಕಡ್ಡಿ ಕೈಗಾರಿಕೆಯಲ್ಲಿ ಸುಮಾರು 24,500 ಮಂದಿಯನ್ನು ಕೆಲಸಕ್ಕೆ ನೇಮಿಸಿಕೊಳ್ಳಲಾಗಿದೆ. ಇದರಲ್ಲಿ, 16,000ಮಂದಿ ಗೃಹ ಕೈಗಾರಿಕಾಕ್ಷೇತ್ರದಲ್ಲಿಯೂ ಮತ್ತು ಉಳಿದವರು ಇತರ ಕೈಗಾರಿಕಾ ಕ್ಷೇತ್ರದಲ್ಲಿಯೂ ಇರುವರು.

1) ಭಾರತದಲ್ಲಿ 1955ರಲ್ಲಿ 11 52,000 ರೂಗಳ ಬೆಲೆಬಾಳುವ ಸೆಣಬು, ಯಂತ್ರೋಪಕರಣಗಳನ್ನು ತಯಾರಿಸಲಾಯಿತು.

4) ಭಾರತ ಸರ್ಕಾರದವರು ಸದ್ಯವಲ್ಲಿಯೇ ಭಾರತೀಯ ರಾಯಭಾರಿಗಳ ಒಂದು ಅಂಗವಾಗಿ ಮಾಸ್ಕೋ, ಪೀಕಿಂಗ್ ಮತ್ತು ವ್ಹೇಗ್‌ಗಳಲ್ಲಿ ಅವಾಣಿಜ್ಯ ಸಾಲಿಗ್ಯಗಳಿಗಾಗಿ ವಾಣಿಜ್ಯ ಕಛೇರಿಗಳನ್ನು ತೆರೆಯುವರು.

5) 1954-55 ರಲ್ಲಿ ಭಾರತದಿಂದ 14.6 ಲಕ್ಷ ರೂಗಳಷ್ಟು ಬೆಲೆಬಾಳುವ ಪ್ಲಾಸ್ಟಿಕ್ ವಸ್ತುಗಳನ್ನು ರಫ್ತು ಮಾಡಲಾಗಿದೆ.

ನೆಗಡಿ, ಕೆಮ್ಮು, ದಮ್ಮು, ಉಬ್ಬಸ
ಶೀತಜ್ವರ, ಮಲೇರಿಯಾ, ಮತ್ತು
ಎಲ್ಲ ನೋವುಗಳಿಗೆ ದಿವ್ಯಾಮೃತ

ಕಾಶ್ಮೀರು ಅರುಕ್

ಲೇಪನೆ, ಸೇವನೆ - ಎರಡೂ ಸಾಧ್ಯ
ಎಲ್ಲಾಪಾಪುಗಳಲ್ಲೂ ದೊರೆಯುತ್ತದೆ.

H. S. & Sons, Bellary.—ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ಮೋಟಾರು ವಾಹನಗಳ ಅವಶ್ಯಕ
ವಿಮಾ

ಕಾಂಪ್ರಹೆನ್ಸಿವ್ ಪಾಲಿಸಿಗಳಿಗೆ ಅತಿ ಸುಲಭವಾದ ಬರಗಳನ್ನೂ, ಮತ್ತಿತರ ವಿಧ ವಿಧವಾದ ಆಕರ್ಷಕ ಷರತ್ತುಗಳನ್ನೂ — ಎಲ್ಲಾ ತರದ ಮೋಟಾರು ವಾಹನಗಳಿಗೆ ನಾವು ಕೊಡುತ್ತೇವೆ.

ವಿವರಗಳಿಗೆ—

ಕಾರ್ಯದರ್ಶಿ
ಮೈಸೂರು ಸರ್ಕಾರದ ವಿಮಾಶಾಖೆ
ಬೆಂಗಳೂರು
ಅಥವಾ ಹತ್ತಿರ ಇರುವ ನಮ್ಮ ವಿಮಾ ಏಜಂಟರಿಗೆ

ಪ್ರಾಥಮಿಕ--ಹಿಂದೀ ಪರೀಕ್ಷೆಗಳು

ಪರೀಕ್ಷಾ ಶುಲ್ಕ 1-8-0
ಬಚ್ಚೋಂಕಿ ಕಿತಾಬ್
ಸುಗಮ ಹಿಂದಿ I
—„— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)

ಮಧ್ಯಮಾ ಪರೀಕ್ಷಾ ಶುಲ್ಕ 3-0-0

ರಾಷ್ಟ್ರಭಾಷಾ ಸಂಗ್ರಹ 2
ಚಾರ್ ಏಕಾಂಕ
ಆದರ್ಶ ಚರಿತ್ರ
ಐತಿಹಾಸಿಕ ಕಹಾನಿ
ಹಿಂದೀರಚನೆ 2
ಪತ್ರಲೇಖನ
(ಸೆಟ್ ಬೆಲೆ 4-4-0)

ಇತರ ವಿವರಗಳಿಗೆ ಸ್ಟ್ಯಾಂಪಿಟ್ಟು ಅಥವಾ ರಿಪ್ಲೇಕಾರ್ಡ್ ಬರೆಯಿರಿ.

ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ 3

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಅರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.

(Regd. M. No. 4746)

To

Sri. _____

_____

_____

Edited, Printed & Published by T. B. KESHAVA RAO at Nava Bharat Printing Press, Bellary.

ನವ ಭಾರತ

ಸೋಮವಾರ, ಅಕ್ಟೋಬರ್ 1,8-10-1956

ವರ್ಷ 20· ಸಂಚಿಕೆ -8	ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. ಉತ್ತಿಷ್ಠತ! ಜಾಗೃತ!! ಪ್ರಾಪ್ಯವರಾನ್ನಿಬೋಧತ !!!	ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್

ಭಾರತದ ನೂತನ ಭೂಪಟ

1956ರ ನವಂಬರ್ 1ರಿಂದ ರಾಜ್ಯಗಳ ಪುನರ್ವ್ಯವಸ್ಥಾ ಕಾಯಿದೆಯು ಮತ್ತು ಬಿಹಾರ್ ಹಾಗೂ ಪಶ್ಚಿಮ ಬಂಗಾಳ (ಭೂಪ್ರದೇಶಗಳ ವರ್ಗಾವಣೆ) ಕಾಯಿದೆಯ ನಿಬಂಧನೆಗಳಿಗೆ ಅನುಗುಣವಾಗಿ ರಾಜ್ಯಗಳು ಪುನರ್ವ್ಯವಸ್ಥೆಗೊಂಡನಂತರ ಭಾರತವು 14 ರಾಜ್ಯಗಳನ್ನೊಳಗೊಂಡಿರುವುದು. ಈ ರಾಜ್ಯಗಳಾವುವೆಂದರೆ :— ಆಸ್ಸಾಂ, ಬಿಹಾರ, ಮುಂಬೈ, ಜಮ್ಮು ಕಾಶ್ಮೀರ, ಕೇರಳ, ಮಧ್ಯಪ್ರದೇಶ, ಮದರಾಸು, ಮೈಸೂರು, ಒರಿಸ್ಸಾ, ಪಂಜಾಬು ರಾಜಾಸ್ಥಾನ, ಉತ್ತರಪ್ರದೇಶ ಮತ್ತು ಪಶ್ಚಿಮಬಂಗಾಳ. ಇವುಗಳ ಜೊತೆಗೆ ಕೇಂದ್ರದ ಆಳ್ವಿಕೆಗೆ ಒಳಪಡುವ ಆರು ಭೂಪ್ರದೇಶಗಳಿರುವುವು. ಅವುಗಳಾವೆಂದರೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ದೆಹಲಿ ಹಿಮಾಚಲಪ್ರದೇಶ ಲಕ್ಷದೀಪಗಳು ಮತ್ತು ಅಮಿನ್‌ದಿವಿ ದ್ವೀಪಗಳ್ಳ ರಾಜಪ್ರಮುಖರ ಮಣಿಪುರ ಸ್ಥಾನವನ್ನು ಮತ್ತು ತ್ರಿಪುರ, ಹಾಗೂ 'ಎ, 'ಬಿ,ಮತ್ತು 'ಸಿ, ವರ್ಗದ ರಾಜ್ಯಗಳೆಂದು ಭಾರತವನ್ನು ಮಾಡುವುದನ್ನೂ ರದ್ದು ಪಡಿಸಲಾಗಿವುದು

ರಾಜ್ಯಗಳ ವಿಸ್ತೀರ್ಣ ಹಾಗೂ ಜನ ಸಂಖ್ಯೆಯ ಈ ಕೆಳಕಂಡಂತೆ ಇರುವುದು.

ರಾಜ್ಯ	ವಿಸ್ತೀರ್ಣ (ಚ. ಮೈಲಿಗಳಲ್ಲಿ)	ಜನಸಂಖ್ಯೆ (10 ಲಕ್ಷಗಳಲ್ಲಿ)
ಆಂಧ್ರಪ್ರದೇಶ	110,250	32 - 2
ಆಸ್ಸಾಂ.	84,924	9 . 0
ಬಿಹಾರ್	67,834	38 . 93
ಮುಂಬೈ	183,240	47 . 8
ಜಮ್ಮುಮತ್ತು ಕಾಶ್ಮೀರ	92,780	4 . 4
ಕೇರಳ	14,980	13 . 6
ಮಧ್ಯಪ್ರದೇಶ	171,200	26 . 1
ಮದರಾಸ್	50,170	30 . 0
ಮೈಸೂರು	72,730	19 . 0
ಒರಿಸ್ಸಾ	16,140	14 . 6
ಪಂಜಾಬ್	46,616	16 . 0
ರಾಜಾಸ್ಥಾನ್	132,300	16 . 0
ಉತ್ತರಪ್ರದೇಶ	113,410	63 . 2
ಪಶ್ಚಿಮಬಂಗಾಳ	33,297	26 . 16

ಬಳ್ಳಾರಿ ಜಿಲ್ಲೆಯಲ್ಲಿ ಸಹಕಾರೋದ್ಯಮದ ಪ್ರಗತಿ

ಬಳ್ಳಾರಿ ಸಹಕಾರೀ ಸಂಘಗಳ ಅಸಿಸ್ಟೆಂಟ್ ರಜಿಸ್ಟ್ರಾರವರಾದ ಶ್ರೀ ವೇಣುಗೋಪಾಲಪಿಳ್ಳೆಯವರು ಪತ್ರಿಕೋದ್ಯಮಿಗಳಿಗೆ ಜಿಲ್ಲೆಯಲ್ಲಿ ಸಹಕಾರೋದ್ಯಮದ ಪ್ರಗತಿಯನ್ನು ವಿವರಿಸಿದರು.

ಮೈಸೂರು ಸರ್ಕಾರವು ಬಳ್ಳಾರಿ ಜಿಲ್ಲೆಯನ್ನು ತೆಗೆದುಕೊಂಡ ಈ 3 ವರ್ಷಗಳೊಳಗಾಗಿ 363 ಹಂಗಿನ 410 ಸೊಸೈಟಿಗಳ ಸಂಖ್ಯೆಯು ಹೆಚ್ಚಿದ್ದು ಸದಸ್ಯರು 50 ವಿರಕ್ಕೂ ಹೆಚ್ಚಿತು. ಪೇರ್ ಕ್ಯಾಪಿಟಲ್ ಡಿಪಾಜಿಟು, ಸಾಲಕೊಟ್ಟಿದ್ದು ತೆಗೆದುಕೊಂಡಿದ್ದು ಇವುಗಳಲ್ಲಿ ಪ್ರಗತಿಯಾಗಿದೆ ತುಂಗಭದ್ರಾ ಆಯಕಟ್ಟು ಪ್ರದೇಶದ 132 ಹಳ್ಳಿಗಳಿಗನುಗುಣವಾಗುವಂತೆ 81 ಸೊಸೈಟಿಗಳನ್ನು ಪ್ರಾರಂಭಿಸಿ 2.15,000 ಅಚ್ಚುಕಟ್ಟು ವಿಧಿಸಾಲವನ್ನು ರೈತರಿಗೆ ಒದಗಿಸಲಾಗಿದೆ ರಾಷ್ಟ್ರೀಯ ವಿಸ್ತರಣ ಕೇಂದ್ರಗಳಾದ ಸಿರಗುಪ್ಪ ತಾಲ್ಲೂಕು, ಹೊಸಪೇಟೆ, ಕಂಪ್ಲಿ, ಕುರುಗೋಡು ಭಾಗಗಳಲ್ಲಿ ವ್ಯವಸ್ಥಿತವಾದ ಸಹಕಾರಿ ಪದ್ಧತಿಯು ಸಾಗಿದೆ. ಈ 102 ಹಳ್ಳಿಗಳಲ್ಲಿ ಸಿಲಕ್ಷಿಂತಲೂ ಹೆಚ್ಚಿಗೆ ಅಲ್ಪಾವಧಿ ಸಾಲವನ್ನು ರೈತರಿಗೆ ಕೊಡಲಾಗಿದೆ. ಕಳೆದ ತಿಂಗಳ ಕೊನೆಯಲ್ಲಿ ಈ ಭಾಗದಗ್ರಾಮಸೇವಕರನ್ನೆಲ್ಲ ಹೊಸಪೇಟೆಯಲ್ಲಿ ಕೇಂದ್ರೀಕರಿಸಿ ಸಹಕಾರೀಪದ್ಧತಿಯ ಶಿಕ್ಷಣವನ್ನು ಕಲಿಸಲಾಯಿತು. ಕಂಪ್ಲಿ ಮಾರ್ಕೆಟಿಂಗ್ ಸೊಸೈಟಿಯು ಅತ್ಯಂತ ಶ್ರಮಪಟ್ಟು ಕಾರವಾಗಿ ಕೆಲಸ ನೆರವೇರಿಸಿ ಈ ವರ್ಷ 1 ಲಕ್ಷ ರೂಪಾಯಿಗಿಂತಲೂ ಹೆಚ್ಚಿನ ಉತ್ಪನ್ನವನ್ನು ಮಾರಿಬಿಟ್ಟಿತು. ಲೆಕ್ಕಗಳ ಪರಿಶೋಧನೆಯು ವ್ಯವಸ್ಥಿತವಾಗಿ ನಡೆದು ಹಿಂದೆ ಇದ್ದ ದೋಷಗಳು ಬಹುಮಟ್ಟಿಗೆ ಕಡಮೆಯಾದವು. ಕೈಮಗ್ಗನೆಯ್ದಾರರ 9 ಸಂಘಗಳು ಜಿನ್ನಾಗಿ ಕಾರ್ಯವಹಿಸಿವೆ ತಂಬ್ರಹಳ್ಳಿಯಲ್ಲಿ ಗೃಹ ನಿರ್ಮಾಣ ಕಾರ್ಯವು ಕೈಗೊಳ್ಳಲಾಗಿದೆ

ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ರಾಸಾಯನಿಕ ಗೊಬ್ಬರ ಮತ್ತು ವ್ಯವಸಾಯ ಉಪಕರಣಗಳ ಮಾರಾಟಕ್ಕೆ ಏರ್ಪಡಿಸಲಾಗಿದೆ. ಕಬ್ಬು ಬೆಳೆಯುವವರ ಸಹಕಾರ ಸಂಘವು, ಲ್ಯಾಂಡ್ ಮಾರ್ಟ್‌ಗೇಜ್ ಕಾರ್ಯೋದ್ದೇಶವಾಗಿ ಸಂಬಂಧಿಸಿದ ರೈತರಿಗೆ ಅಪೇಕ್ಷಿತ ಸಹಾಯ ಗೈದಿವೆ.

(ಮೂರನೆ ಪುಟಕ್ಕೆ)

ನವಭಾರತಕ್ಕೆ

ಚಂದ ದಾರವಾಗಿರಿ

★ ಮಣ್ಣಿನ ತ್ವರಿತ ಪರೀಕ್ಷೆ ★

ಒಕ್ಕಲತನದ ಉತ್ಪಾದನೆಯನ್ನು ಹೆಚ್ಚಿಸಲು ರಾಸಾಯನಿಕ ಗೊಬ್ಬರಗಳ ಬಳಕೆಗೆ ಸರ್ಕಾರವು ಪ್ರೋತ್ಸಾಹವೀಯುತ್ತಿರುವುದು ಯಥಾ ಯೋಗ್ಯವಿದೆ. ಸಾಲ ಸಹಾಯ ಧನ ಅಷ್ಟೇ ಏಕೆ. ಕೃತಕ ಗೊಬ್ಬರಗಳ ಮಾದರಿಗಳನ್ನು ಉಚಿತವಾಗಿ ಪೂರೈಸಿದರೂ ನಿರೀಕ್ಷಿಸಬಹುದಾದಷ್ಟು ಜನ ಒಕ್ಕಲಿಗರು ರಾಸಾಯನಿಕ ಗೊಬ್ಬರಗಳಿಂದ ತಮ್ಮ ಭೂಮಿಗಳ ಫಲವತ್ತತೆ ಹೆಚ್ಚಿಸುವಲ್ಲಿ ಮುಂದಾಗಿಲ್ಲವೆಂದು ಕಂಡು ಬಂದಿದೆ. ಇದಕ್ಕೆ ಪ್ರತಿಯಾಗಿ ಅವರಲ್ಲಿ ರಾಸಾಯನಿಕ ಗೊಬ್ಬರ ಬಳಕೆಯ ನಿರೋಧಕ ಪ್ರವೃತ್ತಿ ಬೆಳೆದಂತಿದೆ.

ಅನಾಸ್ಥೆಗೆ ಕಾರಣವೇನು?

ಬಟ್ಟೆ ಬಡಿದೆ ರಾಸಾಯನಿಕ ಗೊಬ್ಬರಗಳನ್ನು ಬಳಸಿದರೂ ಒಕ್ಕಲಿಗರು ಆ ಮೊದಲಿನಷ್ಟು ಕೂಡ ಹುಟ್ಟುವಳಿಯನ್ನು ಪಡೆಯಲಿಲ್ಲವೆಂದು ಅನೇಕ ಸಂದರ್ಭಗಳಲ್ಲಿ ವರದಿಯಾಗಿದೆ. ಸಾಮಾನ್ಯ ಒಕ್ಕಲಿಗನಿಗೆ ಹೆಚ್ಚು ಹುಟ್ಟುವಳಿಯನ್ನು ಪಡೆಯುವಲ್ಲಿ ರಾಸಾಯನಿಕ ಗೊಬ್ಬರದ ಸತ್ವ ಪೆಚ್ಚಿದೆಂಬುದು ಮನದಟ್ಟಾಗುವುದಿಲ್ಲ. ಇದಕ್ಕೆ ಕಾರಣವನ್ನು ದೂರ ಹುಡುಕಬೇಕಿಲ್ಲ ತುಂಬು ಬೆಳೆಗಳು ಬಡವಾದ ಬೆಳೆಗಳಿಗಿಂತ ಅಧಿಕ ಪ್ರಮಾಣದಲ್ಲಿ ತಮಗೆ ಅವಶ್ಯಕವಿರುವ ಪೋಷಕ ಆಹಾರವನ್ನು ಮಣ್ಣಿನಿಂದ ಹೀರಿಕೊಳ್ಳುವುವು. ಸಸ್ಯಗಳ ಬೆಳವಣಿಗೆಗೆ ಅವಶ್ಯಕವಿರುವ ಎಲ್ಲ ಅಂಶಗಳು ಮಣ್ಣಿನಲ್ಲಿ ಅಲ್ಪಪ್ರಮಾಣದಲ್ಲಿ ದೊರೆಯಬಲ್ಲವು. ರಾಸಾಯನಿಕ ಗೊಬ್ಬರದಲ್ಲಿ ಕೆಲವೇ ವಿಶಿಷ್ಟ ಆಹಾರ ಅಂಶಗಳು ಲಭ್ಯವಿವೆ. ಆದುದರಿಂದ ಅದರ ಉಪಯೋಗದ ಫಲವಾಗಿ ಮಣ್ಣಿನಲ್ಲಿಯ ಇತರ ಸಸ್ಯಪೋಷಕ ಅಂಶಗಳ ಪ್ರಮಾಣ ಹೆಚ್ಚುವುದಿಲ್ಲ.

ರಾಸಾಯನಿಕ ಗೊಬ್ಬರ ಹಾಕಿದನಂತರ ಮೊದಲನೆಯ ಉತ್ತಮ ಬೆಳೆಯ ಮಣ್ಣಿನಲ್ಲಿ ಕಡಮೆ ಪ್ರಮಾಣದಲ್ಲಿ ಲಭ್ಯವಿರುವ ಪೋಷಕ ಆಹಾರ ದ್ರವ್ಯಗಳನ್ನು ಹೀರಿಕೊಳ್ಳುವುದು. ಇದರಿಂದಾಗಿ ಮಣ್ಣಿನಲ್ಲಿ ಸಸ್ಯಗಳಿಗೆ ಅತ್ಯವಶ್ಯವಿರುವ ಪೋಷಕ ಆಹಾರ ಅಂಶಗಳು ತೀರ ಅಲ್ಪಪ್ರಮಾಣದಲ್ಲಿ ಉಳಿಯಬಹುದು. ಇಲ್ಲವೆ ಏನೂ ಉಳಿಯದಂತಾಗಬಹುದು. ಮಣ್ಣಿನಲ್ಲಿಯ ಕೊರತೆಯ ಮೂಲಕವಾಗಿ ಅದರಲ್ಲಿ ಬಿತ್ತುವ ಬೆಳೆಯ ಹುಟ್ಟುವಳಿಯೂ ಕ್ಷೀಣಿಸುತ್ತಹೋಗುವುದು. ಹೀಗಾಗಿ ಮಣ್ಣಿನಲ್ಲಿಯ ಪೋಷಕ ಆಹಾರದ್ರವ್ಯಗಳ ಸಮತೋಲ ತಪ್ಪುವುದು. ಇಲ್ಲವೆ ಬೆಳೆಗೆ ಒಪ್ಪರೂಪದಲ್ಲಿ ತನ್ನ ಆಹಾರವನ್ನು ಹೀರಿಕೊಳ್ಳಲು ಶಕ್ತವಾಗದಂತೆ ಮಣ್ಣಿನಲ್ಲಿ ಅಮ್ಲ ಇಲ್ಲವೆ ಕ್ಷಾರ ಅಂಶ ವಿಶೇಷವಾಗಿ ಹೆಚ್ಚಬಹುದು.

ನಮ್ಮ ಮುಂದಿರುವ ಸಮಸ್ಯೆ

ಮಣ್ಣಿನ ಗುಣಧರ್ಮಗಳನ್ನು ಹೇಗೆ ಅರಿತುಕೊಳ್ಳಬೇಕು, ಮಣ್ಣಿನಲ್ಲಿ ಕೊರತೆಯಿರುವ ಆಹಾರ ಅಂಶಗಳಾವು, ಅವು ಯಾವ ಪ್ರಮಾಣದಲ್ಲಿರಬೇಕು, ಈ ವಿಷಯಗಳನ್ನು ಅರಿತುಕೊಳ್ಳುವುದೇ ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ಉತ್ತಮ ಬೆಳೆ ತೆಗೆದುಕೊಳ್ಳಲು ಪ್ರತಿಯೊಬ್ಬ ವಕ್ಕಲಿಗನು ಯಾವದೊಂದು ಬೆಳೆ ಬಿತ್ತುವದಕ್ಕೆ ಮೊದಲು ತನ್ನ ಮಣ್ಣಿನ ಗುಣಧರ್ಮಗಳನ್ನು ಅರಿತುಕೊಳ್ಳುವದು ಅತ್ಯಂತ ಅವಶ್ಯಕವಿದೆ. ಹಾಗೆ ಮಾಡದಿದ್ದರೆ ಅವನು ಬೆಳೆಯೊಂದಿಗೆ ಕೂಡಾವಾಡದಂತೆಯೇ ಸರಿ. ನಮ್ಮ ದೇಶದಲ್ಲಿ ಕೆಲವೇ ಜನ ಒಕ್ಕಲಿಗರು ಈ ವಿಷಯವನ್ನು ಅರಿತವರಾಗಿದ್ದಾರೆ.

ರಾಸಾಯನಿಕ ಗೊಬ್ಬರಗಳ ಬಳಕೆಯಪ್ರಚಾರದೊಂದಿಗೆ ಒಕ್ಕಲಿಗರಿಗೆ ತಮ್ಮ ಮಣ್ಣನ್ನು ಪರೀಕ್ಷಿಸಿಕೊಳ್ಳುವುದಕ್ಕೂ ಸಲಹ ನೀಡಬೇಕು. ಆದರೆ ಇಂದು ಸರಕಾರವು ಈ ಹೊಣೆಯನ್ನು ನಿರ್ವಹಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ. ಏಕೆಂದರೆ ಒಕ್ಕಲತನದ ಪ್ರಾತೇಗಳು ದೇಶದ ದ್ಯಂತ ಪ್ರಸರಿಸಿದ ತಮ್ಮ ಕೆಲವೇ ಪ್ರಯೋಗ ಶಾಲೆಗಳಲ್ಲಿ ತೀರಕಿಲ್ಪ ಪ್ರಮಾಣದಲ್ಲಿ ಮಾತ್ರ ಮಣ್ಣಿನ ಮಾದರಿಗಳ ಪರೀಕ್ಷಣೆಯನ್ನು ಕೈಕೊಳ್ಳುವುದು ಸಾಧ್ಯವಿದೆ. ಇಂಥ ಇನ್ನು ಕೆಲವು ಪ್ರಯೋಗಗಳನ್ನು ಸ್ಥಾಪಿಸುವ ಯೋಜನೆ ಇದ್ದು ಅವು ಕೂಡ ಸಾಕಷ್ಟೆನಿಸಲಾರವು. ಪ್ರತಿಯೊಬ್ಬ ಒಕ್ಕಲಿಗನೂ ಈ ಸೌಲಭ್ಯ ದೊರೆಯಬೇಕಿದ್ದರೆ ಮಣ್ಣಿನಪರೀಕ್ಷಣೆಯು ಒಂದು ಬೃಹತ್ತನ ಕಾರ್ಯವಾಗಿ ಪರಿಣಮಿಸುವುದು. ಈ ಪರೀಕ್ಷಣೆಯು ವೆಚ್ಚದಾಯಕವಾಗುವದಕ್ಕಿಂತೆ ಒಕ್ಕಲಿಗರಿಗೆ ತಮ್ಮ ಹೊಲಗದ್ದೆಗಳಲ್ಲಿ ಲಾಭದಾಯಕವಾಗಿ ಪ್ರಯೋಗಿಸಲು ಅದರ ಫಲಿತಾಂಶಗಳು ಶೀಘ್ರದಲ್ಲಿ ದೊರೆಯಲಾರವು.

ಅಲ್ಪ ಪ್ರಮಾಣದಲ್ಲಿ ಲಭ್ಯವಿರುವ ರಾಸಾಯನಿಕ ಗೊಬ್ಬರವು ಅಯೋಗ್ಯ ರೀತಿಯಲ್ಲಿ ಹಾಳಾಗಬಾರದೆಂದಿದ್ದರೆ ಹಾಗು ಇತ್ತ ಅಧಿಕ ಆಹಾರೋತ್ಪಾದನೆಯೂ ಬರಬೇಕೆಂದಿದ್ದರೆ ಕೂಡಲೇ ಈ ಸಮಸ್ಯೆಯನ್ನು ಬಿಡಿಸಬೇಕು.

ಮಣ್ಣಿನ ಪರೀಕ್ಷಣೆಯು ಪರಿಣಾಮಕಾರಿಯಾಗಲು ಅದು ತ್ವರಿತವಾಗಿ ನಡೆಯುವುದವಶ್ಯ. ಇಂಥ ಪರೀಕ್ಷಣೆಯ ಸೌಕರ್ಯಗಳು ಸುಲಭವಾಗಿ ದೊರೆಯುವಂತಹವಾಗಿರಬೇಕಲ್ಲದೆ ಪ್ರತಿಯೊಂದು ಹಳ್ಳಿಯಲ್ಲಿಯೂ ದೊರೆಯುವಂತಾಗಬೇಕು. ಅದು ಒಹಳ ವೆಚ್ಚದಾಯಕವಾಗಕೂಡದು. ಜಾಣನಾದ ಒಕ್ಕಲಿಗನೊಬ್ಬನಿಗೆ ತನ್ನ ಹೂಲದ ಇತರ ಹೋರಿಗಳಂತೆ ಈ ಕಾರ್ಯವೂ ಒಗ್ಗುವಂತಹದಿರಬೇಕು.

ಪರೀಕ್ಷೆಯ ಸುಲಭೋಪಾಯ

ಒಕ್ಕಲಿಗರು ತಮ್ಮ ಮಣ್ಣನ್ನು ಸುಲಭವಾಗಿ ಹಾಗು ಅಗ್ಗದರದಲ್ಲಿ ಪರೀಕ್ಷಿಸಿಕೊಳ್ಳಬಲ್ಲ ಸರಳ ರೀತಿಯ ಪದ್ಧತಿಗಳನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಥರ್ಮಾಮೀಟರ್‌ನಿಂದ ವ್ಯಕ್ತಿಯ ಉಷ್ಣಮಾನವನ್ನು ಕಂಡುಹಿಡಿಯುವಷ್ಟು ಈ ರೀತಿಯ ಪದ್ಧತಿಗಳು ಸುಲಭವಾಗಿವೆ ಈ ಪದ್ಧತಿಗಳಿಂದ ತನ್ನ ಮಣ್ಣನ್ನು ಪರೀಕ್ಷಿಸಿಕೊಳ್ಳಲು ಒಕ್ಕಲಿಗನು ರಸಾಯನ ತಜ್ಞನಾಗಿರಬೇಕೆಂತೂ ಇಲ್ಲ.

ಕೆಲವೊಂದು ರಾಸಾಯನಿಕ ದ್ರಾವಕಗಳನ್ನು ಇತರ ರಾಸಾಯನಿಕ ದ್ರಾವಕಗಳೊಂದಿಗೆ ಬೆರೆಸಿದಾಗ ರಾಸಾಯನಿಕ ಕ್ರಿಯೆಯುಂಟಾಗಿ ಕೆಲವು ವಿಶಿಷ್ಟ ಬಣ್ಣದ ಛಾಯೆಗಳು ಕಾಣಿಸಿಕೊಳ್ಳುವವೆಂಬುದು ಸರ್ವಸಾಧಾರಣ ಎಲ್ಲರಿಗೂ ತಿಳಿದಿರುವ ವಿಷಯ ದ್ರಾವಕದಲ್ಲಿ ಯಾವದೊಂದು ಘಟಕವು ಇದೆಯೋ ಹೇಗೆ, ಇದ್ದರೆ ಅದರ ಪ್ರಮಾಣವೆಷ್ಟು, ಎಂಬುದನ್ನು ಪರೀಕ್ಷಿಸುವುದಕ್ಕೆ ಈ ಬಣ್ಣದ ಛಾಯೆಗಳನ್ನು ಈ ಬಗ್ಗೆ ತಯಾರಿಸಿದ ಬಣ್ಣದ ವಕ್ಷೆಯೊಂದಿಗೆ ತುಲನೆ ಮಾಡಲಾಗುವುದು. ಈ ರಾಸಾಯನಿಕಗಳಿಗೆ ಪರೀಕ್ಷಕ ದ್ರವ್ಯ (ರಿಏಜಂಟ್) ಗಳೆಂದು ಹೆಸರಿದ್ದು ಆಧುನಿಕ ಉದ್ದಿಮೆಗಳಲ್ಲಿ ಅವನ್ನು ವಿಪುಲವಾಗಿ ಉಪಯೋಗಿಸಲಾಗುತ್ತದೆ.

(ಮುಂದಿನ ಪುಟನೋಡಿ)

'ಸೂಯೆಜ್' ಕಾಲುವೆ
ಶ್ರೀ ನೆಹರೂರ ಅಭಿ
ಪ್ರಾಯ

ಸೂಯೆಜ್ ಕಾಲುವೆ ವಿವಾದ ಪ್ರಶ್ನೆ ಯುದ್ಧದ ಅಪಾಯವನ್ನೇನೋ ಈಗ ಕಮ್ಮಿಯಾಗಿದೆಯೆಂದೂ, ಆದರೆ ಸಮಸ್ಯೆ ಪರಿಹಾರವಾಯಿತೆಂದು ಮಾತ್ರ ಯಾವ ರೀತಿಯಲ್ಲೂ ಹೇಳುವಂತಿಲ್ಲವೆಂದೂ ಪ್ರಧಾನ ಮಂತ್ರಿ ಪಂ॥ ನೆಹ್ರೂರವರು ಹೇಳಿದರು.

ಕಳೆದವಾರ ದೆಹಲಿಯಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾಡಿದ್ದುಮ.

"ವಿಶ್ವ ಸಮುದಾಯದ ಹೆದರಿಕೆಯು ಈಗ ಕೊಂಚ ಕಡಮೆಯಾಗಿದೆ. ಈ ವಿವಾದವನ್ನು ಹುಟ್ಟಿ ಹಾಕಿದ ಘಟನೆಗಳಿಂದ ಸಂಬಂಧಪಟ್ಟ ರಾಷ್ಟ್ರಗಳವರು ಈ ಸಮಸ್ಯೆಯನ್ನು ಶಾಂತವಾದ ವಾತಾವರಣದಲ್ಲಿ ಪರಿಗಣಿಸಲು ಸಹಾಯವಾಗುವಂತಾಗಿದೆ" ಎಂಬುದಾಗಿ ಪಂ॥ ನೆಹ್ರೂರವರು ಹೇಳಿದರು.

ಸಾರ್ವತ್ರಿಕವಾಗಿ ಪ್ರಸ್ತುತದ ಹಿತ ದೃಷ್ಟಿಯಿಂದಲೂ ಮತ್ತು ಭಾರತದ ಮತ್ತು ಅವರ ಭವಿಷ್ಯ ಆರ್ಥಿಕ ಅಭಿವೃದ್ಧಿಯ ಹಿತ ದೃಷ್ಟಿಯಿಂದಲೂ ಸೂಯೆಜ್ ಕಾಲುವೆ ವಿವಾದವು ಸೌಹಾರ್ದದಿಂದ ಇತ್ಯರ್ಥವಾಗುವುದು ಒಳ್ಳೆಯದೆಂಬುದಾ .. ಪಂ॥ ನೆಹ್ರೂ ಹೇಳಿದರು.

ಶಾಂತಿಯುತ ಇತ್ಯರ್ಥಕ್ಕೆ ಸಾಧಕವಾಗುವಂತೆ ಈಜಿಪ್ತ್ ಸರ್ಕಾರವು ಕೊಂಡಿರುವ ಧೋರಣೆಯನ್ನು ಪ್ರಶಂಸಾರ್ಹ ವೆಂದೂ, ಅವರು ತೆಗೆದುಕೊಂಡಿರುವ ನಿರ್ದಿಷ್ಟವಾದ ಸೂತ್ರವನ್ನೇನೂ ಒಪ್ಪಿಸಿಲ್ಲವೆಂದೂ ನೆಹ್ರೂ ನುಡಿದರು.

ಯಾವ ಅಂತರ ರಾಷ್ಟ್ರೀಯ ವಿವಾದವನ್ನೇ ಆಗಲಿ, ಒಂದು ರಾಷ್ಟ್ರವನ್ನು ಜನರೇಳಿಸಿ ಮಾಡುವುದರ ಮೂಲಕ ಇತ್ಯರ್ಥಪಡಿಸಲು ಹೋಗಬಾರದೆಂದು ಪಂ॥ ನೆಹ್ರೂ ಹೇಳಿದರು. ಅಧುನಿಕ ಜಗತ್ತಿನಲ್ಲಿ ಯಾವುದೇ ಸಮಸ್ಯೆಯನ್ನು ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರವನ್ನು ಸೋಲಿಸಿತೆಂಬ ಅಥವಾ ಒಂದು ರಾಷ್ಟ್ರವನ್ನು ಮತ್ತೊಂದು ರಾಷ್ಟ್ರವು ಗೆದ್ದಿತೆಂಬ ಭಾವನೆಯಿಂದ ಬಿಡಿಸಲು ಹೋಗಬಾರದೆಂದೂ ನೆಹ್ರೂ ನುಡಿದರು.

ಸೆಕ್ಯೂರಿಟಿ ಕೌನ್ಸಿಲಿಗೆ
ಸೂಯೆಜ್ ಪ್ರಶ್ನೆ

ಸೂಯೆಜ್ ವಿಚಾರವನ್ನು ಚರ್ಚಿಸಲು ಪ್ರಪಂಚ ಸಂಸ್ಥೆಯ ಸೆಕ್ಯೂರಿಟಿ ಕೌನ್ಸಿಲಿನ ಸಭೆಯನ್ನು ಬುಧವಾರ ಕರೆಯಬೇಕೆಂದು ಬ್ರಿಟೆಷ್ ಮತ್ತು ಫ್ರೆಂಚ್ ಸರ್ಕಾರಗಳಿಂದಲು ಅಧ್ಯಕ್ಷರನ್ನು ವ್ಯಾಖ್ಯಿಸಿದವು.

ಸೂಯೆಜ್ ಪ್ರಶ್ನೆಯ ನ್ಯಾಯಯುತ ಇತ್ಯರ್ಥಕ್ಕೆ ಸೆಕ್ಯೂರಿಟಿ ಕೌನ್ಸಿಲಿನ ಸಭೆಯನ್ನು ಕರೆಯುವುದೇ ಮಾರ್ಗವೆಂದೂ ಈ ರಾಷ್ಟ್ರಗಳು ತಿಳಿಸಿವೆ.

ಸೆಕ್ಯೂರಿಟಿ ಕೌನ್ಸಿಲಿನ ಬುಧವಾರದ ಸಭೆಯನಂತರ ಕೆಲವು ದಿನಗಳಲ್ಲಿ ಸಂಬಂಧಪಟ್ಟ ಎಲ್ಲಾ ರಾಷ್ಟ್ರಗಳ ಸಭೆಯೊಂದು ನಡೆಯುವುದೆಂದೂ ಅಮೆರಿಕಾದಲ್ಲಿ ಫಾಗಸ್ಟ್ ಸಲಾ ಈ ಜಿಪ್ತನ್ನೂ ಆಹ್ವಾನಿಸಲಾಗುವುದೆಂದೂ ಹೇಳಲಾಗಿದೆ.

ಸೆಕ್ಯೂರಿಟಿ ಕೌನ್ಸಿಲ್‌ಗೆ ಈ ಪ್ರಶ್ನೆ ಒಪ್ಪಿಸಿದ್ದರಿಂದಲೇನೂ, ಸೂಯೆಜ್ ಒಳಕೆಗಾರರ ಸಂಘವು ಯೋಜನೆಯನ್ನು ಕೈಬಿಟ್ಟಂತಾಗಿಲ್ಲವೆಂದು ನುಡಿಯಲಾಗಿದೆ.

ಸೂಯೆಜ್ ಕಾಲುವೆ
ಈಜಿಪ್ತಿನದು

"ಸೂಯೆಜ್ ಕಾಲುವೆಯು ಈಜಿಪ್ತಿನ ಭಾಗವು ಮತ್ತು ಅದರ ಮೇಲೆ ಈಜಿಪ್ತಿನ ಸಾರ್ವಭೌಮತ್ವವನ್ನು ಸ್ವಲ್ಪವಾದರೂ ಸಹಾ ಕಡಿಮೆಗೊಳಿಸಬಾರದು ಎಂಬುದೇ ಭಾರತದ ವಾದ. ಆದರೆ ಸಮಸ್ಯೆಗೆ ಇನ್ನೊಂದು ಮುಖವೂ ಇದೆ. ಸೂಯೆಜ್ ಕಾಲುವೆಯನ್ನು ಅನೇಕ ರಾಷ್ಟ್ರಗಳು ಉಪಯೋಗಿಸುತ್ತಿವೆ. ಅದು ಜಗತ್ತಿನ ವಾಣಿಜ್ಯವಲ್ಲೂ ವ್ಯಾಪಾರವೆಲ್ಲೂ ಪ್ರಮುಖ ಕೇಂದ್ರವಾಗಿದೆ ಅದು ಎಲ್ಲಾ ರಾಷ್ಟ್ರಗಳ ಪಡಗುಗಳಿಗೂ ತೆರೆದಿರುವ ತಾಣವೆಯಾಗಿ ಯಾವ ಅಡಚಣೆಯೂ ಇಲ್ಲದೆ ಕೆಲಸ ಮಾಡುತ್ತಲೇ ಹೋಗಬೇಕು." ಎಂಬುದಾಗಿ ನೆಹ್ರೂ ಒತ್ತಿ ಹೇಳಿದರು.

ಶಾಂತಿಯುತ ವಿಧಾನವಲ್ಲಿ ನಿಜವಾದ ಒಪ್ಪಂದವಾಗಬೇಕಾದರೆ ಈಜಿಪ್ತ್ ಭಾಗವಹಿಸಿವ ಸಮ್ಮೇಳನದ ಮುಖಾಂತರ ಮಾತ್ರವೇ ಎಂದೂ ನೆಹ್ರೂ ತಿಳಿಸಿದರು.

ಜಟಿಲತೆ ಏತಕ್ಕೆ?

ಸೂಯೆಜ್ ಬಿಕ್ಕಟ್ಟು ಅದರ ಹಿಂದಿನ ಕೆಲವು ಅಂಶಗಳಿಂದಾಗಿ ಜಟಿಲಗೊಂಡಿದೆ. ಅಲ್ಲಿ ಎಣ್ಣೆ ಇದೆ. ಅದರ ಹಿಂದೆ ಜಮ್ಮು ವ್ಯಕ್ತಿತ್ವವನ್ನು ಸಮರ್ಥಿಸಿಕೊಳ್ಳಲೆಸುವ ಏಷ್ಯನ್ ಮತ್ತು ಆಫ್ರಿಕಾನ್ ರಾಷ್ಟ್ರಗಳ ಜಾಗೃತ ಶಕ್ತಿಗಳಿವೆ. ಈ ರಾಷ್ಟ್ರಗಳಿಗೂ ಮತ್ತು ಯೂರೋಪಿಗೂ ಇದ್ದ ಹಳೆಯ ಸಂಬಂಧವೆಲ್ಲಾ ಬದಲಾಗುತ್ತಿದೆ. ಬದಲಾಗಬೇಕಾಗಿದೆ. ಇದು ಅನಿವಾರ್ಯವಾದುದು. ಆದರೆ ಯೂರೋಪಿನ ಸಣ್ಣ ಭದ್ರತಾ ಹಿತಾಸಕ್ತಿಗಳಿಗೆ ಧಕ್ಕೆ ತರಲಿರುವ ಈ ಬದಲಾವಣೆಯು ರಕ್ತಪಾತ ಮತ್ತು ಯುದ್ಧದಿಂದ ಆಗಬೇಕು ಅಥವಾ ಶಾಂತಿಯುತ ವಿಧಾನದಿಂದ ಆಗಬೇಕೋ ಎಂಬುದೇ ಈಗಿನ ಮುಖ್ಯ ವಿಷಯ—ಎಂದೂ ನೆಹ್ರೂ ವಿವರಿಸಿದರು.

ಡಾ॥ ಅಂಬೇಡ್ಕರ್
ಬೌದ್ಧ ಧರ್ಮಕ್ಕೆ

ಭಾರತದ ಮಾಜಿ ನ್ಯಾಯಾಂಗ ಮಂತ್ರಿಯೂ, ಭಾರತ ರಾಜ್ಯಾಂಗದ ರಚಕರಲ್ಲಿ ಒಬ್ಬರೂ, ಪಾರ್ಲಿಮೆಂಟ್ ಸದಸ್ಯರೂ ಆದ ಡಾ॥ ಬಿ. ಆರ್. ಅಂಬೇಡ್ಕರ್‌ರವರು ಆಕ್ಟೋಬರು ೧೫ ರಂದು ನಾಗಪುರದಲ್ಲಿ ಬೌದ್ಧ ಧರ್ಮಕ್ಕೆ ಮತಾಂತರ ಹೊಂದುವರು.

ಬೌದ್ಧ ಭಿಕ್ಷುಗಳು ಈ ಮತಾಂತರ ಸಮಾರಂಭ ನಡೆಸುವರು. ಬೆಳಿಗ್ಗೆಯೂ ಮತ್ತು ಸಂಜೆಯೂ ಈ ಸಂಬಂಧವಾಗಿ ಧರ್ಮ ವಿಧಿಗಳು ನಡೆಯುವುವು.

(ಒಂದನೇ ಪುಟದಿಂದ)

ಗೃಹನಿರ್ಮಾಣ ಸೊಸೈಟಿಗಳು ನನಗೆ ಸಂಬಂದಿಸಿಲ್ಲ. ಆದರೂ ಹೆಗರಿಬೊಮ್ಮನಹಳ್ಳಿ ಗುರುಪುರ ಚಿಕ್ಕಜೋಗಿಕಳ್ಳಿ, ಬಳ್ಳಾರಿಗಳಲ್ಲಿ 144 ಮನೆಗಳು ಪೂರ್ಣವಾಗಿವೆ. 23 ಮನೆಗಳನ್ನು ಕಟ್ಟುತ್ತಿರಲಾಗಿದೆ ಸುಮಾರು 16 ಲಕ್ಷರೂಪಾಯಿಗಳು ವೆಚ್ಚವಾಗಿದೆ.

ಶ್ರೀ ವಿ.ಜಿ ಪಿಳ್ಳೆಯವರು ಕಮ್ಯೂ ಇಲಾಖೆಗೆ ಸಂಬಂಧಿಸಿದ ಕಾರ್ಯದ ಬಗ್ಗೆ ವಿಸ್ತೃತ ಅಂಕೆ – ಸಂಖ್ಯೆಗಳನ್ನೊಳಗೊಂಡ ಪತ್ರಿಕಾಕರ್ತರನ್ನೂ ಇತರ ಸುದ್ದಿಗಾರರನ್ನೂ ಸತ್ಕರಿಸಿದರು.

ನವಭಾರತಕ್ಕೆ ಚಂದಾದಾರರಾಗಿರಿ

ಮೆಣಸಿನ ಕಾಯಿಯ ಎಲೆ ಮುದುರುವ ರೋಗ

ಮೆಣಸಿನ ಗಿಡಗಳಿಗೆ ಬರುವ ಅತಿ ಹಾನಿಕರವಾದ ರೋಗವೆಂದರೆ ಎಲೆ ಮುದುರುವ ರೋಗ. ಇದು "ಸ್ಪಿರೋಪ್ಲಾಸ್ಮಾ ಡೊರ್ಸೇಲಿಸ್" ಎಂಬ ಒಂದು ಸೂಕ್ಷ್ಮ ಕ್ರಿಮಿಯಿಂದಾಗುವ ಹಾವಳಿ. ಇದು ಕಂದು ವರ್ಣದ ಕ್ರಿಮಿಯಾಗಿದೆ. ಇವರ ಮೊಟ್ಟಗಳು ಒಂದೊಂದಾಗಿ ಸಸಿಗಳ ಎಲೆ ಚಿಗುರಿನ ಒಳ ಭಾಗದಲ್ಲಿ ಇಡಲ್ಪಟ್ಟ ನಂತರ ಅವುಗಳು ಒಡೆದು ಸಣ್ಣ ಮರಿಗಳು ಹೊರಬರುತ್ತವೆ. ಈ ಸೂಕ್ಷ್ಮ ಕ್ರಿಮಿಗಳು ಮುಖ್ಯವಾಗಿ ಚಿಗುರುಗಳ ಮತ್ತು ಎಳೆತಾದ ಎಲೆಗಳ ರಸವನ್ನು ಹೀರಿ ಅವುಗಳು ಮುದುರುವಂತೆಯೂ ಮಾಡುತ್ತವೆ. ಆಲ್ಲದೆ, ಈ ಮೂಲಕ ಗಿಡಗಳ ಬೆಳವಣಿಗೆಯನ್ನು ಕುಂದು ಗೊಳಿಸಿ ಹೂ ಬಿಡುವ ಶಕ್ತಿಯನ್ನು ತಗ್ಗಿಸುತ್ತದೆ. ಕಲವು ವೇಳೆಗಳಲ್ಲಿ ಗಿಡವೇ ಒಣಗಿ ಹೋಗುತ್ತದೆ. ಬೆಳೆಯುಂಟಾದ ಕಾಲಗಳಲ್ಲಿ ಬಾಧಿಸಿದ್ದಲ್ಲಿ ಒಂದು ಗಿಡವೂ ಗದ್ದೆಯಲ್ಲಿ ಕಾಣಿಸಿಗಲಿಕ್ಕಿಲ್ಲ. ಅದುದರಿಂದಲೇ ಕೊಳೆಯ ಸಂದರ್ಭವು ಕೂಡ ಬರುವುದು.

ನಿವಾರಣೆ

ಈ ಕೀಟಗಳಿಂದುಂಟಾಗುವ ನಷ್ಟವನ್ನು ರೈತರಿಗೆ ಅನೇಕ ವರ್ಷಗಳಿಂದ ತಿಳಿದಿದ್ದರೂ; ಅನೇಕರಿಗೆ ಇದರ ನಿವಾರಣೋಪಾಯವು ತಿಳಿದಿರುವುದಿಲ್ಲ. ಹೊಗೆಸೊಪ್ಪಿನ ಕಷಾಯವನ್ನು ಚಿಮುಕಿಸುವುದು ಈ ತನಕ ಶಿಫಾರಸು ಮಾಡಲ್ಪಟ್ಟ ನಿವಾರಣೋಪಾಯವಾಗಿತ್ತು. ಇದು ಪಲಕಾರಿಯಾಗಿಲ್ಲದ್ದರೂ. ಹೆಚ್ಚಿನ ಪ್ರಮಾಣದಲ್ಲಿ ಈ ಕಷಾಯವನ್ನು ತಯಾರಿಸುವ ಪರಿಶ್ರಮದಿಂದಾಗಿಯೂ, ಎಲ್ಲಾ ಕಡೆಗಳಲ್ಲಿ ಹೊಗೆಸೊಪ್ಪಿನ ದಂಟು ಸಿಗದಿರುವುದರಿಂದಲೂ ಈ ಉಪಾಯವನ್ನು ಕೈಕೊಳ್ಳುವುದು ಅನಾನುಕೂಲವಾಗಿದೆ. ಸೂತನ ವಿಧದ ಕ್ರಿಮಿನಾಶಕ ಔಷಧಗಳ ಸಿಗುವಿಕೆಯಿಂದಾಗಿ ಈಗ ಈ ಕೆಳಗಿನ ಅತಿ ಸುಲಭ ನಿವಾರಣೋಪಾಯಗಳನ್ನು ಶಿಫಾರಸು ಮಾಡಲಾಗುವುದು.

ರೋಗ ತಗಲಿದ ಗಿಡಗಳಿಗೆ 'ಹೆಪ್ಸಿಡಾಲ್-810' ಎಂಬ ಔಷಧಿಯನ್ನು ಧೂಳಿಸುವುದು ಉತ್ತಮ. ರೋಗವು ಪ್ರಬಲವಾಗಿದ್ದಲ್ಲಿ 2 ಅಥವಾ 3 ಸಾರಿ ಈ ಔಷಧಿಯನ್ನು ಧೂಳಿಸಬೇಕು. ಸಸಿಗಳನ್ನು ನಡುವುದಕ್ಕೆ ಮುಂಚೆ "ಹೆಕ್ಸೆಡಾಲ್ 9೫0" ಎಂಬ ಔಷಧ ಕಲಸಿದ ನೀರಿನಲ್ಲಿ ಸಸಿಗಳ ಬೇರು ಬಿಟ್ಟು ಮೇಲ್ಭಾಗ ಮುಳುಗಿಸಿ ನಡಬೇಕು. ಗಿಡ ನೆಡುವ ಮುಂಚಿತ ಈ ದ್ರಾವಕವು ಸಂಪೂರ್ಣ ಒಣಗಬೇಕು. ಬೇರುಗಳಿಗೆ ತಗಲಕೂಡದು ಬಾಳೆಯು ನೆಟ್ಟನಂತರ ಕಂಡು ಬಂದರೆ ಮೇಲೆ ವಿವರಿಸಿದ ಮಪ್ಪನ್ನು ಅಂಗಡಿ "ಹೆಪ್ಸಿಡಾಲ್ 810" ನ್ನು ಧೂಳಿಸಬೇಕು ಅಥವಾ "ಹೆಪ್ಸಿಡಾಲ್ 950" ನ್ನು ಗಿಡಗಳ ಮೇಲೆ ಚಿಮುಕಿಸುವುದು ಉತ್ತಮ.

"ಹೆಪ್ಸಿಡಾಲ್ 810" ಪುಡಿಯನ್ನು 20 ರಾತಲುಗಳ ತೆ ಧೂಳಿಸಬೇಕು. "ಹೆಪ್ಸಿಡಾಲ್ 9೫0" ಒಂದು ರಾತ್ಲು "ಹೆಪ್ಸಿಡಾಲ್ 950"ಮದನ್ನು 30 ಗ್ಯಾಲನ್ ನೀರಿನಲ್ಲಿ ಕಲಿಸಬೇಕು). ಒಂದು ಎಕ್ರೆಗೆ 5 ರಾತಲು ಔಷಧಿ ಸಾಕಾಗುವುದು.

ಮೇಲಿನ ನಿವಾರಣೋಪಾಯವನ್ನು ಕ್ರಮ ಬದ್ಧವಾಗಿ ಹಾವಳಿಗೆ ತಕ್ಕಂತೆ ಅನುಸರಿಸಿದಲ್ಲಿ ನೋಡಿದ ಈ ನಾಶಕವಾದ ಹುಳವನ್ನು ಸಂಪೂರ್ಣವಾಗಿ ಹೋಗಲಾಡಿಸಬಹುದು. ಆ ಮೂಲಕ ಬೆಳೆಯ ವೃದ್ಧಿ ಮತ್ತು ಸಂಪೂರ್ಣ ಉತ್ಪತ್ತಿಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಒಂದು ಎಕ್ರೆಗೆ ತಗಲುವ ಖರ್ಚು ಅತ್ಯಲ್ಪವೆಚ್ಚದಿಂದ ಸಿಗುವ ಲಾಭವು ಇದರ ಅನೇಕ ಪಾಲಷ್ಟಿರುವುದು.

ಮಣ್ಣಿನ ಪರೀಕ್ಷೆ

(ಎರಡನೇ ಪುಟದಿಂದ)

ಬೇರೆ ಬೇರೆ ಘಟಕಗಳನ್ನು ಕಂಡು ಹಿಡಿಯಲು ಬೇರೆ ಬೇರೆ ಪರೀಕ್ಷಕ ದ್ರವ್ಯಗಳಿವೆ. ಉದಾಹರಣೆಗಾಗಿ, ನೈಟ್ರೇಟು, ಫಾಸ್ಫರಸ್, ಪೊಟ್ಯಾಶಿಯಮ್, ಮುಂತಾದವುಗಳ ವಿಷಯದಲ್ಲಿ ಪ್ರತಿಯೊಂದಕ್ಕೂ ಪ್ರತ್ಯೇಕವಾದ ಪರೀಕ್ಷಕ ದ್ರವ್ಯಗಳಿಗೆ. ಇಂಥ ಪರೀಕ್ಷಕ ದ್ರವ್ಯಗಳು ತಕ್ಕ ಕೆಮಿಸ್ಟರಿಂದ ತಯಾರಿಸಲ್ಪಟ್ಟಿರುವವು; ಬೇರೆ ಬೇರೆ ಆಕಾರದ ಬಾಟಲಿಗಳಲ್ಲಿ ತುಂಬಿದ್ದ ಈ ದ್ರಾವಕಗಳನ್ನು ಟೆಸ್ಟ್‌ಟ್ಯೂಬು, ಬಣ್ಣದ ನಕ್ಷೆ ಹಾಗು ಪರೀಕ್ಷಣೆಗೆ ಅವಶ್ಯವಿರುವ ಇತರ ಸಾಧನಗಳೊಂದಿಗೆ ಪೆಟ್ಟಿಗೆಯಲ್ಲಿ ಇರಿಸಬಹುದು.

ಮಣ್ಣಿನ ಪ್ರತಿಕ್ರಿಯೆ. ಫಾಸ್ಫರಸ್ ಪೊಟ್ಯಾಶಿಯಮ್, ನೈಟ್ರೇಟು, ಅಮೋನಿಯಮ್ ಸಲ್ಫೇಟು ಇತ್ಯಾದಿ ಘಟಕಗಳನ್ನು ಕಂಡು ಹಿಡಿಯಲು ಬೇಕಾಗುವ ಪರೀಕ್ಷಕ, ದ್ರಾವಕಗಳ ಪೆಟ್ಟಿಗೆಗೆ ೧೫೦ ರೂ. ಗಿಂತ ಹೆಚ್ಚು ಬೆಲೆ ಬರುವದಿಲ್ಲ. ಪ್ರತಿಯೊಂದು ಪರೀಕ್ಷಣೆಯ ವೆಚ್ಚವಾದರೂ ತೀರ ಕಡಿಮೆ (ಕೆಲವೇ ಆಣೆಗಳಷ್ಟು) ಬರುವದು.

ಪ್ರತಿದಿನವೂ ೨೫,೦೦,೦೦೦ ಪ್ರತಿಗಳ ಸಂಖ್ಯೆಯಲ್ಲಿ ಪುಸ್ತಕ ಪ್ರಕಟನೆ

ಸೋವಿಯತ್ ಒಕ್ಕೂಟದಲ್ಲಿ ಪ್ರತಿದಿನವೂ ಪುಸ್ತಕಗಳ 25 ಲಕ್ಷ ಪ್ರತಿಗಳು ಪ್ರಕಟವಾಗುತ್ತವೆ.

ಸೋವಿಯತ್ ರಾಜಧಾನಿಯ ಪ್ರಕಟನಾಲಯಗಳು ಹೊರಡಿಸುವ ಪುಸ್ತಕಗಳು ಇತ್ತೀಚೆಗೆ ಹೊಸದಾಗಿ ಪ್ರಕಟನವಾದ ಪುಸ್ತಕಗಳಲ್ಲಿ ಮುಖ್ಯವಾದ ಸ್ಥಾನವನ್ನು ಪಡೆದಿವೆ. ಮಾಸ್ಕೋ ನಗರದಲ್ಲಿ ಪ್ರಕಟವಾದ ಪುಸ್ತಕಗಳು ಮಾಯಕೊವ್ಸ್ಕೀಯವರ ಮತ್ತು ಪುಷ್ಕಿನ್, ಕುಪ್ರಾಯೇವ್ ವರವ ಸಂಕಲಿತ ಕೃತಿಗಳನ್ನೂ, ಜಾಕ್ ಲಂಡನ್‌ರವರ ಸಂಕಲಿತ ಕೃತಿಗಳ ಒಳಗೊಂಡ ಸಂಪುಟವನ್ನೂ ಭಾರತೀಯ ತತ್ವಶಾಸ್ತ್ರ" ಎಂಬ ಗ್ರಂಥವನ್ನೂ ಮೋಸ್ಕೊ ಮತ್ತು ಇನ್ನಿತರ ಕೃತಿಗಳನ್ನೂ ಒಳಗೊಂಡಿವೆ.

ಇತ್ತೀಚೆಗೆ ಅನೇಕ ಸಂಸ್ಕರಣಗಳನ್ನು ಲೆನಿನ್‌ಗ್ರಾಡ್, ಕೀವ್, ತಲ್ಲಿನ್ ರೀಗಾ ಅಷ್ಟಾಬಾದ, ಮಿನಾಸ್ಕ್ ಮತ್ತು ಸೋವಿಯತ್ ಒಕ್ಕೂಟದಲ್ಲಿನ ಇತರ ಮುದ್ರಣ ಕೇಂದ್ರಗಳ ವ್ಯಾಪಾರದ ಗುರುತುಗಳನ್ನು ಹೊಂದಿವೆ. ಪ್ರತಿಯೊಂದು ಒಕ್ಕೂಟಪ್ರಜಾತಂತ್ರಪಲ್ಲಿಯೂ ಕಂಡು ಬರುವ 200 ಕ್ಕಿಂತಲೂ ಹೆಚ್ಚು ದೊಡ್ಡ ಪ್ರಕಟನಾಲಯಗಳಿಂದ ಪುಸ್ತಕಗಳು ಹೊರಬೆರುತ್ತವೆ. ಸೋವಿಯತ್ ಒಕ್ಕೂಟದಲ್ಲಿ ವಾಸಿಸುವ ಜನತೆಗಳ ಪ್ರತಿಯೊಂದು ಭಾಷೆಯಲ್ಲಿಯೂ ಪುಸ್ತಕಗಳು ಪ್ರಕಟವಾಗುತ್ತವೆ ಈ ವರ್ಷ ಸೋವಿಯತ್ ಓದುಗರಿಗೆ 100 ಕೋಟಿಗಿಂತಲೂ ಹೆಚ್ಚು ಪುಸ್ತಕಗಳು ಜ್ಞಾನಪ್ರಸಾರದ ಪ್ರತಿಯೊಂದ ಶಾಖೆಯನ್ನೂ ಒಳಗೊಂಡು ದೊರೆಯುವುವು.

ಬಳ್ಳಾರಿ ಜಿಲ್ಲೆಯ ಕೊನೆಯದಾಗಿ ನಿರ್ಣಯಿಸಿದ ನೂತನ ಮತದಾರರ ಕ್ಷೇತ್ರಗಳು

ತಾ. 16 ಮತ್ತು 17—1956 ರಂದು ಬೆಂಗಳೂರಿನಲ್ಲಿ ಸೇರಿದ್ದ ಎಲೆಕ್ಷನ್ ಕಮಿಷನ್ ಬಳ್ಳಾರಿ ಜಿಲ್ಲೆಗೆ ಎಂಟು ಅಸೆಂಬ್ಲಿ ಸ್ಥಾನಗಳನ್ನು ಕೊಡಬೇಕೆಂದು ನಿರ್ಧರಿಸಿದ್ದಾರೆ. ಆ ಎಂಟು ಕ್ಷೇತ್ರಗಳು ಈ ಕೆಳಗಿನಂತೆ ಇವೆ.

೧ ಬಳ್ಳಾರಿ ಕ್ಷೇತ್ರ

ಫಿರ್ಕಾ ಹೆಸರು	ಜನಸಂಖ್ಯೆ
ಬಳ್ಳಾರಿ ಶಹರ	72,220
ಬಳ್ಳಾರಿ ಫಿರ್ಕಾ	11,823
ರೂಪನಗುಡಿ ಫಿರ್ಕಾ (ಅರ್ಧ)	8,350

೨ ಕೋಳೂರು ಕ್ಷೇತ್ರ

ಕೋಳೂರು	25,226
ಕುರುಗೋಡು	53,644
ಮೋಕ	25,290
ರೂಪನಗುಡಿ (ಅರ್ಧ)	8,760

೩ ಸಿರುಗುಪ್ಪಾ ಕ್ಷೇತ್ರ

ಸಿರುಗುಪ್ಪಾ ತಾಲ್ಲೂಕು	64,960
ಕಂಪ್ಲಿ—ಫಿರ್ಕಾ	26,464

೪ ಸೊಂಡೂರು ಕ್ಷೇತ್ರ

ಸೊಂಡೂರು ತಾಲ್ಲೂಕು	52,723
ಕಾಮಲಾಪುರ(ಹೊಸಪೇಟೆ ತಾ)	22,759
ಗುಡಿಕೋಟಿ(ಕೂಡ್ಲಿಗಿ)	23,234

೫ ಹೊಸಪೇಟೆ ಕ್ಷೇತ್ರ

ಹೊಸಪೇಟೆ ಫಿರ್ಕಾ	45,379
ಟಿ.ಬಿ.ಪಿ ಡ್ಯಾಂ ಸೈಟ್	21,889
ಮಲ್ಲಾಪುರ ಸಬ್ ತಾ.	12,901
ಹಂವೆಸಾಗರ	22,044

೬ ಹಡಗಲಿ ಕ್ಷೇತ್ರ

ಹೂವಿನಹಡಗಲಿ	22,193
ಇಟಗಿ	28,210
ಹಿರೇಹಡಗಲಿ	21782
ಹಗರಬೊಮ್ಮನಹಳ್ಳಿ	15,868
ಜಿಲಕನಹಟ್ಟಿ	6,814

೭ ಮತ್ತು ಕೂಡ್ಲಿಗಿ ಹರಪನಹಳ್ಳಿ ಕ್ಷೇತ್ರ

ಕೂಡ್ಲಿಗಿ(ಗುಡಿಕೋಟಿ ಫಿರ್ಕಾ ಬಿಟ್ಟು)	94,766
ಇಡೀ ಹರಪನಹಳ್ಳಿ ತಾ.	1,05,930

ಈ ಕ್ಷೇತ್ರದಲ್ಲಿ ಒಬ್ಬ ಹರಿಜನ ಸದಸ್ಯರನ್ನು ಆರಿಸಬೇಕು.

ಬಳ್ಳಾರಿ ಜಿಲ್ಲೆಗೆ ಎನ್-ಜಿ-ಓ. ಬೇಡಿಕೆಗಳು

ಕಳೆದವಾರ ಸಮಾವೇಶವಾದ ಸರಕಾರಿ ಕೆಳ ನೌಕರರ ಸಮ್ಮೇಳನವನ್ನು ಶ್ರೀ ಟಿ. ವಿ. ರೆಡ್ಡಿಯವರು ಪ್ರಾರಂಭಿಸಿ ನೌಕರರು ವೇತನಭಿವೃದ್ಧಿಗಾಗಿ ಧೈರ್ಯಗೆಡಬೇಕೆಂದೂ, ಸರ್ಕಾರವು ಯಾವಾಗಲೂ ತನ್ನ ಆರ್ಥಿಕ ಸಮಿತಿಯನ್ನು ಕಾಪಾಡಿಕೊಂಡು ನೌಕರರನ್ನು ತೃಪ್ತಿಪಡಿಸುವುದರಲ್ಲಿ ಸಂಶಯವಿಲ್ಲವೆಂದು ಆಶಿಸಿದರು.

ಶ್ರೀ ದಿವಾಕರರಾಯರು ಬಳ್ಳಾರಿ ಜಿಲ್ಲೆಯ ಸರ್ಕಾರೀ ಕೆಳನೌಕರರ ದೀನ ಪರಿಸ್ಥಿತಿಯನ್ನು ವಿವೇಚಿಸಿ ಮೈಸೂರಲ್ಲಿ ಸೇರಿದ 3 ವರ್ಷಗಳ ನಂತರವೂ, ತಮ್ಮ ಸಮಸ್ಯೆಯು ಇತ್ಯರ್ಥವಾಗಿರುವುದು ಶೋಚನೀಯವೆಂದರು. ಸುವರ್ಣ ರಾಷ್ಟ್ರೀಯ ನಗಳಾದವು "ನಮ್ಮ ಜಿಲ್ಲೆಯ ತಹಶೀಲ್ದಾರರನ್ನು ಅಮಲ್ದಾರ ಕೇಡರ್‌ಗೆ ಪರಿವರ್ತಿಸುವುದಾದರೂ, 1—10—1953 ರಿಂದ ಮೈಸೂರು ಸರ್ವಿಸ್‌ಗಳಲ್ಲಿ ನಮ್ಮನ್ನು ಸೇರಿಸಬೇಕು. ನಮ್ಮ ಜಿಲ್ಲೆಯಲ್ಲಿ ಮಾಲಿಯಾದ ಸಣ್ಣ ಮತ್ತು ದೊಡ್ಡ ಅಧಿಕಾರಸ್ಥಾನಗಳಿಗೆ ಮೈಸೂರಿನ ಇತರ ಜಿಲ್ಲೆಗಳಿಂದ ಪ್ರಮೋಷನ್ ಹೊಂದಿ ಬಂದರು. ಇದರಿಂದ ನಮ್ಮ ಜಿಲ್ಲೆಯ ನೌಕರರಿಗೆ ಅನ್ಯಾಯವಾಯಿತು. ಇದನ್ನು ಕೂಡಲೇ ಸರಿಪಡಿಸಬೇಕು. ಸೀನಿಯಾರ್ಟಿಯನ್ನು ನಿಶ್ಚಯಿಸಬೇಕಾದಲ್ಲಿ ನಿಯುಕ್ತಿ ಹೊಂದಿದ ತಾರೀಖಿನಿಂದಲೇ ಲೆಕ್ಕಮಾಡಬೇಕು.

ವೇತನದ ಮಟ್ಟವನ್ನು 23-9-47 ರಲ್ಲಿ ಹೊರಟ ಜಿ.ಓ. ಪ್ರಕಾರಕ್ಕೆ ನಿರ್ಣಯಿಸಬೇಕು. ಕಾಯಂನೌಕರರಿಗಲ್ಲದೆ ಅಸ್ಥಾಯೀಯವರಿಗೂ ಸಹ ಮೈಸೂರು ಸ್ಕೇಲು ಅನುಕೂಲತೆ ಕೊಡಬೇಕು. ಮೈಸೂರು ವಿಲಯನದ ಕಾಲಕ್ಕೆ ಇದ್ದ ನೌಕರರನ್ನೆಲ್ಲ (ಸ್ಥಾನಿಕ) ಎಲ್ಲ ಇಲಾಖೆಗಳಲ್ಲೂ ಸ್ಥಾನ ಕೊಡಿಸಬೇಕು. ರಜಾ ಸೌಕರ್ಯವನ್ನು ಮದ್ರಾಸ್ ಪದ್ಧತಿಯಂತಿಟ್ಟು ಜಾರಿಯಲ್ಲಿ ತರಬೇಕು. ಕೆಳಗಿನವರಿಗೆ ಮದ್ರಾಸ್ ರೂಲಿನಂತೆ 60 ವರ್ಷಗಳವರೆಗೂ ಕೆಲ್ಸದಲ್ಲಿ ಇಡಬೇಕು. ಮದ್ರಾಸ್ ಟಿಪ್ಪುಗಳನ್ನು ಪಾಸುಮಾಡಿರುವವರು ಮೈಸೂರು ಟಿಪ್ಪುಗಳಲ್ಲಿ ಉತ್ತೀರ್ಣರಾದಂತೆ ಭಾವಿಸಬೇಕು ಭವಿಷ್ಯದಲ್ಲಿ ಕಡಮೆಮಾಡುವ ಪದ್ಧತಿ ತಪ್ಪಿಸಬೇಕು ಈ ತೀರ್ಮಾನಗಳು ಸರ್ವಾನ್ಯ ಮತದಿಂದ ಸ್ವೀಕೃತವಾದವು.

ಕಾಂಗ್ರೆಸ್ ಸಮಿತಿ ಬಳ್ಳಾರಿ

27-9-56 ಕಾಂಗ್ರೆಸ್ ಕಾರ್ಯಾಲಯದಲ್ಲಿ ಸಮಾವೇಶವಾದ ಸಭೆಯು ಈ ಕೆಳ ಅಧಿಕಾರಿವರ್ಗವನ್ನಾರಿಸಿತು.

ಅಧ್ಯಕ್ಷರು:— ಶ್ರೀ ಬಿ ಎಂ. ರೇವಣಸಿದ್ದಯ್ಯ
ಉಪಾಧ್ಯಕ್ಷರು:— ಶ್ರೀಮತಿ. ಗಂಡುರಾವ್.
ಕೋಶಾಧ್ಯಕ್ಷರು:— ಶ್ರೀ ಹುಚ್ಚಪ್ಪ.
ಕಾರ್ಯದರ್ಶಿಗಳು:— ಶ್ರೀ ಯಸ್ ರಾಮಚಂದ್ರನ್ ಮತ್ತು ಅಜ್ಜಪ್ಪ

ಒಂದಿಯಲ್ಲಿ ೬೦,೦೦೦ ಪಾರಿಭಾಷಿಕ ಶಬ್ದಗಳು

ಭಾರತ ಸರ್ಕಾರದ ಶಿಕ್ಷಣ ಖಾತೆಯವರು ೬೦,೦೦೦ ವೈಜ್ಞಾನಿಕ ಮತ್ತು ವಾರಿಭಾಷಿಕ ಶಬ್ದಗಳನ್ನು ಹಿಂದಿಯಲ್ಲಿ ಇದುವರೆಗೂ ರೂಪಿಸಿರುವರು. ಸಕೇಂದ್ರ ಶಾಲೆಗಳಲ್ಲಿ ಈ ಶಬ್ದಗಳನ್ನು ಬಳಸಲಾಗುವುದು. ೧೯೬೦ ರ ವೇಳೆಗೆ ಎಲ್ಲಾ ವೈಜ್ಞಾನಿಕ ಹಾಗೂ ಕಲಾವಿಷಯ ಸಂಬಂಧ ಪಾರಿಭಾಷಿಕ ಶಬ್ದಗಳ ಸಂಖ್ಯೆ ಸುಮಾರು ೦೦೦,೦೦,೫ ಆಗಬಹುದೆಂದು ಅಂದಾಜು ಮಾಡಲಾಗಿದೆ.

ತುಂಗಭದ್ರಾ ಜಲಾಶಯ

ಮೇಲ್ಗಾಲುವೆಯ ಕೆಲಸ ಪ್ರಾರಂಭ.

ತುಂಗಭದ್ರಾ ಮೇಲ್ಗಾಲುವೆಯ ಕೆಲಸ ಪ್ರಾರಂಭವನ್ನು ಆಂಧ್ರದ ಗೌರ್ನರ್‌ರಾದ ಶ್ರೀ ತ್ರಿವೇದಿಯವರು ಮೈಸೂರು ಮುಖ್ಯಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಪ.ಹತ್ಯಾಗಾಂಧಿ ಜನ್ಮದಿನೋತ್ಸವದಂದು 2—10—1956 ರ ಸಾಯಂಕಾಲ ನೆರವೇರಿಸಿದರು. ಆಂಧ್ರದ ಮುಖ್ಯಮಂತ್ರಿ ಗೋಪಾಲರೆಡ್ಡಿ ಉಪಮುಖ್ಯ ಮಂತ್ರಿ ಶ್ರೀ ಸಂಜೀವರೆಡ್ಡಿಯವರು ದಯಮಾಡಿಸಿದ್ದರು. ಅವರು ಇದರಿಂದಾಗುವ ಲಾಭಗಳನ್ನು ವಿವರಿಸಿದರು. ಆರಂಭಿಕ ಹೈದ್ರಾಬಾದ್ ಕಡೆಯ ಕೈಲಾಸಬಂಗಲೆಯಲ್ಲಿ ಭೋಜನ ಸಮಾರಂಭವು ಏರ್ಪಟ್ಟಿತು.

ಅಕ್ಟೋಬರ ತಿಂಗಳ ಹೊಲಗೆಲಸ

ಅಕ್ಟೋಬರ ತಿಂಗಳಲ್ಲಿ ಒಕ್ಕಲಿಗರು ಮುಂಗಾರಿಯ ಫೈರನ್ನು ಕೊಯ್ಯುವ ಪಾಗು ಹಿಂಗಾರಿಯ ಫೈರನ್ನು ಬಿತ್ತುವ ಕಾರ್ಯದಲ್ಲಿ ನಿರತರಾಗಿರುತ್ತಾರೆ. ಈ ತಿಂಗಳಲ್ಲಿ ಅನೇಕ ಮುಂಗಾರಿಯ ಬೆಳೆಗಳಾದ ಸೆಜ್ಜೆ, ರಾಗಿ, ಹೆಸರು, ಉದ್ದು, ಶೇಂಗಾ ಮತ್ತು ಮುಂಗಾರಿ ಜೋಳ ಮೊದಲಾದ ಬೆಳೆಗಳು ಪಕ್ವವಾಗಿ ಬೆಳೆದು ಕೊಯ್ಯುವ ದಕ್ಕೆ ಯೋಗ್ಯವಾಗಿರುತ್ತವೆ. ಬೆಳೆಗಳನ್ನು ಕೊಯ್ದು ನಂತರ ಒಕ್ಕಲಿಗರು ಹೊಲಗ ಳಲ್ಲಿ ರಂಟೆ ಹೊಡೆಯುವದಕ್ಕೆ ಏನ್ಯಾರಾಗ ಬೇಕಾಗುತ್ತದೆ. ಈ ಸಮಯದಲ್ಲಿ ರಂಟೆ ಹೊಡೆಯುವದಕ್ಕೆ ಬಿಸಿಲಿನ ದಾರಿಗೆ ಯಾವಾಗಲೂ ಹೊಲದಲ್ಲಿ ಓಡಾಡುವದು ಸುಲಭವಾಗುವದು ಮತ್ತು ಆಗ ಹೊಲದಲ್ಲಿ ಬಿದ್ದ ಎಲೆ, ಮತ್ತು ಕಸಕಡ್ಡಿ ಕಪರುಗಳು ಭೂಮಿಯಲ್ಲಿ ಹೂಳಲ್ಪಟ್ಟು ಶ್ರೇಷ್ಠ ತರಗತಿ ಗೊಬ್ಬರ ವಾಗುವದರಿಂದ ಭೂಮಿಯು ಹೆಚ್ಚು ಕಸುವಿನದಾಗುವದು. ಹೊಲ ಹೊಡೆಯುವದರಿಂದ ಕೆಳಗಿನ ಮಣ್ಣು ಮೇಲೆ ಬಂದು ಸೂರ್ಯನ ಬಿಸಿಲಿನಿಂದ ಸಾಕಷ್ಟು ಕಾಯುವದು.

ಹಿಂಗಾರಿಯ ಬಿತ್ತನೆಯನ್ನು ಪ್ರಾರಂಭಿಸುವದಕ್ಕಾಗಿ ಹೊಲ ಹೊಡೆಯುವ ಕಾರ್ಯವನ್ನು ತೀವ್ರವೇ ಪ್ರಾರಂಭಿಸಬೇಕಾಗುತ್ತದೆ. ಹಿಂಗಾರಿಯ ಬೆಳೆಗಳಾದ ಹೀಗಾರಿಯ ಜೋಳ, ಗೋಧಿ, ಹವೀಜ ಮೊದಲಾದವುಗಳನ್ನು ಬಿತ್ತುವದಕ್ಕೆ ಪ್ರಾರಂಭಿಸಬೇಕು. ಹೊಲ ಹೊಡೆಯುವ ಕೆಲಸವನ್ನು ಅಂದರೆ ಹಿಂಗಾರಿಯ ಕಾಯಿ ಪಲ್ಲೆ ಸಸಿ ಹಚ್ಚುವದಕ್ಕೆ ಬೇಕಾಗುವ ಭೂಮಿಯನ್ನು ಹಸನಾಗಿ ಹೊಡೆದು ತಯಾರಮಾಡಿರಬೇಕು.

ಮುಂಗಾರಿಯ ಬಿತ್ತನೆಯನ್ನು ಕೊಯ್ಯುವಾಗ ಹೆಚ್ಚು ಲಕ್ಷ್ಯವಿಡಬೇಕಾಗುವದು ಭತ್ತ ಕೊಯ್ಯುವದನ್ನು ತಡ ಮಾಡಿದರೆ ಬತ್ತದ ತೆನೆಗಳು ಹೆಚ್ಚು ಬಾಗುವವು. ಮತ್ತು ಕಾಳುಗಳು ನೆಲಕ್ಕೆ ಉದುರುವುದರಿಂದ ಬಹಳ ಹಾನಿಯುಂಟಾಗುವದರಿಂದ ಹಾಗೂ ಅದು ಹಾಗೇ ಮುಂದುವರಿಯು ಬಹುದೆಂದು ಮನವರಿಕೆಯಾದರೆ ಭತ್ತ ವನ್ನು ಕೊಯ್ಯುವದಕ್ಕೆ ಪ್ರಾರಂಭಿಸಬೇ ಕು. ಭತ್ತ ಕೊಯ್ದ ನಂತರ ಭೂಮಿಯಲ್ಲಿ ಸಾಕಷ್ಟು ಹಸಿ ಇದ್ದರೆ ಅವರೆ ಯನ್ನು ಬಿತ್ತಬೇಕು. ಭತ್ತದ ಬೆಳೆಯಲ್ಲಿ ಹೆಚ್ಚಾಗಿ ನೀರು ನಿಂತು ತೆನೆಗಳಿಗೆ ನೀರು ಮುಟ್ಟು ತ್ತಿದ್ದರೆ, ಹೊಲದಲ್ಲಿಯ ನೀರನ್ನು ಹೊರಗೆ ಬಿಟ್ಟುಬಿಡಬೇಕು, ಮತ್ತು ತೆನೆಗಳು ನೆಲಕ್ಕೆ ಮುಟ್ಟದಂತೆ ತೆನೆಗಳನ್ನು ಎತ್ತಿ ತುದಿಯಲ್ಲಿ ಬಿಗಿದು ಬಿಗಿಮಾಡಿ ಕಟ್ಟಿ ಆಧಾರ ಕೊಡ ಬೇಕು.

ಈ ತಿಂಗಳಲ್ಲಿ ಸೆಜ್ಜೆಯು ಬೆಳೆದು ಪಕ್ವ ವಾಗಿರುತ್ತದೆ. ಕೊಡಲೆ ಬೆಳೆಯನ್ನು ಕೊಯ್ದು ಪೆಂಡೆ ಕಟ್ಟಿ ಕಣದಲ್ಲಿ ಗೂಡು ಕಟ್ಟಬೇಕು.ಸೆಜ್ಜೆಯ ಬೆಳೆಯನ್ನು ಕೊಯ್ದು ಬಳಿಕ ತೊಗರಿ ಮತ್ತು ನುಡಕಿಗಳ ಮಿಶ್ರ ಬೆಳೆಯನ್ನು ಬಿತ್ತಬೇಕು. ಅಂದರೆ ಅವು ಒಳ್ಳೇ ಕಸುವಿನಿಂದ ಬೆಳೆಯುತ್ತವೆ. ಅಕ್ಟೋಬರ ತಿಂಗಳ ಕೊನೆಯಲ್ಲಿ ಮಡಕೆಯನ್ನು ಕೊಯ್ಯಲು ಬರುವದು.

ಮುಂಗಾರಿಯ ಜೋಳ

ಜೋಳದ ತೆನೆಗಳು ಕಾಳುಗಟ್ಟುತ್ತಿರಬಹುದು. ಜೋಳವನ್ನು ಕೊಯ್ಯುವವರೆಗೆ ಹಕ್ಕಿಗಳನ್ನು ಕಾಯುವ ವ್ಯವಸ್ಥೆ ಮಾಡಬೇಕು. ಉದ್ದು, ಹೆಸರು ಅಲಸಂದಿ ಮೊದಲಾದ ಮಿಶ್ರ ಬೆಳೆಗಳನ್ನು ಈ ತಿಂಗಳ ಪ್ರಾರಂಭದಲ್ಲಿ ಕೊಯ್ಯಬೇಕು.

ಶೇಂಗಾ

ಬೇಗನೆ ಪಾಗುವ ಸ್ಪೇನದ ಶೇಂಗಾ ಜವಾಪದ ಪಣ್ಣ ಶೇಂಗಾ ಮತ್ತು ಮೂರನೆಯ ತರಗತಿಯ ಕೋರೆಗಾವ್ ಇವುಗಳನ್ನು ಈ ತಿಂಗಳಲ್ಲಿ ಕೀಳಬೇಕು. ಅಕ್ಟೋಬರದ ದೊಡ್ಡ ಮಳೆಗಳ ಸೆಳಕುಗಳು ಪ್ರಾರಂಭವಾಗುವದಕ್ಕಿಂತ ಮೊದಲೇ ಶೇಂಗಾಪನ್ನು ಕಿತ್ತು ಕೂಸು ಹಾಕಬೇಕು. ಶೇಂಗಾ ಕೀಳುವದನ್ನು ತಡ ಮಾಡಿದರೆ ಕಾಯುಗಳು ಮಳೆಯಲ್ಲಿ ನೆನೆದು, ಮೊಳಕೆ ಯೊಡದು ಹೊಲದಲ್ಲಿಯೇ ಕಾಯಿಗಳು ಹಾಳಾಗುತ್ತವೆ ಸೊಳೆಯಾಗುವ ಸಮಯ ದಲ್ಲಿಯೇ ಕಿತ್ತರೆ ಕಾಯಿಗಳು ನೀರಿನಲ್ಲಿ ನೆನೆಯುವವು, ಇವುಗಳನ್ನು ಸಂಗ್ರಹಿಸಿ ಟ್ಟರೆ ಕಾಳುಗಳು ಕ್ರಮೇಣ ದುರ್ವಾಸನೆ ಹೊರಡುವದು. ಹೀಗಾದ ಸಂದರ್ಭದಲ್ಲಿ ಸೇಂಗಾ ಕಾಯಿಗಳನ್ನು ಒಣಗಲು ಹರಡಿ ಮೇಲಿಂದ ಮೇಲೆ ಕೈಯಾಡಿಸುತ್ತಿರಬೇಕು ಅಂದರೆ ಒಣಹವೆಯಾಡದಿದ್ದಲ್ಲಿ ಕಾಯಿಗಳು ಒಣಗುವವು.

ಹಿಂಗಾರಿ ಜೋಳ

ಸೆಪ್ಟಂಬರ ತಿಂಗಳಲ್ಲಿ ಬಿತ್ತಿರದಿದ್ದರೆ ಈ ತಿಂಗಳ ಮೊದಲನೇ ವಾರದಲ್ಲೇ ಹಿಂಗಾರಿ ಜೋಳದ ಬಿತ್ತನೆಯನ್ನು ಪ್ರಾರಂಭಿಸಬೇಕು. ಸೆಪ್ಟಂಬರದಲ್ಲಿ ಬಿತ್ತಿದ ಬೆಳೆಯಲ್ಲಿ ಹಸಿ ಕಾಯುವದಕ್ಕಾಗಿ ಎಡೆಹೊಡೆಯಬೇಕು.

ಗೋಧಿ

ಈ ತಿಂಗಳಲ್ಲಿ ಗೋಧಿಯ ಬಿತ್ತನೆಯನ್ನು ಮುಗಿಸಿ ಬಿಡಬೇಕು. ಇದಕ್ಕಾಗಿ ನಾಲ್ಕೈದು ದಿವಸ ಮೊದಲೇ ಹೊಲವನ್ನು ಚೆನ್ನಾಗಿ ಬಿತ್ತಬೇಕು. ಗೋಧಿಯು ಒಣ ಭೂಮಿಯಲ್ಲಿ ಅಥವಾ ನೀರಿನ ಒದಲು ಬಿತ್ತಲು ಸಾಗುವದಾದರೆ ಬಿತ್ತುವ ಮೊದಲು ಹೊಲದಲ್ಲಿ ನೀರು ಹಾಯಿಸಬೇಕು, ಮತ್ತು ನೆಲವು ಹಸಿ ಇದ್ದಾಗ ಬಿತ್ತಬೇಕು. ಭೂಮಿಯಲ್ಲಿ ಸಾಕಷ್ಟು ಹಸಿ ಇದ್ದರೆ ಪ್ರತಿ ಎಕರೆಗೆ 200 ಪೌಂಡಿನಂತೆ ಗೊಬ್ಬರದ ಮಿಶ್ರಣವನ್ನು ಹಾಕಿ, ಹರಗಿನ ನಂತರ ಬಿತ್ತಬೇಕು.

ಸೋವಿಯೆತ್ ಒಕ್ಕೂಟದಲ್ಲಿ ಬೀಜಾಣುಸ್ಫೋಟನೆಗಳ ವೈಜ್ಞಾನಿಕ ಸಂಶೋಧನೆ ಕಾರ್ಯ

ವೈಜ್ಞಾನಿಕ ಪರಿಶೋಧನ ಕಾರ್ಯದ ಕಾರ್ಯಕ್ರಮವನ್ನು ಅಚರಣೆಗೆ ತರುವ ವಿಷಯದಲ್ಲಿ ಸೋವಿಯೆತ್ ಒಕ್ಕೂಟವಲ್ಲಿ ಸೆಪ್ಟೆಂಬರ್ ದಿನಾಂಕ ೨ ರಂದು ಮತ್ತು 10 ರಂದು ಸ್ವಚಲಿತ ಬೀಜಾಣು ಅಸ್ತ್ರಪರೀಕ್ಷಾ ಪ್ರಯೋಗಗಳು ಈ ವರ್ಷ ನಡೆದುವು.

ಜನತೆಯ ಸುರಕ್ಷಿತತೆಯನ್ನು ಹೆಚ್ಚಿಸುವದಕ್ಕಾಗಿಯೇ ಈ ಸ್ಫೋಟನಾ ಪ್ರಯೋಗಗಳು ನಡೆದುವು. ಇದುವರೆಗೂ ಈ ಮೊದಲೇ ನಡೆಸಿರುವಂತೆಯೇ ಅತ್ಯಂತ ಉನ್ನತಾಧಿಕಾರಿಗಳಿಂದ, ಜವನಸತಿಯ ಸ್ಥಾನಗಳಿಗೆ ದೂರವಾಗಿರುವ ಕ್ಷೇತ್ರಗಳಲ್ಲಿ ಈ ಪ್ರಯೋಗಗಳು ನಡೆದುವು.

ಶ್ರೀ ಆದಿಶಂಕರಾಚಾರ್ಯರ

— ಪ್ರಶ್ನೋತ್ತರ ರತ್ನಮಾಲಿಕಾ—

[ಅನುವಾದಕ. ಟಿ. ಬಿ. ಕೇಶವರಾವ್]

ಜಗದ್ಗುರು ಪೂಜ್ಯರಾದ ಶ್ರೀ ಶಂಕರಾಚಾರ್ಯರ ಅನೇಕ ಕೃತಿಗಳಲ್ಲಿ —ಪ್ರಶ್ನೋತ್ತರ ರತ್ನಮಾಲಿಕಾ— ಯೆಂಬುದೂ ಒಂದು. ಅದು ಪುಟ್ಟದಾದರೂ , ಸುಮಧುರ ಸಾರಯುಕ್ತವಾಗಿದೆ ಆದಕ್ಕೆ ಸಂಸ್ಕೃತ ಭಾಷೆಯ ಕೇವಲ ೨೭ ಶ್ಲೋಕಗಳಿವೆ. ನಮ್ಮ ಜನಾತನ ಧರ್ಮದ ಗಹನವಾದ ತತ್ವಗಳನ್ನು ಅತ್ಯಂತ ಸರಳವಾದ ಪ್ರಶ್ನೋತ್ತರಗಳ ರೂಪದಲ್ಲಿ ಚಿಕ್ಕ ಮಕ್ಕಳಿಗೂ ಸಹ ತಿಳಿಯುವಂತೆ ವಿನ್ಯೇಸಿಸಿರುವದು ಅವುಗಳಲ್ಲಿ ಕೆಲವನ್ನಾರಿಸಿ ಈ ಕೆಳಗೆ ಕೊಡಲಾಗಿದೆ

ಪ :— ಹೃದಯದ ಅಂತರಾಳದಲ್ಲಿ ಏನನ್ನು ಸುರಕ್ಷಿತವಾಗಿಡಬೇಕು ?
ಉ :— ಗುರುವಚನ.
ಪ್ರ :— ಗುರುವೆಂದರೇನು ?
ಉ :— ಯಾರು ಸತ್ಯವನ್ನೇ ತಿತು, ತಮ್ಮ ಶಿಷ್ಯಂದಿರ ಕಲ್ಯಾಣದಲ್ಲಿ ಅನವರತವೂ ನಿರತರಾಗಿರುತ್ತಾರೋ ಅವರೇ ಗುರುಗಳು.
ಪ್ರ :— ಮನುಷ್ಯರಿಗೆ ಲಾಭಪ್ರದವಾದುದ್ಯಾವುದು ?
ಉ :— ಧರ್ಮ.
ಪ್ರ :— ಕಳ್ಳರ್ಯಾರು ?
ಉ :— ಇಂದ್ರಿಯಗಳಿಗೆ ದಾಸರಾಗಿರುವವರು.
ಪ್ರ :— ಶತ್ರುವ್ಯಾರು ?
ಉ :— ಆಲಸ್ಯ.
ಪ್ರ :— ಪೂರ್ಣ ಕುರುಡರು ಯಾರು ?
ಉ :— ಲೋಭಿಗಳು.
ಪ್ರ:— ಮಾನ-ಮರ್ಯಾದೆಗಳು ಯಾರಿಂದ ಲಭಿಸುತ್ತವೆ ?
ಉ :— ಅಯಾಚನೆಯಿಂದ.
ಪ್ರ :— ಅಪಮೃತ್ಯುವ್ಯಾವುದು ?
ಉ :— ಸ್ತ್ರೀ-ಚರಿತ್ರ.
ಪ್ರ :— ದುಃಖಿಯಾಗುವುದು ಯಾರಿಂದ?
ಉ :— ಅಸಂತೋಷದಿಂದ.
ಪ್ರ :— ನರಕವೆಂದರೆ ಯಾವುದು ?
ಉ :— ವಿಪತ್ತಿಯನ್ನು ತರಿಸುವವರ್ಯಾರು?
ಉ :— ಅಭಿಮಾನ.
ಪ್ರ :— ಮೃತ್ಯುವಿಗಿಂತಲೂ ಹೇಯವಾದುದ್ಯಾವುದು ?
ಉ:— ಅಜ್ಞಾನ.
ಪ್ರ :— ಧನದ ಬೆಲೆಯನ್ನು ಎಣಿಸಬಾರದ್ಯಾವುದರಿಂದ ?
ಉ :— ಸಂತಾಲಕ್ಕೆ ಮಾಡುವ ಸಹಾಯತೆಯ ಕಾರ್ಯ.
ಪ್ರ :— ಮೃತ್ಯುಸರ್ಯಂತ ಚುಚ್ಚುತ್ತಿರುವಮುಳ್ಳು ಯಾವುದು ?
ಉ :— ಗುಪ್ತಪಾಪ.
ಪ್ರ :— ಪ್ರಪಂಚದಲ್ಲಿ ವಿಜಯಿಗಳಾಗುವರ್ಯಾರು ?
ಉ:— ಯಾರು ಸತ್ಯವಂತರೋ, ಯಾರು ಧೈರ್ಯಶಾಲಿಗಳೋ ಅವರು.
ಉ :— ಯಾರನ್ನು ದೇವತೆಗಳೂ ಕೂಡ ಪೂಜೆಮಾಡತ್ತಾರೋ, ಅವರ್ಯಾರು ?
ಉ :— ದಯಾಳುಗಳವರು.
ಪ್ರ :ಎಲ್ಲಾ ಪ್ರಾಣಿಗಳನ್ನು ಗೆಲ್ಲುವರ್ಯಾರು?
ಉ :— ಸತ್ಯವಂತ,ಮಧುರಭಾಷಿ ಮತ್ತು ನಮ್ರಶೀಲರು.
ಪ್ರ :— ಕುರುಡರ್ಯಾರು?
ಉ :— ಶಿಕ್ಷಿತರಿದ್ದರೂ, ಪರರ ಅಹಿತವನ್ನು ಗೈಯುವರು.
ಪ್ರ :— ಕಿವುಡರ್ಯಾರು ?
ಉ :— ಸಜ್ಜನರ ಮಾತನ್ನು ಕೇಳದಿರುವವರು.
ಪ್ರ, ಮೂಕರ್ಯಾರು ?
ಉ :— ಯೋಗ್ಯಸಮಯದಲ್ಲಿ ಮಧುರ ಭಾಷಣ ಮಾಡದವರು.
ಪ್ರ :— ಉಪಕಾರವೆಂದರೇನು ?
ಉ :— ಕೇಳದಲೇ ಲಭಿಸುವ ವಸ್ತು.
ಪ್ರ :— ಮಿತ್ರರ್ಯಾರು ?
ಉ :— ಪಾಪ ಮಾಡುವುದನ್ನು ತಪ್ಪಿಸುವರು.
ಪ್ರ :— ಸೌಂದರ್ಯವೆಂದರೆ ಯಾವುದು?
ಉ :— ಶುದ್ಧ ಚಾರಿತ್ರ್ಯ.
ಪ್ರ :— ವಾಣಿಯನ್ನು ಸುಂದರಮಾಡುವುದ್ಯಾವುದು ?
ಉ :— ಸತ್ಯ.
ಪ್ರ :— ಜಿಂತಾಮಣಿಯ ಪ್ಪು ದುರ್ಲಭವಾದುದ್ಯಾವುದು ?
ಉ :— ಮಧುರ ಶಬ್ದಾವಲಿಯುಕ್ತ ಉಪಹಾರ, ಗರ್ವರಹಿತಜ್ಞಾನ, ಧೈರ್ಯಯುಕ್ತ ಸಾಹಸ, ಮತ್ತು ತ್ಯಾಗಯುಕ್ತ ಧನ.
ಪ್ರ :— ದಯನೀಯ ವಸ್ತುವ್ಯಾವುದು?
ಉ :—ಲೌಭ್ಯ.
ಪ್ರ :— ವಿದ್ವಾಂಸರನ್ನು ಪೃಥಾವಿತರನ್ನಾಗಿ ಮಾಡುವುದ್ಯಾವುದು ?
ಉ :— ಸತ್ಯಾನ್ವೇಷಣೆ ಮತ್ತು ಪ್ರತಿಭೆ.
ಪ್ರ :— ಲಕ್ಷ್ಮಿಯು ಯಾರಲಿಕಾಂಕ್ಷೆ ಮಾಡುತ್ತಿರುವಳು ?
ಉ:— ಯಾರ ವಿಚಾರಗಳು ಕ್ರಿಯಾಶೀಲವಿರುವವೋ,ಯಾರ ವ್ಯವಹಾರಗಳು ಶುದ್ಧವಿರುವವೋ , ಅಂಥವರನ್ನು.
ಪ್ರ :— ಶ್ರೀರಾಮಚಂದ್ರನಿಗಿಂತಲೂ, ಅಧಿಕಶೂರವೀರರ್ಯಾರು ?
ಉ :— ಯಾರು ಕಾಮದೇವನ ಬಾಣಗಳನ್ನು ಸಹಿಸಬಲ್ಲರೋ ಅವರು.
ಪ್ರ :— ಮುಖ್ಯವಾದ ತೀರ್ಥಸ್ನಾನವ್ಯಾವುದು ?
ಉ :— ಎಲ್ಲಿ ಮನೋಮಾಲಿನ್ಯವು ತೊಳೆದು ಹೋಗುವುದೋ ಅಲ್ಲಿ.
ಪ್ರ:— ಸದಾ ಸರ್ವದಾ ಏನನ್ನು ಜಪಿಸುತ್ತಿರಬೇಕು ?
ಉ :— ಹರಿನಾಮ.
ಪ್ರ :— ಪ್ರಧಾನ ಶತ್ರುವ್ಯಾರು ?
ಉ :— ಇಚ್ಛೆ.
ಪ್ರ :— ಎಲ್ಲರ ಮಾತೆಯಾರು ?
ಉ :— ಅಕಳು.
ಪ್ರ :— ಯಾವುದಕ್ಕೆ ಸೀನೆಯಿನ್ನುವರು?
ಉ :— ಸಾಹಸಕ್ಕೆ.
ಪ್ರ :— ಯಮರಾಜನಾರು ?
ಉ :— ಅಜಾಗ್ರತೆ.
ಪ್ರ :— ವಿಷವೆಲ್ಲಿದೆ ?
ಉ :— ದುಷ್ಟಜನರಲ್ಲಿ.
ಪ್ರ :— ಅಸ್ಪೃಶ್ಯತೆಯೆಂದರೇನು ?
ಉ :— ಕೃತಘ್ನತೆ.
ಪ್ರ :— ನಿರ್ಧನತೆಗೆ ದಾರಿಯಾವುದು ?
ಉ :— ವೈರಾಗ್ಯ.
ಪ್ರ :— ಭಯವಿಲ್ಲದೆ ?
ಉ :— ಧನದಲ್ಲಿ.
ಪ್ರ :— ಭಗವಂತನು ಎಲ್ಲರಿಗಿಂತಲೂ ಹಚ್ಚಾಗಿ ಯಾರನ್ನು ಪ್ರೀತಿಸುವನು ?
ಉ :— ತನಗಾಗಲಿ, ಪರರಿಗಾಗಲಿ ಹೀನಯ ವಿಷಯವನ್ನೇ ಆಲೋಚಿಸದವ.
ಪ್ರ :— ಜೊಡ್ಡರ್ಯಾರು ?
ಉ :—ವಯಸ್ಸಿನಲ್ಲಿ ಚಿಕ್ಕವರಿದ್ದರೂ ಸಹ ಸ್ವಧರ್ಮದ ಸತ್ಯವನ್ನರಿತವನು.

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಸಾಧಿಸಿದ ಕಾರ್ಯಗಳು.

ವಿದ್ಯುಚ್ಛಕ್ತಿ ಉತ್ಪಾದನೆಯು1950-51ರಲ್ಲಿ 65,750 ಲಕ್ಷ ಕಿಲೋವ್ಯಾಟ್ ಗಳಷ್ಟಿದ್ದುದು 1955-56ರಲ್ಲಿ110.000 ಲಕ್ಷ ಕಿಲೋವ್ಯಾಟ್‌ಗಳಿಗೆ ಏರಿದೆ.

ಸಿಮೆಂಟ್ ಉತ್ಪಾದನೆಯು 1950-51 ರಲ್ಲಿ 27ಲಕ್ಷ ಟನ್‌ಗಳಷ್ಟಿದ್ದುದು 55 56ರಲ್ಲಿ 43 ಲಕ್ಷಟನ್‌ಗಳಿಗೆ ಏರಿದೆಯೆಂದು ಅಂದಾಜು ಮಾಡಲಾಗಿದೆ.

ಸಾರ್ವಜನಿಕ ಕ್ಷೇತ್ರದಲ್ಲಿ ಅನೇಕ ಪ್ರಮುಖ ಕೈಗಾರಿಕಾ ಯೋಜನೆಗಳು ಪೂರ್ಣಗೊಂಡಿವೆ. ಖಾಸಗಿ ಕ್ಷೇತ್ರದಲ್ಲಿಹುಬವಾಗಿ, ಉತ್ಪಾದನೆಗೆ ಅಗತ್ಯವಾದ ವಸ್ತುಗಳ (ಪ್ರೊಡ್ಯೂಸರ್‌ಗೂಡ್ಸ್) ಮತ್ತು ಮುಖ್ಯವಸ್ತುಗಳ (ಕ್ಯಾಪಿಟಲ್‌ಗೂಡ್) ಕೈಗಾರಿಕಾ ಕ್ಷೇತ್ರದಲ್ಲಿ ಗಮನಾರ್ಹವಾದ ಪ್ರಮಾಣದಲ್ಲಿ ಹೊಸ ಬಂಡವಾಳವನ್ನು ಕೊಡಿಸಲಾಗಿದೆ.

ನೆಗಡಿ, ಕೆಮ್ಮು, ದಮ್ಮು, ಉಬ್ಬಸ
ಶೀತಜ್ವರ, ಮಲೇರಿಯಾ, ಮತ್ತು
ಎಲ್ಲ ನೋವುಗಳಿಗೆ ದಿವ್ಯಾಮೃತ

ಕಾಶ್ಮೀರು ಅರುಕ್

ಲೇಪನೆ, ಸೇವನೆ - ಎಂಡೂ ಸಾಧ್ಯ
ಎಲ್ಲಷಾಪುಗಳಲ್ಲೂ ದೊರೆಯುತ್ತದೆ.

H. S. & Sons, Bellary. —ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ಮೋಟಾರು ವಾಹನಗಳ ಆವಶ್ಯಕ
ವಿಮಾ

ಕಾಂಪ್ರಹೆನ್ಸಿವ್ ಪಾಲಿಸಿಗಳಿಗೆ ಅತಿ ಸುಲಭವಾದ ದರಗಳನ್ನೂ, ಮತ್ತಿತರ ವಿಧ ವಿಧವಾದ ಆಕರ್ಷಕ ಷರತ್ತುಗಳನ್ನೂ — ಎಲ್ಲಾ ತರದ ಮೋಟಾರು ವಾಹನಗಳಿಗೆ ನಾವು ಕೊಡುತ್ತೇವೆ.

ವಿವರಗಳಿಗೆ—

ಕಾರ್ಯದರ್ಶಿ
ಮೈಸೂರು ಸರ್ಕಾರಿನ ವಿಮಾಶಾಖೆ
ಬೆಂಗಳೂರು
ಅಥವಾ ಹತ್ತಿರ ಇರುವ ನಮ್ಮ ವಿಮಾ ಏಜಂಟರಿಗೆ

ಪ್ರಾಥಮಿಕ--ಹಿಂದೀ ಪರೀಕ್ಷೆಗಳು

ಪರೀಕ್ಷಾ ಶುಲ್ಕ 1-8-0
ಬಚ್ಚೋಂಕೀ ಕಿತಾಬ್
ಸುಗಮ ಹಿಂದಿ I
—„— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)

ಮಧ್ಯಮಾ ಪರೀಕ್ಷಾ ಶುಲ್ಕ 3-0-0

ರಾಷ್ಟ್ರಭಾಷಾ ಸಂಗ್ರಹ 2
ಚಾರ್ ಏಕಾಂಕೀ
ಆದರ್ಶ ಚರಿತ್ರ
ಐತಿಹಾಸಿಕ ಕಹಾನಿ
ಹಿಂದೀರಚನೆ 2
ಪತ್ರಲೇಖನ
(ಸೆಟ್ ಬೆಲೆ 4-4-0)

ಇತರ ವಿವರಗಳಿಗೆ ಸ್ಟಾಂಪಿಟ್ಟು ಅಥವಾ ರಿಪ್ಲೇಕಾರ್ಡ್ ಬರೆಯಿರಿ.

ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ ೨

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಅರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.

(Regd. M. No. 4746)

To

Sri. _____

_____

_____

Edited, Printed & Published by T. B. KESHAVA RAO at Nava Bharat Printing Press, Bellary.

ನವಭಾರತ

ಸೋಮವಾರ, ಅಕ್ಟೋಬರ್ 15–10–1956

ವರ್ಷ 20 · ಸಂಚಿಕೆ –9

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ! ಜಾಗೃತ!! ಪ್ರಾಪ್ಯವರಾನ್ನಿಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್

ತುಂಗಭದ್ರಾ ಯೋಜನೆ

ಮಹಾತ್ಮಾಗಾಂಧಿಯವರ ಜಯಂತಿಯಂದು ಅಂದರೆ ಅಕ್ಟೋಬರ್ 2 ರಂದು ತುಂಗಭದ್ರಾ ಅಣೆಕಟ್ಟಿನ ನಿವೇಶನದಲ್ಲಿ ನಿರ್ಮಾಣಗೊಳ್ಳಲಿರುವ ಉನ್ನತ ಮಟ್ಟದಮೇಲ್ಗಾಲುವೆಯ ಯೋಜನೆಯ ಉದ್ಘಾಟನೆಯು ದಕ್ಷಿಣ ಭಾರತದಲ್ಲೆಲ್ಲಾ ಅತಿದೊಡ್ಡ ಯೋಜನೆಯ ಅಂಕ್ಷಿಪ್ತಚಿತ್ರವನ್ನು ಸೂಚಿಸುವುದು. ತುಂಗಭದ್ರಾ ಯೋಜನೆಯು ನಾಗಾರ್ಜುನಸಾಗರ ಯೋಜನೆಯನ್ನು ಬಿಟ್ಟರೆ ದಕ್ಷಿಣ ಭಾರತದಲ್ಲೆಲ್ಲಾ ಅತಿ ದೊಡ್ಡ ಯೋಜನೆಯಾಗಿರುವುದು. ಮೈಸೂರು ರಾಜ್ಯದ ಹೊಸಪೇಟೆ ಸಮೀಪದಲ್ಲಿರುವ 70 ಕೋಟಿ ರೂಗಳ ವೆಚ್ಚದ ತುಂಗಭದ್ರಾ ಯೋಜನೆಯು ದಕ್ಷಿಣ ಭಾರತದಲ್ಲಿ ಕೈಗೊಂಡಿರುವ ದೊಡ್ಡ ವಿವಿಧೋದ್ದೇಶ ಯೋಜನೆಗಳಲ್ಲಿ ಒಂದಾಗಿರುವುದು. ಈ ಅಣೆಕಟ್ಟನ್ನು ತುಂಗಭದ್ರಾನದಿಗೆ ಅಡ್ಡವಾಗಿ ಕಟ್ಟಲಾಗಿದೆ.

ತುಂಗಭದ್ರಾ ಜಲಾಶಯವು 1,33,000 ದಶಲಕ್ಷ ಘನ ಅಡಿಗಳ ನೀರನ್ನು ಸಂಗ್ರಹಿಸುವ ಸಾಮರ್ಥ್ಯ ಪಡೆದಿದೆ. ಅಂದರೆ ಈ ಜಲಾಶಯವು ಮೈಸೂರು ರಾಜ್ಯದ ಕೃಷ್ಣರಾಜಸಾಗರ ಜಲಾಶಯಕ್ಕಿಂತ ಮೂರರಷ್ಟು, ಮದರಾಸು ರಾಜ್ಯದಲ್ಲಿರುವ ಮೆಟ್ಟೂರು ಜಲಾಶಯಕ್ಕಿಂತಲೂ ಒಂದೂವರೆಯಷ್ಟು ದೊಡ್ಡದಾಗಿರುವುದು.

ಈ ಯೋಜನೆಯನ್ನು ಪೂರ್ಣಗೊಳಿಸಿದಾಗ 12 ಎಕರೆಗಳ ವಿಸ್ತೀರ್ಣವು ನೀರಾವರಿಗೆ ಒಳಪಡುವುದು.

ಭಾರತದ ಕ್ಷಾಮಪೀಡಿತ ಪ್ರದೇಶಗಳಲ್ಲಿ ಒಂದಾದ ರಾಯಲಸೀಮೆಗೆ ನೀರಿನ ಸೌಲಭ್ಯವನ್ನು ಒದಗಿಸುವದ್ದೇ ಉತ್ತರದಿಂದ ಹಾಗೂ ಈ ಪ್ರದೇಶದಲ್ಲಿ ಕ್ಷಾಮಗಳು ಎಂದೆಂದಿಗೂ ಬಾರದಂತೆ ಮಾಡುವ ಉದ್ದೇಶದಿಂದ ಈ ಯೋಜನೆಯನ್ನು ರೂಪಿಸಲಾಯಿತು. ಈ ಕ್ಷಾಮಪೀಡಿತ ಪ್ರದೇಶಗಳಲ್ಲಿ ಬಳ್ಳಾರಿ, ಅನಂತಪುರ, ಕರ್ನೂಲು ಮತ್ತು ಕಡಪಾ ಜಿಲ್ಲೆಗಳು ಸೇರಿವೆ.

ಮುಖ್ಯ ಜಿಲ್ಲೆಗಳಿಗೆ ಸಾಕಷ್ಟು ಪ್ರಮಾಣದ ನೀರನ್ನು ಒದಗಿಸುವುದು ಈ ಯೋಜನೆಯ ಮುಖ್ಯಗುರಿಯಾಗಿತ್ತು. ತುಂಗಭದ್ರಾನದಿಯ ನೀರನ್ನು ಜಲಾಶಯವೊಂದರಲ್ಲಿ ಸಂಗ್ರಹಿಸಿ ನಾಲಾಪದ್ಧತಿಯ ಮೂಲಕ ಜಮೀನುಗಳಿಗೆ ನೀರನ್ನು ಒದಗಿಸುವ ಸೂಚನೆಗಳು 1861 ರಿಂದಲೂ ಬಂದಿವೆ. ಈ ಯೋಜನೆಯು 1902 ರಲ್ಲಿ ಒಂದು ರೂಪಕ್ಕೆ ಬಂದಿತು. ಆವರ್ಷ ನೀರಾವರಿ ಕಮೀಷನ್ನರವರು ಮದರಾಸಿಗೆ ಭೇಟಿಯಿತ್ತಾಗ ಉನ್ನತ ಮಟ್ಟದ ನಾಲೆಯನ್ನೊಳಗೊಂಡ ದೊಡ್ಡ ಜಲಾಶಯವೊಂದನ್ನು ನಿರ್ಮಿಸಬೇಕೆಂಬ ಸೂಚನೆಮಾಡಲಾಯಿತು. ನಾನಾ ಕಾರಣಗಳಿಂದ ಈ ಯೋಜನೆಯನ್ನು 1942ರ ವರೆವಿಗೂ ಕೈಗೊಳ್ಳಲಾಗಲಿಲ್ಲ. ಮುಂದಿನ ಎರಡು ವರ್ಷಗಳಲ್ಲಿ ಈ ಯೋಜನೆಯ ವಿವರಗಳನ್ನು ಸಿದ್ಧಗೊಳಿಸಲಾಯಿತು. ಜಲಾಶಯವನ್ನು ನಿರ್ಮಿಸುವುದು, ಮದರಾಸ್ ಕಡೆ 2½ ಲಕ್ಷ ಎಕರೆಗಳ ಜಮೀನನ್ನು ನೀರಾವರಿಗೆ ಒಳಪಡಿಸುವ ಕೆಳಮಟ್ಟದ ನಾಲೆಯನ್ನು ತೆರೆಯುವುದು. ಹೈದ್ರಾಬಾದ್ ಕಡೆಯಲ್ಲಿ 5.5 ಲಕ್ಷ ಎಕರೆಗಳ ಜಮೀನನ್ನು ನೀರಾವರಿಗೊಳಪಡಿಸುವ ಮತ್ತೊಂದು ನಾಲೆಯನ್ನು ತೆರೆಯುವುದು, ಹಾಗೂ 3.8 ಲಕ್ಷ ಎಕರೆಗಳ ಜಮೀನನ್ನು ನೀರಾವರಿಗೊಳಪಡಿಸುವ ಉನ್ನತ ಮಟ್ಟದ ನಾಲೆಯೊಂದನ್ನು ತೆರೆಯುವುದನ್ನು ಈ ಯೋಜನೆಯು ನಿರೂಪಿಸಿತು. ನೀರಿನ ಬಳಕೆಯ ಬಗ್ಗೆ ಹೈದ್ರಾಬಾದ್ ಹಾಗೂ ಮದ್ರಾಸ್ ರಾಜ್ಯಗಳ ನಡುವೆ ಒಪ್ಪಂದವಾಗಿ ಈ ಯೋಜನೆಗೆ 1944—45 ರಲ್ಲಿ ಅಂತಿಮವಾಗಿ ಮಂಜೂರಾತಿ ದೊರೆಯಿತು. ಈ ಅಣೆಕಟ್ಟಿನ ನಿರ್ಮಾಣ ಕಾರ್ಯವು ಸಂಘಟಿತ ಮದರಾಸ್ ಹಾಗೂ ಹೈದ್ರಾಬಾದ್ ಸರ್ಕಾರಗಳ ಸಂಯುಕ್ತ ಉದ್ದಿಮೆವಾಗಿದ್ದು 3 ವರ್ಷಗಳಿಂದೆ ಇದನ್ನು ಕಟ್ಟಿ ಪೂರೈಸಲಾಯಿತು. 1953ರ ಜುಲೈನಲ್ಲಿ ವಯೋವೃದ್ಧರೊಬ್ಬನು ಜಲಾಶಯದಿಂದ ನೀರನ್ನು ಕೆಳಮಟ್ಟದಿಂದ ನಾಲೆಗೆ ಹರಿಸಿದನು. 233 ಮೈಲಿಗಳ ಉದ್ದವಿರುವ ಈ ನಾಲೆಯ ನಿರ್ಮಾಣವು ಮುಗಿಯುತ್ತ ಬಂದಿದೆ. ಅಂದಿನಿಂದಲೂ 40,000 ಎಕರೆಗಳ ಜಮೀನನ್ನು ಸಾಗುವಳಿಗೆ ತರಲಾಗಿದೆ. ಸಾಗುವಳಿಗೆ ಬಂದ ಜಮೀನಿನಲ್ಲಿ ಮೈಸೂರು ಕಡೆಯ 15 ಸಾವಿರ ಎಕರೆಗಳ ಜಮೀನೂ ಸೇರಿರುವುದು ಹೈದ್ರಾಬಾದ್ ಭಾಗದಲ್ಲಿಯೂ ಕೂಡ ನಾಲಾನಿರ್ಮಾಣ ಕಾರ್ಯವು ಮುಂದುವರಿಯುತ್ತಿದೆ. 127 ಮೈಲಿಗಳ ಉದ್ದದ ನಾಲೆಯ ಕಾರ್ಯವು ಮುಕ್ತಾಯಗೊಂಡಾಗ, 1955ನವೆಂಬರ್ 1 ರಂದು ಮೈಸೂರು ರಾಜ್ಯದಲ್ಲಿ ವಿಲೀನಗೊಳ್ಳುವ ರಾಯಚೂರು ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ 5.8 ಲಕ್ಷ ಎಕರೆಗಳ ಜಮೀನು ನೀರಾವರಿಗೆ ಒಳಪಡುವ ನಿರೀಕ್ಷೆ ಇದೆ.

ಜಲಜನಿತ ವಿದ್ಯುಚ್ಛಕ್ತಿಯು (ಹೈಡ್ರೋ ಎಲೆಕ್ಟ್ರಿಕ್) ಉತ್ಪಾದನೆಗೆ ಸಂಬಂಧಿಸಿದ ಕಾರ್ಯಗಳು ಭರದಿಂದ ಸಾಗುತ್ತಿವೆ. ಮೈಸೂರು— ಆಂಧ್ರದ ಕಡೆ 72,000 ಕಿ.ವ್ಯಾ. ಗಳ ವಿದ್ಯುಚ್ಛಕ್ತಿಯನ್ನು ಹೈದ್ರಾಬಾದ್ ಕಡೆಗೆ 1,10,000 ಕಿ.ವ್ಯಾ.ಗಳ ವಿದ್ಯುಚ್ಛಕ್ತಿಯನ್ನು 4 ಗಂಟೆಗಳಲ್ಲಿ ಉತ್ಪಾದಿಸುವ ನಿರೀಕ್ಷೆ ಇದೆ.

(ಎಡಗಡೆ ಪುಟಕ್ಕೆ)

ಉನ್ನತ ಮಟ್ಟದ ನಾಲೆ

(ಒಂದನೇ ಪುಟದಿಂದ)

ಉನ್ನತ ಮಟ್ಟದ ನಾಲೆ ನೀರನ್ನು ಮೈಸೂರು ಮತ್ತು ಆಂಧ್ರಗಳ ನಡುವೆ ಹಂಚಿಕೊಳ್ಳುವ ಪ್ರಶ್ನೆಯು ಕಳೆದ ಎರಡು ವರ್ಷಗಳಿಂದಲೂ ಚರ್ಚೆಯಲ್ಲಿತ್ತು. 56 ರ ಜೂನ್ 18 ರಂದು ಬೆಂಗಳೂರಿನಲ್ಲಿ ನಡೆದ ಅಂತರ-ರಾಜ್ಯ ಸಮ್ಮೇಳನದಲ್ಲಿ ಈ ಬಗ್ಗೆ ಅಂತಿಮವಾಗಿ ಒಪ್ಪಂದಕ್ಕೆ ಬರಲಾಯಿತು. ಆ ಸಂದರ್ಭದಲ್ಲಿ ಯೋಜನಾ ಕಮೀಷನ್ನಿನ ಉಪಾಧ್ಯಕ್ಷ ಶ್ರೀ. ವಿ. ಟಿ. ಕೃಷ್ಣಮಾಚಾರಿಯವರು ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದಲ್ಲಿ ಉನ್ನತಮಟ್ಟದ ನಾಲೆಯ ನೀರನ್ನು ಮೈಸೂರು ಹಾಗೂ ಆಂಧ್ರಗಳ ನಡುವೆ 3:1:65 ಸ್ವರೂಪದಲ್ಲಿ ಹಂಚಬೇಕೆಂದು ತೀರ್ಮಾನಿಸಲಾಯಿತು. ಈ ನಿರ್ಧಾರದಿಂದ ಉನ್ನತಮಟ್ಟದ ನಾಲಾಯೋಜನೆಯನ್ನು ಕೂಡಲೇ ಕೈಗೊಳ್ಳಲು ಸಾಧ್ಯವಾಯಿತು. ಅಲ್ಲದೆ ಹೀಗೆ ಅಂತರರಾಜ್ಯ ಸಮಸ್ಯೆಗಳನ್ನು ಪರಸ್ಪರ ಪರ್ಯಾಲೋಚನೆಗೆ ಎಂದು ಬಗೆಹರಿಸಲು ಸಾಧ್ಯವಿದೆ ಎಂಬುದನ್ನು ಈ ನಿರ್ಧಾರವು ತೋರಿಸಿ ಕೊಟ್ಟಿತು. ಉನ್ನತಮಟ್ಟದ ನಾಲಾಯೋಜನೆಗೆ 20 ಕೋಟಿರೂಗಳ ವೆಚ್ಚವನ್ನು ಅಂದಾಜು ಮಾಡಲಾಗಿದೆ. ಉನ್ನತಮಟ್ಟದ ನಾಲೆಯಿಂದ ವರ್ಷಕ್ಕೆ ಎರಡು ಲಕ್ಷ ಟನ್ನುಗಳ ಹತ್ತಿಗೂ ಖುಸ್ಕಿ ಬೆಳೆಗಳು ಉತ್ಪಾದನೆಯಾಗುವ ನೀರೀಕ್ಷೆಯಿದೆ. ಈ ಯೋಜನೆಯಿಂದ ಈ ಪ್ರದೇಶದಲ್ಲಿ ಕ್ಷಾಮವು ಪದೇ ಪದೇ ತಲೆದೋರುವುದನ್ನು ಕನಿಷ್ಠಗೊಳಿಸಬಹುದಲ್ಲದೆ ಜನರ ಆರ್ಥಿಕ ಮಟ್ಟವನ್ನು ಹೆಚ್ಚಿಸಬಹುದಾಗಿದೆ.

ಉನ್ನತ ಮಟ್ಟದ ನಾಲೆಯ ಮೂಲಕ ಜಲಾಶಯದಿಂದ 50 ಸಾವಿರ ದಶಲಕ್ಷ ಘನ ಅಡಿಗಳ ನೀರನ್ನು ತಾತ್ಪಾರಿಕವಾಗಿ ಒಳಪಡಿಸುವುದನ್ನು ಈ ಯೋಜನೆಯು ಒಳಗೊಂಡಿರುವುದು. ಮೈಸೂರು ರಾಜ್ಯದ ಬಳ್ಳಾರಿಜಿಲ್ಲೆ, ಆಂಧ್ರ ರಾಜ್ಯದ ಕರ್ನೂಲು, ಅನಂತಪುರ ಮತ್ತು ಕಡಪಾ ಜಿಲ್ಲೆಗಳಲ್ಲಿ 3.8 ಲಕ್ಷ ಎಕರೆಗಳ ಜಮೀನನ್ನು ನೀರಾವರಿಗೆ ಒಳಪಡಿಸುವ ಬಗ್ಗೆ ಜಲಾಶಯದಿಂದ ಪರಮಾನಧಿ 4,000 ಕ್ಯೂಸೆಕ್ಸ್‌ಗಳ ನೀರನ್ನು ಪೂರೈಸಬಹುದಾಗಿದೆ.

ಈ ಯೋಜನೆಯು ಮುಖ್ಯವಾಗಿ ವರ್ಷಕ್ಕೆ ಒಂದು ಬೆಳೆಯನ್ನು ಪಡೆಯುವ ಯೋಜನೆಯಾಗಿರುವುದು. ಉನ್ನತಮಟ್ಟದ ನಾಲೆಯು ದೊಡ್ಡ ಹಗರಿಯವರೆಗೂ ಎಲ್ಲೆ ಕಟ್ಟನ ನಾಲೆಯಾಗಿರುವುದು.

ಉರವಕೊಂಡದ ಬಳಿ ಈ ನಾಲೆಯ ನೀರು ಪೆನ್ನಾರ್ ನದಿಯನ್ನು ಸೇರುವುದು. ಅಲ್ಲಿಂದ ಮುಂದೆ ನಾಲೆಗಳ ವ್ಯವಸ್ಥೆಯನ್ನು ಕೊಂಡುವ ಉದ್ದೇಶವಿದೆ. ಈ ನಾಲೆಯ ಮೊದಲನೆಯ 25 ಮೈಲಿಗಳ ಉದ್ದವು ಕಡಿದಾದ ಭೂಪ್ರದೇಶದಲ್ಲಿದೆ, ನಾಲೆಯ 25 ಮತ್ತು 26 ನೆಯಮೈಲಿಗಳನಡುವೆ ಸುರಂಗವನ್ನು ನಿರ್ಮಿಸಲಾಗಿದೆ ಹೊಸಪೇಟೆ ಬಳ್ಳಾರಿ ರೈಲುಮಾರ್ಗವನ್ನು 4 ಬಾರಿ ಈ ನಾಲೆಯು ಸಂಧಿಸುವುದು. ಬಳ್ಳಾರಿ ರಾಯದುರ್ಗ ರೈಲುಮಾರ್ಗವನ್ನು ದಾಟಿದ ನಂತರ, ನಾಲೆಯನ್ನು ಚಿನ್ನ ಹಗರಿ ಮತ್ತು ಪೆದ್ದಹಗರಿ ನದಿಗಳಿಗೆ ಅಡ್ಡವಾಗಿ ರಿಗ್ಯುಲೇಟರ್‌ಗಳ ಸಹಾಯದಿಂದ ಸಾಗಿಸಲಾಗುವುದು.

ಈ ಯೋಜನೆಗೆ ಸಂಬಂಧಿಸಿದ ಆಸಕ್ತಿಯುತವಾದ ಹಾಗೂ ಮುಖ್ಯವಾದ ಕಾರ್ಯಗಳನ್ನು ಇಲ್ಲಿ ಉಲ್ಲೇಖಿಸುವುದು ಯಥೋಚಿತವಾಗಿದೆ. ಅಣೆಕಟ್ಟಿನ ನಿವೇಶನದಲ್ಲಿ ಸ್ಥಾಪಿತವಾಗಿರುವ ತುಂಗಭದ್ರಾ ವರ್ಕ್‌ಷಾಪ್ ದೇಶದಲ್ಲಿಯೇ ಆ ರೀತಿಯ ವರ್ಕ್‌ಷಾಪ್‌ಗಳಲ್ಲಿ ಮೊದಲನೆಯದಾಗಿದೆ 20 ಅಡಿಗಳ ಅಗಲವೂ 60 ಅಡಿಗಳ ಎತ್ತರವೂ ಇರುವ ಸ್ಪಿಲ್ ವೇ ದ್ವಾರಗಳನ್ನು, ನಾಲಾ ತೂಬುಗಳ ದ್ವಾರಗಳನ್ನೂ ಉಳಿದ ಯಂತ್ರೋಪಕರಣಗಳನ್ನೂ ಈ ವರ್ಕ್‌ಷಾಪ್‌ನಲ್ಲಿ ಜೋಡಿಸಲಾಗಿದೆ. ಈ ವರ್ಕ್‌ಷಾಪಿನ ಯಂತ್ರಸ್ಸು, ಒರಿಸ್ಸಾದ ಹಿರಾಕುಡ್ ಮತ್ತು ರಾಜಾಸ್ಥಾನದ ಜವಾಯ್ ಯೋಜನೆಗಳು ತಮಗೆ ಅವಶ್ಯಕವಾದ ಸಾಮಾನುಗಳನ್ನು ಇಲ್ಲಿಂದತರಿಸಿಕೊಳ್ಳಲು ಸಾಧ್ಯವನ್ನುಂಟುಮಾಡಿದೆ.

ಇನ್ನೊಂದು ಮುಖ್ಯ ಕಾರ್ಯವೆಂದರೆ ಹಗರಿ ನದಿಗೆ ಅಡ್ಡವಾಗಿ ಮೇಲುಗಾಲುವೆಯನ್ನು (ಅಕ್ವೆಡಕ್ಟ್) ನಿರ್ಮಿಸಿರುವುದು. ಈ ಮೇಲುಗಾಲುವೆಯು ರೀ ಇನ್‌ಫೋರ್ಸ್ಡ್ ಕಾಂಕ್ರೀಟಿನ ರಚನೆಯಾಗಿದ್ದು 2287 ಅಡಿಗಳ ಉದ್ದವಿದೆ. ಈ ಮೇಲುಗಾಲುವೆಯು ಭಾರತದಲ್ಲೆಲ್ಲಾ ಅತಿಉದ್ದವಾದುದೆಂದು ನಂಬಲಾಗಿದೆ. ಈ ಮೇಲುಗಾಲುವೆಯು ಬಳ್ಳಾರಿ ನಗರದಿಂದ 12 ಮೈಲಿಗಳ ದೂರದಲ್ಲಿದೆ.

ಮುಖ್ಯ ಕಾಮಗಾರಿ ನಡೆಯುತ್ತಿರುವ ಸ್ಥಳವಲ್ಲಿ ಹೊಸದೊಂದು ಊರು ಉದಯಿಸಿದೆ. ಇಲ್ಲಿ ಅಧುನಿಕ ಕಾಲದ ಸೌಕರ್ಯಗಳೆಲ್ಲವೂ ಇವೆ. ವಿದ್ಯುದ್ದೀಪಗಳಿಂದ ಬೆಳಗುವ ಅಚ್ಚು ಕಟ್ಟಾದ ರಸ್ತೆಗಳು, ಸುಂದರವಾದ ಉದ್ಯಾನವನಗಳು ಶುದ್ಧನೀರಿನ ಪೂರೈಕೆ ಹಾಗೂ ವಿದ್ಯುಚ್ಛಕ್ತಿ ಈ ಉಪನಗರಕ್ಕೆ ದೊರೆಯುತ್ತಿವೆ. ಹೊಸಪೇಟೆ ರೈಲ್ವೆ ಜಂಕ್ಷನ್ನಿಗೆ ಇಲ್ಲಿಂದ ಬಸ್ ಸಂಚಾರ ವ್ಯವಸ್ಥೆ ಇದೆ. ಈ ಅಣೆಕಟ್ಟು ದೇಶದ ಎಲ್ಲ ಕಡೆಯಿಂದ ಜನರನ್ನು ಆಕರ್ಷಿಸುತ್ತಿದೆ. ಈ ಸ್ಥಳಕ್ಕೆ ಬಂದವರು ಅಣೆಕಟ್ಟಿನಿಂದ 10 ಮೈಲಿಗಳ ದೂರದಲ್ಲಿರುವ ವಿಜಯನಗರ ಸಾಮ್ರಾಜ್ಯದ ವೈಭವಕ್ಕೆ ಪಾಳುಬಿದ್ದಿರುವ ಹಂಪೆಯನ್ನು ಸಂದರ್ಶಿಸದೆ ಹೋಗರು.

ಬಳ್ಳಾರಿಯಲ್ಲಿ ಹೈಕೋರ್ಟ್ ಬೆಂಚ್

"ಮೈಸೂರು ಸಂಸ್ಥಾನಕ್ಕೆ ಸೇರುವ ಹೈದರಾಬಾದ್ ಮತ್ತು ಬೊಂಬಾಯಿ ಪ್ರಾಂತಗಳ ಕನ್ನಡ ಪ್ರದೇಶಗಳ ಪಲುವಾಗಿ ಮೈಸೂರು ಹೈಕೋರ್ಟಿನ ಪ್ರತ್ಯೇಕವಾದ ಬೆಂಚೊಂದನ್ನು ಸ್ಥಾಪಿಸಲು ಭಾರತ ಸರಕಾರವು ಯೋಚಿಸುತ್ತಿದೆ"

ಎಂಬುದಾಗಿ ಭಾರತ ಸರ್ಕಾರದ ವಿಧಿಳಾಖಲೆಯ ವಿಚಾರಗಳ ಮಂತ್ರಿ ಶ್ರೀ. ಬಿ ಎನ್. ದಾತಾರ್‌ರವರು ಬಳ್ಳಾರಿ ಜಾಯಿಂಟ್ ಆಕ್ಷೋಪಿಯೇಷನ್ನಿನವರ ಮನವಿಗುತ್ತರವಾಗಿ ತಿಳಿಸಿದರು.

ರಾಷ್ಟ್ರದ ನಾನಾ ಭಾಗಗಳಿಂದ ಹೈಕೋರ್ಟ್‌ಗಳ ಪ್ರತ್ಯೇಕ ಬೆಂಚುಗಳಾಗಿ ಮೇಲಿಂದ ಮೇಲೆ ಮನವಿಗಳು ಬಂದಿವೆ. ಸಣ್ಣ ಪುಟ್ಟ ಜಿಲ್ಲೆಗಳೂ ಸಹಾ ಈ ವಿಷಯದಲ್ಲಿ ಹಿಂದೆ ಬಿದ್ದಿಲ್ಲ ಪುನರ್ಸಂಘಟಿತ ಪ್ರಾಂತಗಳಲ್ಲಿ ಪ್ರತ್ಯೇಕ ಬೆಂಚುಗಳಿರಬೇಕೋ ಬೇಡವೋ ಎಂಬ ಪ್ರಶ್ನೆಯೇ ಇನ್ನು ಇತ್ಯರ್ಥವಾಗಿಲ್ಲ ಇಂತಹ ಬೆಂಚುಗಳಿರಬೇಕೆಂದು ಭಾರತ ಸರ್ಕಾರವು ಅಭಿಪ್ರಾಯ ಪಡೆಯುವುದಾದರೆ, ಆಗ ಎಲ್ಲಿ ಈ ಬೆಂಚುಗಳನ್ನು ಸ್ಥಾಪಿಸಬೇಕೆಂಬುದನ್ನು ನಿರ್ಧರಿಸಬಹುದು ಎಂಬುದಾಗಿ ದಾತಾರ್ ವಿವರಿಸಿದರು.

ಬಳ್ಳಾರಿಯ ಬೇಡಿಕೆಗೂ ಗಮನ

ನೂತನ ಮೈಸೂರು ವ್ಯಾಪ್ತ್ಯದ ಹೈದ್ರಾಬಾದ್ ಮತ್ತು ಬೊಂಬಾಯಿ ಕನ್ನಡಭಾಗಗಳಿಗೋಸ್ಕರ ಒಂದು ಬೆಂಚು ಇರಬೇಕೆಂಬ ಸಲಹೆಯು ಭಾರತ ಸರ್ಕಾರದ ಪರ್ಯಾಲೋಚನೆಯಲ್ಲಿದೆ. ಆಗ ಬಳ್ಳಾರಿಯಲ್ಲಿ ಈ ಬೆಂಚು ಏರ್ಪಡಿಸಬೇಕೆಂಬ ಮನವಿಯನ್ನೂ ಸೂಕ್ತವೆಂಗ ಪರಿಶೀಲಿಸಲಾಗುವುದು ಎಂದು ಮುಖ್ಯ ಮಂತ್ರಿಗಳು ಭರವಸೆ ಇತ್ತರು.

ನವಭಾರತಕ್ಕೆ ಚಂದಾದಾರರಾಗಿರಿ

ಕನ್ನಡ ನಾಡಿನ ಹಬ್ಬ

ನಿನ್ನೆ ಶುಕ್ರವಾರದಿಂದ ಆರಂಭವಾಗಿರುವ ನವರಾತ್ರಿ ಮಹೋತ್ಸವವು ಕನ್ನಡ ನಾಡಿನ ಒಂದು ಸ್ಫೂರ್ತಿಯುತವಾದ ಹಬ್ಬವಾಗಿದೆ. ವಿದ್ಯೆಗಳಿಗೆ ಅಧಿದೇವತೆಯಾದ ಸರಸ್ವತಿಯ ಪೂಜೆಯನ್ನೂ, ಅದಕ್ಕಿಂದಿಗೆ ತಕ್ತಿಯ ಪೂಜೆಯನ್ನೂ ನಡೆಸುವ ಈ ನವರಾತ್ರಿಯಲ್ಲಿ ನಮ್ಮ ಹಳೆಯ ಸಂಸ್ಕೃತಿ ಮತ್ತು ವೈಶಿಷ್ಟ್ಯಗಳನ್ನು ನೆನಪು ಮಾಡಿಕೊಡುವ ಅನೇಕ ಆಚರಣೆಗಳಿಂದ ನಮ್ಮ ಜನರು ನಲಿದಾಡುತ್ತಾರೆ. ವಿಜಯನಗರದ ಸಾಮ್ರಾಜ್ಯದ ಕಾಲದಿಂದಲೂ ಕನ್ನಡನಾಡಿಗೆ ಸ್ಫೂರ್ತಿದಾಯಕವಾದ ಈ ಹಬ್ಬವನ್ನು ಮೈಸೂರು ಮಹಾರಾಜರುಗಳೂ ಪಂಡಿತರೂ ಕಾಮಿಗರೂ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಿ, ಪರಂಪರಾಗತವಾದ ವೈಶಿಷ್ಟ್ಯವನ್ನು ಒಂದುತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ತಂದಿದ್ದಾರೆ. ವಿಜಯನಗರವು ಅಳಿದರೂ ಅನಂತರ ಮೈಸೂರು ದೊರೆಗಳು ನವರಾತ್ರಿಯ ಒಂಬತ್ತು ದಿನಗಳೂ ಸಿಂಹಾಸನಾರೋಹಣ ಮಾಡಿ, ಹತ್ತನೆಯ ದಿವಸ ವಿಜಯಯಾತ್ರೆ ಬೆಳೆಸುವ ಸಂಪ್ರದಾಯವನ್ನು ತಪ್ಪದೆ ನಡೆಸಿಕೊಂಡು ಬರುತ್ತಿದ್ದಾರೆ. ಕನ್ನಡನಾಡಿನ ಇತರ ಕಡೆಗಳಲ್ಲಿ ನಾಡು ಹಬ್ಬದ ಪ್ರಾಮುಖ್ಯತೆ ಹೆಚ್ಚಿ ನಮ್ಮ ಹಳೆಯ ಕಾಲದ ಅನೇಕ ಸಂಸ್ಕೃತಿಕ ಜೀವನಗಳ ವೈಶಿಷ್ಟ್ಯ ನೆನಪಿಗೆ ಬರುತ್ತದೆ. ಕನ್ನಡನಾಡು ಒಂದು ಗೂಡಬೇಕೆಂಬ ಆಶೆ ಹಿಂದಿನ ನಾಡುಹಬ್ಬಗಳಲ್ಲಿ ಮಿಡಿಯುತ್ತಿತ್ತು. ಆದೀಗ ಪ್ರಾಪ್ತಿಯಾಗಿರುವ ನವಂಬರ್ 1 ನೇ ತಾರೀಕಿನಿಂದ ಪರಿದು ಹೆಂಚಿ ಹೋದ ಕನ್ನಡ ನಾಡೆಲ್ಲವೂ ಒಂದಾಗಿ ಒಂದೇ ಆಡಳಿತದಡಿ ಸ್ವಗತಿಯೊಂದನ ಸುದಿನವನ್ನು ಕಾಣುತ್ತಿದ್ದೇವೆ. ಮೈಸೂರು ದೇಶವು ಹಿಂದೊಮ್ಮೆ ಪಶ್ಚಿಮವಾಗಿತ್ತು. ಈಗ ಪುನಃ ಜನಾಭಿಪ್ರಾಯದ ಶಾಂತಿಯುತವಾದ ಮಾರ್ಗದಿಂದ ಮತ್ತೆ ಪ್ರಜಾ ಪ್ರಭುತ್ವದ ಧರ್ಮ ಚಿನ್ನಾಗಿ ಬೆಳೆಯಿ ಪ್ರಕಾಶಿಸಿದುದರಿಂದ ಉತ್ತರದ ಬೆಳಗಾವಿಯಿಂದ ದಕ್ಷಿಣ ದಕೊಡಗು ಗುಲ್ಬರ್ಗದಿಂದ ಮಲ್ಪೆಯವರೆಗೂ ಕನ್ನಡರಾಜ್ಯವು ವಿಸ್ತರಿಸಿ ಇಕ್ಕೇರಿ ಅರಸರ ಕಾಲದಲ್ಲಿ ಯಾವರೀತಿ ನಾಡು ಹಬ್ಬಿದ್ದಿತೋ ಅದೇರೀತಿ ಈಗಲೂ ವಿಶಾಲವಾಗಿದೆ ಬಹು ವಿವಿಧ ಆಕರ್ಷಣೆಯ ಸುಯೋಗವು ಲಭಿಸಿದೆ. ಕನ್ನಡ ಭಾಷೆಯನ್ನು ಮಾತನಾಡುವ ನಮ್ಮ ಸಹೋದರೆಲ್ಲರೂ ಒಂದು ಗೂಡುವ ಈಕಾಲದಲ್ಲಿ ನಾಡು ಹಬ್ಬದ ವೈಶಿಷ್ಟ್ಯ ಅತ್ಯಪೂರ್ವ. ದೇಶದ ಆಗು ಹೋಗುಗಳ ಜವಾಬ್ದಾರಿ ಹೊತ್ತಿರುವ ಪ್ರಧಾನಿ ನೆಹರೂರವರ ಆಶಯಂತೆ ಭಾವೈಕ್ಯವು ಪಾಂತ್ಯದ ಕನಸು ನನಸಾಗುವ ಈ ಮಹತ್ಸನ್ನಿವೇಶದಲ್ಲಿ ಜನರಲ್ಲಿ ಒಗ್ಗಟ್ಟು ಮೂಡಬೇಕು ಭಾರತವೆಲ್ಲಾ ಒಂದೇ ಎಂಬ ಭಾವನೆ ಬೆಳೆಯಬೇಕು. ಉತ್ತರದ ಪಂಜಾಬಿಗಳೂ, ದಕ್ಷಿಣದ ತಮಿಳರೂ, ಪೂರ್ವದ ಒರಿಯರೂ ಪಶ್ಚಿಮ ಗುಜರಾತಿಗಳೂ, ಒಂದೇ ತಾಯಿಯ ಮಕ್ಕಳೆಂಬ ಅಭಿಮಾನ ಮೂಡಬೇಕು. ವಿಜಯನಗರದ ಸಾಂಮ್ರಾಜ್ಯ ಪತನಾನಂತರ ಹರಿದು ಹಂಚಿ ಹೋದ ಕನ್ನಡನಾಡು ಈಗ ಪುನಃ ಒಂದಾಗುವ ಈ ಸಂತೋಷ ಸನ್ನಿವೇಶದಲ್ಲಿ ನಾಡುಹಬ್ಬದ ಸಂಕೇತವನ್ನರಿತ ನಾವು ನಾಡನ್ನು ಸರ್ವತೋಮುಖವಾಗಿ ಬೆಳೆಸಲು ಪ್ರತಿಜ್ಞೆಗೈಗೊಂಡು ಆತ್ಮ ಸಾಕ್ಷಿಯಾಗಿ ಮನಸ್ಸಮಾಧಾನದಿಂದ ಸರ್ವಕಾಲದಲ್ಲೂ ದುಡಿಮೆಗೆ ಬೆಲೆಕೊಟ್ಟು ನಿಸ್ವಾರ್ಥ ಮತ್ತು ನಿಷ್ಕಳಂಕವಾದ ಹಿರಿಮೆಯ ಜೀವನವನ್ನು ನಡೆಸೋಣ.

ಎನ್. ಜಿ. ಓ. ಗಳಿಗೆ ತಾತ್ಕಾಲಿಕ ಪರಿಹಾರ

ಮುಖ್ಯ ಮಂತ್ರಿಗಳ ಭರವಸೆ

ಸಂಸ್ಥಾನದ ಎನ್. ಜಿ. ಓ. ಗಳಿಗೆ ತಾತ್ಕಾಲಿಕ ಪರಿಹಾರವನ್ನು ನೀಡುವಪ್ರಶ್ನೆಯು ಈಗ ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆ ಎಂದು ಮುಖ್ಯಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಸಂಸ್ಥಾನದ ಎನ್ ಜಿ. ಓ. ಗಳ ಸಮ್ಮೇಳನವು ಸೇರಿದ್ದ ಸಂದರ್ಭದಲ್ಲಿ ಎನ್.ಜಿ.ಓ ಗಳ ಬೇಡಿಕೆಗಳಿಗೆ ಉತ್ತರವಾಗಿ ಮಾತನಾಡುತ್ತಾ ತಿಳಿಸಿದರು.

ಮುಂದಿನಮುಖ್ಯಮಂತ್ರಿ

ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆ ೨೧ ಕ್ಕೆ

ವಿಶಾಲ ಮೈಸೂರಿನ ಮುಖ್ಯಮಂತ್ರಿ ಪದವಿಯಾರಿಗಿರಬೇಕು ಎಂಬ ಬಗ್ಗೆ ಕಾಂಗ್ರೆಸ್ ಪಕ್ಷದ ನಾಯಕರನ್ನಾರಿಸಲು ಅಕ್ಟೋಬರ್ 21 ನೇ ತಾರೀಖು ಹನ್ನೊಂದು ಗಂಟೆಗೆ ಕಾಂಗ್ರೆಸ್ ಪಕ್ಷದ ಸಭೆಯು ಕೆಸಿಡೆನ್ಸಿಯಲ್ಲಿ ನಡೆಯಬೇಕೆಂದು ನಿಶ್ಚಯವಾಗಿದೆ.

ಬಳ್ಳಾರಿಯಲ್ಲಿ ಕೇಂದ್ರ ಗೃಹ ಸಚಿವರು

ಕಾಂಗ್ರೆಸ್ ಭವನದ ಶಂಕುಸ್ಥಾಪನೆ

ಕೇಂದ್ರ ಗೃಹಸಚಿವಂಡಿತ ಶ್ರೀ ಬಿ ಎನ್. ದಾತಾರರು ಬಳ್ಳಾರಿಗೆ 9—10—೫೬ ಮಧ್ಯಾಹ್ನ ಬಳ್ಳಾರಿಗೆ ದಯಮಾಡಿಸಿದರು ಸಾಯಂಕಾಲ 5 ಗಂಟೆಗೆ ಅಧಿಕಾರಿಗಳ ಸಭೆಯಲ್ಲಿ ಸಮಾಲೋಚಿಸಿದ ನಂತರ ವಕೀಲರಸಂಘದ ಸತ್ಕಾರವನ್ನು ಸ್ವೀಕರಿಸಿ ಅಲ್ಲಿ ಭಾರತದ ಸರ್ವಾಂಗೀಣಪ್ರಗತಿಯಲ್ಲಿ ಮತ್ತು ಆರ್ಥಿಕ ಮಟ್ಟವನ್ನು ಹೆಚ್ಚಿಸುವಲ್ಲಿ ವಕೀಲರು ಭಾಗವಹಿಸಬೇಕೆಂದು ಕೋರಿದರು.

ಸಾಯಂಕಾಲ 6 ಗಂಟೆಗೆ ಬೆಂಗಳೂರು ರೋಡಿನ ಕೊನೆಯ ಭಾಗದಲ್ಲಿ ಕಾಂಗ್ರೆಸ್ ಭವನದ ಶಂಕುಸ್ಥಾಪನೆಮಾಡಿ ಶುಭವನ್ನು ಕೋರಿದರು. ಜಿಲ್ಲಾಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸುಬ್ರಮಣ್ಯಂರವರು ಕಾಂಗ್ರೆಸ್ ಭವನಕ್ಕೆ ಸಹಾಯಮಾಡಿದ ದಾತೃಗಳ ಪಟ್ಟಿಯನ್ನೋದಿ ಅವರನ್ನು ಪರಿಚಯಿಸಿದರು. ಸಾಯಂಕಾಲದ ಸಾರ್ವಜನಿಕ ಸಭೆಯಲ್ಲಿ ಪಂಚವಾರ್ಷಿಕ ಯೋಜನೆ, ಭಾರತದ ಪ್ರಗತಿಯಲ್ಲಿ ಸರ್ವರ ಸಹಕಾರ ಮುಂಬರುವ ಚುನಾವಣೆಗಳಲ್ಲಿ ಯೋಗ್ಯರನ್ನಾರಿಸುವ ಹೊಣೆಹೊರುಗಳನ್ನು ಕುರಿತು ಶ್ರೀ ದಾತಾರರು ವಿವರ ಪೂರ್ವಕವಾಗಿ ಭಾಷಣದಿಂದ ತಿಳಿಸಿದರು,

---

ಕಳೆದ ವರ್ಷ ಭಾರತದಿಂದ 12,634,326 ರೂಗಳ ಬೆಲೆಬಾಳುವ ಸ್ಪಿರಿಟ್‌ನ್ನು ರಫ್ತು ಮಾಡಲಾಯಿತ್ತು ಆಸ್ಟ್ರೇಲಿಯಾಕ್ಕೆ ಸುಮಾರು 2,339,869 ರೂಗಳ ಬೆಲೆಬಾಳುವ ಪರಮಾವಧಿಪ್ರಮಾಣದ ಮೋಟಾರ್ ಸ್ಪಿರಿಟ್‌ನ್ನು ರಫ್ತು ಮಾಡಲಾಯಿತು.

1955 ರಲ್ಲಿ ಭಾರತದ ಅಂಚೆ ಕಚೇರಿ ಸೇವಿಂಗ್ಸ್ ಬ್ಯಾಂಕ್‌ಗಳಲ್ಲಿ ಒಟ್ಟು 256.5 ಕೋಟಿ ರೂಗಳ ಹಣ ಉಳಿದಿತ್ತು 51 ರಲ್ಲಿ ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳಲ್ಲಿ 185.1 ಕೋಟಿರೂ. ಉಳಿದಿತ್ತು

ಅಸ್ಸಾಂ ಶೈಲಸಂಸ್ಥೆಯವರು ಅಸ್ಸಾಮಿನಲ್ಲಿ 180 ಲಕ್ಷಟನ್ನುಗಳ ಶೈಲವಿರುವುದಾಗಿ ಅಂದಾಜು ಮಾಡಿದ್ದಾರೆ.

ಭಾರತದಲ್ಲಿ 56ರ ಫೆಬ್ರವರಿ ತಿಂಗಳಲ್ಲಿ ಕಬ್ಬಿಣದ ಅದಿರಿನ ಉತ್ಪಾದನೆಯು 377,591 ಟನ್ನುಗಳಷ್ಟಿದ್ದುದು ಮಾರ್ಚಿ ತಿಂಗಳಲ್ಲಿ 399,561 ಟನ್ನುಗಳಿಗೆ ಏರಿದೆ.

ನೆಗಡಿ, ಕೆಮ್ಮು, ದಮ್ಮು, ಉಬ್ಬಸ
ಶೀತಜ್ವರ, ಮಲೇರಿಯಾ, ಮತ್ತು
ಎಲ್ಲ ನೋವುಗಳಿಗೆ ದಿವ್ಯೌಷಧ

ಕಾಶ್ಮೀರು ಅರುಕ್

ಲೇಪನೆ, ಸೇವನೆ - ಎಂಡೂ ಸಾಧ
ಎಲ್ಲಪಾಪುಗಳಲ್ಲೂ ದೊರೆಯುತ್ತದೆ

H. S. & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ಎಲ್ಲವನ್ನೂ
ಶುದ್ಧಪಡಿಸಲು
ಉತ್ತಮವಾದುದು

ಮೈಸೂರು ಬಾರ್ ಸೋಪ್

ಸಂಪೂರ್ಣವಾಗಿ ಶುದ್ಧವಾದ
ಯಾವ ಬೆರಕೆಯೂ, ಅಪಾಯಕರ ರಸಾಯನಿಕ
ದ್ರವ್ಯಗಳೂ ಇಲ್ಲದ

ಅತ್ಯುತ್ತಮವಾದ ಒಗೆಯುವ ಸಾಬೂನು

ಎಲ್ಲ ಕಡೆಯಲ್ಲಿಯೂ ದೊರೆಯುತ್ತದೆ.
ಗೌರ್ನಮೆಂಟ್ ಸೋಪ್‌ಫ್ಯಾಕ್ಟರಿ, ಬೆಂಗಳೂರು.
ಮೆಂಬರ್, ಐ. ಎಸ್. ಟಿ. ಎಂ. ಎ.

ಹಿಂದೀ ಪರೀಕ್ಷೆಗಳು
ಪ್ರಾಥಮಿಕ
ಪರೀಕ್ಷಾ ಶುಲ್ಕ 1-8-0
ಸುಗಮ ಹಿಂದೀ ಬೋಧಿನಿ
ಸುಗಮ ಹಿಂದಿ I
—,,— II
ಕಥಾಮಂಜರಿ
ಹಿಂದೀ ರಚನೆ
(ಸೆಟ್ ಬೆಲೆ 2-8-0)
ಮಧ್ಯಮಾ ಪರೀಕ್ಷಾ ಶುಲ್ಕ 3-0-0
ಸುಗಮ ಹಿಂದಿ 3
ಸಚ್ಚಾ ಇನ್ ಸಾಫ್
ಆದರ್ಶ ಚರಿತ್ರ
ಐತಿಹಾಸಿಕ ಕಹಾನಿ
ಹಿಂದೀರಚನೆ 2
ಪತ್ರೋಜನ
(ಸೆಟ್ ಬೆಲೆ 4-4-0)
ಇತರ ವಿವರಗಳಿಗೆ ಸ್ಟ್ಯಾಂಪಿಟ್ಟು ಅಥವಾ
ರಿಪ್ಲೈಕಾರ್ಡ್ ಬರೆಯಿರಿ.
ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ 3

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
ಆರು ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.
(Regd. M. No. 4746)

To

Sri. _____

_____

_____

Edited, Printed & Published by T. B. KESHAVA RAO at Nava Bharat Printing Press, Bellary.

ನವಭಾರತ

ಸೋಮವಾರ, ಅಕ್ಟೋಬರ್ 29-10-1956

ವರ್ಷ 20
ಸಂಚಿಕೆ -10

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್

ಶ್ರೀ ವಿ- ವೆಂಕಟಪ್ಪನವರು ಎಂ-ಪಿ.ಸಿ.ಸಿ. ಅಧ್ಯಕ್ಷರು

ನೂತನ ಮೈಸೂರು ಪ್ರದೇಶದ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಶ್ರೀ ವಿ. ವೆಂಕಟಪ್ಪನವರು ಅವಿರೋಧವಾಗಿ ಚುನಾಯಿತರಾದರು.

ಈ ಚುನಾವಣೆಯು ಬೆಂಗಳೂರಿನ ಕಾಂಗ್ರೆಸ್ ಭವನದಲ್ಲಿ ಶ್ರೀ ಎಸ್.ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಶ್ರೀ ಅಂಬ್ಲಿ ಅವರಿಂದ ಸೂಚನೆ

ಶ್ರೀ ವೆಂಕಟಪ್ಪನವರ ಹೆಸರನ್ನು ಕೆ.ಪಿ.ಸಿ.ಸಿ ಅಧ್ಯಕ್ಷ ಶ್ರೀ ಸಿ. ಜೆ. ಅಂಬ್ಲಿಯವರು ಸೂಚಿಸಿದರು. ಹೈದ್ರಾಬಾದ್ ಕಾಂಗ್ರೆಸ್ ಅಡ್‌ಹಾಕ್ ಸಮಿತಿಯ ಅಧ್ಯಕ್ಷ ಶ್ರೀ ಅಣ್ಣಾರಾವ್ ಗುಣಮುಖಿಯವರು ಅನುಮೋದಿಸಿದರು

ನೂತನ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರನ್ನು ಆರಿಸಲು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ 107 ಜನ ಸದಸ್ಯರು, ಕೆ.ಪಿ.ಸಿ.ಸಿ. ಯ 78 ಜನರು ಹೈದ್ರಾಬಾದಿನ 26 ಜನ ಸದಸ್ಯರು ಒಟ್ಟು 211 ಜನ ಸದಸ್ಯರು ಸಭೆಗೆ ಸೇರಿದ್ದರು.

ಬೇರೆ ಯಾವ ಸ್ಪರ್ಧಿಗಳ ಹೆಸರು ಸೂಚಿತವಾಗದೆ ಇದ್ದ ಕಾರಣ ಶ್ರೀ ವಿ. ವೆಂಕಟಪ್ಪನವರು ಅವಿರೋಧವಾಗಿ ಆರಿಸಿ ಬಂದಿರುವುದಾಗಿ ಶ್ರೀ ಚನ್ನಯ್ಯನವರು ಘೋಷಿಸಿದರು. ಸಭೆಯಲ್ಲಿ ಹರ್ಷೋದ್ಗಾರವಾಯಿತು.

ಒಮ್ಮತದ ಆಯ್ಕೆ ಆದ ಬಗ್ಗೆ ಶ್ರೀ ಚನ್ನಯ್ಯನವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ನೆಹರೂ ಅಭಿಪ್ರಾಯ

ಪ್ರತಿಯೊಂದು ಸಮಾರಂಭದ ಸಂದರ್ಭದಲ್ಲೂ ಭಾಷಣಗಳನ್ನು ಮಾಡುವುದು ಒಳ್ಳೆಯದಲ್ಲವೆಂದು ಶ್ರೀ ನೆಹ್ರೂ ರವರು ಅಂತರ ವಿಶ್ವವಿದ್ಯಾನಿಲಯ ಯುವ ಜನೋತ್ಸವದಲ್ಲಿ ಮಾತನಾಡುತ್ತಾ ತಿಳಿಸಿದರು

ಈ ಅಭ್ಯಾಸ ಈಜಿಗೆ ಬೆಳೆದಿದೆ ಎಂದೂ ಅವಕಾಶ ಸಿಕ್ಕಿದಸಂದರ್ಭದಲ್ಲೆಲ್ಲಾ ರಾಜಕೀಯ ಅಥವಾ ಇತರ ವಿಷಯಗಳ ಮೇಲೆ ಭಾಷಣ ಮಾಡುವುದು ಹೆಚ್ಚಿದೆ ಯೆಂದೂ ಹೇಳಿ ಈ ಬಗ್ಗೆ ತಾವೂ ಅಪರಾಧಿಗಳೆಂದೂ ನುಡಿದರು.

ಶ್ರೀ ನಿಜಲಿಂಗಪ್ಪನವರ ಭಾಷಣ

ಒಮ್ಮತದ ಆಯ್ಕೆ ಮತ್ತು ಅಭಿನಂದನಾಪರ ಭಾಷಣಗಳನಂತರ ಶ್ರೀ ನಿಜಲಿಂಗಪ್ಪನವರು ಹೀಗೆ ಉತ್ತರಿಸಿದರು.

ನೂತನ ನಾಯಕ ಶ್ರೀ ನಿಜಲಿಂಗಪ್ಪನವರು ಎಲ್ಲರನ್ನೂ ವಂದಿಸಿ, ಇದು ಎಲ್ಲರಿಗೂ ಒಂದು ಮಹದಾನಂದದ ದಿನ ನನ್ನ ಬಾಲ್ಯದ ಕನಸು ನನಸಾಪ ದಿನ. ಎರಡು ಕೋಟಿ ಕನ್ನಡ ಜನರಿಗೆ ಆನಂದದ ದಿನವಾಗಿದೆ.ಹೊಸ ರಾಜ್ಯ ಆಗಿ ಅದನ್ನು ಅಭಿವೃದ್ಧಿಪಡಿಸತಕ್ಕ ಆಡಳಿತ ಪರಿಣಾಮವಾಗಿ ಯೋಗ್ಯ ಸಮಾಜವನ್ನು ಕಟ್ಟುವ ಸಂಘರ್ಷದಲ್ಲಿ ಕೆಲವು ಜವಾಬ್ದಾರಿಗಳನ್ನು ನನಗೆ ವಹಿಸಿಕೊಟ್ಟಿದ್ದೀರಿ. ಒಮ್ಮನಸ್ಸಿನಿಂದ ವಹಿಸಿದ್ದೀರಿ, ಇದಕ್ಕೆ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಚುನಾವಣೆ ಬೇಡ ಅನ್ನುವ ಮನುಷ್ಯ. ಕೇಂದ್ರ ಸ್ಥಳಗಳಲ್ಲಿ ಇರಬೇಕೆಂಬುದು ನನ್ನ ಅಸೆ ಕ್ಷೇ ಸ್ನೇಹಿತರ ಒತ್ತಾಯ ಮತ್ತು ಪರಿಸ್ಥಿತಿ ಗಮನಿಸಬೇಕಾಯಿತು.

ಈ ಪರ್ವಕಾಲದಲ್ಲಿ ಸೇವೆ ಸಲ್ಲಿಸೋಣವೆಂದು ದೀರ್ಘವಾಗಿ ಆಲೋಚಿಸಿ ಅಭಿಮಾನ, ಅಂತಃಕರಣಗಳಿಂದ ವಹಿಸಿಕೊಟ್ಟದ್ದನ್ನು ಒಪ್ಪಿದ್ದೇನೆ. ಹೊಸರಾಜ್ಯದ ರಚನೆಯ ಕಾಲದಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ.

ಅನೇಕ ರೀತಿಯ ಕಾನೂನು ಸಮ್ಮೇಳನಗಳನ್ನು ಹೊಂದಿಸಿಕೊಂಡು ಹೋಗಬೇಕಾಗುತ್ತದೆ. ಇದು ಸರ್ವಸಾಧಾರಣ ಕೆಲಸವಲ್ಲ. ಅಸ್ತಿಭಾರ ಹಾಕುವ ಕಾಲ ಅತ್ಯಂತ ಮುಖ್ಯವಾದ ಕಾಲ. ಚುನಾವಣೆಗಳು ಬರತಕ್ಕ ಸಮಯ. ಮೈಸೂರಿನಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಷ್ಟು ವಿರೋಧವಿಲ್ಲ. ಕಾಂಗ್ರೆಸ್‌ನ ಶಕ್ತಿ ಕೇಂದ್ರೀಕೃತವಾಗಿರುವುದು ಕರ್ನಾಟಕದಲ್ಲಿ ಎಂದು ನುಡಿದರು. ನಂತರ ಶ್ರೀ ಮಾಧವನ್ ನಾಯರ್‌ರವರ ಸೇವೆಯನ್ನು ಪ್ರಶಂಸಿಸಿ, ಅವರು ಮೈಸೂರಿನ ಸ್ನೇಹಿತರಿಂದೂ, ಮೈಸೂರಿನ ಅಭಿವೃದ್ಧಿಗೆ ಸಹಾಯ ಮಾಡುವರೆಂದೂ ನುಡಿದರು. ಕಾಂಗ್ರೆಸ್‌ನ ಕೀರ್ತಿ ಶಕ್ತಿಗಳನ್ನು ಬೆಳೆಸಬೇಕೆಂದರು- ಶ್ರೀ ಪೂಣಚ್ಚರವರ ಹರಕೆಯಂತೆ ಕಷ್ಟಪರಿಸ್ಥಿತಿ ಒಗಿಬರದಿರಲೆಂದು ಹಾರೈಸಿದರು. ಸುಖ ರಾಜ್ಯದ ಸ್ಥಾಪನೆಯಲ್ಲಿ ಬೇಕಾದಷ್ಟು ಹಣ ಬೇಕಾಗಬಹುದೆಂದೂ ಕೇಂದ್ರದ ಸಹಾಯ ಇದಕ್ಕೆ ಅನುಶ್ಯಕವೆಂದೂ ನುಡಿದು, ಇದನ್ನು ಹೊರಕೆ ಸಿಕೊಡಲು ಪಾರ್ಲಿಮೆಂಟ್ ಸದಸ್ಯರು ಶ್ರಮಿಸುವುದಾಗಿ ಇತ್ತ ಭರವಸೆಗೆ ವಂದಿಸಿದರು.

ಆಂಧ್ರದ ನೂತನ ಮಂತ್ರಿ ಮಂಡಲ

ನವೆಂಬರ್ ೧ ರಿಂದ ಜಾರಿಗೆ

ಆಂಧ್ರದ ಶ್ರೀ ಗೋಪಾಲರೆಡ್ಡಿಯವರು ಮಂತ್ರಿ ಮಂಡಲತ್ವಕ್ಕೆ ಕಳೆದ 26 ರಂದು ರಾಜೀನಾಮೆ ಸಲ್ಲಿಸಿರುತ್ತಾರೆ.ಆದಾಗ್ಯೂ ಗೋಪಾಲರೆಡ್ಡಿಯವರು ಈ ತಿಂಗಳ ಕೊನೆಯವರೆಗೂ ಅಧಿಕಾರದಲ್ಲಿರುತ್ತಾರೆ.

ಹೊಸ ಮಂತ್ರಿ ಮಂಡಲವು ಶ್ರೀ ಸಂಜೀವರೆಡ್ಡಿಯವರ ನೇತೃತ್ವದಲ್ಲಿ ನವೆಂಬರ್ ಒಂದರಂದು ಹೈದ್ರಾಬಾದಿನಲ್ಲಿ ಪ್ರಮಾಣವಚನ ಸ್ವೀಕರಿಸಲಿದೆ.

ಜಿಲ್ಲಾಧಿಕಾರಿಗಳ ಗಮನಕ್ಕೆ

ಜನಶಾಂತಿ, ವಿಶ್ವಾಸವು ಭಂಗವಾಗುತ್ತಲಿದೆ.

ಬಳ್ಳಾರಿ ಜಿಲ್ಲೆಯ ಸಂಡೂರು ಹೊಸಪೇಟೆ ಭಾಗಗಳಿಂದ ಪ್ರತಿನಿತ್ಯವೂ ನೂರಾರು ಲಾರಿಗಳಲ್ಲಿ ಕಬ್ಬಣದ ಅದಿರು ರೈಲ್ವೆಸ್ಟೇಷನ್ನಿನ ಮೂಲಕ ರಫ್ತಾಗುವುದನ್ನು ಎಲ್ಲರೂ ಬಲ್ಲರು. ಬಳ್ಳಾರಿ ನಗರದ ವಿವಿಧ ಪ್ರದೇಶಗಳಲ್ಲಿ ಕೂಟುಂಬಗಳು ವಾಸಿಸುತ್ತಿರುವ ಮನೆಗಳ ಸಮೀಪದಲ್ಲಿ ಜೀಪಿಯೇ ಮತ್ತು ಜಾಗಗಳಲ್ಲೆಲ್ಲ ಶೀಘ್ರೆ ಕುದೇರ ಗಳಿಚ್ಚಿಸುತ್ತಿರುವ ಈ ಮೈನ್ ಓನರ್ಸ್ ತಮ್ಮ ಸಂಗ್ರಹದ ಕೆಲ ಭಾಗಗಳನ್ನು ಶೇಖರಿಸಿರುವಿನ ರಾತ್ರಿಯೆಲ್ಲ "ಟಕ ಟಕ" ಶಬ್ದದಿಂದ ಹಿರಿಯರಾದವರ ತಲೆಗಳೆಲ್ಲವೂ ಕೆಟ್ಟುಹೋಗಿವೆ. ಮಲಗಿದವರಿಕ್ಕೆಯು ಬೆಚ್ಚಿಬೀಳುತ್ತವೆ. ರಾತ್ರಿ ನಿದ್ರಾಭಂಗದಿಂದ ಕೆಲವರು ರೋಗಗ್ರಸ್ತರಾಗಿರುತ್ತಾರೆ ಮನುಷ್ಯನು ತನ್ನ ವೈದುತ್ವವನ್ನು ಕಳೆದುಕೊಂಡು ಕಲ್ಲಿನಂತೆ ಕಠಿಣನಾದರೂ ರಾತ್ರಿಯಲ್ಲಿ ಜಾಗರಣೆಮಾಡುವುದು ತಪ್ಪಿಲ್ಲ. ಒಂದೊಂದು ಟಕ – ಟಕ ದಿಂದ ತಲೆಗೆ ಒಂದೊಂದು ಹೊಡೆತ ಬಿದ್ದಂತಾಗುತ್ತದೆ.

ಈ ಕುಟುಂಬೀಕರ ಶಾಂತಿ ಸಮಾಧಾನವನ್ನು ನಿರ್ಜೀವಗೊಳಿಸುತ್ತಿರುವ ಕರುಣಾಜನಕ ಪರಿಸ್ಥಿತಿಯ ಸ್ವಲ್ಪ ಅನುಭವವೂ ಜಿಲ್ಲಾಧಿಕಾರಿಗಳಿಗೂ ಆಗಬೇಕಾಗಿದೆ.

ಜಿಲ್ಲಾಧಿಕಾರಿಗಳ ಬಂಗ್ಲೆಸಮೀಪದಲ್ಲೇ ಟಕ-ಟಕ ನಡೆಯದಿದ್ದರೆ ಮುಖ್ಯವಾದ ಪತ್ರವ್ಯವಹಾರ ಅಥವಾ ಮುಖ್ಯವಾದ ಸಮಸ್ಯೆಯ ಪರಿಹಾರಕ್ಕೆ ಅವರು ಏಕಾಗ್ರಚಿತ್ತತೆಯಿಂದ ಸ್ಪಷ್ಟವಾಗಿ ಆಲೋಚಿಸಬೇಕೆಂದರೆ ಊರು ಬಿಡಬೇಕಾದೀತು.

ಭಾರತದ ಆರ್ಥಿಕ ಪ್ರಗತಿಗಾಮಿಯಾಗುವ ಈ ಉದ್ಯೋಗವನ್ನು ವಿವೇಕಿಗಳಾದವರೂ ಖಂಡಿಸಲಾರರು. ನಮ್ಮಿಂದ ಪರದೇಶಗಳವರು ಹಣಸೆಳೆಯುತ್ತಿದ್ದರೂ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ನಾವು ಸಂಪದ್ಭಕ್ತರಾಗಿ ನಮ್ಮ ಜೀವನದ ಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸುವುದು ಎಲ್ಲ ಭಾರತೀಯರ ಆದ್ಯ ಕರ್ತವ್ಯ. ಆದರೆ ಪ್ರತಿಯೊಂದು ಉದ್ಯೋಗ, ಹಣಸಂಪಾದನೆಗೆ ಸ್ಥಳ-ಸಮಾನ ಸಮಯದ ಮೌಲ್ಯವಿರಬೇಕು. ದೊಡ್ಡಪಟ್ಟಣಗಳಲ್ಲಿ ಕ್ಷೇತ್ರಗಳು (Industrial Areas) ವಾಸಸ್ಥಾನಗಳಿಗೆ ದೂರವುಂಟು. ಬಳ್ಳಾರಿ ಹೊಸಪೇಟೆಗಳು ಸಿಟಿ ಮುನಿಸಿಪಾಲಿಟಿಗಳಿರುವ ಕಾರಣ ಇಂಥಾ ಔದ್ಯೋಗಿಕ ಸ್ಥಾನಗಳ ಸ್ಥೈರ್ಯಡಿಸಬೇಕು.

ಜಿಲ್ಲಾಧಿಕಾರಿಗಳೂ, ಜಿಲ್ಲಾ ಪೋಲೀಸರೂ ಸಾಮಾನ್ಯ ಪ್ರಜೆಗಳಿಗೆ ಈ ವಿಷಯದಲ್ಲಿ ರಕ್ಷಣೆ ಒದಗಿಸಲು ಕಾಸನಗಳ ದೀತ್ಯಾ ಅಸಮರ್ಥರಲ್ಲ. ಇಂಥ ಔದ್ಯೋಗಿಕ ಕ್ಷೇತ್ರಸ್ಥಿರವಾಗುವವರೆಗೂ, ರಾತ್ರಿ 9 ಗಂಟೆಯಿಂದ ಪ್ರಾತಃಕಾಲ 6 ರವರೆಗೆ ಅಷ್ಟದು ದಪ್ಪುಗಳನ್ನು ನಿಲ್ಲಿಸಲು ಕೂಡಲೇ ಆರ್ಡರ್ ಮಾಡಬೇಕೆಂದು ಕೋರುತ್ತೇನೆ

ಇಂಗ್ಲೀಷ್ ಭಾಷೆಯ ದಾಸ್ಯತೆಯಿಂದ ಮುಕ್ತಿಹೊಂದಲು ಗಾಂಧೀಜಿಯವ ಆಹ್ವಾನ

ಸ್ವರಾಜ್ಯಕ್ಕೆ ಸಂಬಂಧಿಸಿದ ವಿವಿಧ ಪ್ರಶ್ನೆಗಳಿಗೆ ಸಮಾಧಾನ ಉತ್ತರಕೊಡುತ್ತ ಮಹಾತ್ಮಾಗಾಂಧೀಜಿಯವರು 1908 ರಲ್ಲಿ 'ಇಂಡಿಯನ್ ಒಪೀನಿಯನ್' ಎಂಬ ಪತ್ರಿಕೆಯಲ್ಲಿ ಇಪ್ಪತ್ತು ಪ್ರಕರಣಗಳನ್ನು ಪ್ರಕಟಿಸಿದ್ದರು. ಅದು ನಂತರ ಹಿಂದ್ ಸ್ವರಾಜ್ಯ ಎಂಬುವ ಪುಸ್ತಕರೂಪದಲ್ಲಿ ಸಂಗ್ರಹಿಸಲ್ಪಟ್ಟಿತ್ತು. ಗಾಂಧೀಜಿಯವರು, ವಿವಿಧ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುತ್ತಿದ್ದರು. ಉತ್ತರಗಳಲ್ಲಿ ಭಾಷಾಸಮಸ್ಯೆಯ ಸಂಬಂಧವಾಗಿ ಕೊಟ್ಟವುಗಳಲ್ಲಿ ಕೆಲವನ್ನು ಮಾತೃ ಕನ್ನಡನಾಡಿನ ಜನರ ಅವಗಾಹನೆಗಾಗಿ ಕೊಡಲಾಗಿದೆ.

ಭಾರತಕ್ಕೆ ಸ್ವಾತಂತ್ರ್ಯ ಬಂದು 8 ವರ್ಷಗಳ ದವು ಆದರೂ ಭಾಷೆಯಸಂಬಂಧದಲ್ಲಿ ನಾವು ಇನ್ನೂ ಪರಮುಖಾಪೇಕ್ಷಿಗಳಾಗಿಯೇ ಇದ್ದೇವೆ. ಹಿಂದಿಯನ್ನು ರಾಷ್ಟ್ರಭಾಷೆಯೆಂದೂ ಹೇಳಿಯೇ ಸಂವಿಧಾನ ಮುದ್ರೆಯು ಬಿದ್ದರೂ ಸಹ ನಾವು ಇನ್ನೂ ಇಂಗ್ಲೀಷ್ ಭಾಷೆಯ ಮೋಹಜಾಲದಲ್ಲಿ ಸಿಕ್ಕಿಕೊಂಡಿದ್ದೇವೆ ಪೂಜ್ಯಗಾಂಧೀಜಿಯವರು ಇಂಗ್ಲೀಷ್ ಸಂಬಂಧದಲ್ಲಿ ಏನು ಬರೆದಿದ್ದರೋ ಅದು ಈ ದಿನವೂ ಸಹ ಅಕ್ಷರಶಃ ಸತ್ಯವಾಗಿದೆ :—

(1) ಕೋಟ್ಯಾಂತರ ಪ್ರಜೆಗಳಿಗೆ ಇಂಗ್ಲೀಷ್ ಹೇಳಿಕೊಡುವುದು ಅವರನ್ನು ಗುಲಾಮತನದಲ್ಲಿ ಬಂಧಿಸಿದಂತಾಗಿದೆ. ಮೆಕಾಲೆ ಎಂಬ ಇಂಗ್ಲೀಷ್ ನವನು ಯಾವ ಭಾಷೆಯ ತಳವಾಯ ಭಾರತದಲ್ಲಿ ಹಾಕಿದನೊ, ಅದು ಗುಲಾಮತನದ ತಳವಾಯ ಸ್ವರಾಜ್ಯಕ್ಕೆ ಸಂಬಂಧಿಸಿದ ಮಾತುಗಳನ್ನಾಡುವಾಗಲೂ ಸಹ ಪರಕೀಯ ಭಾಷೆಯನ್ನು ವ್ಯವಹರಿಸುತ್ತೇವೆ. ಇದು ಎಂತಹ ವಿಚಿತ್ರ ಸ್ಥಿತಿ.

(2) ಇಂಗ್ಲೀಷ್ ಭಾಷೆಯನ್ನು ಇಂಗ್ಲೀಷ್‌ನವರು ತೆಗೆದು ನಮಗೆ ಕೊಡಿಸುತ್ತಿದ್ದರೆ, ಅದನ್ನು ನಾವು ಶೃಂಗಾರದವಸ್ತುವೆಂದು ಸ್ವೀಕರಿಸುತ್ತಿದ್ದೇವೆ.

ಅವರ ವಿದ್ವಾಂಸರೇ ಇಂಗ್ಲೀಷ್ ಭಾಷೆಯಲ್ಲಿ ಶೃಟಿಗಳನ್ನೆಯೆಂದು ಪರಿವರ್ತಿಸುತ್ತಾ ಇರುವಾಗ ನಾವು ಅದೇ ಭಾಷೆಯೊಂದಿಗೆ ಅಂಟಿಕೊಂಡಿದ್ದೇವೆ. ಅಲ್ಲಿನ ಪ್ರಜೆಗಳು ತಮ್ಮ ಭಾಷೆಯನ್ನು ಉನ್ನತಿಗೆ ತರಲು ಪ್ರಯತ್ನಪಡುತ್ತಿದ್ದಾರೆ. ಆದರೆ ನಮ್ಮಸ್ಥಿತಿ—

(3) ನಾವು ನಮ್ಮ ನಮ್ಮಲ್ಲಿ ಪತ್ರವ್ಯವಹಾರ ನಡೆಸುವಾಗ ತಪ್ಪುಗಳಿಂದತುಂಬಿರುವ ಇಂಗ್ಲೀಷ್‌ನಲ್ಲಿಯೇ ಬರೆಯುತ್ತೇವೆ. ನಮ್ಮ ಉಚ್ಚತರವಾದ ವಿಷಯಗಳನ್ನು ಸಹ ಇಂಗ್ಲೀಷಿನಲ್ಲಿಯೇ ವ್ಯಕ್ತಪಡಿಸಲು ಪ್ರಯತ್ನಿಸುತ್ತೇವೆ. ನಮ್ಮ ಕಾಂಗ್ರೆಸ್‌ನ ಕೆಲಸ ಕಾರ್ಯಗಳು ಇಂಗ್ಲೀಷ್‌ನಲ್ಲಿ ನಡೆಯುತ್ತವೆ. ನಮ್ಮಲ್ಲಿ ಹೆಚ್ಚು ಪ್ರಚಾರದಲ್ಲಿರುವ ಪತ್ರಿಕೆಗಳೂ ಸಹ ಇಂಗ್ಲೀಷಿನಲ್ಲಿವೆ. ಇದೇ ರೀತಿ ಹೆಚ್ಚು ದಿನಗಳು ನಡೆಯುತ್ತಿದ್ದರೆ ನಮ್ಮ ಮುಂದಿನ ಪೀಳಿಗೆಯು ನಮ್ಮನ್ನು ಶಪಿಸುತ್ತವೆ. ಹಾಗೂ ಧಿಕ್ಕರಿಸುತ್ತವೆ.

(4) —ಏನು? ನಮ್ಮ ಭಾರತದಲ್ಲಿ ಯಾವುದಾದರೂ ಕೆಲಸ ಸಿಗಬೇಕಾದರೆ ಇಂಗ್ಲೀಷಿನ ಆಶ್ರಯ ಪಡೆಯಬೇಕೇ? ನಾನು ಬ್ಯಾರಿಸ್ಟರ್ ಆದರೆ ನಾನು ನನ್ನ ಭಾಷೆಯಲ್ಲಿ ಮಾತನಾಡುವ ಹಾಗಿಲ್ಲ. ಇಂಗ್ಲೀಷಿನಲ್ಲೇ ವಾದಾಡಬೇಕು.

(5) ಇಂಗ್ಲೀಷ್ ಕಲಿತಿರುವ ತಂದೆ ತಾಯಿ ತನ್ನ ಮಕ್ಕಳಿಗೆ ಮೊದಲು ಒಳ್ಳೆಯ ನಡತೆ ಹೇಳಿಕೊಟ್ಟು ನಂತರ ತನ್ನ ಭಾಷೆಯನ್ನೂ ಹೇಳಿಕೊಡಬೇಕು. ಹಾಗೂ ಹಿಂದೂಸ್ತಾನದ ಇತರ ಭಾಷೆಗಳ ಪರಿಚಯ ಮಾಡಿಕೊಡಬೇಕು. ವಯಸ್ಸಿಗೆ ಬಂದ ನಂತರ ಆಡುಮಾತಿಗೆ ಬೇಕಾದರೆ ಇಂಗ್ಲೀಷ್‌ನ್ನು ಅಭ್ಯಸಿಸಲಿ. ಇಂಗ್ಲೀಷನ್ನು ಓದಬಾರದೆಂದು ನಾನೆಂದಿಗೂ ಹೇಳುವುದಿಲ್ಲ. ಆದರೆ ಅದರ ವ್ಯಾಮೋಹ ಬೇಡ.

(6) ನನ್ನ ವಿಚಾರದಲ್ಲಿ ದೇಶದ ಎಲ್ಲಾ ಭಾಷೆಗಳ ಪರಿಚಯ ನಮಗೆಬೇಕು ಅನೇಕ ಶಾಸ್ತ್ರಗಳನ್ನು ಓದುತ್ತೇನೆಂಬುದು ಬರೀ ಆಡಂಬರ. ನಮಗೆ ಮೊಟ್ಟಮೊದಲು ಧರ್ಮ ಅಥವಾ ಸದಾಚಾರದ ಶಿಕ್ಷಣ ದೊರೆಯಬೇಕು. ಪ್ರತಿಯೊಂದು ಶಿಕ್ಷಿತ ಯುವಕನಿಗೂ ತನ್ನ ಭಾಷೆಯ ಪೂರ್ಣ ಜ್ಞಾನವಿರಬೇಕು. ಹಿಂದಿಯು ಎಲ್ಲಾ ಧರ್ಮದ, ಎಲ್ಲಾ ಭಾಷೆಗಳವರಿಗೂ ಬೇಕು.

(7) ಗಾಂಧೀಜಿಯವರು 8-12-1947 ರಲ್ಲಿ ತಮ್ಮ ಪ್ರಾರ್ಥನಾ ಸಭೆಯಲ್ಲಿ ಭಾಷಣಮಾಡುತ್ತಾ, ಈ ರೀತಿ ತಿಳಿಸಿದರು.

(3 ನೇ ಪುಟಕ್ಕೆ)

(೨ ನೇ ಪುಟದಿಂದ)

ಇಂಗ್ಲೀಷ್ ಭಾಷೆಯ ವಿಚಾರದಲ್ಲಿ ನನಗೆ ಗೌರವವಿದೆ. ನಾನು ಇಂಗ್ಲೀಷನ್ನು ಓದಿ ಬರೆಯಬಲ್ಲೆ. ಪ್ರಪಂಚದೊಂದಿಗೆ ವ್ಯವಹರಿಸಬೇಕಾದರೆ ಇಂಗ್ಲೀಷನ್ನು ಉಪಯೋಗಿಸೋಣ. ನಾವು ಇಂಗ್ಲೀಷಿನವರ ರಾಜ್ಯದಿಂದ ಬಿಡುಗಡೆಯಾದರೂ ಇಂಗ್ಲೀಷ್ ಭಾಷೆ ಮತ್ತು ಅವರ ಸಭ್ಯತೆಯಿಂದ ಮಾತ್ರ ಬಿಡುಗಡೆ ಹೊಂದಲಿಲ್ಲ.

ಒಂದುವೇಳೆ ನನ್ನ ಮಗ ನನಗೆ ಇಂಗ್ಲೀಷಿನಲ್ಲಿ ಕಾಗದ ಬರೆದರೆ, ಏಕೆಂದರೆ ಅವನು ಇಂಗ್ಲೀಷ್ ಬಲ್ಲ. ಆ ಕಾಗದವನ್ನು ಎಸೆದುಬಿಡುತ್ತೇನೆ ಹಾಗೆಯೇ ನಾನು ಸಹ ಒಂದು ವೇಳೆ ಇಂಗ್ಲೀಷನ್ನು ತಿಳಿದಿದ್ದರೂ, ನನ್ನ ಮಗನಿಗೆ ಇಂಗ್ಲೀಷಿನಲ್ಲಿ ಕಾಗದ ಬರೆದರೆ ಆದನ್ನು ಬಿಸಾಡುವ ಅಧಿಕಾರ ಅವನಿಗಿದೆ. ನಾವು ನಮ್ಮ ಧರ್ಮ ಕರ್ಮವನ್ನು ಮರೆಯುತ್ತಿದ್ದೇವೆ ಮತ್ತು ನಮ್ಮಲ್ಲಿ ಏನೋ ಒಂದು ವಿಕಾರ ಕೂತು ಬಿಟ್ಟಿದೆ.

ಇಂಗ್ಲೀಷು ಭಾರತದ ಶಿಕ್ಷಿತ ಸಮುದಾಯದ ಸಾಮಾನ್ಯ ಭಾಷೆಯಾಗಲು ಸಾಧ್ಯ. ಏಕೆಂದರೆ ಇಂಗ್ಲೀಷು ಭಾಷೆಗಿಂತಲೂ ಹಿಂದೀ ಕಲಿಯುವುದು ಅತಿ ಸುಲಭ.

ಬಳ್ಳಾರಿ ವಯಸ್ಕರ ಶಿಕ್ಷಣಸಮಿತಿ

ಬಳ್ಳಾರಿ ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ವಿಾಟಿಂಗು 16—10—56 ರಲ್ಲಿ ಜಿಲ್ಲಾ ಡೆಪ್ಯುಟಿಕಮಾಷನರ್‌ರವರ ಕೋರ್ಟ್‌ಹಾಲಿನಲ್ಲಿ ನಡೆಯಿತು. ಶ್ರೀ ಟಿ ವಿ. ವೆಂಕಟ್ಟಿಯವರು—I.A.S. ಅಧ್ಯಕ್ಷತೆ ವಹಿಸಿದ್ದರು. ಈ ಸಮಿತಿಯ ಗೌರವಕಾರ್ಯದರ್ಶಿಗಳಾದ ಶ್ರೀ. ಕೋ. ಚೆನ್ನಬಸಪ್ಪನವರು ಸಮಿತಿಯ ಕಾರ್ಯ ಚಟುವಟಿಕೆಯ ರಿಪೋರ್ಟನ್ನು ಓದಿದರು. ಬಳ್ಳಾರಿ ಜಿಲ್ಲೆಯಲ್ಲಿ ಒಂದು ವಿದ್ಯಾಪೀಠವನ್ನು ಪ್ರಾರಂಭಿಸುವುದಕ್ಕೆ ಬೇಕಾಗಿರುವ ಜಮೀನನ್ನು ನಿಗದಿಮಾಡುವ ಬಗ್ಗೆ ಈ ಮೀಟಿಂಗಿನಲ್ಲಿ ದೀರ್ಘವಾದ ಚರ್ಚೆಯುಂಟಾದೆನಂತರ ಈ ವಿಷಯವನ್ನು ಸಮಿತಿಯ ವ್ಯವಸ್ಥಾಪಕ ಕಾರ್ಯದರ್ಶಿಗಳೇ ಪರಿಶೀಲಿಸಿ ಬಳ್ಳಾರಿ ತಾಲ್ಲೂಕು ಅಮಲ್ದಾರರವರು ಮತ್ತು ವ್ಯವಸಾಯ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರವರ ಸಹಕಾರಗಳಿಂದಲೂ ವಿದ್ಯಾಪೀಠಕ್ಕೆ ಬೇಕಾದ ಜಮೀನನ್ನು ಕುಡಿತಿನಿ ಊರಿನ ಅಕ್ಕ – ಪಕ್ಕದಲ್ಲಿಯೇ ನಿಗದಿಮಾಡಬೇಕೆಂದು ಸಮಿತಿಯು ನಿರ್ಧರಿಸಿ ಮೀಟಿಂಗು ಮುಕ್ತಾಯವಾಯಿತು.

ಬಳ್ಳಾರಿ ಜಿಲ್ಲೆಯಲ್ಲಿ ಈ ವರ್ಷ ವಿಶೇಷ ಮಳೆ

ಬಳ್ಳಾರಿ ಜಿಲ್ಲೆಯಲ್ಲಿ ಈ ವರ್ಷ ಸರಿ 23½ ಅಂಗುಲ ಮಳೆ ಯಾಗುವುದು. ಆದರೆ ಕಳೆದೆರಡು ತಿಂಗಳಲ್ಲಿಯೇ 22ಅಂ ಮಳೆಯಾಗಿದೆ. ಕಳೆದ 15 ದಿನಗಳಲ್ಲಿಯೇ 6½ ಅಂಗುಲ ಮಳೆಯಾಗಿದೆ. ಕಳೆದ 25 ವರ್ಷಗಳಿಂದಲೂ ಇಂಥಾ ಮಳೆಯುಯಾವಾಗಲೂ ಆಗಿರಲಿಲ್ಲ. ಬಳ್ಳಾರಿನಗರ ಮತ್ತು ಹಳ್ಳಿಗಳಲ್ಲಿ ಸಾವಿರಾರು ಮನೆಗಳು ಬಿದ್ದು ವಿಶೇಷ ನಷ್ಟವಾಗಿದೆ. ಜೋಳದರಾಶಿ ಒಂದೇ ಗ್ರಾಮದಲ್ಲಿ ಸುಮಾರು 2 ಸಾವಿರ ಚೀಲ ಜೋಳ ಹಾಗೇವುಗಳಲ್ಲಿದ್ದಿದ್ದು ನೀರಿನಲ್ಲಿ ಮುಳುಗಿ ಕೆಟ್ಟುವಾಸನೆ ಹಿಡಿದು ಸುಮಾರು 80ಸಾವಿರ ರೂ. ನಷ್ಟವಾಗಿದೆ. ಅನೇಕಗ್ರಾಮಗಳಲ್ಲಿ ನವಣೆ ಪೈರು ಕೆಟ್ಟು ಹೋಗಿದೆ. ಹುಲ್ಲು ನೀರು ಸಮೃದ್ಧಿಯಾಗಿ ದನಕರುಗಳಿಗೆ ಮಾತ್ರ ಸುಖವಾಗಿದೆ.

ಅಸ್ಸಾಂಗೆ ಪ್ರಧಾನಿ ನೆಹರೂ ಭೇಟಿ

ಈಗಿನ ಮಾಸ ಭಾರತದ ಪ್ರಧಾನಿ ನೆಹರೂರವರು ಅಸ್ಸಾಂಗೆ ಭೇಟಿ ಯಿತ್ತರು

ಅವೋ—ಲಾಟ್ಕಾ ಮತ್ತು ಸೇಮಾಸ್ ಗುಂಪುಗಳ 11 ಮಂದಿ ನಾಗಾ ಪ್ರತಿನಿಧಿಗಳು ಪ್ರಧಾನ ಮಂತ್ರಿ ನೆಹ್ರೂರನ್ನು ಶಿಲ್ಲಾಂಗ್‌ನಲ್ಲಿ ಭೇಟಿ ಮಾಡಿ ನಾಗಾ ಪರ್ವತ ಪ್ರದೇಶದ ಇತ್ತೀಚಿನ ಪರಿಸ್ಥಿತಿಯನ್ನು ಕುಂಶು ವಿವರಿಸಿದರು.

ಒಂದು ಗಂಟೆ ಕಾಲ ನಡೆದ ಈ ಮಾತುಕತೆ ಸಮಯದಲ್ಲಿ ಅಸ್ಸಾಂ ಗವರ್ನರ್‌ರೂ, ಅಸ್ಸಾಂ ಮುಖ್ಯ ಮಂತ್ರಿಯೂ ಮತ್ತು ಲೆ||ಜ. ತಿಮ್ಮಯ್ಯನವರೂ ಹಾಜರಿದ್ದರು.

ಗಲಭೆ ಗ್ರಸ್ತ ನಾಗಾ ಪ್ರದೇಶಗಳಲ್ಲಿ ಜನರಿಗೆ ಇರುವ ನಾನಾ ತೊಂದರೆಗಳನ್ನು ಅವರು ನೆಹ್ರೂರಿಗೆ ವಿವರಿಸಿದುದಾಗಿ ಗೊತ್ತಾಗಿದೆ.

ನೆಹ್ರೂರವರು ಅಸ್ಸಾಂ ಗವರ್ನರ್ ಸೈಯದ್ ಫಜ್ಲ್‌ಅಲಿ, ಮುಖ್ಯ ಮಂತ್ರಿ ಶ್ರೀ.ವಿಷ್ಣುರಾಂ ಮೇಧಿ ಮತ್ತು ಈಸ್ಟರ್ನ್ ಕಮ್ಯಾಂಡಿನ ಜಿ-ಓ-ಸಿ-ಇನ್-ಸಿ. ಯವರಾದ ಶ್ರೀ ಲೆ.ಜ. ತಿಮ್ಮಯ್ಯನವರು ಪರಿಸ್ಥಿತಿಯನ್ನು ದೀರ್ಘವಾಗಿ ಚರ್ಚೆಮಾಡಿದರು. ಉನ್ನತ ಅಧಿಕಾರಿಗಳೂ ಹಾಜರಿದ್ದರು.

ಈಶಾನ್ಯ ಗಡಿ ಪ್ರದೇಶಗಳ ಅಧಿಕಾರಿಗಳ ಸಭೆಯೊಂದನ್ನುದ್ದೇಶಿಸಿ ಶ್ರೀ ನೆಹರೂರವರು ಭಾಷಣ ಮಾಡಿದರು. ಮತ್ತು ಹ್ಯಾಪಿ ವ್ಯಾಲಿಯಲ್ಲಿ ಅಸ್ಸಾಂ ರೆಜಿಮೆಂಟಲ್ ಕೇಂದ್ರಕ್ಕೂ ಭೇಟಿ ಕೊಟ್ಟರು.

ನಾಗಾ ಸಮಸ್ಯೆಯ ಬಗ್ಗೆ ನೆಹ್ರೂರ ಅಭಿಪ್ರಾಯ

ನಾಗಾ ಪರ್ವತಗಳ ಜಿಲ್ಲೆಯಲ್ಲಿನ ತೊಂದರೆಯ ಪರಿಸ್ಥಿತಿ ಬೇಗ ನಿವಾರಣೆ ಆಗುವುದೆಂದು ಪ್ರಧಾನಿ ನೆಹ್ರೂರವರು ಸಾರ್ವಜನಿಕ ಸಭೆಯಲ್ಲಿ ತಿಳಿಸಿದರು.

ಸೂಯಜ್ ಬಗ್ಗೆ ಉದ್ರೇಕ ಕಡಮೆ ಆಗಿದ್ದರೂ, ಬಿಕ್ಕಟ್ಟು ಇನ್ನೂ ನಿವಾರಣೆ ಆಗಿಲ್ಲ ವೆಂದೂ ಅವರು ತಿಳಿಸಿದರು

ಜನತೆಗೆ ಹಿತನುಡಿ

ಜನರು ಸಣ್ಣಪುಟ್ಟ ವಿಚಾರಗಳಲ್ಲಿ ತಮ್ಮ ಶಕ್ತಿಯನ್ನು ವ್ಯಯ ಮಾಡಬಾರದೆಂದು ನೆಹ್ರೂ ತಿಳಿಸಿದರು. ಈಗ ಉದ್ದೇಶಿಸಲಾಗಿರುವ ಎಣ್ಣೆ ಶುದ್ಧೀಕರಣ ಕಾರ್ಖಾನೆಯನ್ನು ಅಸ್ಸಾಂನಲ್ಲೇ ಸ್ಥಾಪಿಸಬೇಕೆಂದು ಒತ್ತಾಯಮಾಡಲು ಈ ದಿನ ತಾವು ಸರ್ಕೀಟ್ ಭವನಕ್ಕೆ ಹೋಗುತ್ತಿದ್ದಾಗ ಕೆಲವರು ನಡೆಸಿದ ಪ್ರದರ್ಶನದ ಬಗ್ಗೆ ನೆಹ್ರೂರವರು ಪ್ರಸ್ತಾಪಿಸಿ ಇದು ಸರಿಯಾದ ಮಾರ್ಗವಲ್ಲವೆಂದರು.

ನಾವೀಗ ಕೈಗಾರಿಕಾ ಕ್ರಾಂತಿಯ ಹೊಸ್ತಿನಲ್ಲಿದ್ದೇವೆ ಈ ನವ ಜಾಗೃತಿಯನ್ನು ನಾವು ಪೂರ್ಣವಾಗಿ ಸದುಪಯೋಗಪಡಿಸಿಕೊಳ್ಳಬೇಕೆಂದು ನೆಹ್ರೂ ಸುಡಿದರು.

---

(1) 1956 ರ ಸೆಪ್ಟೆಂಬರ್ ತಾಲಿ ಕೇಂದ್ರ ಸರ್ಕಾರದವರು ಪೂರ್ವ ವಾಕಿ ಸ್ಥಾನದಿಂದ ಬಂದಿರುವ ಸ್ಥಾನಪಲ್ಲಟರ ಪುನರ್ವಸತಿಗಾಗಿ 16 ಯೋಜನೆಗಳನ್ನು ಮಂಜೂರು ಮಾಡಿದ್ದಾರೆ 3 ಕೋಟಿ ರೂಗಳ ಹಣ ವೆಚ್ಚವಾಗುವ ಈ ಯೋಜನೆಗಳಿಂದ 99,000 ಕುಟುಂಬಗಳಿಗೆ ಪ್ರಯೋಜನ ಲಭಿಸುವುದು.

(2) 1950–51 ರಲ್ಲಿ ಭಾರತದಲ್ಲಿ 33,730 ಮೂಲ ಶಿಕ್ಷಣ ಶಾಲೆಗಳಿದ್ದುದು 55-56 ರಲ್ಲಿ ಈ ಸಂಖ್ಯೆಯು 41,121 ಕ್ಕೆ ಏರಿಸಿ.

ಇತ್ತೀಚೆ ಆಗಸ್ಟ ಪರೀಕ್ಷೆಗಳು

ಬಳ್ಳಾರಿ ಕೇಂದ್ರದ ಉತ್ತೀರ್ಣ ಹಿಂದೀ ವಿದ್ಯಾರ್ಥಿಗಳು

ಬಳ್ಳಾರಿ ಹಿಂದೀ ಮಹಾವಿದ್ಯಾಲಯ ಪ್ರಿನ್ಸಿಪಾಲರು ಬಳ್ಳಾರಿ ಕೇಂದ್ರದಲ್ಲಿ 1956 ರ ಆಗಸ್ಟ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಪ್ರಕಟನೆಗಾಗಿ ಕಳುಹಿಸಿರುತ್ತಾರೆ.

ವಿಶಾರದ — ಉತ್ತರಾರ್ಧ

ಶ್ರೀಮತಿ ವಿಜಯಾಸಂಪತ್
" ಎ. ವಿ ಸುನಂದ
ಶ್ರೀ Y. ವೆಂಕಟಸ್ವಾಮಿ
" K. ಸುಬ್ರಮಣ್ಯ
" B. ಶೇಷೋಜಿ
" S-A. ಪುರಾಣಿಕ
" R. ನಾಗೋಜಿರಾವ್

ವಿಶಾರದ — ಪೂರ್ವಾರ್ಧ

ಕುಮಾರಿ D.H. ಪುಷ್ಪಲತ
" W. ವೆಂಕಟಲಕ್ಷ್ಮಿ
" D. ಗೋದಾವರಿ
" B.R. ನಾಗೂಬಾಯಿ
ಶ್ರೀ J. ರಾಜಶೇಖರ
" S. ಸಂಗಣ್ಣ
" S. ವೆಂಕೋಬರಾವ್
" G. ಗುರುದಾಸಪ್ಪ
" S,M. ರಾಮದೇವಯ್ಯ

ಪ್ರವೇಶಿಕ

ಶ್ರೀಮತಿ ಅನ್ನಪೂರ್ಣದೇವಿ
ಕುಮಾರಿ ಶಾಂತ
" ಸುಬ್ಬರತ್ನ
" K. ಸುಶೀಲ
ಶ್ರೀ E. ಪಾಂಡುರಂಗಗುಪ್ತ
" ಕಟ್ಟಿ ಬಸವನಗೌಡ
" B. ಜಯಭೀಮರಾವ್
" V. ಸಂಜೀವಪ್ಪ

ರಾಷ್ಟ್ರಭಾಷ

ಕುಮಾರಿ B.N. ಗೀತ
(ಪ್ರಥಮಶ್ರೇಣಿ)
" A.V. ಪ್ರಮೀಳ
" J. ಸುಮತಿ
" M.D. ಲೀಲ
" R. ವಸಂತಮ್ಮ
" Y.K. ಲೀಲ
" Y.K. ಪ್ರೇಮಲತ
" M.H. ವಿಮಲ
" V R, ಸರಸ್ವತಿ
ಶ್ರೀ T.R. ಉನ್ನಿಕೃಷ್ಣ
" M.R. ಸುಬ್ಬಣ್ಣ
" ರಾಜೇಂದ್ರಪಾಲ್
" V.ಸುಬ್ರಮಣಿ
" G. ನಾರಾಯಣಶೆಟ್ಟಿ
" B. ಹೇಮರೆಡ್ಡಿ
" M K. ಪಾಂಡುರಂಗರಾವ್
" M.H ನಾರಾಯಣರಾವ್
" K. ಶಾಂತಮೂರ್ತಿ.

ಮುಖ್ಯಮಾ

ಕುಮಾರ A.V. ಸರೋಜ
" D. ಅನಂತಮ್ಮ
" B.K. ಪ್ರಭಾ
" B.K. ಲೀಲ
" V. ರಾಜಲಕ್ಷ್ಮಿ
" V. ಪುಷ್ಪಲತ
" C. ಲೀಲಾವತಿ
" S. ಲಕ್ಷ್ಮಿದೇವಿ
" K. ಹೇಮಾಂಬುಜ
" M. ಸರೋಜ
" Y. ಈಶ್ವರಮ್ಮ
" K.R. ಶಾರದ
" K. ಶಾಮಲಾಬಾಯಿ
" B. ಪದ್ಮಾವತಿ
" K.M. ವಸಂತ
" U. ಜಡೆಮ್ಮ
" T.G. ಪದ್ಮಾವತಿ
" K- ಸತ್ಯವತಿ
" A ಸುಲೋಚನ
" K. ಧನಲಕ್ಷ್ಮಿ
" B S. ಸರಸ್ವತಿಬಾಯಿ
ಶ್ರೀ T. ರಾಮನಾಥ
" K.M. ಚಿನ್ನಕೋನಪ್ಪ
" S. ಸೂರ್ಯನಾರಾಯಣ
" S. ಸುಬ್ರಮಣ್ಯಂ
" G.T. ರಾಮದಾಸ್
" A. ದಿವಾಕರ್
" A ಕೃಷ್ಣಮೂರ್ತಿ
" K. ವೆಂಕೋಬರಾವ್
" ಶರಚಂದ್ರನಾರಾಯಣರಾವ್.ಹಾಜನಿ
" ಕಲ್ಲೂರ ಮಲ್ಲಾರೆಡ್ಡಿ
" P. ಗಂಗಾರೆಡ್ಡಿ
" G M. ಶಂಭಯ್ಯ
" M. ಪ್ರಹ್ಲಾದರಾವ್
" C.M. ತಿಪ್ಪೇರುದ್ರಯ್ಯ
" M. ರಮೇಶ
" P.S. ಗೋಪಿನಾಥ್
" M. ಶ್ರೀನಿವಾಸಶೆಟ್ಟಿ
" C.P. ರಾಘವನ್
" ಪ್ರಿಯತಮದಾಸ್
" K. ಜೋಗೇಶ್ವರರಾವ್
" O. ವೀರಭದ್ರಯ್ಯ

ಪ್ರಾಥಮಿಕ

ಶ್ರೀಮತಿ A. ಇಂದಿರಾಬಾಯಿ
" B.V. ಸರೋಜಮ್ಮ
ಕುಮಾರಿ P. ಪಾರ್ವತಿ
ಕುಮಾರಿ H. ಶಾಂತ
" H. ಶಕುಂತಲ
" T G. ರೋಜಾವತಿ
" H.V. ಬಾಲಾಂಬ
" A. ಕಮಲಮ್ಮ
" B. ಸಾವಿತ್ರಿ
" A. ಸುಧಾಬಾಯಿ
" ಆ. ಪರಿಮಳಾಬಾಯಿ
" M. ಬೇಬಿಸರೋಜ
ಶ್ರೀ I. ವಾದಿರಾಜ
(ಪ್ರಥಮಶ್ರೇಣಿ)
ಶ್ರೀ A. ಕೃಷ್ಣಮೂರ್ತಿ
ಶ್ರೀ ಮಹಮದ್‌ವಜೀಯುದೀನ್
ಶ್ರೀ ಮತದವೀರಭದ್ರಯ್ಯ
ಶ್ರೀ ಮುಜಫರ್‌ಹುಸೇನ್ ಬಾಷಾ
ಶ್ರೀ S.K. ಗೋಪಾಲರಾವ್
ಶ್ರೀ H. ಆನಂದರಾವ್
ಶ್ರೀ M K. ಖಂಡೋಜಿರಾವ್
ಶ್ರೀ P. ವೆಂಕಟರಮಣಾಚಾರ್
ಶ್ರೀ S. S. ನಾಗರಾಜರಾವ್
ಶ್ರೀ S.V. ಮಲ್ಲೇಶಪ್ಪ

ನೂತನ ಮೈಸೂರು ಮಂಡಲ

ನೂತನ ಮೈಸೂರು ಪ್ರಾಂತ್ಯದ ಮಂತ್ರಿ ಮಂಡಲದಲ್ಲಿ 10_12 ಜನ ಮಂತ್ರಿಗಳು ಇರುವರೆಂದು, ನೂತನ ಮೈಸೂರು ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಎಸ್ ನಿಜಲಿಂಗಪ್ಪ ನವರು ತಿಳಿಸಿದರು.

ಅವರು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಸಭೆಯಲ್ಲಿ ಹಾಜರಾಗಿ ತಾವು ಭಾವಿ ಮಂತ್ರಿಗಳಾಗಿ ಶಿಫಾರಸುಮಾಡಿಕೊಳ್ಳಲು ಯೋಚಿಸಿರುವ ವ್ಯಕ್ತಿಗಳ ಪಟ್ಟಿಯನ್ನು ಒಪ್ಪಿಸಿದರೆಂದೂ, ಆದರೆ ಅಂತಿಮ ನಿರ್ಧಾರವೇನೂ ಆಗಿಲ್ಲವೆಂದು ಗೊತ್ತಾಗಿದೆ.

ನೂತನ ಆಂಧ್ರ ಪ್ರದೇಶದ ಶಾಸನ ಸಭಾ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಎನ್. ಸಂಜೀವರೆಡ್ಡಿಯವರೂ ತಮ್ಮ ಪಟ್ಟಿಯನ್ನು ಬೋರ್ಡಿಗೆ ಸಲ್ಲಿಸಿದರು 14 ಜನ ಮಂತ್ರಿಗಳು ಅವರ ಮಂತ್ರಿ ಮಂಡಲದಲ್ಲಿರುವರೆಂದು ನಿರೀಕ್ಷಿಸಿದೆ.

★ ಚಾಳೀಸಿನ ಚಾಳಿ ★

ಕಪ್ಪೆಯನ್ನು ಸೃಷ್ಟಿಸುವಾಗ ಬ್ರಹ್ಮ ಅವಕ್ಕೆ ಕಣ್ಣಿನ ರಕ್ಷಣೆಗೆಂದು ವಿಶೇಷವಾದೊಂದು ವ್ಯವಸ್ಥೆ ಮಾಡಿಟ್ಟಿದ್ದಾನೆ. ಕಣ್ಣಿನ ಪ್ರದೇಶವಲ್ಲಿ ಅದಕ್ಕೊಂದು ವಾರದರ್ಶಕ ಪರದೆಯಿದೆ. ಇದುವೇ ಮುಂಡೂಕ ಮಹಾಶಯನ ಸಹಜ ಸುಲೋಚನ. ಅರ್ಥಾತ್ ಕನ್ನಡಕ ಅದರಿ ಸುದ್ದಿವಕ್ಕೆ ಮಾನವನೂ ಪಮುಡೂಕವಲ್ಲವಷ್ಟೆ. ಆತನ ಬುರುಡೆಯನ್ನು ಮಿದುಳಿಂದ ಪದಾರ್ಥದಿಂದ ಪರಮಾತ್ಮನು ತುಂಬಿಸಿದುದರಿಂದ, ಉಪರ್ಯುಕ್ತ ವ್ಯವಸ್ಥೆಯನ್ನು ಕಣ್ಣಿನ ಮಟ್ಟಿಗೆ ನಿರ್ಮಿಸಲಿಲ್ಲ. ಆದರೂ ಅಂತಹುದನ್ನು ಮನುಷ್ಯನೇ ಬುದ್ಧಿವಂತಿಕೆಯಿಂದ ಮಾಡಿದ್ದಾನೆ. ಆದಾಗ್ಯೂ, ಕನ್ನಡಕವನ್ನು ಸಲೀಸಾಗಿ ಇಡಲೋ ಎಂಬಂತೆ ಕ್ರಮುಗೊಂಡಿರುವ ಮೂಗು, ಕಿವಿಗಳ ಬಗ್ಗೆ ನಾವು ಭಗವಂತನಿಗೆ ಶತಜ್ಞರಾಗಿರಲೇಬೇಕು.

ಇಂದು ಈ ಚಾಳೀಸಿನ ಚಾಳಿಯ ಗಾಳ ಎಷ್ಟು ಬಿರುಸಾಗಿ ಬೀಸಿದೆಯೆಂದರೆ ಅದನ್ನು ಧರಿಸುವ ವಿದ್ಯಾವಂತನೇ ತೆ ಕಾಣಿಸುವುದಿಲ್ಲ ನಾಗರೀಕತನದ ದ್ಯೋತಕವೇ ಕನ್ನಡಕ ಎಂಬಷ್ಟರವರೆಗೂ ಈ ಭ್ರಮೆ ಹಂದಂತೆ ತೋರುತ್ತದೆ. ಈ ಆಧುನಿಕ ಯುಗದಲ್ಲಿ ಬರುಬರುತ್ತ ಏಕೆ ಹೀಗೆ ಕಣ್ಣಿಗೆ ಕೇಡುಂಟಾಗುವುದೋ ತಿಳಿಯದು ನೋಡಿ, ಸೂಟು, ಬೂಟು, ನೆಕ್‌ಟೈಗಳಿಂದ ಶೋಭಿಸುವ ನವನಾಗರಿಕನೊಬ್ಬನು ಕನ್ನಡಕವೊಂದನ್ನು ಧರಿಸಿದ್ದರೆ ಜೀತನಲ್ಲಿ ಏನೋ ಲೋಪವಿದ್ದಂತೆ ಕಾಣುವುದಿಲ್ಲವೆ? ಅಂತಹ ಪರಿಪೂರ್ಣತೆಯ ಕುರುಹೇ ಈ ಕನ್ನಡಕ. ಆದರೆ ಆಶ್ಚರ್ಯವೇನೆಂದರೆ ಹವ್ಯೆಯ ಚಾಳೀಸುದಾರರು ತಾವು ಅರೆಗುರುಡರೆಂಬುದನ್ನು ಮರೆತೇ ಬಿಟ್ಟುಬಿಡುತ್ತಾರೆ.

ಈಗಿನ ಹೊಸ ಮಾದರಿಯ ನಾನಾವಿಧ ಸುಲೋಚನಗಳ ವರ್ಣನೆ ಅನವಶ್ಯವಷ್ಟೆ. ಕನ್ನಡಕದ ಚೌಕಟ್ಟು ದಪ್ಪವಾದಷ್ಟು ಗಾಂಭೀರ್ಯ ಹೆಚ್ಚು. ಸಪೂರ, ಸರಿಗೆಯ ಚೌಕಟ್ಟಿನಕಾಲ ಹೋಯಿತು.

ಬಣ್ಣದ ಚಾಳೀಸಿನ ಬಿನ್ನಾಣವನ್ನು ತಿಳಿದೇ ಇವೆ. ಇದು ಬಿಸಿಲ ಬೇಗೆಯನ್ನು ತಡೆಯುವುದಲ್ಲದೆ, ಸ್ವಚ್ಛಂದವಾಗಿ, ಕಣ್ಣಿನ ಉಪಯೋಗ ಮಾಡಿಕೊಳ್ಳಲು ನೇರವಾಗುವುದು. ಪಾದರಸವೋ ಬೆಳ್ಳಿಯ ಲವಣ ಸವರಿದ ಗಾಜು, ಇವೆಯಲ್ಲ, ಅದರೊಗಿನ ಕಣ್ಣಿನ ಚಲನಗಳನ್ನು ಕಂಡುಹಿಡಿಯಯಾವ ಸೂಕ್ಷ್ಮದರ್ಶಕ್ಕೂ ಸಾಧ್ಯವಿಲ್ಲ. ಜೊತೆಗೆ, ನೋಡುವವರ ಕಣ್ಣನ್ನೆ ಕುಕ್ಕುತ್ತವೆ ಅವು. ಇನ್ನು ಕುಮರಿ ಕಣ್ಣಿಗಿಕ್ಕುವಂತಹ ಚರ್ಮದ ಸುತ್ತಿನ ಚಾಳೀಸುಗಳೂ ಇವೆ.

ನಾಲ್ಕು ಹನಿ ಕಣ್ಣೀರು ಹೇಗೋ ಉದರಿದರಾಯಿತು ಕೂಡಲೇ ನೇತ್ರವೈದ್ಯರಲ್ಲಿಗೆ ಓಟ. ಕಣ್ಣಿಗೆ ಎಣ್ಣೆ ಹಚ್ಚಿಕೊಂಡು ಕಾಯವ ಈ ನಯನ ಬ್ರಹ್ಮನು ಕಣ್ಣನ್ನು ವಿಧವಿಧವಾಗಿ ಪರೀಕ್ಷಿಸಿ, ಹೊಸ ಮಾದರಿಯ ಫ್ಯಾಶನೇಬಲ್ ಕನ್ನಡಕ ತೊಡಿಸಿ, ತಮ್ಮ ಪಾಲಿನ ಹವಿಸ್ಸನ್ನು ಪಡೆಯುತಾನೆ. —ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ— ಅಲ್ಲವೆ? ಕಣ್ಣಿನ ರಕ್ಷಣೆಗೆ ಜನರು ಎಷ್ಟು ಬೇಕಾದರೂ ವೆಚ್ಚಮಾಡಲು ಸಿದ್ಧ. ಇಲ್ಲದಿದ್ದರೆ, ಈ ಸೌಂದರ್ಯಪೂರಿತ ಪ್ರಪಂಚದಲ್ಲಿ ಬಾಳುವುದು ಹೇಗೆ ಸಾಧ್ಯವಾದೀತು?

ಶೀರ್ಷಾಸನ ಮಾಡಿ ಕಣ್ಣಿನಕೊರತೆ ದೂರವಾಗುತ್ತದೆ. ಎಂದರೆ ಯಾರಿಗೆಬೇಕ್ಕ ಈ ಗೊಡ್ಡು ಉಪದೇಶ? ಅದಕ್ಕೆಲ್ಲ ತಾಳ್ಮೆ ಎಲ್ಲಿಂದಬಂದೀತು? ಪುರುಸೊತ್ತು ಇಲ್ಲವೆನ್ನಿ ಕನ್ನಡಕ ಒಕ್ಕಿಸಿಕೊಂಡರೆ ರಗಳೆಯೇ ಇಲ್ಲ ವಲ್ಲ ಫ್ಯಾರೆನ್ಸಿಗೆ ಫ್ಯಾಶನ್ನೂ ಆಯಿತು ಅಲ್ಲದೆ, ಮೈಕೈಗಣ್ಣು ಹೂಗಣ್ಣುಗಳನ್ನೂ ಈ ಉಪಾಯದಿಂದ ಅಡಗಿಸಿ, ಸುಲಭವಾಗಿ ಜನರ ಕಣ್ಣಿಗೆ ಮಣ್ಣು ಎರಚಲಾಗುತ್ತದೆ.

ನಲವತ್ತು ವಯಸ್ಸಾಗುವಾಗ ಕೆಲವರಿಗೆ ದೂರದೃಷ್ಟಿಯೋ, ಸಮೀಪದೃಷ್ಟಿಯೋ ಆಗಿ ಕಣ್ಣಿನ ಕಸವು ತುಸು ಕಡಮೆಯಾದಂತೆ ಕಾಣಿಸುತ್ತದೆ. ಹೆಚ್ಚಿನ ಇಂತಹ ನ್ಯೂನತೆಯೆನ್ನು ಪ್ರಕೃತಿಯೇ ಸರಿಪಡಿಸುತ್ತದೆ. ಆ ನಂಬಿಕೆ ಇಲ್ಲದಾಗ ಪ್ರಕೃತಿಯ ವಿಕಾಸವೆಂದು ಮಾನವನೆಸಗುವ ವಿಕೃತಿಯ ಗುರಿಯಾಗಿದೆ.

ಕಣ್ಣಿನ ಕಾಂತಿ ಕುಗ್ಗಿ ದೃಷ್ಟಿಮಂದವಾದಲ್ಲಿ ಲಿಂಬೆರಸವನ್ನೋ, ಜೇನು, ಈರುಳ್ಳಿ ರಸವನ್ನೋ ಸುರಿಯುವ ಅಭ್ಯಾಸವುನಮ್ಮಿಂದ ಎಂದೋ ತೊಲಗಿಬಿಟ್ಟಿದೆ.

ನನಗೀಗ ಬೇಕೆನಿಸುವುದು ಯಾವುದಾದರೊಂದು ಲೋಷನ್ ಅಥವಾ ಒಂದು ಮಾತ್ರೆ ವಿಶೇಷವಿದ್ದಲ್ಲಿ ಕನ್ನಡಕ ಧರಿಸಿದರೆ ನಿಂದಾರ್ಹವಲ್ಲ. ಬೇಗನೇ ಕನ್ನಡಕ ಧರಿಸಿದಿದ್ದ ಸ್ಥಿತಿ ಗಂಭೀರವಾಗಬಹುದು, ಎಂದು ಎಚ್ಚರಿಸುವುದೇ ನೇತ್ರ ವೈದ್ಯರ ರೂಢಿ. ಏಕೆಂದರೆ ಸ್ವಲ್ಪ ಸಮಯ ಕಡೆದರೆ, ತಾನೇ ತಾನಾಗಿ ಕಣ್ಣು ಸರಿಯಾದರೆ?

ನಮ್ಮ ಹಿರಿಯರಲ್ಲಿ ಎಷ್ಟು ಮಂದಿ ದೃಷ್ಟಿದೋಷದಿಂದ ನರಳಿದ್ದಾರೆ? ಅವರದು ಸಂಕುಚಿತ ದೃಷ್ಟಿಯೆಂದು ನೀವು ಹಳಿದರೆ ನಮ್ಮ ದೂರದೃಷ್ಟಿಯಿಂದಲೇ ಈ ರೀತಿ ಕಣ್ಣಿಗೆ ಕೇಡು ಒದಗುವುದೆನ್ನುತ್ತೇವೆ. ನಿಮ್ಮೆಲ್ಲರಿಗೆ ತಿಳಿದಿರುವಂತೆ, ಗ್ರಾಮೀಣರಿಗಿಂತ ನಾಗರಿಕರಿಗೆ ನೇತ್ರಬಾಧೆ ಅಧಿಕವಾಗಿದೆ. ಇದಕ್ಕೆ ಕಾರಣಗಳೇನೆಂದರೆ, ಸದಾ ಕಣ್ಣು ಕುಕ್ಕುವ ಬಣ್ಣಗಳ ನೈಸರ್ಗಿಕ ನೋಟಗಳು, ಕ್ರಮ ತಪ್ಪಿದ ಓದು, ಸೀಮಿತವಾಗಳು, ನಿದ್ದೆಗೆಡುವುದು, ಎಡೆಬಿಡದೆ ವಾಹನ ಸಂಚಾರ ಇತ್ಯಾದಿ.

ನಾನು ಹೇಳುವುದಿಷ್ಟೇ ಅನಪೇಕ್ಷಿತವಾಗಿ ನಿಮ್ಮ ಕಣ್ಣುಗಳನ್ನು ದೃಷ್ಟಿಚಿಕ್ಕ ದೊಳಗಿಟ್ಟು ಅದಕ್ಕೆ ಪರಾವಲಂಬಿಗಳಾಗಬೇಡಿ. ಕಣ್ಣಿಗೆ ಕ್ರಮವಿಹಾರಿ, ಸ್ವಾತಂತ್ರ್ಯ ಕೊಟ್ಟು ಕಂಗಾಲರಾಗಬೇಡಿ.

ಕಣ್ಣು ಸಣ್ಣದು ತಾನು ತಣ್ಣಗಿಹುದೊಂದಲ್ಲಿ
ಕಣ್ಣಗಿಷ ಮಾನವಸುರಿಸುವುದು...
ಇಲ್ಲವೆ ಹೋದರೆ,ಕಣ್ಗೆ,ಕಾಲ್ಗೆ,ಕೇಡು

1954 ರ ನವಂಬರ್‌ನಲ್ಲಿ ಆರಂಭವಾದ ಅಲ್ಪ ಆದಾಯ ವರ್ಗದವರ ವಸತಿ ಗೃಹ ಯೋಜನೆಯ ಪ್ರಕಾರ ಇಲ್ಲಿಯವರೆಗೂ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಗಳಿಗೆ 12.74 ಕೋಟಿ ರೂಗಳ ಋಣವನ್ನು ಸಾಲವಾಗಿ ಕೊಟ್ಟಿದ್ದಾರೆ.

1954-55 ರಲ್ಲಿ ಕೇಂದ್ರ ಸರ್ಕಾರದವರು 28.78 ಲಕ್ಷ ರೂಗಳ ಬೆಲೆಬಾಳುವ ಖಾದಿಬಟ್ಟೆಯನ್ನು ಕೊಂಡಿದ್ದರು. 55-56 ರ ಸಾಲಿನಲ್ಲಿ 117 ಲಕ್ಷ ರೂಗಳ ಬೆಲೆಬಾಳುವ ಖಾದಿಯನ್ನು ಕೊಂಡಿರುವರು.

ಅಲಹಾಬಾದಿನ ಹತ್ತಿರ ಗಂಗಾನದಿಗೆ ಅಡ್ಡವಾಗಿ ನಿರ್ಮಿಸಿರುವ 6,830 ಅಡಿಗಳ ಉದ್ದವಿರುವ ಸೇತುವೆಯು ಭಾರತದಲ್ಲಿರುವ ಮೋಟರ್‌ಗೇಜ್ ರೈಲ್ವೇಸೇತುವೆಗಳಲ್ಲೆಲ್ಲಾ ಅತ್ಯಂತ ಉದ್ದವಾದ ಸೇತುವೆಯಾಗಿದೆ.

ನೆಗಡಿ, ಕೆಮ್ಮು, ದಮ್ಮು, ಉಬ್ಬಸ
ಶೀತಜ್ವರ, ಮಲೇರಿಯಾ, ಮತು
ಎಲ್ಲ ನೋವುಗಳಿಗೆ ದಿವ್ಯಾಮೃತ

ಕಾಶ್ಮೀರು ಅರುಕ್

ಲೇಪನೆ, ಸೇವನೆ - ಎರಡೂ ಸಾಧ್ಯ
ಎಲ್ಲಷಾಪುಗಳಲ್ಲೂ ದೊರೆಯುತ್ತದೆ

H. S. & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ಎಲ್ಲವನ್ನೂ
ಶುದ್ಧಪಡಿಸಲು
ಉತ್ತಮವಾದುದು

ಮೈಸೂರು ಬಾರ್ ಸೋಪ್

ಸಂಪೂರ್ಣವಾಗಿ ಶುದ್ಧವಾದ
ಯಾವ ಬೆರಕೆಯೂ, ಅಪಾಯಕರ ರಸಾಯನಿಕ
ದ್ರವ್ಯಗಳೂ ಇಲ್ಲದ

ಉತ್ಯುತ್ತಮವಾದ ಒಗೆಯುವ ಸಾಬೂನು

ಎಲ್ಲ ಕಡೆಯಲ್ಲಿಯೂ ದೊರೆಯುತ್ತದೆ.
ಗೌರ್ನಮೆಂಟ್ ಸೋಪ್‌ಫ್ಯಾಕ್ಟರಿ, ಬೆಂಗಳೂರು.
ಮೆಂಬರ್, ಐ. ಎಸ್ ಟಿ. ಎಂ. ಎ.

ಹಿಂದೀ ಪರೀಕ್ಷೆಗಳು

ಪ್ರಾಥಮಿಕ
ಪರೀಕ್ಷಾ ಶುಲ್ಕ 1-8-0
ಸುಗಮ ಹಿಂದೀ ಬೋಧಿನಿ
ಸುಗಮ ಹಿಂದಿ I
—„,— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)
ಮಧ್ಯಮಾ ಪರೀಕ್ಷಾ ಶುಲ್ಕ 3-0-0
ಸುಗಮ ಹಿಂದಿ 3
ಸಚ್ಚಾ ಇನ್ ಸಾಫ್
ಆದರ್ಶ ಚರಿತ್ರ
ಐತಿಹಾಸಿಕ ಕಹಾನಿ
ಹಿಂದೀರಚನೆ 2
ಪತ್ರಲೇಖನ
(ಸೆಟ್ ಬೆಲೆ 4-4-0)
ಇತರ ವಿವರಗಳಿಗೆ ಸ್ಟ್ಯಾಂಪಿಟ್ಟು ಅಥವಾ
ರಿಪ್ಲೈಕಾರ್ಡು ಬರೆಯಿರಿ.
ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ 3

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.
(Regd. M. No. 4746)

To

Sri _____

_____

_____

Edited, Printed & Published by T. B. KESHAVA RAO at Nava Bharat Printing Press, Bellary.

ನವಚೈತನ್ಯ

ಸೋಮವಾರ ನವೆಂಬರ್ 5-11-1956

ವರ್ಷ ೨೧ ಸಂಚಿಕೆ ೩೫	ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. ಉತ್ತಿಷ್ಠತ! ಜಾಗೃತ!! ಪ್ರಾಪ್ಯವರಾನ್ನಿಬೋಧತ !!!	ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್

ಜಯ ಹಿಂದ್-ಜಯಹಿಂದ್



ಭಾರತದ ರಾಜ್ಯಗಳು :— 14
ಕೇಂದ್ರಾಡಳಿತ ಪ್ರದೇಶಗಳು :— 6

1) ಆಂಧ್ರಪ್ರದೇಶ
2) ಅಸ್ಸಾಂ
3) ಬಿಹಾರ್
4) ಮುಂಬೈ
5) ಜಮ್ಮು ಮತ್ತು ಕಾಶ್ಮೀರ
6) ಕೇರಳ
7) ಮಧ್ಯಪ್ರದೇಶ
8) ಮದರಾಸ್
9) ಮೈಸೂರು
10) ಒರಿಸ್ಸಾ
11) ಪಂಜಾಬ್
12) ರಾಜಾಸ್ಥಾನ
13) ಉತ್ತರ ಪ್ರದೇಶ
14) ಪಶ್ಚಿಮ ಬಂಗಾಳ

1) ದೆಹಲಿ
2) ಹಿಮಾಚಲ ಪ್ರದೇಶ
3) ಮಣಿಪುರ
4) ತ್ರಿಪುರ
5) ಅಂದಮಾನ್ ನಿಕೋಬಾರ್
6) ಲಕ್ಷದ್ವೀಪ

ನೂತನ ಮೈಸೂರು ಮಂತ್ರಿ ಮಂಡಲ

ಶ್ರೀಮನ್ಮಹಾರಾಜ ಶ್ರೀಮಜ್ಜಯ ಚಾಮರಾಜ ಒಡೆಯರ್‌ರು 1-11-56 ರಂದು 10-30 ಕ್ಕೆ ಬೆಂಗಳೂರಿನ ಅರಮನೆಯ ಲ್ಲಿ ನೂತನ ಮೈಸೂರಿನ ಗೌರ್ನರ್ ಆ ಪ್ರಮಾಣವಚನ ಸ್ವೀಕಾರ ಮಾಡಿದರು.

ಆನಂತರ ಶ್ರೀ ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದರು.

ಮಂತ್ರಿವರ್ಗದಲ್ಲಿ ಶ್ರೀ ನಿಜಲಿಂಗಪ್ಪನವರನ್ನೊಳಗೊಂಡು 12 ಜನ ಮಂತ್ರಿಗಳನ್ನು ತೆಗೆದುಕೊಳ್ಳಲಿದ್ದಾರೆ.

೧) ಶ್ರೀ ಎಸ್. ನಿಜಲಿಂಗಪ್ಪ
೨) ಶ್ರೀ ಕೆ. ಮಂಜಪ್ಪ
೩) ಶ್ರೀ ಎ. ಬಿ. ಶೆಟ್ಟಿ
೪) ಶ್ರೀ ಎಂ.ಪಿ. ಪಾಟೀಲ್
೫) ಶ್ರೀ ಸಿ. ಎಂ. ಪೂಜಾಚ್ಚ
೬) ಶ್ರೀ ಹೆಚ್ ಎಸ್. ರುದ್ರಪ್ಪ
೭) ಶ್ರೀ ಜನ್ನಾಥರಾವ್ ಚುಂಡ್ರಿಕೆ :
೮) ಶ್ರೀ ಟಿ. ಮರಿಯಪ್ಪ
೯) ಶ್ರೀ ಎ. ವಿರಾನರಾವ್
೧೦) ಶ್ರೀ ಆರ್ ಚೆನ್ನಿಗರಾಮಯ್ಯ
೧೧) ಶ್ರೀ ಎ. ಶೀಮಪ್ಪನಾಯಕ್
೧೨) ಶ್ರೀ ಹಚ್.ಕೆ ವೀರಣ್ಣಗೌಡ

★ ರಾಜ್ಯಗಳ ಪುನರ್ವಿಂಗಡನೆ ★

ಭಾರತದ ಹಿಂದಿನ ದೇಶೀ ರಾಜ್ಯಗಳ ವಿಲಯನವು ಒಂದು ಅತ್ಯಂತ ಮಹತ್ವಪೂರ್ಣವಾದ ಐತಿಹಾಸಿಕ ಘಟನೆಯಾಗಿತ್ತು. ಆದರೆ ಆ ಸಮಯದಲ್ಲಿ ಕೈಗೊಂಡ ಪ್ರಜಾತಂತ್ರ ಶಾಸನ ಕ್ರಮಗಳಲ್ಲಿ ಹಳೆಯ ಶಾಸನ ಪದ್ಧತಿಗಳ ಕೆಲವಂಶಗಳು ಹಾಗೆಯೇ ಉಳಿದುಕೊಂಡವು ಆದರ ಪರಿಣಾಮವಾಗಿ ಕೆಲವು ಪ್ರದೇಶಗಳು ದೊಡ್ಡವೂ ಕೆಲವು ಚಿಕ್ಕವೂ ಆಗಿ ಉಳಿದುಕೊಂಡವು. ಒಂದು ಶತಮಾನಕಾಲದಿಂದ ವಿಭಿನ್ನ ಪ್ರಾದೇಶಿಕ ಭಾಷೆಗಳ ವಿಕಾಸ ವಾದುದರ ಪ್ರಭಾವದಿಂದಾಗಿ ವಿಭಿನ್ನ ಭಾಷೆಗಳು ಜನರಲ್ಲಿ ಭಾವನಾ ಸ್ಥಾನವಾಯಿತು. ಆದು ಭಾಷಾ ವಾರು ರಾಜ್ಯಗಳ ಬೇಡಿಕೆಯನ್ನೇ ಡುವುದಕ್ಕೆ ಕಾರಣವಾಯಿತು. ಆದರಜೊತೆಗೆ ರಾಷ್ಟ್ರೀಯ ಯೋಜನೆಯ ದೃಷ್ಟಿಯಿಂದ ದೇಶದರ್ಶಂಪೂರ್ಣ ಸಾಧನೆಗಳನ್ನು ಉಪಯೋಗಿಸುವುದಕ್ಕೂ ಕೂಡ ರಾಜ್ಯಗಳನ್ನು ಈ ರೀತಿ ಪುನರ್ವಿಂಗಡಿಸುವುದು ಅವಶ್ಯಕವೆಂದೂ ಸಂಪೂರ್ಣ ರಾಷ್ಟ್ರದ ಆರ್ಥಿಕ ಪ್ರಗತಿಯಾಗುವುದೆಂದೂ ತಿಳಿಯಲಾಯಿತು. ಇದರಿಂದಾಗಿ ಸಂಪೂರ್ಣ ರಾಷ್ಟ್ರದ ಪ್ರಗತಿಯ ಜೊತೆಗೇ ಪ್ರತ್ಯೇಕ ರಾಜ್ಯಗಳ ಜನಹಿತ ರಕ್ಷಣೆಯೂ ಆಗುವಂತೆ ಈ ಸಮಸ್ಯೆಗೆ ಸಮರ್ಪಕ್ಷ ಭಾವದಿಂದ ಪರಿಹಾರವನ್ನು ಕಂಡುಹಿಡಿಯಬೇಕಾಯಿತು. ಈ ಎಲ್ಲಾ ವಿಚಾರಗಳನ್ನೂ ಗಮನದಲ್ಲಿಟ್ಟುಕೊಂಡು ರಾಜ್ಯಗಳನ್ನು ಈ ರೀತಿ ಪುನರ್ವಿಂಗಡಿಸಲಾಗಿದೆ.

ಭಾರತದಲ್ಲಿ ರಾಜ್ಯಗಳ ಈ ಪುನರ್ವಿಂಗಡನೆ ವಿಶ್ವದ ಪ್ರಜಾತಂತ್ರ ಸರ್ಕಾರಗಳ ಇತಿಹಾಸದಲ್ಲಿ ಒಂದು ಅಭೂತ ಪೂರ್ವ ಘಟನೆಯಾಗಿದೆ. ಇದುವರೆಗೂ ವಿಶ್ವದಲ್ಲಿ ಯಾವ ಕಡೆಯಲ್ಲಿಯೂ ಇಂಥ ದೊಡ್ಡ ಕಾರ್ಯವನ್ನು ಕೈಗೊಳ್ಳುವ ಪ್ರಯತ್ನ ನಡೆದಿಲ್ಲ. ವಿಶ್ವದ ಯಾವುದೇ ಪ್ರಮುಖ ಫೆಡರೇಷನ್‌ಗಳಲ್ಲ ಇಂತಹ ಕಾರ್ಯವನ್ನು ಅಸಾಧ್ಯವಲ್ಲದಿದ್ದರೂ, ಕಷ್ಟತರವೇನಿಸಿ ಏಕೆಂದರೆ ಸಂಬಂಧಪಟ್ಟ ರಾಜ್ಯಗಳಜನರ ಅನುಮತಿಯ ವಿನಃ ಗಡಿಗಳು ಥವಾ ಪ್ರದೇಶಗಳಲ್ಲಿ ಬದಲಾವಣೆಯನ್ನು ಮಾಡುವುದಕ್ಕೆ ಸಂವಿಧಾನ ಪ್ರತಿಬಂಧವಿರುವುದು ವಿಶ್ವದ ಬಹುಶೀಕ ಫೆಡರೇಷನ್‌ಗಳು ತಮ್ಮ ಪ್ರಾದೇಶಿಕವೈಷಮ್ಯಗಳನ್ನು ಹೊಂದಿದ್ದು ದೃಢವಾಗಿ ಸ್ಥಾಪಿತವಾಗಿದ್ದ ರಾಜ್ಯಗಳು ಸರ್ಕಾರದಿಂದ ರೂಪಗೊಂಡಿವೆ.

ಸ್ವಾತಂತ್ರ ಪ್ರಾಪ್ತಿಯಾಗುವುದಕ್ಕೆ 50 ವರ್ಷಗಳ ಮೊದಲೇ ರಾಜ್ಯಗಳ ಪುನರ್ವಿಂಗಡನೆಯ ಬೇಡಿಕೆ ಆರಂಭವಾಗಿತ್ತು. ಆದರೆ ಆ ಸಮಯದಲ್ಲಿ ಈ ಬೇಡಿಕೆ ಕೇವಲ ಭಾಷಾ ದೃಷ್ಟಿ ಕೋಣವನ್ನವಲಂಬಿಸಿತ್ತು. ಭಾರತದ ರಾಷ್ಟ್ರೀಯ ಕಾಂಗ್ರೆಸ್ ಪ್ರಥಮತಃ ಭಾಷಾವಾರು ರಾಜ್ಯಗಳ ಸ್ಥಾಪನೆಗಾಗಿ ಬೇಡಿಕೆಯನ್ನು ಅಪ್ರತ್ಯಕ್ಷರೂಪದಲ್ಲಿ ಸಮರ್ಥನೆ ಮಾಡತೊಡಗಿತು. ಆದರೆ 1920 ರಲ್ಲಿ ನಾಗಪುರ ಅಧಿವೇಶನದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಇದನ್ನು ಒಂದು ರಾಜಕೀಯ ಗುರಿಯನ್ನಾಗಿ ಅಂಗೀಕರಿಸಿ 1948 ರವರೆಗೂ ಈ ಗುರಿಯನ್ನಿಟ್ಟುಕೊಂಡು ಬಂದಿತು. ಆನಂತರಸಂ ವಿಧಾನ ಸಭೆಯು ಧಾರ್ ಸಮಿತಿಯನ್ನು ನಿಯಮಿಸಿತು ಈ ಸಮಿತಿಯು ರಾಜ್ಯಗಳಪುನರ್ವಿಂಗಡಣೆಯನ್ನು ಕೈಗೊಳ್ಳುವ ಸಮಯದಲ್ಲಿ ಆದರ ಆಡಳಿತ ಅನುಕೂಲತೆಗಳನ್ನು ಹೆಚ್ಚು ಗಮನದಲ್ಲಿಟ್ಟುಕೊಂಡಿರಬೇಕೆಂದು ಭಾಷಾ ಐಕ್ಯತೆಯ ತತ್ವವು ಆದರಲ್ಲಿಯೇ ಅಂತರ್ಗತವಾಗಿರಬೇಕೆಂದೂ ಅಭಿಪ್ರಾಯಪಟ್ಟಿತು. ಧಾರ್ ಸಮಿತಿಯ ಆಧಾರದ ಮೇಲೆ ಈ ಸಮಸ್ಯೆಯನ್ನು ಮತ್ತೆ ಸಮಾಲೋಚನೆ ನಡೆಸಲು ರಾಷ್ಟ್ರೀಯಕಾಂಗ್ರೆಸ್ ಜಯಪುರ ಅಧಿವೇಶನದಲ್ಲಿ ಜೆ. ವಿ. ಪಿ. ಸಮಿತಿಯನ್ನು ನಿಯಮಿಸಿತು. ಈ ಸಮಿತಿಯ ಭಾಷಾದೃಷ್ಟಿಕೋಣದಿಂದಲೇ ವರದಿಯನ್ನು ಸಲ್ಲಿಸಿತು.

ರಾಜ್ಯಗಳ ಪುನರ್ವಿಂಗಡನೆಯಸ್ಸನ್ನೆಯನ್ನು ವಿಚಾರಮಾಡುವ ಸಮಯದಲ್ಲಿ ದೇಶದ ಐಕ್ಯತೆ ಮತ್ತು ಸುರಕ್ಷತೆ ಸಾಂಸ್ಕೃತಿಕ ಹಾಗೂ ಭಾಷಾಸಂಬಂಧ ಆಡಳಿತ ಅನುಕೂಲ, ಆರ್ಥಿಕಸ್ಥಿತಿ ಮತ್ತು ರಾಷ್ಟ್ರೀಯ ಯೋಜನೆಗಳಲ್ಲಿ ಅಂತರ್ಗತವಾಗಿರುವ ಆರ್ಥಿಕ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು ಸಮಾರೋಪಿಸಿಸ ತೊಡಗಲಾಯಿತು.

ಕಮೀಷನ್ನಿನ ಕೆಲಸ

ಭಾರತ್ ಸರ್ಕಾರದವರು 1953 ರ ಡಿಸೆಂಬರ್ 29 ರಂದು ರ್ಯಾಗಳ ಪುನರ್ವಿಂಗಡಣಾ ಕಮಿಷನ್ನನ್ನು ನೇಮಿಸಿದರು ಶ್ರೀ ಸೈಯದ್ ಫಜಲ್ ಅಲಿಯವರು ಈ ಕಮಿಷನ್ನಿನ ಅಧ್ಯಕ್ಷರೂ ಶ್ರೀ ಹೃದಯನಾಥ ಕುಂಜ್ರು ಮತ್ತು ಶ್ರೀ ಕಮಲಂ ಮಾಧವ ಪಣಿಕ್ಕರ್ ಕಮಿಷನ್ನಿನ ಸದಸ್ಯರೂ ಆಗಿದ್ದರು.

ಈ ಕಮಿಷನ್ನಿನವರು ದೇಶದ 104 ಸ್ಥಳಗಳಲ್ಲಿ ಪ್ರವಾಸಕೈಗೊಂಡು ಸುಮಾರು 9,000 ಜನರನ್ನು ಭೇಟಿಮಾಡಿದರು. ವೈಕಿಗಳಿಂದೆ, ಪಕ್ಷಗಳಿಂದ ಮತ್ತು ಸಂಘಗಳಿಂದ ಸ್ವೀಕರಿಸುವಾರು 1,52,250 ಮನವಿ ಪತ್ರಗಳನ್ನು ಸ್ವೀಕರಿಸಿ ಪರಿಶೀಲಿಸಿದರು.

ಈ ಕಮಿಷನ್ನಿನವರು 1955 ನೇ ಸೆಪ್ಟೆಂಬರ್ 30 ರಂದು ತಮ್ಮ ವರದಿಯನ್ನು ಸಲ್ಲಿಸಿದರು. ಆದರಲ್ಲಿ ಅವರು ಭಾರತದಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಎಂಬ ಎರಡು ವಿಭಾಗಗಳಿರಬೇಕೆಂದು ಶಿಫಾರಸು ಮಾಡಿರುವರು. ಕ್ಲಿಷ್ಟತರವಾದ ಎ ಬಿ ಮತ್ತು ಸಿ ವಿಭಾಗ ರಾಜ್ಯಗಳ ವ್ಯವಸ್ಥೆ ಸಮರ್ಪಕವಾಗಿರುವುದಿಲ್ಲವೆಂದು ತಮ್ಮ ವರದಿಯನ್ನು ತಿಳಿಸಿದರು. ಕಮಿಷನ್ನಿನವರು ಸೂಚಿಸಿದ ರಾಜ್ಯಗಳಾವುವೆಂದರೆ ಮದರಾಸು, ಕೇರಳ ಕರ್ನಾಟಕ, ಹೈದ್ರಾಬಾದ್, ಆಂಧ್ರ ಮುಂಬೈ, ವಿದರ್ಭ, ಮಧ್ಯಪ್ರದೇಶ,ರಾಜಸ್ಥಾನ, ಪಂಜಾಬು, ಉತ್ತರಪ್ರದೇಶ ಬೀಹಾರ್, ಪಶ್ಚಿಮಬಂಗಾಳ, ಅಸ್ಸಾಂ ಒರಿಸ್ಸಾ, ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶಗಳಾವುವೆಂದರೆ ದೆಹಲಿ ಮಣಿಪುರ ಮತ್ತು ಅಂದಮಾನಿಕೋಬಾರ್ ದ್ವೀಪಗಳು ಹಿಮಾಚಲಪ್ರದೇಶವನ್ನೂ ಕೂಡ ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಬೇಕೆಂದು ಕಮಿಷನ್ನಿನ ಅಧ್ಯಕ್ಷರು ಶಿಫಾರಸ್ಸು ಮಾಡಿದ್ದರು ಸರ್ದಾರ್ ಪಣಿಕ್ಕರ್ ರವರು ಉತ್ತರಪ್ರದೇಶ ಮಧ್ಯಭಾರತ ಹಾಗೂ ವಿಂಧ್ಯಪ್ರದೇಶಗಳ ಕೆಲವು ಭಾಗಗಳನ್ನೊಳಗೊಂಡ ಆಗ್ರಾ ರಾಜ್ಯವನ್ನು ಸ್ಥಾಪಿಸಬೇಕೆಂದು ಸಲಹೆ ಮಾಡಿದರು.

ಜನಾಭಿಪ್ರಾಯ ಸಂಗ್ರಹಣೆ

ಜನಾಭಿಪ್ರಾಯವನ್ನು ಸಂಗ್ರಹಿಸುವುದಕ್ಕಾಗಿ ಕಮಿಷನ್ನಿನ ಪನವಿಯನ್ನು 1955 ರ ಅಕ್ಟೋಬರ್ 10 ರಂದು ಬಿಡುಗಡೆಮಾಡಲಾಯಿತು. ಶಿಫಾರಸುಗಳ ಉನ್ನತಾಧಿಕಾರ ಪಡೆದ ಕಮಿಷನ್ನಿನಿಂದ ಸೂಚಿತವಾದವು. ರಾಜ್ಯಗಳ ಪುನರ್ವ್ಯವಸ್ಥೆಯ ವಿವಿಧ ವಿಚಾರಗಳ ಬಗ್ಗೆ ನಡೆಸಿದ ವಿಸ್ತಾರವಾದ ಪರಿಶೀಲನೆಯ ಪರಿಣಾಮವಾಗಿ ಈ ಶಿಫಾರಸ್ಸನ್ನು ಮಾಡಲಾಯಿತು. ವಿಷಯಗಳು ವಿವಾದ ಗ್ರಸ್ತವಾಗಿದ್ದುದರಿಂದ ಭಾರತ ಸರ್ಕಾರದವರು ತಮ್ಮ ಅಂತಿಮ ನಿರ್ಧಾರಗಳನ್ನು ಮಾಡುವುದಕ್ಕೆ ಮೊದಲು ವರದಿಯ ಬಗ್ಗೆ ಸುದೀರ್ಘವಾದ ಪರ್ಯಾಲೋಚನೆಗೆ ಅವಕಾಶವೀಯಬೇಕೆಂದು ಅಪೇಕ್ಷಿಸಿಪಟ್ಟರು.

(3 ನೇ ಪುಟಕ್ಕೆ)

NAVA BHARAT

ನವಭಾರತ

ಸಂಪಾದಕ-ಪ್ರಭುಶಂಕರ

ಸೋಮವಾರ, ನವೆಂಬರ್ 5-11-56

ಈಜಿಪ್ಟಿನ ಮೇಲೆ ಅತ್ಯಾಚಾರ

ಇಸ್ರಾಯಿಲ್, ಫ್ರಾನ್ಸ್, ಬ್ರಿಟನ್‌ಗಳ ಒಳಸಂಚು

ಈಜಿಪ್ಟು ಸೂಯಸ್ ಕಾಲುವೆಯನ್ನು ರಾಷ್ಟ್ರೀಕರಣ ಮಾಡಿದನಂತರ ಬ್ರಿಟನ್ ಫ್ರಾನ್ಸ್‌ಗಳು ಈಜಿಪ್ಟಿನ ಮೇಲೆ ದಂಡೆತ್ತಿ ಹೋಗಲಿಲ್ಲವೆಂದು ಹಿಂಜರಿಕೆಯಿಂದ ಮತ್ತು ಪ್ರಪಂಚಾಭಿಪ್ರಾಯವು ಈಜಿಪ್ಟಿಗೆ ಬೆಂಬಲವಿದ್ದುದರಿಂದ, ಬ್ರಿಟನ್ ಫ್ರಾನ್ಸ್‌ಗಳ ಯುದ್ಧಾಸಕ್ತಿಗೆ ತಡೆಯಿದ್ದಿತು.

ಆದರೆ ಕಳೆದ 30 ತಾ. ಬ್ರಿಟನ್ ಫ್ರಾನ್ಸ್‌ಗಳು ಈಜಿಪ್ಟಿಗೆ 12 ಗಂಟೆ ಎಚ್ಚರಿಕೆ ಕೊಟ್ಟು ಇಸ್ರಾಯಿಲ್ ಈಜಿಪ್ಟ್ ಯುದ್ಧವುಸಿಲ್ಲದಿದ್ದರೆ ತಾವು ಪ್ರವೇಶಿಸಿ ಸೂಯಸ್ ಕಾಲುವೆಯನ್ನು ಅಕ್ರಮಿಸುವುದಾಗಿ ಹೇಳಿ, ಆ ಕಾಲಾವಧಿ ಮುಗಿದೊಡನೆ ಈಜಿಪ್ಟಿನಮೇಲೆ ದಂಡೆತ್ತಿ ಅವರ ಪ್ರಪೇಕಗಳನ್ನ ಬಾಂಬುಮಾಡುತ್ತಲಿವೆ. ಬ್ರಿಟನ್ ಫ್ರಾನ್ಸ್‌ಗಳ ಈ ಹ್ಯೇಯಕೃತ್ಯದಿಂದ ನಾಗರೀಕ ಪ್ರಪಂಚವೇ ಛಿದ್ರಿಗೊಂಡು, ಸಾಮ್ರಾಜ್ಯದಾಹದ ಈ ರಾಷ್ಟ್ರಗಳನ್ನು ಖಂಡಿಸುತ್ತಿದೆ. ಇಸ್ರಾಯಿಲ ಅರಬ್‌ರಾಷ್ಟ್ರಗಳ ದ್ವೇಷವನ್ನು ನೆಪಮಾಡಿಕೊಂಡು ಇಸ್ರಾಯಿಲನ್ನು ತನ್ನ ಸ್ವಾರ್ಥಸಾಧನೆಗಾಗಿ ಉಪಯೋಗಿಸಿಕೊಳ್ಳಲು ಈ ಒಳಸಂಚನ್ನು ಹೂಡಿದ ಬ್ರಿಟನ್ ಫ್ರಾನ್ಸ್‌ಗಳ ಘಾತುಕತನವು ಸಾಮಾನ್ಯ ನಿರಕ್ಷರಸ್ಥನಿಗೂ ಹೊಳೆಯುವಷ್ಟು ಇರುವುದಿಲ್ಲ.

ನಗ್ನ ಆಕ್ರಮಣವೆಂದು ಶ್ರೀ ನೆಹರು ರವರು ಹೇಳಿರುವುದನ್ನು ಎಲ್ಲರೂ ಒಪ್ಪಿರುತ್ತಾರೆ. ಆತ್ಮಗೌರವ, ಸ್ವಾತಂತ್ರ್ಯಪ್ರೇಮಿಗಳಾದ ಅರಬ್‌ರಾಷ್ಟ್ರಗಳೆಲ್ಲವೂ ರಕ್ಷಣೆಗಾಗಿ ಈಗ ಕಾದಾಡಲು ದೃಢನಿರ್ಧಾರವನ್ನು ಕೈಗೊಂಡಿವೆ ಇಂಗ್ಲೆಂಡ್ ಫ್ರಾನ್ಸ್‌ಗಳ ಈ ಕೃತ್ಯದಿಂದ ವಿಶ್ವ ಯುದ್ಧವಾಗುವ ಸಂಭವವೂ ಇದೆ. ವಿಶ್ವಯುದ್ಧವಾದಲ್ಲಿ ಪ್ರಥಮವಾಗಿ ನಾಶವಾಗುವ ರಾಷ್ಟ್ರಗಳು ಇಂಗ್ಲೆಂಡ್ ಮತ್ತು ಫ್ರಾನ್ಸು.

ಪ್ರಪಂಚದ ಅಭಿಪ್ರಾಯವನ್ನು ಗಮನಿಸಿ ಹಿಂತೆಗೆದ ಶತಮಾನಗಳ ಸಾಮ್ರಾಜ್ಯದಾಹವನ್ನು ಬದಿಗೊತ್ತಿ ಬ್ರಿಟನ್ ಫ್ರಾನ್ಸ್‌ಗಳು ಕಾಲ್ತೆಗೆಯುವುದು ತಮ್ಮ ಹಿತಕ್ಕಷ್ಟೇ ಅಲ್ಲ, ಪ್ರಪಂಚದ ಕಲ್ಯಾಣಕ್ಕೂ ಸಾಧಕವೆಂದು ಒತ್ತಿ ಹೇಳುತ್ತೇವೆ. ಇನ್ನು ಒಂದು ವಾರದಲ್ಲಿ ಈ ಕೃತ್ಯದನಿರ್ಣಯಸ್ವರೂಪವು ಹೊರಬೀಳಬಹುದು.

(2 ನೇ ಪುಟದಿಂದ)

ವರದಿಯನ್ನು ವಿಧಾನಸಭೆಗಳ ಮುಂದಿಡಬೇಕೆಂಬ ನಿಯಮವು ವೇನು ಇಲ್ಲದಿದ್ದಾಗ್ಯೂ ಕೂಡ ಭಾರತದ ಎಲ್ಲ ವಿಧಾನಸಭೆಗಳಲ್ಲಿಯೂ ವಿಚಾರಾರ್ಥವಾಗಿ ಈ ವರದಿಯನ್ನು ಮಂಡಿಸಲಾಯಿತು. ಕರ್ಜಾ ಮಣಿಪುರ ಮತ್ತು ತ್ರಿಪುರಗಳಂತಹ ಸಿ. ಭಾಗದ ರಾಜ್ಯಗಳಲ್ಲಿನ ಚುನಾಯಕರ ಸಂಸ್ಥೆಗಳಲ್ಲಿಕೂಡ ವಿಚಾರಾರ್ಥವಾಗಿ ಈ ವರದಿಯನ್ನು ಮಂಡಿಸಲಾಯಿತು. ಪಾರ್ಲಿಮೆಂಟ್ ಕೂಡ ಈ ವರದಿಯಬಗ್ಗೆ ವಿಸ್ತಾರವಾದ ಪರ್ಯಾಲೋಚನೆ ನಡೆಸಿತು. ಲೋಕಸಭೆಯಲ್ಲಿ 55½ ಗಂಟೆಗಳಕಾಲವೂ ರಾಜ್ಯಸಭೆಯಲ್ಲಿ 41 ಗಂಟೆಗಳ ಕಾಲವೂ ಚರ್ಚೆನಡೆಯಿತು. ಒಟ್ಟು 244 ಮಂದಿ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದರು. ಜೊತೆಗೆ ಭಾರತ ಸರ್ಕಾರದವರ್ಯ 1,22,501 ಸ್ವತಂತ್ರ ಪತ್ರಗಳನ್ನೂ ಮತ್ತು ಪತ್ರಗಳನ್ನೂ ಸ್ವೀಕರಿಸಿದರು.

1956 ರ ಜನವರಿ 16 ರಂದು ಭಾರತ ಸರ್ಕಾರದವರು ಕಮಿಷನ್ನಿನ ಶಿಫಾರಸುಗಳಲ್ಲಿ ಅಧಿಕಾಂಶದ ಬಗ್ಗೆ ತನ್ನ ಅಂತ್ಯನಿರ್ಧಾರಗಳನ್ನು ರೂಪಿಸಿದರು. ಈ ನಿರ್ಧಾರವನ್ನು ಕೈಗೊಳ್ಳುವ ಸಮಯದಲ್ಲಿ ಸರ್ಕಾರದವರು ಸ್ಥಾನೀಯ್ಯತೆಯ ಕಮಿಷನ್ನಿನ ಶಿಫಾರಸುಗಳನ್ನು ಅನುಸರಿಸುವುದರ ಜೊತೆಗೆ ಎಲ್ಲಾ ಪಕ್ಷಗಳ ಜನರ ಇಚ್ಛೆಗೆ ಅನುಗುಣವಾಗಿ ಸಾಧ್ಯವಾದಷ್ಟು ಈ ಶಿಫಾರಸುಗಳನ್ನು ಮಾರ್ಪಾಟು ಮಾಡುವ ಪ್ರಯತ್ನ ನಡೆಸಿ ಮೂರು ಕರಡು ಮಸೂದೆಗಳನ್ನು ಪಾರ್ಲಿಮೆಂಟಿನ ಮುಂದೆ ಮಂಡಿಸಲಾಯಿತು. 1956 ರ ಆಗಷ್ಟು ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ ಈ ಮಸೂದೆಗಳು ಪಾರ್ಲಿಮೆಂಟಿನಲ್ಲಿ ಅಂಗೀಕರಿಸಲ್ಪಟ್ಟವು.

ಭಾಷಾವಾರು ಹಿತರಕ್ಷಣೆ

ಭಾಷಾವಾರು ಅಲ್ಪಸಂಖ್ಯಾತರಿಗೆ ಸೂಕ್ತ ರಕ್ಷಣೆ ಕೊಡುವ ವಿಚಾರಕ್ಕೆ ಹಾಗೂ ಭಾರತದ ಐಕ್ಯತೆಯನ್ನು ಉತ್ತೇಜಿಸುವ ಕ್ರಮಗಳನ್ನು ಕೈಗೊಳ್ಳುವ ವಿಚಾರಕ್ಕೆ ಕಮಿಷನ್ನಿನವರು ಹೆಚ್ಚು ಪ್ರಾಶಸ್ತ್ಯವನ್ನಿತ್ತರು. ಕಮಿಷನ್ನಿನವರು ಮಾಡಿರುವ ಶಿಫಾರಸುಗಳಲ್ಲಿ ಅಧಿಕಾರವನ್ನು ಭಾರತ ಸರ್ಕಾರದವರು ಅಂಗೀಕರಿಸಿದರು.

ಸಂವಿಧಾನದ (ಏಳನೆಯ ತಿದ್ದುಪಡಿ) ಕಾನೂನು ಅಲ್ಪಸಂಖ್ಯಾತರಿಗಾಗಿ ವಿಶೇಷ ಅಧಿಕಾರಿ ಯೊಬ್ಬರನ್ನು ನೇಮಿಸುವ ವಿಚಾರಕ್ಕೆ ಅವಕಾಶಮಾಡಿಕೊಟ್ಟಿದೆ. ಈ ವಿಶೇಷಾಧಿಕಾರಿಯು ಭಾಷಾವಾರು ಅಲ್ಪಸಂಖ್ಯಾತರ ಸುರಕ್ಷಣೆಯ ಬಗ್ಗೆ ನಡೆಸುತ್ತಿರುವ ಕಾರ್ಯಗಳನ್ನು ರಾಷ್ಟ್ರಾಧ್ಯಕ್ಷರಿಗೆ ವರದಿ ಮಾಡುವರು ಈ ವರದಿಗಳನ್ನು ಪಾರ್ಲಿಮೆಂಟಿನ ಉಭಯಸಭೆಗಳಲ್ಲಿಯೂ ಮಂಡಿಸಲಾಗುವುದು.

ಅಂತಿಮ ಯೋಜನೆ

ಯೋಜನೆಯ ಅನುಸಾರವಾಗಿ ಭಾರತದಲ್ಲಿ 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು ಇರುವವು. ಪುನರ್ವಿಂಗಡಣೆಯ ಪರಿಣಾಮವಾಗಿ ಆಗುವ ದೊಡ್ಡ ದೊಡ್ಡ ರಾಜ್ಯಗಳಿಗೆ ಲಭಿಸುವ ಒಂದು ಲಾಭವೆಂದರೆ ಆರಾಜ್ಯಗಳ ಆರ್ಥಿಕ ವಿಕಾಸ ಹಾಗೂ ಕಲ್ಯಾಣ ಕಾರ್ಯಕ್ರಮಗಳಿಗೆ ಯೋಜನೆಯಲ್ಲಿ ಹೆಚ್ಚಿನ ಸಮಸ್ಯವಿರುವುದು. ಯೋಜನೆಯ ಕಾರ್ಯಕ್ರಮಗಳ ಹೆಚ್ಚು ದಕ್ಷತೆಯಿಂದ ನಡೆಯುವುದು ಇದರಿಂದ ಜನರಲ್ಲಿ ಬಂಧವಾದ ಸಂಕೀರ್ಣತೆಯನ್ನು ದೂರಗೊಳಿಸಲು ಸಹಾಯವಾಗುವುದು.

ಪುನರ್ವಿಂಗಡಣೆ ಯೋಜನೆಯಿಂದ ಭಾರತದಲ್ಲಿ ಆಡಳಿತ ಕಾರ್ಯವು ಸುಗಮವಾಗುವುದು. 'ಎ' ಶ್ರೇಣಿ ರಾಜ್ಯಗಳು ಸಮಸ್ಥಿತಿಗೊಳ್ಳುವುವು. ಎ ಮತ್ತು ಬಿ ಶ್ರೇಣಿಗಳ ರಾಜ್ಯಗಳ ನಡುವೆ ಇರುವ ಅಸಾಮ್ಯವು ಇಲ್ಲದಾಗುವುದು.

ನೆಗಡಿ, ಕೆಮ್ಮು, ದಮ್ಮು, ಉಬ್ಬಸ
ಶೀತಜ್ವರ, ಮಲೇರಿಯಾ, ಮತು
ಎಲ್ಲ ನೋವುಗಳಿಗೆ ದಿವ್ಯಾಮೃತ

ಕಾಶ್ಮೀರು ಅರುಕ್

ಲೇಪನೆ, ಸೇವನೆ - ಎರಡೂ ಸಾಧ್ಯ
ಎಲ್ಲಜಾಪುಗಳಲ್ಲೂ ದೊರೆಯುತ್ತದೆ

H. S & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ಎಲ್ಲವನ್ನೂ
ಶುದ್ಧಪಡಿಸಲು
ಉತ್ತಮವಾದುದು

ಮೈಸೂರು ಬಾರ್ ಸೋಪ್

ಸಂಪೂರ್ಣವಾಗಿ ಶುದ್ಧವಾದ
ಯಾವ ಬೆರಕೆಯೂ, ಅಪಾಯಕರ ರಸಾಯನಿಕ
ದ್ರವ್ಯಗಳೂ ಇಲ್ಲದ

ಅತ್ಯುತ್ತಮವಾದ ಒಗೆಯುವ ಸಾಬೂನು

ಎಲ್ಲ ಕಡೆಯಲ್ಲಿಯೂ ದೊರೆಯುತ್ತದೆ.

ಗೌರ್ನಮೆಂಟ್ ಸೋಪ್‌ಫ್ಯಾಕ್ಟರಿ, ಬೆಂಗಳೂರು.
ಮೆಂಬರ್, ಐ. ಎಸ್. ಟಿ. ಎಂ. ಎ.

ಹಿಂದೀ ಪರೀಕ್ಷೆ ಗಳು

ಪ್ರಾಥಮಿಕ

ಪರೀಕ್ಷಾ ಶುಲ್ಕ 1-8-0
ಸುಗಮ ಹಿಂದೀ ಬೋಧಿನಿ
ಸುಗಮ ಹಿಂದಿ I
—„— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)

ಮಧ್ಯಮಾ ಪರೀಕ್ಷಾ ಶುಲ್ಕ 3-0-0

ಸುಗಮ ಹಿಂದಿ 3
ಸಚ್ಚಾ ಇನ್ ಸಾಫ್
ಆದರ್ಶ ಚರಿತ್ರ
ಐತಿಹಾಸಿಕ ಕಹಾನಿ
ಹಿಂದೀರಚನೆ 2
ಪತ್ರಲೇಖನ
(ಸೆಟ್ ಬೆಲೆ 4-4-0)

ಇತರ ವಿವರಗಳಿಗೆ ಸ್ಟ್ಯಾಂಪಿಟ್ಟು ಅಥವಾ ರಿಪ್ಲೇಕಾರ್ಡು ಬರೆಯಿರಿ.

ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ ೨

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಅರುಪೈಸಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.

(Regd. M. No. 4746.)

To

Sri. _____

_____

_____

Edited, Printed & Published by T. S. KESHAVA RAO at Nava Bharat Printing Press, Bellary.

ನವಚೇತನ

ಸೋಮವಾರ ನವೆಂಬರ್ 26–11–1956

ವರ್ಷ 20 ಸಂಚಿಕೆ –13

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್

ಮದರಾಸ್ ಎಕ್ಸ್‌ಪ್ರೆಸ್ ಅಪಘಾತ

ಕೊಚ್ಚುಕುಡಿ ಎಕ್ಸ್‌ಪ್ರೆಸ್ ಟ್ರೈನಿಗೆ ಈ 23 ರ ಮುಂಜಾನೆ ಅಪಘಾತ ನಡೆದು 145 ಜನ ವ್ಯಕ್ತಿಗಳು ಮೃತರಾಗಿದ್ದು ಸುಮಾರು 110 ಜನ ಗಾಯಗೊಂಡಿದ್ದಾರೆ.

ಮದರಾಸ್ ತಿರುಚಿ ಟ್ರೈನಿನಲ್ಲಿ ಮದರಾಸಿಗೆ 170 ಮೈಲಿ ದೂರದಲ್ಲಿ ಈ ಅಪಘಾತ ಸಂಭವಿಸಿತು.

ಅರಿಯಾಲೂರು ಮತ್ತು ಕಳ್ಳಗಂ ಸ್ಟೇಷನ್‌ಗಳ ನಡುವೆಯೇ ಈ ಅಪಘಾತ ಆಯಿತು. ಟ್ರೈನ್ 22ರ ರಾತ್ರಿ ಮಾರ್ಗದಲ್ಲಿ ಬಿಟ್ಟಿತ್ತು. ಬೆಳಗಿನಜಾವ 5–20ಕ್ಕೆ ಈ ಅಪಘಾತಕ್ಕೆ ಈಡಾಯಿತು.

ಎಂಜಿನ್ ಮತ್ತು 8 ಗಾಡಿಗಳು ನದಿಗೆ ಬಿದ್ದವು.

ಮದುಯಾರ್ ನದಿಯ ಮೇಲಿನ ಸೇತುವೆಯ ಕೊನೆಗೆ ಟ್ರೈನ್ ಬಂದಾಗ ಎಂಜಿನ್ನು ಮತ್ತು 7 ಗಾಡಿಗಳೂ ಕಂಬಿ ತಪ್ಪಿ ಕೆಳಗೆ ನದಿಗೆ ಬಿದ್ದವೆಂದು ವರದಿಯಾಗಿದೆ. ಅವುಗಳಲ್ಲಿ 1 ಪಾರ್ಸಲ್ ವ್ಯಾನೂ ಇದ್ದಿತು.

ನದಿಯಲ್ಲಿ ವಿಕಾವಿಕಿ ಪ್ರವಾಹ ಬಂದುದರಿಂದ ಸೇತುವೆಯ ದಂಡೆಯು ಕೊಚ್ಚಿ ಹೋಗಿ ರೈಲು ಮಾರ್ಗಕ್ಕೆ ಹಾನಿಯಾಯಿತು. ಇದೇ ಈ ನಾಶಕ್ಕೆ ಕಾರಣವಾಯಿತು.

ಒಂದೆಗಾಡಿ ಸೇತುವೆಯ ಮೇಲೆ ಬಿದ್ದಿತ್ತು.

8 ನೆ ಗಾಡಿಯೂ ಕಂಬಿ ತಪ್ಪಿತಾದರೂ, ಅದರೆ ಅದು ನದಿಗೆ ಬೀಳದೆ ಸೇತುವೆಯ ಮೇಲೇ ಉಳಿದಿತ್ತೆಂದೂ ತಿಳಿದು ಬಂದಿದೆ.

ದೈವಶಾತ್ ಹಿಂದಿನ 4 ಗಾಡಿಗಳು ಉಳಿದುಕೊಂಡವು.

ಹಿಂದಿನ 4 ಗಾಡಿಗಳು ರೈಲ್ವೇಲೈನಿನ ಮೇಲೆಯೇ ಭದ್ರವಾಗಿ ನಿಂತಿದ್ದವೆಂದೂ ಅದರಲ್ಲಿದ್ದವರೆಲ್ಲಾ ಸುರಕ್ಷಿತವಾಗಿದ್ದಾರೆಂದೂ ತಿಳಿದುಬಂದಿದೆ. ಆ ಗಾಡಿಗಳನ್ನು ಅರಿಯಾಲೂರಿಗೆ ತರಲಾಗಿದೆ.

ಬಿದ್ದು ಹೋದ ಗಾಡಿಗಳನ್ನೂ ಮತ್ತು ಮೃತರ ದೇಹಗಳನ್ನೂ, ಚಲ್ಲಾಪಿಲ್ಲಿಯಾದ ವಸ್ತುಗಳನ್ನು ಗೆತೆಪುವ ಕಾರ್ಯಕ್ರಮನಡೆದಿದೆ.

ಬಳ್ಳಾರಿಯಲ್ಲಿ ಲಲಿತಕಲಾ ಮಹೋತ್ಸವ

ಬಳ್ಳಾರಿ ನಗರದಲ್ಲಿ ಸಂಗೀತ ಮತ್ತು ನೃತ್ಯ ಪಾಠಶಾಲೆಯ ಸಹಾಯಾರ್ಥವಾಗಿ 21–11–56 ರಿಂದ 24 ರವರೆಗೆ ನೃತ್ಯ ಸಂಗೀತ, ನಾಟಕಗಳು ಏರ್ಪಟ್ಟಿದ್ದವು. ಬೆಂಗಳೂರು ಮತ್ತು ಮೈಸೂರಿನಿಂದ ಬಂದ ಕಲಾವಿದರು ಬಹುಜನರ ಪ್ರಶಂಸೆಗೆ ಒಳಗಾಗಿ ಈ 4 ದಿನಗಳಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಮೊದಲನೆಯ ದಿನ ಬೆಂಗಳೂರಿನ ಸನಾತನ ಕಲಾ ಫ್ಲೇ ಶಾಪಾರ್ಟಿಯವರಿಂದ ಮತ್ತು ಮೈಸೂರಿನ ಕಮ್ಮಾರನುನೀ ಪಾರ್ಟಿಯವರಿಂದ ಭರತನಾಟ್ಯ ಪ್ರದರ್ಶನವಾದ ನಂತರ, ಕುಮಾರಿ ಲೀಲಾವತಿಯವರಿಂದ ಸಮಧೇಯಗಾನವಾಯಿತು ಇನ್ನು ನಿನಿಗಳಲ್ಲಿ ಲಕರ್ಷಕ ನೃತ್ಯವೇ ಅಲ್ಲದೆ, ಬೆಂಗಳೂರು ಕಲಾವಿದರ ದೇವದಾಸಿ ಎಂಬ ಕನ್ನಡ ನಾಟಕವೂ, ಕರ್ನೂಲಿ ಅಸೆಚೂರು ಸಂಘದವರ ಬಂಗಾರು ಪಂಕಳು ಎಂಬ ಸಾಮಾಜಿಕ ನಾಟಕವೂ ಪ್ರದರ್ಶಿತವಾಯಿತು.

Dr. U-K-L-ನಾರಾಯಣರಾವ್ ರು ಮತ್ತು ಇತರ ಮಾನ್ಯ ಮಿತ್ರರುಗಳ ವ್ಯವಸ್ಥಿತ ಪ್ರಯತ್ನಗಳಿಂದ ಲಲಿತ ಕಲಾ ಮಹೋತ್ಸವವು ಯಶಸ್ವಿಯಾಗಿ ನೆರವೇರಿಸಲ್ಪಟ್ಟಿತು ಶೀಘ್ರವಾಗಿ ಬಳ್ಳಾರಿ ನಗರದಲ್ಲಿ ಸಂಗೀತ ಮತ್ತು ನೃತ್ಯ ಪಾಠಶಾಲೆಯು ಏರ್ಪಡಬಹುದೆಂದು ಆಶಿಸಲಾಗಿದೆ.

ಬಳ್ಳಾರಿ ಜಿಲ್ಲೆ ಅಭಿವೃದ್ಧಿ

ಸಹಕಾರ ಸಂಘಗಳು:—

ಡೆವ್ಯುಟಿ ರಿಜಿಸ್ಟ್ರಾರವರ ಹೇಳಿಕೆ

ಪಂಚವರ್ಷ ಪ್ರಣಾಳಿಕೆಯು ಪ್ರಿವೈಸಾರ್ (1 ಜಿಲ್ಲೆಗೆ 40) ಸಹಕಾರಿ ಸಂಘಗಳಿಗೆ ಸ್ಥಾನ ಕೊಡಲಾಗಿದ್ದು, ಬಳ್ಳಾರಿ ಜಿಲ್ಲೆ ಇಂಥ ದೊಡ್ಡ ಸಂಘಗಳು 3 ಕ್ಕೆ ಅವಕಾಶವಿದೆ. ಯೋಜನೆಯ ಅವಧಿ ಮುಗಿಯುವುದರೊಳಗೆ 4 ಕೋಟಿರೂ. ಅಲ್ಪಾವಧಿ ಸಾಲಕೊಟ್ಟಂತಾಗುವುದು. ತಾಲ್ಲೂಕಿಗೆ 3 ರಂತೆ ಬಳ್ಳಾರಿ ಜಿಲ್ಲೆಯ 7 ತಾಲ್ಲೂಕುಗಳಲ್ಲಿ 21 ಗೋದಾಮುಗಳನ್ನು ತಲಾ 1 ಕ್ಕೆ 10,000 ರೂ ವೆಚ್ಚದಮೇಲೆ ಕಟ್ಟಲಾಗುವುದು. ತಾಲೂಕಿಗೆ 3ರಂತೆ 21 ಮಾರ್ಕೆಟಿಂಗ್ ಸೊಸೈಟಿಗಳನ್ನು ಏರ್ಪಡಿಸಿ, ಕೊನೆಯಪಕ್ಷ ಶೇ ಭಾಗದ ಬೆಳೆದ ಧಾನ್ಯಗಳನ್ನು ಕೇಂದ್ರೀಕರಿಸಿ ಬಜಾವದಲ್ಲಿ ಕಾರಣವಿಲ್ಲದೆ ಧಾನ್ಯಗಳ ಏರಿಕೆಯನ್ನು ತಡೆಗಟ್ಟಲಾಗುವುದು. ಪೆಂಟ್ರಲ್ ಬ್ಯಾಂಕ್, ಬಿ.ಸಿ.ಸಿ. ಸ್ಟೋರ್ಸ್ ಮತ್ತು ಬ್ಯಾಂಕ್‌ಗಳನ್ನು ಶಕ್ತಿಯುತವನ್ನಾಗಿ ಮಾಡಿ ಹೆಚ್ಚಿನ ಕೆಲಸ ತೆಗೆಯಲಾಗುವುದು. ತುಮಕೂರು ಮತ್ತು ಇತರ ಜಿಲ್ಲೆಗಳಲ್ಲಿ ಕಡಮೆ ಸಿಬ್ಬಂದಿಯಿಂದ ಹೆಚ್ಚಿನ ಕೆಲಸ ವಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಿನ ಸಿಬ್ಬಂದಿ ಇದ್ದು ಕಡಮೆ ಕೆಲಸ ವಾಗಿದೆ. ಇದನ್ನು ತಪ್ಪಿಸಿ ಯೋಗ್ಯವಾದ ರೀತಿಯ ಕಾರ್ಯಾನ್ವಿತವಾಗಲು ಯತಿಸಲಾಗುವುದು— ಎಂಬುದಾಗಿ ಶ್ರೀ ಬಿ. ಟಿ ಪೀತಾಂಬರರಾವ್ (ಡೆವ್ಯುಟಿರಿಜಿಸ್ಟ್ರಾರ್) ರವರು ಬಳ್ಳಾರಿ ವೃತ್ತ ಸಹಕಾರಿ ಕೋಪ್ಪೋಗಿಗಳ ಸಮ್ಮೇಳನವಲ್ಲಿ 25–11–56 ರಲ್ಲಿ ತಿಳಿಸಿ ಕಂಪ್ಲಿ ಸಕ್ಕರೆ ಕಾರ್ಖಾನೆಯು ಫೆಬ್ರವರಿ 1957 ರಿಂದ ಸಕ್ಕರೆ ಉತ್ಪನ್ನ ಮಾಡುವ ಯೋಜನೆಯನ್ನು ವ್ಯಕ್ತಪಡಿಸಿದರು.

ಪವಿತ್ರ ಕಾವೇರಿ ನದಿಯ ತವರು - ಕೊಡಗು !

ಪ್ರಕೃತಿ ಸೌಂದರ್ಯದ ನೆಲೆ ವೀಡಾಗಿ "ಕರ್ನಾಟಕದ ಕಾಶ್ಮೀರ" ವೆಂದು ಪ್ರಖ್ಯಾತವಾಗಿದ್ದು ನೂತನ ಮೈಸೂರಿನಲ್ಲಿ ಇದೀಗ ಲೀನವಾಗಿರುವ ಕೊಡಗು ವೈಶಾಲ್ಯದಲ್ಲಿ ಕೇವಲ ೧೫೮೬ ಚದರ ಮೈಲಿಗಳಷ್ಟಿದ್ದು, ಸುಮಾರು ೩॥ ಲಕ್ಷ ಜನ ಸಂಖ್ಯೆಯಿಂದ ಕೂಡಿ, ಉತ್ತರದಿಂದ ದಕ್ಷಿಣಕ್ಕೆ ೬೦ ಮೈಲಿಗಳ ಉದ್ದ ಕ್ಕೂ ಪೂರ್ವದಿಂದ ಪಶ್ಚಿಮಕ್ಕೆ ೪೦ ಮೈಲಿಗಳ ಅಗಲಕ್ಕೂ ಚಾಚಿಕೊಂಡಿದೆ.

ಕೊಡಗನ್ನ ಕದಂಬರು, ಗೆಂಗರಸರು ಚೋಳರು ಚೆಂಗಾಳ್ವರೇ ಮೊದಲಾದ ಅನೇಕ ಅರಸು ಮನೆತನದವರು ಆಳಿ ಕೊಂಡಿದ್ದರೆಂದು ಇತಿಹಾಸವನ್ನು ಪರಿಶೀಲಿಸಿದರೆ ತಿಳಿಯಬಹುದು ಚೆಂಗಾಳ್ವರ ಪತನವಾದ ಬಳಿಕ ಹಾಲೇರಿ ಮನೆತನದ ೧೭ ಮಂದಿ ಅರಸರು ಸುಮಾರು ೨೫೦ ವರ್ಷಗಳ ಕಾಲ ರಾಜ್ಯಭಾರವನ್ನು ನಡೆಸಿದ್ದರಂತೆ ೧೭ನೇ ಶತಮಾನದಲ್ಲಿ ಕೊಡಗಿನ ಪಟ್ಟದ ಕ್ಕೆ ರಿತು ಅರಸುಮನೆತನದವರೊಳಗೆ ಅಂತಃಕಲಹವುಂಟಾದಾಗ ಲಿಂಗರಾಜನ ಮೈಸೂರಿನ ಹೈದರಾಲಿಯ ಸಹಾಯ ದಿಂದ ಎದುರಾಳಿಯಾದ ದೇವಪ್ಪನನ್ನು ಓಡಿಸಿ ತಾನೇ ಪಟ್ಟಏರಿದನು. ಆದರೆ ಮುಂದೆ ಹೈದರಾಲಿಯು, ಲಿಂಗರಾಜನ ಮಗನಾದ ವೀರರಾಜನು ಚಿಕ್ಕ ಬಾಲಕ ನೆಂದು ಹೇಳುತ್ತ ತಾನೇ ಕೊಡಗಿನ ಆಡಳಿತವನ್ನು ವಹಿಸಿದನಲ್ಲದೆ ರಾಜಮನೆ ತನದವರನ್ನು ಪೆರಿಯಾಪಟ್ಟಣದಲ್ಲಿ ಸೆರೆಯಲ್ಲಿಡಿಸಿದನು. ವೀರರಾಜನು ಸೆರೆಯಿಂದ ತಪ್ಪಿಸಿಕೊಂಡು ೧೭೯೨ರಲ್ಲಿ ಕೊಡಗಿನ ದೊರೆಯಾದನು. ಕಾರಣಾಂತರಗಳಿಂದ ಲಾರ್ಡ್ ವಿಲಿಯಂ ಬೆಂಟಿಂಕನ ಕಾಲದಲ್ಲಿ ಅಂದರೆ ಸುಮಾರು ಕ್ರಿ.ಶ. ೧೮೩೪ರಲ್ಲಿ ಕೊಡಗನ್ನು ಇಂಗ್ಲೀಷರು ತಮ್ಮ ವಶಕ್ಕೆ ತೆಗೆದುಕೊಂಡು ತಾವೇ ಆಳಲಾರಂಭಿಸಿದರು.

ಕೊಡಗಿಗೆ ಪೂರ್ವ ಕಾಲದಲ್ಲಿ "ಮತ್ಸ್ಯ ದೇಶ" — "ಕ್ರೋಢ ದೇಶ" "ಬ್ರಹ್ಮಕ್ಷೇತ್ರ" —ಹೀಗೆ ಮೂರು ಹೆಸರುಗಳಿದ್ದವು. ಕೊಡಗಿನ ಚರಿತ್ರೆಯಲ್ಲಿ 'ಕಾವೇರಿ'ಯ ಕಥೆಯು ತುಂಬಾ ಪ್ರಾಶಸ್ತ್ಯವನ್ನು ಪಡೆದಿರುವುದು. ಕಾವೇರಿಯು ಕವೇರ ಮುನಿಯ ಸಾಕು ಮಗಳು. ಅವಳು ಆಲ್ಲಿಗೆ ಹೇಗೆ ಬಂದಳು-ನದಿಯಾಗಿ ಏಕೆ ಹರಿದಳು, ಎಂಬುದರ ಬಗ್ಗೆ ಪುರಾಣ ಕಥೆ ಹೀಗಿದೆ:—

ದೇವತೆಗಳೂ ರಾಕ್ಷಸರೂ ಅಮೃತ ಕ್ಕಾಗಿ ಕಾದಾಡುವ ಕಾಲದಲ್ಲಿ ಪಾರ್ವತಿಯು ಚಿಕ್ಕ ಬಾಲಿಕೆಯಾಗಿ "ಲೋಪಾಮುದ್ರೆ" ಎಂಬ ಹೆಸರಿನಿಂದ ಅವತರಿಸಿದಳು. ಬ್ರಹ್ಮನು ಅವಳನ್ನು ಪುತ್ರಿಯಾಗಿ ಸ್ವೀಕರಿಸಿದನು.

ಬ್ರಹ್ಮಗಿರಿಯಲ್ಲಿ ಆಶ್ರಮ ಕಟ್ಟಿ ಕೊಂಡಿದ್ದ ಕವೇರನೆಂಬ ಋಷಿಯು ತನ್ನ ವೈದ್ಯಾಭ್ಯಾಸದಲ್ಲಿ, ಆಶ್ರಮದಲ್ಲಿ, ತನಗೆ ನೆರವಾಗಬಲ್ಲ ಅತಿಥಿಗಳ ಸತ್ಕಾರಕ್ಕೆ ದಿವ್ಯ ಕನ್ನಿಕೆಯನ್ನು ಇಚ್ಛಿಸಿ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದನು. ಬ್ರಹ್ಮನು ಪ್ರತ್ಯಕ್ಷನಾಗಿ ಕವೇರನಿಗೆ "ಜಸ, ಮನ, ಹೊಲದ ಕೊರಕಳೆದು ನೀರಿ ತರುವಂಥ ನನ್ನ ಮಗಳಾದ ಲೋಪಾಮುದ್ರೆಯನ್ನೇ ನಿನ ಸೇವೆಗೆ ಕಳಿಸಿಕೊಡುವೆನು" ಎಂದು ವರದಾನವಿತ್ತನು ಲೋಪಾಮುದ್ರೆಯು ಕವೇರನ ಆಶ್ರಮಕ್ಕೆ ಬಂದಳು. ಅತಿಥಿಗಳ ಸತ್ಕಾರದ ಹೊಣೆಯನ್ನು ಹೊತ್ತಳು 'ಕಾವೇರಿ' ಎಂಬ ಹೆಸರಿನಿಂದ ಕವೇರ ಮುನಿಯ ಸಾಕು ಮಗಳಾಗಿ ಪ್ರೀತಿಯಿಂದ ಬೆಳೆದಳು.

ಒಂದು ದಿನ ಅಗಸ್ತ್ಯ ಮುನಿಯು ಈ ಆಶ್ರಮಕ್ಕೆ ಬಂದವನು, ಕಾವೇರಿಯನ್ನು ನೋಡಿ ಅವಳನ್ನು ತನ್ನ ಪತ್ನಿಯಾಗಿ ಪಡೆಯಲಿಚ್ಛಿಸಿದನು. ತನ್ನನು ಪರಿಕ್ಷಣ ವಾದರೂ ಅಗಲಿದ್ದೇ ಆದಲ್ಲಿ ತಾನು ಜಲರೂಪಿಯಾಗಿ ಹೋಗಿಬಿಡುವೆನು ಎಂಬ ಶರ್ತದ ಮೇಲೆ ಕಾವೇರಿಯು ವಿವಾಹಕ್ಕೊಪ್ಪಿದಳು. ಕವೇರನು ಈ ದಾಂಪತ್ಯಕ್ಕೆ ಅನುಮತಿಯಿತ್ತನು. ಅಗಸ್ತ್ಯ ಮತ್ತು ಕಾವೇರಿಯರು ಅನ್ಯೋನ್ಯದ ದಂಪತಿಗಳಾದರು.

ಅಗಸ್ತ್ಯನು ಒಂದು ದಿನ ಮುಂಜಾನೆ ಕಾವೇರಿಯು ಏಳುವ ಮುಂಚಿತವಾಗಿಯೇ ತನು ದೂರವಿರುವ ಭೃಗಂಡ ಮಹರ್ಷಿಗಳ ಆಶ್ರಮದ ಬಳಿಯಿರುವ ಕನಿಕೆ ತೀರ್ಥದಲ್ಲಿ ಸ್ನಾನಮಾಡಿ ಬರುವೆನೆಂದು ಯೋಚಿಸಿ ಹೊರಟು ಹೋದಾಗ ಕಾವೇರಿ ಎದ್ದು ಪತಿಯನ್ನು ಕಾಣದೆ ಸ್ಥಿಗಚಿತ್ತದಿಂದ ಆಶ್ರಮದ ತೀರ್ಥ ಕುಂಡಕ್ಕೆ ಹಾರಿ ಯಾರಿಗೂ ಕಾಣದಂತೆ ಗುಪ್ತಗಾಮಿನಿಯಾಗಿ ಮುಂದುವರಿದು ಕನ್ನಿಕಾ ಸಜ್ಯೋತಿಗಳೆಂಬ ಉದನದಿಗಳೊಡಗೂಡಿ ಪ್ರವಹಿಸಿದಳು- ಇದು ಪುರಾಣ ಕಥೆ.

ಕೊಡಗಿನ ತಲಕಾವೇರಿಯಲ್ಲಿ ಕುಟ್ಟ ಮುಂದೆ ಪೂರ್ವಾಭಿಮುಖವಾಗಿ ಹರಿದು ಕೊಂಡು ಹೋಗುವ ಕಾವೇರಿನದಿಯಿಂದ ಕೊಡಗಿಗೆ ವಿಶೇಷವಾಗಿ ಪ್ರಯೋಜನವಾಗಿಲ್ಲವಾದರೂ ಕಾವೇರಿ ನದಿಯ ಉಗಮ ಸ್ಥಾನವಾದ ತಲಕಾವೇರಿಯು ದಕ್ಷಿಣ ಕಾಶಿಯೆಂದು ಪ್ರಸಿದ್ಧವಾಗಿರುವ ಪುಣ್ಯಕ್ಷೇತ್ರವಾಗಿದೆ, ದಕ್ಷಿಣ ಭಾರತದ ಅನ್ನಪೂರ್ಣೆಯೆನಿಸಿದೆ. ಕಾವೇರಿ ಬ್ರಹ್ಮಗಿರಿಯಲ್ಲಿ ಹುಟ್ಟಿ ಮೈಸೂರಿನ ಬಳಿಯ ಕೃಷ್ಣರಾಜ ಸಾಗರದಲ್ಲಿ ಜಲಶ್ರೀ ಯೆನಿಸಿ, ತಿರುಚನಾಪಳ್ಳಿಯ ಶ್ರೀರಂಗಂ ದ್ವೀಪದಲ್ಲಿ ಜಲಪಾತವಾಗಿ ಧುಮುಕಿ, ಮುಂದೆ ಮೆಟ್ಟೂರನ್ನು ಮುಟ್ಟಿ ಸಮುದ್ರವನ್ನು ಸೇರುತ್ತಾಳೆ. ಮಹಾಸಾಧು ಸಂತರೂ, ಕವಿಕುಲ ತಿಲಕರೂ ಕಾವೇರಿಯನ್ನು ಹಾಡಿ ಹೊಗಳಿದ್ದಾರೆ. ತಮಿಳು ಭಾಷೆಯಲ್ಲಿ ರಾಮಾಯಣವನ್ನು ಬರೆದ ಕವಿ ಕಂಬನು ಕಾವೇರಿಯನ್ನು ಪೊನ್ನಿ (ಸುವರ್ಣನದಿ) ಎಂದು ಕರೆದಿದ್ದಾನೆ. ಸಂಗೀತ ಸಾರ್ವಭೌಮ ತ್ಯಾಗರಾಜರು ಕಾವೇರಿಯನ್ನು ತಮ್ಮ ಕೃತಿಗಳಲ್ಲಿ ಅನನ್ಯ ಭಕ್ತಿಯಿಂದ ವರ್ಣಿಸಿದ್ದಾರೆ. ಕವಿ ಪಂಜೆಯವರು ಹುತ್ತರಿ ಹಾಡಿನಲ್ಲಿ ಕಾವೇರಿಯ ಕುರಿತಾದ ವರ್ಣನಾ ವೈಖರಿ ಹೀಗಿದೆ.

ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ
ಬಿಮ್ಮನೆ ಬಂದಳೊ ? !
ಎಲ್ಲಿ ಮೋಹನ ಗಿರಿಯ ಬೆರಗಿನ
ರೂಪಿನಿಂದಲಿ ನಿಂದಳೊ ? ॥
"ಎಲ್ಲಿ ಮುಗಿಲಲಿ ಸುಂಚಿನೋಲ್
ಕಾವೇರಿ ಹೊಳೆ ಹೊಳೆ ಹೊಳೆವಳೋ ? !
ಎಲ್ಲಿ ನೆಲವನು ತಣಿಸಿ ಜನ ಮನ
ಹೊಲದ ಕಳೆ ಕಳೆ ಕಳೆವಳೋ ? ॥

ಅಲ್ಲೆ ಆ ಕಡೆ ನೋಡಲಾ !
ಅಲ್ಲೆ ಕೊಡಗರ ನಾಡಲಾ !
ಅಲ್ಲೆ ಕೊಡಗರ ಬೀಡಲಾ !

ಎಂದಿದ್ದಾರೆ.

ಪವಿತ್ರ ಕಾವೇರಿಯ ಉಗಮಸ್ಥಾನವಾದ ಬ್ರಹ್ಮಗಿರಿ ಪರಿಸರದ ಸೌಂದರ್ಯ ಅನುಪಮವಾದುದು ಕನ್ನಡ ನಾಡಿನ ಕಾವ್ಯಶ್ರೀ ಶ್ರೀ ಕುವೆಂಪು ರವರು ತಮ್ಮ ಮಹಾಕಾವ್ಯದಲ್ಲಿನ ಶ್ರೀ ರಾಮಾಯಣ ದರ್ಶನದ ಕೊಡಗಿನ ಬ್ರಹ್ಮಗಿರಿ ಪ್ರದೇಶವನ್ನು ಬಲು ಸೊಗಸಾಗಿ ವರ್ಣಿಸಿದ್ದಾರೆ.

ಕರ್ನಾಟಕದ ಪ್ರವಾಸೀ ಕ್ಷೇತ್ರವಾಗುವ ಸಕಲ ಸೌಭಾಗ್ಯ ಕೊಡಗಿಗಿದೆ. ಪ್ರಾಚೀನ ಕಾಲದಲ್ಲಿ ಕವಿಗಳೂ, ಋಷಿ

ಗಳೂ ಇಲ್ಲಿಯ ಪ್ರಕೃತಿ ಸೌಂದರ್ಯಕ್ಕೆ ಮನಸ್ಸೋತಿದ್ದಾರೆ. ಇಂದಿನ ಜನತಾಯುಗದಲ್ಲಿ ಯುಗಧರ್ಮಸ್ವಭಾವವಾಗಿ ಜನರೆಲ್ಲರೂ ಕೊಡಗಿನ ಬೆಟ್ಟಗಳಿಗೆ ಆಕರ್ಷಿತರಾಗಲೇಬೇಕು. ಕರ್ನಾಟಕದ ನೂತನ ಸರಕಾರವು ಕೊಡಗನ್ನು ಪ್ರವಾಸೀ ಕ್ಷೇತ್ರವನ್ನಾಗಿ ಮಾಡಬಹುದೆಂದು ನಿರೀಕ್ಷಿಸಿದರೆ ತಪ್ಪಾಗಲಾರದು.

ಚಂದ್ರಲೋಕಕ್ಕೆ ಹೋಗಿ ಬರಲು ೧೦ ದಿನ ಸಾಕು

ಸೋವಿಯೆಟ್ ಒಕ್ಕೂಟದ ನಿಜ್ನಿಸಾಸ್ತ್ರ ಶಾಸ್ತ್ರ ಸಂಶೋಧಕ್ಕೆ ಸೈದ್ಧಾಂತಿಕ ಖಗೋಳಶಾಸ್ತ್ರ ವಿದ್ಯಾ ಮಂದಿರ ವೈಜ್ಞಾನಿಕ ಆಲೋಚನಾ ಮಂಡಲ ಭೌತಿಕ ಸಂಸ್ಥೆಗಣಿತ ಶಾಸ್ತ್ರಗಳ ಸಂಶೋಧಕರಾದ ಪ್ರೊಫೆಸರ್ ಜಿ. ಜೆಬೋತರೇನೊವರೂ ನಾಸ್ತ್ರ ಜನರ ಸಹಾಯಕರುಗಳಾದವರು ಚಂದ್ರಲೋಕಕ್ಕೆ ಸುಲಭವಾಗಿ "ರಾಕೆಟ್" ಪ್ರಯಾಣ ಏರ್ಪಡಿಸುವ ಯೋಜನೆಯನ್ನು ಕುರಿತು ಇತ್ತೀಚೆಗೆ ನಡೆಸಿದ ಕಾರ್ಯಾಚರಣೆಯ ಪರಿಣಾಮವನ್ನು ಪತ್ರಿಕೆಗಳಿಗೆ ತಿಳಿದು ಬಂದಿದೆ.

ಇವರಿಗೂ ಅವಶ್ಯಕವೆಂದು ಎಣಿಸಲಾದ್ದುದಕ್ಕಿಂತಲೂ ಕಡಮೆ ಇಂಧನದಿಂದ ರಾಕೆಟ್ ಚಂದ್ರಗ್ರಹಕ್ಕೆ ಹಾರಿ ಹೋಗಿ, ಅಲ್ಲಿಂದ ಭೂಮಿಗೆ ಬರುವುದರ ಸಾಧ್ಯತೆಯನ್ನು ಪ್ರೊಫೆಸರ್ ಜೆಬೋತರೇನೊವರು ಸೈದ್ಧಾಂತಿಕವಾಗಿ ರುಜುವಾತು ಮಾಡಿ ಕೊಟ್ಟಿದ್ದಾರೆ.

ಚಂದ್ರಗ್ರಹಕ್ಕೆ ಹೋಗುವ ರಾಕೆಟ್ ಹಾರಾಟಕ್ಕೆ ಇಂಧನವು ಬೃಹತ್ಪ್ರಮಾಣದಲ್ಲಿ ಬೇಕಾಗುವುದೆಂಬ ಕಷ್ಟಪ್ರದವಾದ ಸಮಸ್ಯೆಯೆಂಬುದಾಗಿ ಇಷ್ಟರವರೆಗೂ ನಂಬಲಾಗಿತ್ತು. ಪ್ರಾರಂಭಿಕ ವೇಳೆಯಲ್ಲಿ ಮಾತ್ರವೇ ಇಂಧನವು ಬೇಕಾಗುತ್ತದೆಯೆಂದೂ, ಆ ತರುವಾಯ ಚಂದ್ರ, ಸೂರ್ಯ ಮತ್ತು ಭೂಗ್ರಹಗಳ ಆಕರ್ಷಣಶಕ್ತಿಯು ಪ್ರಭಾವದಿಂದಲೇ ತನ್ನ ಪ್ರಯಾಣವನ್ನು ರಾಕೆಟ್ಟು ಮುಂದುವರಿಸುವುದೆಂದೂ ಸೈದ್ಧಾಂತಿಕ ಜೆಬೋತರೇನೊವರು ಸಿದ್ಧ ಮಾಡಿ ತೋರಿಸಿದ್ದಾರೆ.

ಚಂದ್ರಗ್ರಹವು ಭೂಮಿಯಿಂದ 3,84,000 ಕಿಲೋಮೀಟರ್‌ಗಳಷ್ಟು (2,40,000 ಮೈಲಿ) ದೂರದಲ್ಲಿದೆ ಎಂದು ಗೊತ್ತಾಗಿದೆ. ರಾಕೆಟ್ ವಿಮಾನವು 4,00,000 ಕಿಲೋಮೀಟರುಗಳಷ್ಟು (2,50,000 ಮೈಲಿ) ಸರಪಣಿ ಧಿ (ದೂರ ಹೋಗಬಲ್ಲದು. ರಾಕೆಟ್ಟಿನ ಪ್ರಾರಂಭವೇಗವು ಸೆಕೆಂಡಿಗೆ 11 ಕಿಲೋಮೀಟರುಗಳಷ್ಟಿವೆ (ಗಂಟೆಗೆ 24,750 ಮೈಲಿ) ಅದು ಚಂದ್ರಗ್ರಹವನ್ನು ಸಮೀಪಿಸುವ ವೇಳೆಗೆ ವೇಗವು 0 (ಸೊನ್ನೆ) ಗೆ ಇಳಿಯುವುದು ಇದರ ಪರಿಣಾಮವಾಗಿ ರಾಕೆಟ್ಟಿನಲ್ಲಾನವು ಚಂದ್ರಗ್ರಹದ ಸುತ್ತಲೂ ಪರ್ಯಟಿಸುವುದು.

ಇಲ್ಲಿಂದ ಹೊರಟು, ಚಂದ್ರಲೋಕಕ್ಕೆ ಹೋಗಿ, ಪುನಃ ವಾಪಾಸು ಒರಲು 10 ದಿವಸ ಬೇಕಾಗುವುದೆಂದು ಈ ದಾಖಲು ಮಾಡಲಾಗಿದೆ.

ಪ್ರೊಫೆಸರ್ ಜೆಬೋತರೇನೊವರೆ ಮಂಗಳ ಗ್ರಹಕ್ಕೆ ಹೋಗುವ ರಾಕೆಟ್ ವಿಮಾನವಾಗಿ ಸೈದ್ಧಾಂತಿಕ ಲೆಕ್ಕ ಚಾರಗಳನ್ನು ಮಾಡಿ ಕೊಡುತ್ತಿದ್ದಾರೆ.

ಈರುಳ್ಳಿ ಉಪಯೋಗ

1) ಮೂಲವ್ಯಾಧಿಯವರು ಈ ರಸಕ್ಕೆ ಸಕ್ಕರೆ ಹಾಕಿ ಕುಡಿಯುವುದು.

2) ಎಮ್ಮೆಟ್ಟಿಕಾಯಿಯ ಹೊಟ್ಟೆ ನೋವಿಗೆ ಈರುಳ್ಳಿಯ ಅರ್ಧ ಚಿನ್ನ ರಸದಲ್ಲಿ ಪುಡಿ ಪಡಿಸಿದ ಕಾಸರಸದ ಬೀಜ 1 ಗ್ರೈನ್ ಮತ್ತು ಕಾಸೀಸ ಸಿಂಧೂರವ ಅರ್ಧ ಗ್ರೈನ್ ಇವನ್ನು ಸೇರಿಸಿ ಸೇವಿಸುವುದು.

3) ಮುಟ್ಟು ನೋವಿದ್ದ ಊಟ್ಟಿಗೆ ಒಂದಾಳಾ 3 – 4 ಬಾರಿ ಹಸಿಗಸ್ಸ ತಿನ್ನುವುದು.

4) ಮೂಳೆಯ ಪೆಟ್ಟಿಗೆ ಈ ರಸದ ಅಂಜನ ಮತ್ತು ವಾಸನ ಸೇವಿಸುವುದು.

5) ಮೂತ್ರ ಪಿಂಡ ಬದ್ಧತೆಗಳಿಗೆ ಗೆಡ್ಡೆಯ ನೀರಿಲ್ಲ ಸಕ್ಕರೆಹಾಕಿ ಸೇವಿಸುವುದು. (ಸಾಮಾನ್ಯವ್ಯಾಧಿಗೂ ಹಿತ)

6 ಸೈಕ್ಲೆ ನೊವಿಗೆ, ಮೂತ್ರಬಂಧತೆಗೆ ಈರುಳ್ಳಿ ಸಾಸ್ತ್ರ ಬೆಲ್ಲತಿನ್ನುವುದು.

7) ವಿಷಜಂತುಗಳಿಗೆ ಈರುಳ್ಳಿರಸದಲ್ಲಿ ಪಚಿಗೆ ತೊಗಟೆ ಕಾಟುಕರೋಣ ಚೂರ್ಣ ಕಲಸಿ ಸೇವನೆ (ಪಲಬದ್ಧತೆಗೂ ಗುಣಕಾರಿ) ಮಾಡಬೇಕು.

8) ರಕ್ತ ಸಂಬಂಧಕ್ಕೆ ರಸವನ್ನು ಮೂಗಿನೊಳಗೆ ೨–೩ ತೊಟ್ಟು ಬಿಡಬೇಕು.

9) ವಾಯುವಿಕಾರದ ವ್ಯಕ್ತಿಗಳಿಗೆ ಅಳಲೆ ಕಾಯಿ ಕಟುಕರೋಣ ಸಮಾನ ಈರುಳ್ಳಿ ರಸ ಇವುಗಳನ್ನು 1:1:1:6 ಅರವು ರಸದಲ್ಲಿ ಸೇವನೆ (ಭೂತ ಪ್ರೇತ ಪಿಶಾಚಿ, ಜೇಷ್ಟೆಗಳ ನಿವಾರಣೆ ಆಗುವುದು) ಮಾಡಬೇಕು.

10) ವಾಂತಿ ಅಥವಾ ಭೇದಿಗೆ ಈ ರಸ, ನಿಂಬೆ ರಸ, ಜೇನುತುಪ್ಪ ಇವುಗಳನ್ನು ಸೇರಿಸಿ ತಿನ್ನುವುದು.

11) ವಿಷಮ ಜ್ವರಕ್ಕೆ ಹಸಿ ಗಸಿ ಮತ್ತು ಮೆಣಸಿನ ಕಾಳು ಇವುಗಳನ್ನು ಜಗಿದು ನುಂಗುವುದು ಒಳ್ಳೆಯದು.

12) ಹೊಟ್ಟೆ ಸಂಕಟಗಳಿಗೆ ಹೆಚ್ಚಿಗೆ (ಯಾವುದೇ ಕಾರಣವಿದ್ದರೂ) ಹುರಿದ ಗಡ್ಡೆಯನ್ನು ನಾಭಿಗಟ್ಟು ಕಟ್ಟುವುದೊಳ್ಳೆಯದು.

13) ಕ್ಷೀಣ ರಕ್ತಕ್ಕೆ ಈ ರಸಕ್ಕೆ ಜೇನುತುಪ್ಪ ಸೇರಿಸಿ ಕೆಲವು ದಿನ ಸೇವಿಸಿದರೆ ಒಳ್ಳೆಯದು.

14) ನೀರುಳ್ಳಿ ಕಷಾಯ. ಕಾಫಿಯನ್ನು ತಯಾರಿಸುವಂತೆ ಇದನ್ನು ತಯಾರಿಸಬೇಕು. ಇದು ಉತ್ತಮ ಪಾನೀಯ ರಾತ್ರಿ ನಿದ್ದೆ ಬಾರದವರಿಗೂ ತಲೆಸುತ್ತು ಮುಕ್ಕಳಿಗೂ ಗುಣಕಾರಿ.

15) ಧಾತು ಪುಷ್ಟಿಗೆ ಗಡ್ಡೆಯನ್ನು ಚಿಕ್ಕದಾಗಿ ಹೆಚ್ಚಿ, ಅದು ಮುಳುಗುವಷ್ಟು ಜೇನುತುಪ್ಪವಾಕಿ ಭದ್ರವಾಗಿ ಮುಚ್ಚಿರಿಸಿ 40 ದಿನಗಳಾದಮೇಲೆ ದಿನಕ್ಕೊಂದು ಸಾರಿ 1 ತೊಲೆಯಂತೆ ಇದನ್ನು ಸೇವಿಸಿ ಹಾಲು ಕುಡಿಯುವುದು.

ಕಮ್ಯೂನಿಷ್ಟರ ತಪ್ಪೊಪ್ಪಿಗೆ

ರಷ್ಯಾದಲ್ಲಿ ನಡೆದ ಪ್ರತಿಯೊಂದೂ ಆದರ್ಶಮಯವಾಗಿದೆಯೆಂದು ಭಾವಿಸಿ ಭಾರತೀಯ ಕಮ್ಯೂನಿಷ್ಟರು ತಪ್ಪು ಮಾಡಿದ್ದರೆಂದು ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಅಜಯ್ ಘೋಷ್‌ರು ಒಪ್ಪಿಕೊಂಡರು.

ಕಮ್ಯೂನಿಸ್ಟ್ ಪಾರ್ಟಿಯ ಸಾರ್ವತ್ರಿಕೆಯಲ್ಲಿ ಪ್ರಕಟಿಸಿದ ಪಿ. ಎಸ್. ಸಿ. ನಾಯಕ ಶ್ರೀ ಬೈಸ್ಕಾಲ್ ನಾರಾಯಣರ ಪತ್ರಕ್ಕೆ ಉತ್ತರವಾಗಿ ಶ್ರೀ ಘೋಷ್‌ರು ಈ ವಿಚಾರ ತಿಳಿಸಿದ್ದಾರೆ.

ನಾವು ರಷ್ಯಾದ ಬಗ್ಗೆ ಸೋಷಲಿಸ್ಟ್, ಕಾಂಗ್ರೆಸ್ಸು ಮತ್ತು ಕಮ್ಯೂನಿಷ್ಟರ ಜೊಮಕ್ಯಾಟೀಗಳೂ ಮಾಡುತ್ತಿದ್ದ ಟೀಕೆಗಳಿಗೆ ಹೆಚ್ಚು ಗಮನ ಕೊಡಬೇಕಾಗಿತ್ತು. ನಮ್ಮಲ್ಲಿ ನುತ್ತ ಕಮ್ಯೂನಿಸ್ಟ್ ಪಕ್ಷಗಳಲ್ಲೂ ರಷ್ಯನೆಪಿಸುವಲ್ಲಿ ಸರಿಯೆಂಬ ಸಮರ್ಥನೆ ಮತ್ತು ಸೋವಿಯೆಟ್ ನೀತಿಯನ್ನು ಟೀಕಿಸಿದ ಪ್ರತಿಯೊಬ್ಬರನ್ನೂ ಖಂಡಿಸುವ ಪ್ರವೃತ್ತಿ ಹೆಚ್ಚಿದೆ ಬಂದುದನ್ನು ಒಪ್ಪಿಕೊಳ್ಳುತ್ತೇನೆ, ಎಂದೂ ಘೋಷಿಸಿದರು.

ನೆಗಡಿ, ಕೆಮ್ಮು, ದಮ್ಮು, ಉಬ್ಬಸ
ಶೀತಜ್ವರ, ಮಲೇರಿಯಾ, ಮತ್ತು
ಎಲ್ಲ ನೋವುಗಳಿಗೆ ದಿವ್ಯಾಮೃತ

ಕಾಶ್ಮೀರು ಅರುಕ್

ಚೇಪನೆ, ಸೇವನೆ - ಎಂದೂ ಸಾಧ್ಯ
ಎಲ್ಲಪಾಪುಗಳಲ್ಲೂ ದೊರೆಯುತ್ತದೆ

H. S. & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ಎಲ್ಲವನ್ನೂ
ಶುದ್ಧಪಡಿಸಲು
ಉತ್ತಮವಾದುದು

ಮೈಸೂರು ಬಾರ್ ಸೋಪ್

ಸಂಪೂರ್ಣವಾಗಿ ಶುದ್ಧವಾದ
ಯಾವ ಬೆರಕೆಯೂ, ಉಪಾಯಕರ ರಾಸಾಯನಿಕ
ದ್ರವ್ಯಗಳೂ ಇಲ್ಲದ

ಅತ್ಯುತ್ತಮವಾದ ಒಗೆಯುವ ಸಾಬೂನು

ಎಲ್ಲ ಕಡೆಯಲ್ಲಿಯೂ ದೊರೆಯುತ್ತದೆ.
ಗೌರ್ನಮೆಂಟ್ ಸೋಪ್‌ಫ್ಯಾಕ್ಟರಿ, ಬೆಂಗಳೂರು.
ಮೆಂಬರ್, ಐ. ಎಸ್. ಟಿ. ಎಂ. ಎ.

ಹಿಂದೀ ಪರೀಕ್ಷೆಗಳು

ಪ್ರಾಥಮಿಕ

ಪರೀಕ್ಷಾ ಶುಲ್ಕ 1-8-0
ಸುಗಮ ಹಿಂದೀ ಬೋಧಿನಿ
ಸುಗಮ ಹಿಂದಿ I
—,,— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)

ಮಧ್ಯಮಾ ಪರೀಕ್ಷಾ ಶುಲ್ಕ 3-0-0
ಸುಗಮ ಹಿಂದಿ 3
ಸಚ್ಚಾ ಇನ್ ಸಾಫ್
ಆದರ್ಶ ಚರಿತ್ರ
ಐತಿಹಾಸಿಕ ಕಹಾನಿ
ಹಿಂದೀರಚನೆ 2
ಪತ್ರಲೇಖನ
(ಸೆಟ್ ಬೆಲೆ 4-4-0)

ಇತರ ವಿವರಗಳಿಗೆ ಸ್ಟ್ಯಾಂಪಿಟ್ಟು ಅಥವಾ ರಿಪ್ಲೇ ಕಾರ್ಡು ಬರೆಯಿರಿ.

ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ ೨

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಅರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.
(Regd. M. No. 4746.)

To
Sri

Edited, Printed & Published by T. B. KESHAVA RAO at Nava Bharat Printing Press, Bellary.

ಗಳೂ ಇಲ್ಲಿಯ ಪ್ರಕೃತಿ ಸೌಂದರ್ಯಕ್ಕೆ ಮನ್ನಣೆಯಿತ್ತಿದ್ದರೆ ಇಂದಿನ ಜನತಾಯುಗದಲ್ಲಿ ಯುಗಧರ್ಮಾನುಗುಣವಾಗಿ ಜನರೆಲ್ಲರೂ ಕೊಡಗಿನ ಜನತೆಗೆ ಅಕರ್ಷಿತರಾಗಲೇಬೇಕು. ಕನ್ನಡಿಗರ ನೂತನ ಸರಕಾರವು ಕೊಡಗನ್ನು ಪ್ರವಾಸೀ ಕ್ಷೇತ್ರವನ್ನಾಗಿ ಮಾಡಬಹುದೆಂದು ಸೂಚಿಸಿದರೆ ತಪ್ಪಾಗಲಾರದು.

ಚಂದ್ರಲೋಕಕ್ಕೆ ಹೋಗಿ ಬರಲು ೧೦ ದಿನ ಸಾಕು

ಸೋವಿಯತ್ ಒಕ್ಕೂಟದ ನಿಜ್ನಾನ ಶಾಸ್ತ್ರ ಸಂಸತ್ತಿನ ಸೈದ್ಧಾಂತಿಕ ಜಗತ್ಪೋಳ ಶಾಸ್ತ್ರ ವಿದ್ಯಾ ಮಂದಿರ ವೈಜ್ಞಾನಿಕ ಆಲೋಚನಾ ಮಂಡಲ ಭೌತಿಕ ಮತ್ತು ಗಣಿತ ಶಾಸ್ತ್ರಗಳ ಸಂಶೋಧಕರಾದ ಪ್ರೊಫೆಸರ್ ಜಿ. ಚಿಜೋತರೇವ್‌ರವರೂ ಮತ್ತು ಅವರ ಸಹಾಯಕರುಗಳಾದವರು ಚಂದ್ರಗ್ರಹಣದ ಸಮಯದಲ್ಲಿ "ರಾಕೆಟ್" ಹಾರಿಸುವ ಸಂಸ್ಥೆಯನ್ನು ಕುರಿತು 1 ವರ್ಷಕಾಲ ನಡೆಸಿದ ಕಠಿಣವಾದ ಪರಿಶ್ರಮದ ಫಲಿತಾಂಶವನ್ನು ಪತ್ರಿಕಾ ವರದಿಗಾರರಿಗೆ ತಿಳಿಸಿದ್ದಾರೆಂಬ ತಿಳಿದು ಬಂದಿದೆ.

ಇದುವರೆಗೂ ಅವಶ್ಯಕವೆಂದು ಎಣಿಸಲಾಗಿದ್ದುದಕ್ಕಿಂತಲೂ ಕಡಮೆ ಇಂಧನದಿಂದ ರಾಕೆಟ್ ಚಂದ್ರಗ್ರಹಕ್ಕೆ ಹಾರಿ ಹೋಗಿ, ಅಲ್ಲಿಂದ ಮಾನವನು ಒಬ್ಬುವುದರ ಸಾಧ್ಯತೆಯನ್ನು ಪ್ರೊಫೆಸರ್ ಚಿಜೋತರೇವರವರು ಸೈದ್ಧಾಂತಿಕವಾಗಿ ರುಜುವಾತು ಮಾಡಿಕೊಟ್ಟಿರುವರು.

ಚಂದ್ರಗ್ರಹಕ್ಕೆ ಹೋಗುವ ರಾಕೆಟ್ ಹಾರಾಟಕ್ಕೆ ಇಂಧನವು ಬೃಹತ್ಪ್ರಮಾಣದಲ್ಲಿ ಬೇಕಾದುದೇ ಕಷ್ಟಪ್ರದವೆಂಬ ಸಮಸ್ಯೆಯೆಂಬುವಾಗಿ ಇದುವರೆಗೂ ನಂಬಲಾಗಿತ್ತು. ಪ್ರಾರಂಭಿಕ ದಿಶೆಯಲ್ಲಿ ಮಾತ್ರವೇ ಇಂಧನವು ಬೇಕಾಗುತ್ತದೆಯೆಂದೂ, ಆತರುವಾಯು ಚಂದ್ರ, ಸೂರ್ಯ ಮತ್ತು ಭೂಗ್ರಹಗಳ ಆಕರ್ಷಣಶಕ್ತಿಯು ಪ್ರಭಾವದಿಂದಲೇ ತನ್ನ ಪ್ರಯಾಣವನ್ನು ರಾಕೆಟ್ಟು ಮುಂದುವರಿಸುವುದೆಂದೂ ಪ್ರೊಫೆಸರ್ ಚಿಜೋತರೇವರವರು ಸ್ಪಷ್ಟಪಡಿಸಿತೋರಿಸಿದ್ದಾರೆ.

ಚಂದ್ರಗ್ರಹವು ಭೂಮಿಯಿಂದ 3,84,000 ಕಿಲೋಮೀಟರ್‌ಗಳಷ್ಟು (2,40,000 ಮೈಲಿ) ದೂರದಲ್ಲಿದೆಯೆಂದು ಗೊತ್ತಾಗಿದೆ. ರಾಕೆಟ್ ಸಮಾನವು 4,00,000 ಕಿಲೋಮೀಟರುಗಳಷ್ಟು 2,50,000 ಮೈಲಿ) ಪರಮಾವಧಿ (ದೂರ ಹೋಗಬಲ್ಲದು. ರಾಕೆಟ್ಟಿನ ಪ್ರಾರಂಭವೇಗವು ಸೆಕೆಂಡಿಗೆ 11 ಕಿಲೋಮೀಟರುಗಳಷ್ಟಿದ್ದರೆ (ಗಂಟೆಗೆ 24,750 ಮೈಲಿ) ಆದು ಚಂದ್ರಗ್ರಹವನ್ನು ಪ್ರದಕ್ಷಿಣಿಸುವ ಹಾಗೆ ವೇಗವು 0 (ಸೊನ್ನೆ) ಗೆ ಇಳಿಯುವಾಗ ಇದೇ ಪರಿಣಾಮವಾಗಿ ರಾಕೆಟ್ಟಿನಾನವು ಚಂದ್ರಗ್ರಹದ ಸುತ್ತಲೂ ಪರ್ಯಟಿಸುವುದು.

ಇಲ್ಲಿಂದ ಹೊರಟ್ಟು ಚಂದ್ರಲೋಕಕ್ಕೆ ಹೋಗಿ, ಪುನಃ ವಾಪಸು ಬರಲು 10 ದಿವಸ ಬೇಕಾಗುವುದೆಂದು ಅಂದಾಜು ಮಾಡಲಾಗಿದೆ.

ಪ್ರೊಫೆಸರ್ ಚಿಜೋತರೇವರವರ ಮಾರ್ಗದರ್ಶಕತ್ವದಲ್ಲಿ ರಾಕೆಟ್ ಹಾರಿಸುವ ಸಲುವಾಗಿ ವೈಜ್ಞಾನಿಕ ಲೆಕ್ಕಾಚಾರಗಳನ್ನು ಮಾಡಿ ತೋರಿಸಿದ್ದಾರೆ.

ಈರುಳ್ಳಿ ಉಪಯೋಗ

1) ಮೂಲವ್ಯಾಧಿಯವರು ಈ ರಸಕ್ಕೆ ಸಕ್ಕರೆ ಹಾಕಿ ಕುಡಿಯುವುದು.

2) ನಿಷ್ಪ್ರಯೋಜಕವಾದ ಹಳೆಯ ಸೋಪಿಗೆ ಈರುಳ್ಳಿಯ ತಿರ್ಳಿ ಬಿಸ್ಸಿ ರಸವನ್ನು ರುಬ್ಬಿ ಪಡಿಸಿದ ಕಾಸರಸದ ಜೊತೆ 1 ಗ್ರೈನ್ ಮತ್ತು ಕರ್ಪೂರದ ಅರ್ಧ ಗ್ರೈನ್ ಪುಡಿಯನ್ನು ಸೇರಿಸಿ ಸೇವಿಸುವುದು.

3) ಮುಖದ ದೊಡ್ಡದಾದ ಊತ ಕಾಯಿಲೆಗೆ ಬೆಳಿಗ್ಗೆ 3 – 4 ಬಾರಿ ದನಗಳ ತಾಜಾ ಸಗಣಿಯನ್ನು ತಿನ್ನುವುದು.

4) ಮುಳ್ಳು ಬಿಡಿಸಿದ ಈರುಳ್ಳಿಯ ಅಂದಾಜು ಮತ್ತು ಪಾಸಿನ ಸೇವಿಸುವುದು.

5) ಮೂತ್ರ ಹುಳಬಿದ್ದ ಕೀಳಿಗೆ ಗ್ಲಿಸರಿನ್ ಜೊತೆ ಸಕ್ಕರೆಯಾಗಿ ಸೇವಿಸುವುದು, (ಮಲಬದ್ಧತೆಗೂ ಒಳ್ಳೆಯದು)

6) ಜೇನ್ನೊಣ ಕಡಿತಕ್ಕೆ ಸೊಪ್ಪಿಗೆ, ಮಾಂಸಖಂಡಗಳ ತಿರಿಗೆ ಈರುಳ್ಳಿ ಸೊಪ್ಪಿನ ಬೆಲ್ಲ ತಿನ್ನುವುದು.

7) ಮಲೇರಿಯಾ ಜ್ವರಕ್ಕೆ ಈರುಳ್ಳಿರಸ ದಲ್ಲಿ ಬೆಣ್ಣೆ ತೊಂಡಿಸಿ ಕಾಳುಕರೋಣ ಪುಡಿ ಕಲಸಿ ಸೇವನೆ (ಎಲ್ಲಿಯವರೆಗೂ ಗುಣವಾಗುವರೆಗೂ) ಮಾಡಬೇಕು.

8) ರಕ್ತ ಸಂಚಲನಕ್ಕೆ ರಸವನ್ನು ಮೂಗಿನ ಹೊಳಗೆ 2–3 ತೊಟ್ಟು ಬಿಡಬೇಕು.

9) ವಾಯುವಿಕಾರದ ಜ್ವರಗಳಿಗೆ ಅಳಲೆಕಾಯಿ ಕಟುಕರೋಣ ಜೀರಿಗೆ ಈರುಳ್ಳಿರಸ ಇವುಗಳನ್ನು 1: 1: 1: ರಂತೆ ರಸದಲ್ಲೇ ಸೇವನೆ (ಭೂತ, ಪ್ರೇತ ಪಿಶಾಚಿ ಜೀವ್ಯೆಗಳ ನಿವಾರಣೆ ಆಗುವುದು) ಮಾಡಬೇಕು.

10) ವಾಂತಿ ಅಥವಾ ಭೇದಿಗೆ ಈ ರಸ, ನಿಂಬೆರಸ, ಜೇನುತುಪ್ಪ ಇವುಗಳನ್ನು ಸೇರಿಸಿ ತಿನ್ನುವುದು.

11) ವಿಷಮ ಜ್ವರಕ್ಕೆ ಹಸಿ ಗಿಡ ಮತ್ತು ಮೆಣಸಿನ ಕಾಳು ಇವುಗಳನ್ನು ಜಗಿದು ನುಂಗುವುದು ಒಳ್ಳೆಯದು.

12) ಹೊಟ್ಟೆ ಸಂಕಟಗಳಿಗೆ ಹೊಟ್ಟೆಗೆ (ಯಾವುದೇ ಕಾರಣವಿದ್ದರೂ) ಹುಣ್ಣಗಡ್ಡೆಯನ್ನು ನಾಭಿಗಟ್ಟು ಕಟ್ಟುವುದೊಳ್ಳೆಯದು.

13) ಪ್ರಾಣ ರಕ್ಷಣೆಗೆ ಈ ರಸಕ್ಕೆ ಜೇನುತುಪ್ಪ ಸೇರಿಸಿ ಕೆಲವು ದಿನ ಸೇವಿಸಿದರೆ ಒಳ್ಳೆಯದು.

14) ನೀರುಳ್ಳಿ ಕಾಫಿ. ಕಾಫಿಯನ್ನು ತಯಾರಿಸುವಂತೆ ಇದನ್ನು ತಯಾರಿಸಬೇಕು. ಉತ್ತಮ ಹಾನೀಯ ರಾತ್ರಿ ನಿದ್ದೆ ಬರದವರಿಗೂ ಅಳುವ ಮಕ್ಕಳಿಗೂ ಗುಣಕಾರಿ.

15) ಧಾತು ಪುಷ್ಟಿಗೆ ಗಡ್ಡೆಯನ್ನು ಚಿಕ್ಕದಾಗಿ ಹೆಚ್ಚಿ, ಅದು ಮುಳುಗುವಷ್ಟು ಜೇನುತುಪ್ಪ ಹಾಕಿ ಭದ್ರವಾಗಿ ಮುಚ್ಚಿರಿಸಿ 40 ದಿನಗಳಾದಮೇಲೆ ದಿನಕ್ಕೊಂದು ಸಾರಿ 1 ಚಮಚೆಯಂತೆ ಇದನ್ನು ಸೇವಿಸಿ ಹಾಲು ಕುಡಿಯುವುದು.

ಕಮ್ಯೂನಿಸ್ಟರ ತಪ್ಪೊಪ್ಪಿಗೆ

ರಷ್ಯಾದಲ್ಲಿ ನಡೆದ ಸ್ವತಿಯೊಂದೂ ಆದರ್ಶಮಯವಾಗಿದೆಂದು ಭಾವಿಸಿ ಭಾರತೀಯ ಕಮ್ಯೂನಿಸ್ಟರು ತಪ್ಪು ಮಾಡಿದ್ದರೆಂದು ಕಮ್ಯೂನಿಸ್ಟ್ ಪ್ರಧಾನ ಕಾರ್ಯದರ್ಶಿ ಶ್ರೀ ಅಜಯ್ ಘೋಷ್‌ರವರು ಒಪ್ಪಿಕೊಂಡರು.

ಕಮ್ಯೂನಿಸ್ಟ್ ಪಾರ್ಟಿಯ ವಾರ ಪತ್ರಿಕೆಯಲ್ಲಿ ಪ್ರಕಟವಾದ ಪಿ. ಎಸ್. ಪಿ. ನಾಯಕ ಶ್ರೀ ಜೈಪ್ರಕಾಶ್ ನಾರಾಯಣರ ಪತ್ರಕ್ಕೆ ಉತ್ತರವಾಗಿ ಶ್ರೀ ಘೋಷ್‌ರವರು ಈ ವಿಷಯ ತಿಳಿಸಿದ್ದಾರೆ.

ನಾವು ರಷ್ಯಾದ ಬಗ್ಗೆ ಸೋಷಲಿಸ್ಟ್ ರೂ ಮತ್ತು ಕಮ್ಯೂನಿಸ್ಟರು ಜೊಮಕ್ಕಾಗಿ ಗಳೂ ಮಾಡುತ್ತಿದ್ದ ಟೀಕೆಗಳಿಗೆ ಹೆಚ್ಚು ಗಮನ ಕೊಡಬೇಕಾಗಿತ್ತು. ನಮ್ಮಲ್ಲೂ ಮತ್ತು ಕಮ್ಯೂನಿಸ್ಟ್ ಪಕ್ಷಗಳಲ್ಲೂ ರಷ್ಯ ನದಿಸಿದುದೆಲ್ಲ ಸರಿಯಾದುದು ಸಮರ್ಥಿಸುವ ಮತ್ತು ಸೋವಿಯೆಟ್ ನೀತಿಯನ್ನು ಟೀಕಿಸಿದ ಪ್ರತಿಯೊಬ್ಬರನ್ನೂ ಖಂಡಿಸುವ ಪ್ರವೃತ್ತಿ ಬೆಳೆದು ಬಂದುದನ್ನು ಒಪ್ಪಿಕೊಳ್ಳುತ್ತೇವೆ, ಎಂದೂ ಘೋಷಿಸಿದರು.

ನೆಗಡಿ, ಕೆಮ್ಮು, ದಮ್ಮು, ಉಬ್ಬಸ
ಶೀತಜ್ವರ, ಮಲೇರಿಯಾ, ಮತು
ಎಲ್ಲ ನೋವುಗಳಿಗೆ ದಿವ್ಯಾಮೃತ

ಕಾಶ್ಮೀರು ಅರುಕ್

ಲೇಪನ, ಸೇವನೆ - ಎಂದೂ ಸಾಧ.
ಎಲ್ಲಪಾಪುಗಳಲ್ಲೂ ದೊರೆಯುತ್ತದೆ

H. S. & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ಎಲ್ಲವನ್ನೂ
ಶುದ್ಧಪಡಿಸಲು
ಉತ್ತಮವಾದುದು

ಮೈಸೂರು ಬಾರ್ ಸೋಪ್

ಸಂಪೂರ್ಣವಾಗಿ ಶುದ್ಧವಾದ
ಯಾವ ಬೆರಕೆಯೂ, ಅಪಾಯಕರ ರಾಸಾಯನಿಕ
ದ್ರವ್ಯಗಳೂ ಇಲ್ಲದ

ಅತ್ಯುತ್ತಮವಾದ ಒಗೆಯುವ ಸಾಬೂನು

ಎಲ್ಲ ಕಡೆಯಲ್ಲಿಯೂ ದೊರೆಯುತ್ತದೆ.
ಗೌರ್ನಮೆಂಟ್ ಸೋಪ್‌ಫ್ಯಾಕ್ಟರಿ, ಬೆಂಗಳೂರು.
ಮೆಂಬರ್, ಐ. ಎಸ್. ಟಿ. ಎಂ. ಎ.

ಹಿಂದೀ ಪರೀಕ್ಷೆಗಳು

ಪ್ರಾಥಮಿಕ
ಪರೀಕ್ಷಾ ಶುಲ್ಕ 1-8-0
ಸುಗಮ ಹಿಂದೀ ಬೋಧಿನಿ
ಸುಗಮ ಹಿಂದಿ I
—„— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)
ಮಧ್ಯಮಾ ಪರೀಕ್ಷಾ ಶುಲ್ಕ 3-0-0
ಸುಗಮ ಹಿಂದಿ 3
ಸಚ್ಚಾ ಇನ್ ಸಾಫ್
ಆದರ್ಶ ಚರಿತ್ರ
ವ್ಯಾವಹಾರಿಕ ಕಹಾನಿ
ಹಿಂದೀರಚನೆ 2
ಪತ್ರಲೇಖನ
(ಸೆಟ್ ಬೆಲೆ 4-4-0)
ಇತರ ವಿವರಗಳಿಗೆ ಸ್ಟಾಂಪಿಟ್ಟು ಅಥವಾ
ರಿಪ್ಲೇಕಾರ್ಡು ಬರೆಯಿರಿ.

ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ ೨

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಅರ್ಧತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.
(Regd. M. No. 4746.)

To

Sri _____

_____

_____

Edited, Printed & Published by T. B. KESHAVA Rao at Nava Bharat Printing Press, Bellary.

ನವಚೇತನ

ಸೋಮವಾರ ಡಿಶಂಬರ್ 3.10-12 1956

ವರ್ಷ 20	ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.	ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ - 14	ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿಬೋಧತ !!!	ಟಿ. ಜಿ. ಕೇಶವರಾವ್

ಕರ್ನಾಟಕದ

ಪ್ರಮಾಣಿತ ಪ್ರಚಾರಕರಲ್ಲಿ ಸವಿಯ ವಿನಂತಿ

ಶ್ರೀ _____ ಇವರಿಗೆ

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಶಿಕ್ಷಾಪರಿಷತ್ತಿನ ಪರೀಕ್ಷೆಗೆ ಪ್ರಮಾಣಿತ ಪ್ರಚಾರಕರ ಕ್ಷೇತ್ರದಿಂದ ಒಬ್ಬ ಉಮೇದುವಾರನಾಗಿ ನಿಂತಿದ್ದೇನೆ. ನಾನು ಕಳೆದ 30 ವರ್ಷಗಳಿಂದ ಹಿಂದೀ ಕ್ಷೇತ್ರದಲ್ಲಿ ಯಥಾಶಕ್ತಿ ಕೆಲಸಮಾಡಿಕೊಂಡು ಬಂದಿದ್ದೇನೆ. ಶಿಕ್ಷಾಪರಿಷತ್ತಿನಲ್ಲಿ ಪ್ರಚಾರಕರ ಒಂದು ಪ್ರತಿನಿಧಿ ಸಭೆಯನ್ನು ಕರೆಯುವ ಕೆಲಸವಾದ ಪ್ರಯತ್ನವನ್ನೆಲ್ಲ ಮಾಡುತ್ತೇನೆ. ತಮ್ಮ ಮತಗಳಿಕೆ ನನಗೆ ಒಂದನ್ನು ಕೊಟ್ಟು ನನ್ನನ್ನು ಗೆಲಿಸಿ-ಪ್ರಚಾರಲ್ಲಿ ಸಹಾಯಕರಾಗಬೇಕೆಂದು ನನ್ನಪೂರ್ವಕವಾಗಿ ತಮ್ಮನ್ನು ಪ್ರಾರ್ಥಿಸುತ್ತೇನೆ.

ಪ್ರಮಾಣಿತ ಪ್ರಚಾರಕ ಸಂಖ್ಯೆ ೪೮
ಹಿಂದೀಮಹಾವಿದ್ಯಾಲಯ ಬಳ್ಳಾರಿ
೧೦—೧೨—೧೯೫೬

ತಮ್ಮ ಕೃಪಾಭಿಲಾಷಿ
ಟಿ ಬಿ ಕೇಶವರಾವ್
ಪ್ರಧಾನಾಧ್ಯಾಪಕ

ವಿ. ಸೂ :— ತಮಗೆ ಒಟ್ಟಿನಲ್ಲಿ 12 ಮತಗಳಿವೆ. ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳ, ಮದ್ರಾಸ್. ಈ ೫ ಪ್ರಾಂತಗಳಲ್ಲಿ ಪ್ರತಿ ಪ್ರಾಂತಕ್ಕೆ ೨ ರಂತೆ 10 ಮತದಾನ ಮಾಡಬೇಕು. ಬಾಕಿ ಎರಡನ್ನು ನಿವೃತ್ತಿಪ್ರಾಪ್ತರಾದವರಿಗೆ ಯಾವ ಪ್ರಾಂತದವರಿಗಾದರೂ ಕೊಡಬಹುದು. ಈ ಕ್ರಮವನ್ನು ಅನುಸರಿಸದಿದ್ದರೆ ತಮ್ಮ ಮತವು ಅಸ್ವೀಕೃತವಾಗಬಹುದು.

ನಿಮ್ಮ ಮತಗಳಲ್ಲೊಂದನ್ನು
ಆಂಧ್ರಪ್ರಾಂತದ ಶ್ರೀ ಮಾದೋಟಿ ಸಾಂಬಮೂರ್ತಿ ಇವರಿಗೆ
(ಪ್ರ. ಪ್ರ. ಸಂ. ೧೮೫೫)ದಯವಿಟ್ಟುಕೊಡಿರಿ

— ಬಳ್ಳಾರಿ ಜಿಲ್ಲೆ ಕಾಂಗ್ರೆಸ್ ಅಭ್ಯರ್ಥಿಗಳು —

ಭಿನ್ನಾಭಿಪ್ರಾಯ

ಮೈಸೂರು ಪ್ರದೇಶ ಕಾಂಗ್ರೆಸ್‌ನ ವತಿಯಿಂದ ನಿಯಾಮಕ ಹೊಂದಿ ಬಳ್ಳಾರಿ ಜಿಲ್ಲೆಯ ಭಿನ್ನ ಭಿನ್ನ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪರವಾಗಿ ಯಾರನ್ನು ನಿಲ್ಲಿಸಬೇಕೆಂಬುದರ ವಿಷಯಕ್ಕೆ ಅಭಿಪ್ರಾಯ ಸಂಗ್ರಹವನ್ನು ತಮ್ಮ ವರದಿಯನ್ನು ಪಿಸಲು ಶುಮಕೂರು ನವಕೇರಾದ ಶ್ರೀ ಮಾ ಮರಿಯಪ್ಪನವರು ಬಳ್ಳಾರಿಯ ಸರ್ಕಾರಿ ಅತಿಥಿಗೃಹದಲ್ಲಿ 8—12—೫೬ ರಿಂದ 10 - 12 -5 ರವರೆಗೆ ಸಂದರ್ಶಿಸಿದವರೊಡನೆ ಪರಾಮರ್ಶೆ ಮಾಡಿ ಜರ್ಚಿಸಿದರು ಹಡಗಲಿ, ಹರಪನಹಳ್ಳಿ ಕೂಡ್ಲಿಗಿ, ಸೊಂಡೂರು, ಬಳ್ಳಾರಿನಗರ, ಬಳ್ಳಾರಿ ಗ್ರಾಮಾಂತರ, ಸಿರುಗುಪ್ಪ ಹೊಸಪೇಟೆಗಳಿಂದೆರಡು ಪಂಗಡಗಳವರ್ ತಮ್ಮ ನಿವೇದನವನ್ನು ಮಂಡಿಸಿದರು

ಜಾನಾಪದ ಗೀತೆಗಳಿಂದ ಜನರ ಮೆಚ್ಚುಗೆಯನ್ನು ಪಡೆದಿರುವ ಗೌರವಾರ್ಹ ವ್ಯಕ್ತಿಯಾಗಿ ರಾಜ್ಯಸಂಚಾಲನೆಯಲ್ಲಿ ಭಾಗವಹಿಸಿ ಸಭೆಯ ಸದಸ್ಯರಾಗಿ ಸರ್ಕಾರದಲ್ಲಿ ಸ್ಥಾನಗಳಿಸಿ ಜನಸೇವೆ ಮಾಡಬಲ್ಲ ಶಕ್ತಿಯುಳ್ಳವರೆಲ್ಲ ಮುಂದೆ ಬಂದಿರುತ್ತಾರೆ.

ಹೀಗಾಗಿ ಕಾಂಗ್ರೆಸ್ ನಿರ್ಣಯಿಸಿರುವ ೨ ಭಾಗದಷ್ಟನ್ನು ಹಿಂದುಗಳಿಗೆ ಬೇಕೆಂಬ. ಅಲ್ಪಸಂಖ್ಯಾತರಿಗೆ ಸಾಕಷ್ಟು ಸ್ಥಾನಗಳನ್ನು ಕೊಡಬೇಕೆಂಬ ನಿರ್ಣಯವು ಹೇಗೆ ತಾನೆ ಪಾಲಿಸಲ್ಪಡುವುದೋ ಊಹಿಸಲಿಕ್ಕೆ ಅಸಾಧ್ಯವಾಗಿದೆ.

ಪ್ರಪಂಚದ ಜನಸಂಖ್ಯೆಯಲ್ಲಿ, ಹಿಂದೂಸ್ತಾನದ ಜನಸಂಖ್ಯೆಯಲ್ಲಿ ಸ್ತ್ರೀಯರು ಅರ್ಧದಷ್ಟಿರುತ್ತಾರೆ ಎಲ್ಲಕಡೆಯಲ್ಲಂತೆ ಬಳ್ಳಾರಿ ಜಿಲ್ಲೆಯ 4 ಲಕ್ಷ ಸ್ತ್ರೀಯರಿಗೆ ಒಬ್ಬರಾಗಲೀ ಪ್ರತಿನಿಧಿಗಳಿರಬಾರದೆಂದು ನಿರ್ವಿವಾದಾಂಶವಾಗಿ ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿದೆ. ಹಾಗೆಯೇ ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಶ್ರೀ ರಾಜಾ ಸಾಹೇಬರು ಹೆಸರನ್ನು ಮರದೃಷ್ಟವಶಾತ್ ಯಾರೋ ಸಿಫಾರಸ್ಸು ಮಾಡಿದ್ದಾರೆ. ನೀವು ಸಾಹೇಬರು. ನಿಮಗೆ ಹಿಂದುಳಿದವರ ಓಟುಕೊಡುವುದಿಲ್ಲ. ಅಲ್ಲದೆ ನಿಮ್ಮಲ್ಲಿ ಹಣ ಸಾಕಷ್ಟು ಹಣವಿಲ್ಲ— ಎಂದು ಹೇಳಲ್ಪಡುತ್ತಿದೆ. ಇನ್ನು ಯಾರುಬರಬೇಕು?

(ಬರುವವಾರ ಮುಂದುವರಿಯುವುದು)

ಸದ್ಗುಣವನ್ನು ಸ್ವೀಕರಿಸುವುದೇ ಗಾಂಧೀಜಿ ಸ್ವಭಾವ

ಗಾಂಧೀಜಿ ಸಾಹಿತ್ಯ ಸಂಘದಲ್ಲಿ ಶ್ರೀ ಆದ್ಯರಂಗಾಚಾರರ ವಿಚಾರಪೂರಿತ ಉಪನ್ಯಾಸ

ಸುಪ್ರಸಿದ್ಧ ಲೇಖಕರೂ, ಸಾಹಿತಿಯೂ ಆದ ಶ್ರೀ ಆದ್ಯ ರಂಗಾಚಾರ್ಯರು ಸೋಮವಾರ ಸಂಜೆ ಗಾಂಧೀ ಸಾಹಿತ್ಯ ಸಂಘದ ವಿಚಾರ ಗೋಷ್ಠಿಯಲ್ಲಿ ಉಪನ್ಯಾಸ ಮಾಡುತ್ತಾ 1918 ರಲ್ಲಿ ತಾವು ಮೊಟ್ಟ ಮೊದಲಿಗೆ ಗಾಂಧೀಜಿಯವರನ್ನು ಕಂಡಿದ್ದನ್ನೂ, 1934 ರಲ್ಲಿ ತಾವು ಗಾಂಧೀಜಿಯೊಂದಿಗೆ ನಡೆಸಿದ ಸಂಭಾಷಣೆಯ ಬಗ್ಗೆಯೂ ಮಾತನಾಡಿದರು. ಎಲ್ಲರಲ್ಲೂ ಆಶ್ಚರ್ಯ ಮೂಡಿಸಿದ ಒಂದು ವಿಷಯವೆಂದರೆ ಪ್ರಸಿದ್ಧ ರಾಜಕಾಣಿಗಳೂ, ಮೇಧಾವಿಗಳೂ ಆದ ಪಂಡಿತ ಮೋತೀಲಾಲ್ ಚಿತ್ತರಂಜನ್ ದಾಸ್, ಲಾಲಾ ರಜಪತ್‌ರಾಯ್ ಅಂಥವರನ್ನೂ ಗಾಂಧೀಜಿಯು ತಮ್ಮ ಕಡೆಗೆ ಸೆಳೆದುಕೊಂಡು ಅವರಿಗೆ ಇವರುಗಳಿಗೆ ಬುದ್ಧಿ ಶಕ್ತಿ ಇರಲಿಲ್ಲ. ಆಲಿ ಸೋದರರಿಗೆ ದೇಹಶಕ್ತಿ, ವ್ಯಕ್ತಿತ್ವ ಇರಲಿಲ್ಲ ಅವರಿಗಿದ್ದುದು ಆಂತರಿಕ ಶಕ್ತಿ ಒಂದೇ. ಹಾಗಿದ್ದರೆ ತಮ್ಮ ಮನಸ್ಸಾಕ್ಷಿ ಹೇಳಿದಂತೆ ನಡೆಯುತ್ತಿದ್ದುದು. ಇನ್ನೊಂದು ಸೊಡ್ಡಗುಣ ಎಂದರೆ ಇನ್ನೊಬ್ಬರು ಹೇಳುವುದನ್ನು ತಾಳ್ಮೆಯಿಂದ ಕೇಳಿ ತಿಳಿಸಿಕೊಳ್ಳುವುದು. ಸಮಾನವಾಗಿ ಜನ ಇನ್ನೊಬ್ಬರನ್ನು ದೂಷಣೆ ಮಾಡುತ್ತಿರುವುದು ರೂಢಿ. ಏಕೆ? ಇತರರ ದೋಷಗಳನ್ನು ಕಂಡು ಹಿಡಿಯುವುದಕ್ಕೇ ಜನರು ಜೀವನ ಪೂರ ದುಡಿಯುತ್ತಾರೆ

1934 ರಲ್ಲಿ ತಾವು ಮಹಾತ್ಮಾಗಾಂಧಿಯೊಂದಿಗೆ ಭೇಟಿಯಾದ ಸಂದರ್ಭವನ್ನು ವಿವರಿಸುತ್ತಾ ಅವರು ಹೀಗೆ ಹೇಳಿದರು.

ನಾನು ಕಾಲೇಜು ಅಧ್ಯಾಪಕನಾಗಿದ್ದೆ 1934ರ ಸಮಯ. ದೇಶಾದ್ಯಂತ ಗಾಂಧೀಜಿಯವರು ಹರಿಜನೋದ್ಧಾರ ಕಾರ್ಯದಲ್ಲಿತೊಡಗಿದ್ದರು. ಧಾರವಾಡಕ್ಕೆ ಬಂದಿದ್ದರು ನಾನು ಅವರನ್ನು ಕಂಡು ಮಾತನಾಡಲು ಇಚ್ಛಿಸಿದೆ. ಅನುಮತಿ ಬರದೆ ನನ್ನ ಸಹೋದ್ಯೋಗಿಗಳನೇಕರು ನೀವು ಗಾಂಧೀಜಿಯನ್ನು ಕಂಡರೆ ನಿಮ್ಮ ಉದ್ಯೋಗವನ್ನು ಕಳೆದುಕೊಳ್ಳುತ್ತೀರಿ, ಜಾಗ್ರತೆ ನಿಮಗೆ ಅನುಮತಿಯೂ ಸಿಗುವುದಿಲ್ಲ ಅವಮಾನವಾಗುತ್ತದೆ. ಎಂದರು ಅವರು ಹೇಳಿದ ಹಾಗೆಯೇ ಅನುಮತಿ ಸಿಗಲಿಲ್ಲ ನಾನು ಹಾಗೆಲ್ಲ ಧೈರ್ಯಗೆಡುವವನಲ್ಲ. ಇನ್ನೊಬ್ಬರೊಂದಿಗೆ ಪಾದಾಟದಲ್ಲೂ ಸಾಮಾನ್ಯಕ್ಕೆ ಬಿಡುವವನಲ್ಲ ಇನ್ನೊಂದು ಪತ್ರಬರೆದೆ. ರಹಸ್ಯವಾಗಿಯೇ ಬರೆದೆ. ಯಾರಿಗೂ ಏನುಬರೆದೆ ಎಂದು ಹೇಳಲಿಲ್ಲ. ಆದರೆ ಇಷ್ಟು ಮಾತ್ರ ನನ್ನ ಸಹೋದ್ಯೋಗಿಗಳಿಗೆ ಹೇಳಿದೆ. ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ನನಗೆ ಕರೆಬರುತ್ತದೆ. ನನ್ನ ಅದೃಷ್ಟಕ್ಕೆ ಹಾಗೇ ಆಗಿಬಂದೂ ಬಂದಿತು.

ಏನೇನೋ ಮಾತನಾಡಿ ಪಾದಪೂಜೆ ಮಾಡೋಕೆಂಬ ಸಂಕಲ್ಪ ಮಾಡಿಕೊಂಡು ಹೋದೆ ಓ! ನನಗಾದ ಅನುಭವವನ್ನು ಹೇಗೆ ಹೇಳಲಿ? ಅವರನ್ನು ಕಾಣುತ್ತಲೇ ನನಗೆ ವೈಬವದಿತು. ಕೈಕಾಲು ನಡುಗಿತು. ಬಾಯಿ ತೊದಲಿತು. ನನ್ನ ಇರುವಿಕೆಯ ಅರಿವೇ ನನಗಿಲ್ಲದಾಯಿತು. ಅವರು ಏನೇನೋ ಕೇಳಿದರು. ನಾನುಎಲ್ಲಕ್ಕೂ ಉತ್ತರಕೊಟ್ಟೆ ಮಾರು ಪ್ರಶ್ನೆ ಹಾಕಿದೆ. ಎಷ್ಟು ಹೊತ್ತು ಅವರೊಂದಿಗೆ ಚರ್ಚೆ ಮಾಡಿದೆ ಎಂಬ ಅರಿವೂ ನನಗಿರಲಿಲ್ಲ. ಹೊರಕ್ಕೆ ಬಂದಾಗ ಶಕ್ಕರ್ ಬಾಸಾರವರು ಇದೇನು? 10 ನಿಮಿಷ ಅವಕಾಶ ಇದ್ದ ನಿಮಗೆ 25 ನಿಮಿಷ ಹೇಗೆ ಸಿಕ್ಕಿತು? ಎಂದು ಕೇಳಿದಾಗಲೇ ನನಗೆ ಆಗ ಬಹಳ ಬಂತು. ಯಾರೊಂದಿಗೂ ಮಾತನಾಡಲಿಲ್ಲ. ಆವೇಶಬಂದವನಂತಿದ್ದೆ. ಆಂಧ್ರ ರಾತ್ರಿ ಅವರೊಂದಿಗೆ ಆಡಿದ ಮಾತುಗಳನ್ನು ನೆನಪಿಗೆ ತಂದುಕೊಂಡು ಡೈರಿಯಲ್ಲಿ ಬರೆದಿಟ್ಟೆ. ಎಂದು ತಮ್ಮ ಅನುಭವನನ್ನು ಹೇಳಿದರು. ಮುಂದುವರಿದು ಆ ದಿನಿಂದ ಇಂದಿನವರೆಗೆ ನನ್ನ ಲೇಖನಿಯು ಎಷ್ಟಿನಲ್ಲಿ ಪೂರಕವಾದುದನ್ನು ಬರೆಯುತ್ತಿರುವುದಕ್ಕೆ ಅವರ ಪ್ರಭಾವವೇ ಕಾರಣ. ಅಂಥ ಬಿಚ್ಚು ಮನಸ್ಸಿನವರು ಅವರಿಗೆ ಹೇಳಿದ್ದೋ ಹೇಗೆ ಹೇಳಿದರೋ ಅವನ್ನೆಲ್ಲಿ ಮನಸ್ಸಿಟ್ಟು ಶ್ರದ್ಧೆಯಿಂದ ಕೇಳಿದ್ದು ಆ ಗುಣ ಎಲ್ಲರಿಗೂ ಇರುವುದಿಲ್ಲ ಆ ಗುಣಗಳು ಇದ್ದವರು ಮಹಾತ್ಮರಾಗುತ್ತಾರೆ. ಮೋಕ್ಷ ಎಂಬುವುದೊಂದಿದ್ದರೆ, ಆ ಮಹಾತ್ಮನನ್ನು ಸಂದರ್ಶಿಸಿದ ನನಗೆ ಮೋಕ್ಷವಾಯಿತು ಎಂಬುದರಲ್ಲಿ ಸಂಶಯವಿಲ್ಲ ಎಂದು ಹೇಳುತ್ತಾ ತಮ್ಮ ಉಪನ್ಯಾಸವನ್ನು ಮುಗಿಸಿದರು.

ಕಾಂಗ್ರೆಸ್ ಅಧಿವೇಶನ

ಇಂದೂರಿನಲ್ಲಿ ನಡೆಯಲಿರುವ ಸಿದ್ಧತೆ

